ಭಾನುವಾರ, ಜೂನ್ 26, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 176 | ಪುಟ 20 • www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮನುಷ್ಯನ ದೇಹವನ್ನು ಒಂದು ಕಂಪ್ಯೂಟರ್ ಪ್ರೋಗ್ರಾಮಿನಂತೆ ಭಾವಿಸಿ ಚಿರಯೌವನ ಪಡೆಯುವ ಪ್ರಯೋಗಗಳ ಲೋಕದತ್ತ ಒಂದು ನೋಟ

ಪ್ರಧಾನಿ ಮೋದಿ ಜರ್ಮನಿ, ಯುಎಇ ಪ್ರವಾಸ ಇಂದಿನಿಂದ 6
'ಶಿಕ್ಷಣಕ್ಕೆ ನಿಷ್ಠೆ' ಹೇಳಿಕೆಗೆ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ವಸಂತಕುಮಾರ್ ವ್ಯಂಗ್ಯ
ಮಂತ್ರಿ ಡೆವಲಪರ್ಸ್ ನಿರ್ದೇಶಕ ಬಂಧನ 5
ಬರಗೂರು ಹೇಳಿಕೆಯಲ್ಲೇ 'ಪಕ್ಷದ ವಾಸನೆ' 5

ಉದ್ಯೋಗ ಖಾತ್ರಿಯಲ್ಲಿ ಎನ್‌ಎಂ.ಎಂ.ಎಸ್‌ ಜಾರಿ; ಕೆಲಸಕ್ಕೆ ಕಾರ್ಮಿಕರ ನಿರಾಸಕ್ತಿ

ಕಾರ್ಮಿಕರಿಗೆ ಇ–ಹಾಜರಾತಿ ಕಿರಿಕಿರಿ

• ಶಶಿಕಾಂತ ಎಸ್. ಶೆಂಬೆಳ್ಳಿ

ಒಳನೋಟ
ಖಾತ್ರಿಗೆ ನಿಯಮದ ಬಿಸಿ
ಪ್ರತಿಕ್ರಿಯಿಸಿ: 9606038256
feedback@prajavani.co.in

ಹೊಸಪೇಟೆ (ವಿಜಯನಗರ): ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಯಲ್ಲಿ 'ನ್ಯಾಷನಲ್ ಮೊಬೈಲ್ ಮಾನಿಟರಿಂಗ್ ಸಿಸ್ಟಂ' (ಎನ್.ಎಂ.ಎಂ.ಎಸ್) ಆ್ಯಪ್ ಮೂಲಕ ಇ-ಹಾಜರಾತಿ ವ್ಯವಸ್ಥೆ ಜಾರಿಗೆ ತಂದಿರುವುದರಿಂದ ಕಾರ್ಮಿಕರು ಯೋಜನೆಯಡಿ ಕೆಲಸ ನಿರ್ವಹಿಸಲು ನಿರಾಸಕ್ತಿ ತೋರಿಸುತ್ತಿದ್ದಾರೆ.

ಪ್ರಸಕ್ತ ಸಾಲಿನ ಏಪ್ರಿಲ್‌ನಿಂದ ಜಾರಿಗೆ ಬರುವಂತೆ ಎನ್.ಎಂ.ಎಂ.ಎಸ್. ಆ್ಯಪ್‌ನಿಂದ ಕಾರ್ಮಿಕರ ಇ-ಹಾಜರಾತಿ ಕಡ್ಡಾಯಗೊಳಿಸಲಾಗಿದೆ. ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಕೆಲಸ ಮಾಡುವ ಸಮಯ ನಿಗದಿಗೊಳಿಸಲಾಗಿದೆ. ಹೊಸ ನಿಯಮದ ಪ್ರಕಾರ, ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ಕಾರ್ಮಿಕರ ಇ-ಹಾಜರಾತಿ ಪಡೆಯಲು ಬೆಳಿಗ್ಗೆ 10ರಿಂದ 11 ಹಾಗೂ ಮಧ್ಯಾಹ್ನ 2ರಿಂದ 5ರ ನಡುವಿನ ಸಮಯವನ್ನು ನಿಗದಿ ಮಾಡಲಾಗಿದೆ.

ಜಿಪಿಎಸ್ ನೆರವಿನಿಂದ ಕಾಮಗಾರಿ ಸ್ಥಳದ ಛಾಯಾಚಿತ್ರ ತೆಗೆದು ಅಪ್‌ಲೋಡ್ ಮಾಡಬೇಕು. ಇದರಲ್ಲಿ ಸ್ವಲ್ಪ ಏರುಪೇರಾದರೂ ಆ ದಿನದ ಕೂಲಿ ಕಾರ್ಮಿಕರಿಗೆ ಪಾವತಿಯಾಗುವುದಿಲ್ಲ. ಇದೇ ಈಗ ಕಾರ್ಮಿಕರಿಗೆ ಕಿರಿಕಿರಿ ಅನಿಸಿದೆ. ಪ್ರಕ್ರಿಯೆಗಳಿಂದ ಬೇಸತ್ತು ಕೆಲಸದಿಂದ ದೂರ ಉಳಿಯುತ್ತಿದ್ದಾರೆ.

ಅದರಲ್ಲೂ ಅತಿ ಹೆಚ್ಚು ಬಿಸಿಲು ಇರುವ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಬಯಲು ಸೀಮೆಯ ಜಿಲ್ಲೆಗಳಲ್ಲಿ ಇದರ ಬಿಸಿ ಹೆಚ್ಚಿನ ಪ್ರಮಾಣದಲ್ಲಿ ತಟ್ಟಿದೆ. ರಾಜ್ಯದ ಇತರೆ ಕಡೆಗಳಲ್ಲಿಯೂ ಇದರ ಪ್ರಭಾವ ಕಂಡು ಬಂದಿದೆ. ಚಾಮರಾಜನಗರದಲ್ಲೂ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ತಗ್ಗಿದೆ. ಹೊಸ ನಿಯಮ ವಿರೋಧಿಸಿ ರಾಜ್ಯದಾದ್ಯಂತ ಕಾರ್ಮಿಕ ಸಂಘಟನೆಗಳು ನಿರಂತರವಾಗಿ ಹೋರಾಟ ನಡೆಸುತ್ತಿವೆ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಮಾಲವಿ ಜಲಾಶಯದಿಂದ ಉದ್ಯೋಗ ಖಾತ್ರಿ ಯೋಜನೆಯಡಿ ಕಾರ್ಮಿಕರು ಹೂಳೆತ್ತುತ್ತಿರುವುದು

ಇ-ಹಾಜರಾತಿ ನಿಯಮ ಜಾರಿಗೆ ತಂದ ಆರಂಭದಲ್ಲಿ ಕಾರ್ಮಿಕರು ಕೆಲಸಕ್ಕೆ ನಿರಾಸಕ್ತಿ ತೋರಿಸಿದ್ದರು. ಈಗ ಎಲ್ಲ ಕಡೆ ಸುಧಾರಣೆ ಆಗುತ್ತಿದೆ.
ಎಲ್.ಕೆ. ಅತೀಕ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಆರ್‌ಡಿಪಿಆರ್

ವರ್ಷ	ಮಾನವ ದಿನಗಳ ಸೃಜನೆ
2022-23	3.05 ಕೋಟಿ
2021-22	16 ಕೋಟಿ
2020-21	14.80 ಕೋಟಿ
2019-20	11.11 ಕೋಟಿ
2018-19	10.44 ಕೋಟಿ

ಸಾಮಾಜಿಕ ಕಾರ್ಯಕರ್ತೆ ತೀಸ್ತಾ ವಶಕ್ಕೆ

ಮುಂಬೈ/ಅಹಮದಾಬಾದ್ (ಪಿಟಿಐ): ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರನ್ನು ಗುಜರಾತ್ ಭಯೋತ್ಪಾದನೆ ನಿಗ್ರಹ ದಳವು (ಎಟಿಎಸ್) ಶನಿವಾರ ಮುಂಬೈನಲ್ಲಿ ವಶಕ್ಕೆ ಪಡೆದಿದೆ. ಅಹಮದಾಬಾದ್ ನಗರ ಕ್ರೈಂ ಬ್ರಾಂಚ್‌ನಲ್ಲಿ ಅವರ ವಿರುದ್ಧ ಶನಿವಾರ ಬೆಳಿಗ್ಗೆ 11 ಗಂಟೆಗೆ ಎಫ್‌ಐಆರ್ ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ. ತೀಸ್ತಾ ಅವರು ಕೂಡ ಮುಂಬೈನ ಸಾಂತಾಕ್ರೂಜ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ತಮ್ಮನ್ನು ಅಕ್ರಮವಾಗಿ ಬಂಧಿಸಲಾಗಿದೆ ಎಂದು ಅವರು ಹೇಳಿದ್ದಾರೆ.

7ನೇ ಪುಟ ನೋಡಿ

ತೀಸ್ತಾ ಅವರನ್ನು ಗುಜರಾತ್ ಪೊಲೀಸರು ಶನಿವಾರ ವಶಕ್ಕೆ ಪಡೆದರು – ಪಿಟಿಐ ಚಿತ್ರ

ಇನ್ನೂ ಮುಗಿಯದ ಪಠ್ಯ ಪರಿಷ್ಕರಣೆ ಗೊಂದಲ

ಸಿಗದ ಪಠ್ಯಪುಸ್ತಕ: ತಪ್ಪದ ಗೋಳಾಟ

• ಸಚ್ಚಿದಾನಂದ ಕುರಗುಂದ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯ ಸರ್ಕಾರ ಪರಿಷ್ಕೃತ ಪಠ್ಯಕ್ರಮವನ್ನೇ ಶಾಲೆಗಳಿಗೆ ಪೂರೈಸುವುದಾಗಿ ಹೇಳುತ್ತಿದೆ. ಆದರೆ, ಶಾಲೆ ಆರಂಭವಾಗಿ ಒಂದೂವರೆ ತಿಂಗಳಾಗುತ್ತಿದ್ದರೂ ಪಠ್ಯಪುಸ್ತಕಗಳು ಇನ್ನೂ ವಿದ್ಯಾರ್ಥಿಗಳ ಕೈ ಸೇರಿಲ್ಲ.

ಪರಿಷ್ಕೃತ ಪಠ್ಯದ ಸಮರ್ಥನೆಯಲ್ಲೇ ಮುಳುಗಿರುವ ಸರ್ಕಾರ, ತನ್ನ ಸಮರ್ಥನೆಗೆ ತಕ್ಕಂತೆ ಪುಸ್ತಕ ಪೂರೈಸುವತ್ತ ಲಕ್ಷ್ಯ ತೋರಿಲ್ಲ ಎಂದು ಶಿಕ್ಷಕರೇ ದೂರುವ ಸ್ಥಿತಿ ಎದುರಾಗಿದೆ. ಟೆಂಡರ್ ವಿಳಂಬ, ಮುದ್ರಣ ಕಾಗದದ ಸಮಸ್ಯೆಯೂ ಇದಕ್ಕೆ ಮತ್ತೊಂದು ಕಾರಣವಾಗಿದೆ.

ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪರಿಶೀಲನಾ ಸಮಿತಿ ಪರಿಷ್ಕರಿಸಿದ್ದ ಪಠ್ಯಪುಸ್ತಕದ ಗೊಂದಲ ಸದ್ಯಕ್ಕೆ ಬಗೆಹರಿಯುವ ಲಕ್ಷಣಗಳು ಕಾಣಿಸುತ್ತಿಲ್ಲ. ಇದರಿಂದ, ವಿದ್ಯಾರ್ಥಿಗಳು ಇನ್ನಷ್ಟು ಕಾಲ ಕಾಯಬೇಕಾದ ಪರಿಸ್ಥಿತಿ ಇದೆ.

ಬಾಕಿ ಉಳಿದ ಪುಸ್ತಕಗಳು 6.76 ಲಕ್ಷ

2021–22ನೇ ಸಾಲಿನಲ್ಲಿ ಪರಿಷ್ಕರಣೆ ಕಾರಣದಿಂದ 6,76,997 ಪಠ್ಯ ಪುಸ್ತಕಗಳು ಉಳಿಕೆಯಾಗಿದ್ದವು. ಇವುಗಳ ಮೊತ್ತ ₹3 ಕೋಟಿಗೂ ಹೆಚ್ಚು ಎಂದು ಅಂದಾಜಿಸಲಾಗಿದೆ.

ಇವುಗಳಲ್ಲಿ 6ರಿಂದ 10ನೇ ತರಗತಿಯ ಸಮಾಜ ವಿಜ್ಞಾನದ (ಎಲ್ಲ ಮಾಧ್ಯಮಗಳು) 3.45 ಲಕ್ಷ ಮತ್ತು 1ರಿಂದ 10ನೇ ತರಗತಿಯ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಯ 3.31 ಲಕ್ಷ ಕನ್ನಡ ಭಾಷಾ ಪಠ್ಯ ಪುಸ್ತಕಗಳು ಸೇರಿವೆ.

2022–23ನೇ ಶೈಕ್ಷಣಿಕ ಸಾಲಿಗೆ 6ರಿಂದ 10ನೇ ತರಗತಿ ಸಮಾಜ ವಿಜ್ಞಾನದ (ಎಲ್ಲ ಮಾಧ್ಯಮಗಳು) 84.75 ಲಕ್ಷ ಮತ್ತು ಕನ್ನಡ ಭಾಷೆಯ (1ರಿಂದ 10ನೇ ತರಗತಿಯ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಯ) 68.74 ಲಕ್ಷ ಪಠ್ಯಗಳನ್ನು ಪೂರೈಸುವಂತೆ ಶಾಲೆಗಳಿಂದ ಬೇಡಿಕೆ ಬಂದಿತ್ತು.

ಒಟ್ಟು ಬೇಡಿಕೆ ವಿವರ	
ಒಟ್ಟು ಪುಸ್ತಕಗಳು	6,03,48,071
ಉಚಿತ	4,59,69,638
ಮಾರಾಟ	1,43,78,433

5ನೇ ಪುಟ ನೋಡಿ

ಶಿವಸೈನಿಕರ ಆಕ್ರೋಶ ತೀವ್ರ

ಮುಂಬೈ, ಠಾಣೆ ನಗರಗಳಲ್ಲಿ ನಿಷೇಧಾಜ್ಞೆ

ಠಾಣೆ/ಮುಂಬೈ (ಪಿಟಿಐ): ನಾಯಕತ್ವದ ವಿರುದ್ಧ ಬಂಡಾಯ ಎದ್ದಿರುವ ಶಿವಸೇನಾ ಶಾಸಕರ ವಿರುದ್ಧ ಪಕ್ಷದ ಕಾರ್ಯಕರ್ತರ ಆಕ್ರೋಶ ತೀವ್ರಗೊಂಡಿದೆ. ಪುಣೆ, ನಾಸಿಕ್, ಕೊಲ್ಹಾಪುರ ಸೇರಿದಂತೆ ಹಲವು ಕಡೆಗಳಲ್ಲಿ ಬಂಡಾಯ ಶಾಸಕರು, ಸಂಸದರ ಮನೆ ಹಾಗೂ ಕಚೇರಿಗಳ ಮೇಲೆ ಶನಿವಾರ ದಾಳಿ ಮಾಡಿದ ಸೇನಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಇನ್ನೂ ಕೆಲವೆಡೆ ಶಿಂಧೆ ಅವರ ಪೋಸ್ಟರ್‌ಗೆ ಮಸಿ ಬಳಿಯಲಾಗಿದೆ. ಮುಂಬೈ ಹಾಗೂ ಠಾಣೆ ನಗರದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಬಂಡಾಯ ನಾಯಕ ಏಕನಾಥ ಶಿಂಧೆ ಜೊತೆಗೆ ಗುರುತಿಸಿಕೊಂಡಿರುವ ಶಿವಸೇನಾ ಶಾಸಕ ತಾನಾಜಿ ಸಾವಂತ್ ಅವರ ಪುಣೆಯ ಕಚೇರಿಯ ಮೇಲೆ ಶಿವ ಸೈನಿಕರು ಶನಿವಾರ ದಾಳಿ ನಡೆಸಿದ್ದಾರೆ. ದಿಲೀಪ್ ಲಾಂಡೆ ಅವರ ಮುಂಬೈನಲ್ಲಿರುವ ಕಚೇರಿ ಮೇಲೂ ದಾಳಿ ನಡೆಸಲಾಗಿದೆ. ಏಕನಾಥ ಶಿಂಧೆ ಅವರ ಪುತ್ರ ಹಾಗೂ ಕಲ್ಯಾಣ್ ಲೋಕಸಭಾ ಕ್ಷೇತ್ರದ ಸಂಸದ ಶ್ರೀಕಾಂತ್ ಶಿಂಧೆ ಅವರ ಕಚೇರಿ ಮೇಲೆ ಕಲ್ಲುತೂರಾಟ ನಡೆಸಲಾಗಿದೆ.

ಸಾವಂತ್ ಅವರಿಗೆ ಸೇರಿದ ಕತ್ರಾಜ್ ಪ್ರದೇಶದಲ್ಲಿರುವ ಭೈರವನಾಥ ಶುಗರ್ ವರ್ಕ್ಸ್ ಕಚೇರಿಗೆ ನುಗ್ಗಿ ಹಾನಿ ಮಾಡಲಾಗಿದೆ. 'ಪಕ್ಷಕ್ಕೆ ದ್ರೋಹ ಬಗೆದ ಎಲ್ಲರಿಗೂ ಪಾಠ ಕಲಿಸುತ್ತೇವೆ. ಇದು ಆರಂಭ ಮಾತ್ರ. ಮುಂದಿನ ದಿನಗಳಲ್ಲಿ ಪಕ್ಷದ್ರೋಹಿ ಶಾಸಕರ ಕಚೇರಿಗಳನ್ನು ಧ್ವಂಸ ಮಾಡುತ್ತೇವೆ' ಎಂದು ಪಾಲಿಕೆ ಸದಸ್ಯ ವಿಶಾಲ್ ಧನವಾಡೆ ಎಚ್ಚರಿಕೆ ನೀಡಿದ್ದಾರೆ. ತಾನಾಜಿ ಸಾವಂತ್ ಹಾಗೂ ಮತ್ತೊಬ್ಬ ಬಂಡಾಯ ಶಾಸಕ ಜ್ಞಾನರಾಜ್ ಚೌಗಲೆ ವಿರುದ್ಧ ಉಸ್ಮಾನಾಬಾದ್ ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು.

7ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 7

ಎಸ್‌ಎಂಕೆ, ಎನ್‌ಆರ್‌ಎನ್‌ಗೆ ಕೆಂಪೇಗೌಡ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಸರ್ಕಾರ ಮೊದಲ ಬಾರಿಗೆ ನೀಡುತ್ತಿರುವ 'ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ'ಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಮತ್ತು ಮಾಜಿ ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಅವರನ್ನು ಆಯ್ಕೆ ಮಾಡಲಾಗಿದೆ. 5

ಒಳ ಪುಟಗಳು

ವನ್ಯಜೀವಿಗಳ ಆವಾಸಕ್ಕೆ ಕುತ್ತು; ಆತಂಕ 6
ಬಾಲನಟರ ಹಕ್ಕು ರಕ್ಷಣೆಗೆ ಮಾರ್ಗಸೂಚಿ 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ರೈತ ಸಂಘದ ಕುರ್ಚಿ ಖಾಲಿ ಇಲ್ಲ: ಕೋಡಿಹಳ್ಳಿ

ಬೆಂಗಳೂರು: 'ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕುರ್ಚಿ ಖಾಲಿ ಇಲ್ಲ. ಈಗಲೂ ನಾನೇ ರೈತ ಸಂಘದ ಅಧ್ಯಕ್ಷ' ಎಂದು ಕೋಡಿಹಳ್ಳಿ ಚಂದ್ರಶೇಖರ ಹೇಳಿದರು.

'ಕೋಡಿಹಳ್ಳಿ ಅವರು ಹಸಿರು ಟವೆಲ್ ಧರಿಸಬಾರದು ಎಂದು ಹೇಳಿರುವ ಎಚ್.ಆರ್.ಬಸವರಾಜಪ್ಪ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ರೈತ ಸಂಘದ ರಶೀದಿಗಳ ದುರ್ಬಳಕೆ ಮತ್ತು ಕಬ್ಬಿನ ಹಣದಲ್ಲಿ ನಡೆದ ಭ್ರಷ್ಟಾಚಾರ ಆರೋಪದ ಮೇಲೆ 2016ರಲ್ಲಿ ರೈತ ಸಂಘದಿಂದ ಅವರನ್ನು ತೆಗೆದು ಹಾಕಲಾಗಿದೆ. ಯಾರೂ ಆರೋಪಿಗಳು ಬಂದು ನನ್ನ ಬಗ್ಗೆ ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸುವ ಅಗತ್ಯವಿಲ್ಲ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕೇಂದ್ರ ಸರ್ಕಾರ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸಿದೆ. ಆದರೆ ಯಾವ ಸರ್ಕಾರಗಳು ಪಾಲನೆ ಮಾಡುತ್ತಿಲ್ಲ. ರಾಜ್ಯದ ಪ್ರಮುಖ ಬೆಳೆಗಳು ಎಂಎಸ್‌ಪಿಗಿಂತ ಮಾರು-ಕಟ್ಟೆಯಲ್ಲಿ ಕನಿಷ್ಠ ಬೆಲೆಗೆ ಮಾರಾಟ ಮಾಡಲಾಗುತ್ತಿದೆ' ಎಂದು ಆರೋಪಿಸಿದರು.

'ರಾಜ್ಯ ಸರ್ಕಾರ ರೈತರಿಗೆ ಗೊಬ್ಬರದ ಕೊರತೆಯಾಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಇಲ್ಲ ದಿದ್ದರೆ ರೈತರು ಬೀದಿಗೆ ಬರ ಬೇಕಾಗುತ್ತದೆ. ಮತ್ತೊಮ್ಮೆ ಹಾವೇರಿ ಗೋಲಿಬಾರ್‌ನಂತಹ ಕರಾಳ ಘಟನೆ ಮರುಕಳಿಸಬಾರದು' ಎಂದರು.



ಡಿಕೆಶಿಗೆ ಪತ್ರ ಬರೆದು ಸಾತಿ ಸುಂದರೇಶ್ ಆಕ್ಷೇಪ

'ಸಿಪಿಐ' ಕಚೇರಿಗೆ ನುಗ್ಗಿ ಕಾಂಗ್ರೆಸ್ ಕಾರ್ಯಕರ್ತರ ದಾಂದಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ರಾಜ್ಯ ಮುಖ್ಯ ಕಚೇರಿಗೆ ನುಗ್ಗಿದ ಕಾಂಗ್ರೆಸ್‌ನ ವಿದ್ಯಾರ್ಥಿ ಸಂಘಟನೆ ಕಾರ್ಯಕರ್ತರು ದಾಂದಲೆ ಮಾಡಿದ್ದು, ಈ ಘಟನೆಯನ್ನು ಸಿಪಿಐ ಪದಾಧಿಕಾರಿಗಳು ತೀವ್ರವಾಗಿ ಖಂಡಿಸಿದ್ದಾರೆ.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಕೇರಳದ ಕಚೇರಿ ಮೇಲೆ ದಾಳಿ ನಡೆಸಿದ್ದ ಪ್ರಕರಣದಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಮಾರ್ಕ್ಸ್‌ವಾದದ (ಸಿಪಿಐ–ಎಂ) ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಎಸ್‌ಎಫ್‌ಐ ಕೃತ್ಯವನ್ನು ಖಂಡಿಸಿ ಪ್ರತಿಭಟನೆ ನಡೆಸಲು ಮುಂದಾದ ಕಾಂಗ್ರೆಸ್‌ನ ವಿದ್ಯಾರ್ಥಿ ಸಂಘಟನೆ ಕಾರ್ಯಕರ್ತರು, 'ಸಿಪಿಐ–ಎಂ' ಕಚೇರಿ ಎಂಬುದಾಗಿ ಭಾವಿಸಿ 'ಸಿಪಿಐ' ಕಚೇರಿಗೆ ನುಗ್ಗಿ ಗಲಾಟೆ ಮಾಡಿರುವುದಾಗಿ ಗೊತ್ತಾಗಿದೆ. ಆದರೆ, ಘಟನೆ ಬಗ್ಗೆ ಯಾವುದೇ ದೂರು ದಾಖಲಾಗಿಲ್ಲ.

ಘಟನೆ ಉಲ್ಲೇಖಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, 'ಕಾಂಗ್ರೆಸ್ ವಿದ್ಯಾರ್ಥಿ ಸಂಘಟನೆ ಕಾರ್ಯಕರ್ತರ ಗೂಂಡಾ ವರ್ತನೆಯನ್ನು ತೀವ್ರವಾಗಿ ಖಂಡಿಸುತ್ತೇವೆ' ಎಂದಿದ್ದಾರೆ.

'ವೈಯಾಲಿಕಾವಲ್ ಬಳಿಯ ಜೆ.ಡಿ. ಪಾರ್ಕ್ ಬಡಾವಣೆಯಲ್ಲಿರುವ ನಮ್ಮ ಪಕ್ಷದ ಕಚೇರಿಗೆ ಮಧ್ಯಾಹ್ನ 12.30ರ ಸುಮಾರಿಗೆ ಏಕಾಏಕಿ ನುಗ್ಗಿದ್ದ ನಿಮ್ಮ 20ಕ್ಕೂ ಹೆಚ್ಚು (ಕಾಂಗ್ರೆಸ್) ಕಾರ್ಯಕರ್ತರು, ಬಾವುಟ ಹಿಡಿದು ಘೋಷಣೆ ಕೂಗುತ್ತಿದ್ದರು. ದಾಳಿ ಬಗ್ಗೆ ವಿಚಾರಿಸಿದಾಗ, ಎಸ್‌ಎಫ್‌ಐ ಕಚೇರಿಗೆ ಮುತ್ತಿಗೆ ಹಾಕಲು ಬಂದಿರುವುದಾಗಿ ಹೇಳಿದ್ದರು. ನಮ್ಮದು ಸಿಪಿಐ ಕಚೇರಿ. ಎಸ್‌ಎಫ್‌ಐ ಕಚೇರಿಯಲ್ಲವೆಂದು ಮನವರಿಕೆ ಮಾಡಿಕೊಟ್ಟರೂ ದಾಂದಲೆ ಮುಂದುವರಿಸಿದ್ದರು. ನನ್ನನ್ನು ಸೇರಿದಂತೆ ಹಲವರನ್ನು ಅಕ್ರಮವಾಗಿ ತಡೆದಿದ್ದರು.'

'ಗಲಭೆಕೋರ ಮನಸ್ಥಿತಿ ಹೊಂದಿರುವ ಕಾರ್ಯಕರ್ತರ ವರ್ತನೆ ಕಾಂಗ್ರೆಸ್ ಪಕ್ಷದ ಘನತೆಗೆ ಧಕ್ಕೆ ಉಂಟು ಮಾಡಲಿದೆ. ಫ್ಯಾಸಿವಾದಿ ಶಕ್ತಿಗಳನ್ನು ಸೋಲಿಸಲು ನಾವೆಲ್ಲ ಒಂದಾಗ ಬೇಕಾಗಿರುವ ಕಾಲದಲ್ಲಿ ಇಂಥ ದುರ್ಘಟನೆ ನಡೆಯುತ್ತಿರುವುದು ವಿಷಾದನೀಯ' ಎಂದೂ ಅವರು ಉಲ್ಲೇಖಿಸಿದ್ದಾರೆ.

'ಪಠ್ಯಪುಸ್ತಕ ಲೋಪ: ಹೋರಾಟದ ಎಚ್ಚರಿಕೆ'

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆಯ-ಲ್ಲಿ ಆಗಿರುವ ಲೋಪದೋಷಗಳನ್ನು ಸರಿ ಪಡಿಸದಿದ್ದರೆ ಮತ್ತೆ ಮಠಾಧೀಶರು, ದಲಿತ ಹಾಗೂ ಹಿಂದುಳಿದ ಸಮುದಾಯದ ಸಂಘಟನೆಗಳ ಸಭೆ ನಡೆಸಿ ಮುಂದಿನ ಹೋರಾಟದ ಕುರಿತು ತೀರ್ಮಾನಿಸಲಾಗುವುದು ಎಂದು ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪರೆಡ್ಡಿ ಎಚ್ಚರಿಸಿದರು.

'ಫ್ರೀಡಂ ಪಾರ್ಕ್‌ನಲ್ಲಿ ನಡೆದಿದ್ದ ಪ್ರತಿಭಟನೆಯಲ್ಲಿ ಸರ್ಕಾರಕ್ಕೆ 10 ದಿನಗಳ ಗಡುವು ನೀಡಲಾಗಿತ್ತು. ಈ ಅವಧಿ ಒಳಗೆ ಪಠ್ಯ ಸರಿಪಡಿಸಬೇಕು' ಎಂದು ಪತ್ರಿಕಾ ಗೋಷ್ಠಿಯಲ್ಲಿ ಶನಿವಾರ ಆಗ್ರಹಿಸಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಪತ್ರ ಬರೆದು ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದ ಸಮಿತಿಯ ಪಠ್ಯ ಮುಂದುವರಿಸುವಂತೆ ಮನವಿ ಮಾಡಿದ್ದಾರೆ. ಹೀಗಾಗಿ, ಸರ್ಕಾರದ ತೀರ್ಮಾನವನ್ನು ಎದುರು ನೋಡುತ್ತಿದ್ದೇವೆ. ಸರ್ಕಾರವು ಸ್ಪಂದಿಸದಿದ್ದರೆ ಮತ್ತೊಂದು ಸುತ್ತಿನ ಹೋರಾಟದ ಬಗ್ಗೆ ನಿರ್ಧರಿಸುತ್ತೇವೆ' ಎಂದರು.

28ರಂದು 1 ಲಕ್ಷ ಪುಸ್ತಕ ವಿತರಣೆ

ಬೆಂಗಳೂರು: ರಕ್ಷಾ ಫೌಂಡೇಷನ್ ವತಿಯಿಂದ 1 ಲಕ್ಷ ಉಚಿತ ನೋಟ್ ಪುಸ್ತಕಗಳನ್ನು ವಿತರಿಸುವ ಕಾರ್ಯಕ್ರಮವನ್ನು ಜೂನ್ 28 ರಂದು ಜಯನಗರದ ಚಂದ್ರಗುಪ್ತ ಮೌರ್ಯ(ಶಾಲಿನಿ) ಆಟದ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

'ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ 93ಕ್ಕಿಂತ ಅಧಿಕ ಅಂಕಗಳಿಸಿದ 50 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ 10 ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗುವುದು' ಎಂದು ಸಂಸ್ಥಾಪಕ ಅಧ್ಯಕ್ಷ ಸಿ.ಕೆ. ರಾಮಮೂರ್ತಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು.

'ವಾತ್ಸಲ್ಯಪುರಂ ಸಂಸ್ಥೆಯ ಆಶ್ರಮದ ಎರಡು ಅನಾಥ ಮಕ್ಕಳನ್ನು ದತ್ತು ಸ್ವೀಕರಿಸಿ ಅವರ ವಾರ್ಷಿಕ ಮತ್ತು ಶೈಕ್ಷಣಿಕ ವೆಚ್ಚವನ್ನು ಭರಿಸಲಾಗುವುದು. ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವ ಮಕ್ಕಳಿಗೆ ಸಹಾಯವಾಗಲೆಂದು ₹ 2 ಲಕ್ಷದ ಚೆಕ್ ಅನ್ನು ಜಯದೇವ ಹೃದ್ರೋಗ ಆಸ್ಪತ್ರೆಯ ಡಾ.ಸಿ. ಎನ್. ಮಂಜುನಾಥ್ ಅವರಿಗೆ ಹಸ್ತಾಂತರಿಸಲಾಗುವುದು' ಎಂದು ಅವರು ತಿಳಿಸಿದರು.

2 ಕಿ.ಮೀ.ವರೆಗೆ ಸಾಲುಗಟ್ಟಿ ನಿಂತ ವಾಹನಗಳು • ಸಂಚಾರ ಅಸ್ತವ್ಯಸ್ತ • ಸ್ಥಳೀಯರಿಗೆ ಕಿರಿಕಿರಿ

ನಾಗಸಂದ್ರ ಬಳಿ ವಿಪರೀತ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗಸಂದ್ರ ಮೆಟ್ರೊ ನಿಲ್ದಾಣ ಬಳಿ ಹೊಸದಾಗಿ ಆರಂಭವಾಗಿರುವ ಪೀಠೋಪಕರಣ ಮಳಿಗೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರಿಂದ, ನಾಗಸಂದ್ರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಶನಿವಾರ ವಿಪರೀತ ದಟ್ಟಣೆ ಉಂಟಾಯಿತು.

ತುಮಕೂರಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡ ಪ್ರದೇಶದಲ್ಲಿ ಪೀಠೋಪಕರಣ ಮಳಿಗೆ ನಿರ್ಮಾಣ ಮಾಡಲಾಗಿದೆ. ಮೆಟ್ರೊ ಹಾಗೂ ರಸ್ತೆ ಮಾರ್ಗವಾಗಿ ಸಾವಿರಾರು ಜನರು ಶನಿವಾರ ಮಳಿಗೆಗೆ ಬಂದಿದ್ದರು. ಮೆಟ್ರೊ ನಿಲ್ದಾಣ ಬಳಿಯೇ ಜನಸಂದಣಿ ಕಂಡುಬಂತು.

ಕೆಲವರು ತಮ್ಮ ಕಾರು ಹಾಗೂ ದ್ವಿಚಕ್ರ ವಾಹನಗಳನ್ನು ರಸ್ತೆಯ ಅಕ್ಕ-ಪಕ್ಕದಲ್ಲಿ ನಿಲ್ಲಿಸಿದ್ದರು. ಜೊತೆಗೆ, ಮಳಿಗೆಗೆ ಬಂದು ಹೋಗುವ ಜನ ರಸ್ತೆಯಲ್ಲೇ ಓಡಾಡುತ್ತಿದ್ದರು. ಅವರನ್ನು ಸುರಕ್ಷಿತವಾಗಿ ರಸ್ತೆ ದಾಟಿಸಲು ಸಂಚಾರ ಪೊಲೀಸರು ಹರಸಾಹಸಪಟ್ಟರು.

ರಾಷ್ಟ್ರೀಯ ಹೆದ್ದಾರಿಯಲ್ಲಿದ್ದ ಮೇಲ್ಸೇತುವೆಯಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಿ ಹಲವು ದಿನಗಳಾಗಿದ್ದು, ಕೆಳ ರಸ್ತೆಯಲ್ಲೇ ವಾಹನಗಳು ಸಂಚರಿಸುತ್ತಿವೆ. ಶನಿವಾರ ದಟ್ಟಣೆ ಉಂಟಾಗಿದ್ದರಿಂದ, ಎಲ್ಲ ಪ್ರಕಾರದ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು. 2 ಕಿ.ಮೀ.ವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದುದು ಕಂಡುಬಂತು.

'ನಗರ ಹಾಗೂ ಹೊರ ಜಿಲ್ಲೆಗಳ ಜನರು ಮಳಿಗೆಗೆ ಬಂದಿದ್ದರು. ಮಳಿಗೆಯಲ್ಲೂ ವಿಪರೀತ ಜನಸಂದಣಿ ಇತ್ತು. ಸರದಿಯಲ್ಲಿ ನಿಂತು 2 ಗಂಟೆ ಕಾದು ಜನರು ಮಳಿಗೆಯೊಳಗೆ ಹೋದರು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರಿಂದ ತುಮಕೂರು ರಸ್ತೆಯಲ್ಲಿ ದಟ್ಟಣೆ ಕಂಡುಬಂತು' ಎಂದು ಸಂಚಾರ ಪೊಲೀಸರು ಹೇಳಿದರು.

'ರಸ್ತೆಯ ಎರಡೂ ಬದಿ ಹಾಗೂ ಸರ್ವೀಸ್ ರಸ್ತೆಯಲ್ಲಿ ಜನರೇ ಓಡಾಡುತ್ತಿದ್ದರು. ಮುಂಜಾಗ್ರತಾ ಕ್ರಮವಾಗಿ ವಾಹನಗಳನ್ನು ನಿಧಾನವಾಗಿ ಕಳುಹಿಸಲಾಯಿತು. ಬೆಳಿಗ್ಗೆಯಿಂದ ರಾತ್ರಿವರೆಗೂ ದಟ್ಟಣೆ ಮುಂದುವರಿದಿತ್ತು' ಎಂದೂ ತಿಳಿಸಿದರು.

ಸ್ಥಳೀಯರಿಗೆ ಕಿರಿಕಿರಿ: 'ಹೆಚ್ಚು ವಾಹನ ಓಡಾಟವಿರುವ ಜಾಗದಲ್ಲಿ ಮಳಿಗೆ ನಿರ್ಮಾಣವಾಗಿದೆ. ಸೂಕ್ತ ಪಾರ್ಕಿಂಗ್ ಹಾಗೂ ಇತರ ವ್ಯವಸ್ಥೆ ಇಲ್ಲ. ಮಳಿಗೆಗೆ ಬರುವ ಜನ, ಎಲ್ಲೆಂದರಲ್ಲಿ ವಾಹನ ನಿಲ್ಲಿಸುತ್ತಿದ್ದಾರೆ. ಇದರಿಂದ ಸ್ಥಳೀಯರು ಶನಿವಾರ ಕಿರಿಕಿರಿ ಅನುಭವಿಸುವಂತಾಯಿತು' ಎಂದು ನಿವಾಸಿ ಲಕ್ಷ್ಮಿನಾರಾಯಣ ಹೇಳಿದರು.

'ಮಳಿಗೆ ಆರಂಭವಾದ ಮೊದಲ ದಿನದಿಂದಲೂ ಇಷ್ಟು ದಟ್ಟಣೆ ಇದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ತೊಂದರೆಯಾಗುವ ಸಾಧ್ಯತೆ ಇದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ, ದಟ್ಟಣೆ ತಪ್ಪಿಸಬೇಕು' ಎಂದೂ ತಿಳಿಸಿದರು.



ನಾಗಸಂದ್ರ ಮೆಟ್ರೊ ನಿಲ್ದಾಣ ಬಳಿ ಸೇರಿದ್ದ ಜನ (ಎಡಚಿತ್ರ), ತುಮಕೂರು ರಸ್ತೆಯಲ್ಲಿ ಶನಿವಾರ ಉಂಟಾಗಿದ್ದ ದಟ್ಟಣೆಯಲ್ಲಿ ಸಿಲುಕಿ ಸಾಲುಗಟ್ಟಿ ನಿಂತಿದ್ದ ವಾಹನಗಳು

ಸಂಚಾರ ದಟ್ಟಣೆ ನಿವಾರಣೆಗೆ ಮುಖ್ಯಮಂತ್ರಿ ಸೂಚನೆ

ಬೆಂಗಳೂರು ಸಂಚಾರ ಪೊಲೀಸರು, ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶನಿವಾರ ಸಭೆ ನಡೆಸಿದರು.

'ಹೆಬ್ಬಾಳ, ಮಹದೇವಪುರ ಹೊರವರ್ತುಲ ರಸ್ತೆ, ಸಿಲ್ಕ್ ಬೋರ್ಡ್ ಜಂಕ್ಷನ್, ಸೇಂಟ್ ಜಾನ್ಸ್ ಆಸ್ಪತ್ರೆ, ಘಟ್ಟರಹಳ್ಳಿ ಜಂಕ್ಷನ್, ವೈಟ್‌ಫೀಲ್ಡ್ ರಸ್ತೆ ಸೇರಿದಂತೆ 10 ಪ್ರಮುಖ ಸ್ಥಳಗಳಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಬೇಕು. ಡಿಸಿಪಿಗಳೇ ಇದರ ಉಸ್ತುವಾರಿ ವಹಿಸಿಕೊಳ್ಳಬೇಕು' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

'ರಾಷ್ಟ್ರೀಯ ಹೆದ್ದಾರಿಗಳನ್ನು ಸಂಪರ್ಕಿಸುವ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಬೇಕು. ಕಾಮಗಾರಿಗಾಗಿ ಅಗೆದ ರಸ್ತೆಗಳನ್ನು ತ್ವರಿತವಾಗಿ ದುರಸ್ತಿ ಮಾಡಬೇಕು' ಎಂದೂ ಹೇಳಿದರು.

ಸುದ್ದಿ 2 ನಿಮಿಷ

'ಮಹಿಳಾ ಉದ್ಯಮಿಗಳಿಗೆ ರಾಜ್ಯದಲ್ಲಿ ಪ್ರೋತ್ಸಾಹ'

ಬೆಂಗಳೂರು: 'ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ' ಎಂದು ಉಬುಂಟು ಒಕ್ಕೂಟದ ಸಂಸ್ಥಾಪನಾ ಅಧ್ಯಕ್ಷೆ ರತ್ನಪ್ರಭಾ ತಿಳಿಸಿದರು.

ಕಾಮನ್‌ವೆಲ್ತ್ ಸೆಕ್ರೆಟರಿಯೇಟ್ ಸಹಯೋಗದಲ್ಲಿ ಏಷ್ಯಾ ಮತ್ತು ಪೆಸಿಫಿಕ್ ಸೌತ್ ಹಾಗೂ ಸೌತ್-ವೆಸ್ಟ್ ಏಷ್ಯಾ ಆಫೀಸ್ ಇತ್ತೀಚೆಗೆ ಮಾಲ್ದೀವ್ಸ್‌ನಲ್ಲಿ ಆಯೋಜಿಸಿದ್ದ ಮಹಿಳಾ ಉದ್ಯಮಿಗಳ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಉಬುಂಟು ಒಕ್ಕೂಟವು 9 ರಾಜ್ಯಗಳಿಂದ 33 ಸಂಘಗಳನ್ನು ಹೊಂದಿದೆ. ಅವುಗಳು 22 ಸಾವಿರಕ್ಕೂ ಹೆಚ್ಚು ಮಹಿಳಾ ಉದ್ಯಮಿಗಳ ಪರೋಕ್ಷ ಸದಸ್ಯತ್ವದೊಂದಿಗೆ ಸಂಯೋಜಿತವಾಗಿವೆ. ಒಕ್ಕೂಟವು ಮಹಿಳಾ ಉದ್ಯಮಿಗಳ ಬಗ್ಗೆ ಕಾಳಜಿ ಹೊಂದಿರುವ ಜೊತೆಗೆ ಹಲವಾರು ಮಹಿಳಾ ಉದ್ಯಮಿಗಳ ಭಾಗವಹಿಸುವಿಕೆಗೆ ಅನುಕೂಲವಾಗುವಂತೆ ರಾಜ್ಯ ಸರ್ಕಾರದೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ' ಎಂದು ಹೇಳಿದರು.

ವಿಶ್ವಸಂಸ್ಥೆಯ ಸ್ಥಾನಿಕ ಸಂಯೋಜನಾಧಿಕಾರಿ ಕ್ರಿಸ್ಟೋಫರ್ ಹಾಸ್ಲೆ, 'ಕೋವಿಡ್ ಬಳಿಕ ಮಹಿಳಾ ಉದ್ಯಮಿಗಳು ತಮ್ಮ ವ್ಯಾಪಾರ ವ್ಯವಹಾರ ಅಭಿವೃದ್ಧಿಪಡಿಸಿಕೊಳ್ಳಲು ಡಿಜಿಟಲ್ ವೇದಿಕೆ ಬಳಸಿಕೊಂಡಿದ್ದರಿಂದ ಉದ್ಯಮದಲ್ಲಿ ಯಶಸ್ಸು ಸಾಧ್ಯವಾಯಿತು' ಎಂದರು.

ಮಾಲ್ದೀವ್ಸ್‌ನ ರಾಜ್ಯ ಸಚಿವೆ ಜೆಲ್ಲೀನಾ ಹಸನ್, 'ಆನ್‌ಲೈನ್ ಮಾರುಕಟ್ಟೆ ಬೆಳೆಯುತ್ತಿದ್ದು, ಡಿಜಿಟಲ್ ವೇದಿಕೆಗಳನ್ನು ಬಳಸಿಕೊಳ್ಳಬೇಕು' ಎಂದರು.

ಅಗ್ನಿಪಥ ವಿರೋಧಿಸಿ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿಭಟನೆ – ಡಿಕೆಶಿ

ಬೆಂಗಳೂರು: 'ಅಗ್ನಿ ಪಥ ಯೋಜನೆ ವಿರೋಧಿಸಿ ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳುವಂತೆ ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಸೂಚನೆ ನೀಡಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಈ ಯೋಜನೆಯಿಂದ ಯುವಕರಿಗೆ ದೊಡ್ಡ ಅನ್ಯಾಯವಾಗಲಿದ್ದು, ಪ್ರತಿಭಟನೆ ಅನಿವಾರ್ಯವಾಗಿದೆ. ಕೇಂದ್ರ ಸರ್ಕಾರ ಏನಾದರೂ ಬದಲಾವಣೆ ಮಾಡುವ ವಿಚಾರವನ್ನು ವ್ಯಕ್ತಪಡಿಸುತ್ತಿದೆ. ನಮ್ಮ ಮಕ್ಕಳು ನಾಲ್ಕು ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸಿ ನಂತರ ಭದ್ರತಾ ಸಿಬ್ಬಂದಿ ಆಗಲು ಬಿಡುವುದಿಲ್ಲ' ಎಂದು ಹೇಳಿದರು.

'ಬಿಜೆಪಿ ನಾಯಕರ ಮಕ್ಕಳು ವೈದ್ಯರು, ಎಂಜಿನಿಯರ್, ಪ್ರೊಫೆಸರ್ ಆಗಬೇಕು, ಬಡವರ ಮಕ್ಕಳು ಭದ್ರತಾ ಸಿಬ್ಬಂದಿ ಆಗಬೇಕೇ? ಸೇನೆಗೆ ಯುವಕರನ್ನು ತೆಗೆದುಕೊಳ್ಳಲಿ. ಆದರೆ, ಪೂರ್ಣಾವಧಿಗೆ ತೆಗೆದುಕೊಂಡು ಅವರು ನಿವೃತ್ತಿಯಾಗುವವರೆಗೂ ಸೇವೆಗೆ ಅವಕಾಶ ನೀಡಲಿ. ಯೋಧರ ವೇತನ, ಪಿಂಚಣಿಗೆ ಸಮಸ್ಯೆ ಇದ್ದರೆ, ಸರ್ಕಾರ ಬೇರೆ ವಿಚಾರಗಳಿಗೆ ಸೆಸ್ ಹಾಕುತ್ತಿರುವಂತೆ ಸೆಸ್ ಹಾಕಲಿ' ಎಂದರು.

ರಾಜಧಾನಿಯಲ್ಲಿ ಹೋರಾಟ ಮಲೆನಾಡಿಗರ ಎಚ್ಚರಿಕೆ

ಬೆಂಗಳೂರು: 'ಮಲೆನಾಡು ವ್ಯಾಪ್ತಿಯ ಜಿಲ್ಲೆಯ ಜನರ ಬೇಡಿಕೆಗಳ ಬಗ್ಗೆ ಸರ್ಕಾರವು ನಿರ್ಲಕ್ಷ್ಯ ವಹಿಸಿದ್ದು, ರಾಜಧಾನಿಯಲ್ಲಿ ಹೋರಾಟ ನಡೆಸಲಾಗುವುದು' ಎಂದು ಮಲೆನಾಡು ಜನಪರ ಒಕ್ಕೂಟ ಎಚ್ಚರಿಸಿದೆ.

'ಬೇಡಿಕೆ ಈಡೇರಿಕೆಗೆ ಇನ್ನೂ ಕೆಲವು ದಿನ ಕಾಲಾವಕಾಶ ನೀಡುತ್ತೇವೆ. ಬಳಿಕ ಹೋರಾಟ ಆರಂಭಿಸುತ್ತೇವೆ' ಎಂದು ಒಕ್ಕೂಟದ ಅಧ್ಯಕ್ಷ ಅನಿಲ್ ಹೊಸಕೊಪ್ಪ ತಿಳಿಸಿದ್ದಾರೆ.

'ಈ ಹಿಂದೆ ಬೆಂಗಳೂರಿನಲ್ಲಿ ನಡೆದಿದ್ದ ಮಲೆನಾಡು ಉಳಿಸಿ ಸಭೆಯಲ್ಲಿ ಕೊಡಗು, ಚಿಕ್ಕಮಗಳೂರು , ಶಿವಮೊಗ್ಗ, ಕುಮಟಾ, ಶಿರಸಿ ಭಾಗದ ರೈತರು, ಜನಪ್ರತಿನಿಧಿಗಳು ಪಾಲ್ಗೊಂಡಿದ್ದರು. ಬಳಿಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಮನವಿಗಳ ಪೈಕಿ ಒಂದು ಬೇಡಿಕೆ ಹೊರತುಪಡಿಸಿದರೆ ಯಾವುದೇ ಬೇಡಿಕೆ ಈಡೇರಿಲ್ಲ' ಎಂದು ಅವರು ದೂರಿದ್ದಾರೆ.

'ಶಿವಮೊಗ್ಗಕ್ಕೆ ಬಂದಿದ್ದ ಮುಖ್ಯಮಂತ್ರಿ ಅವರು ಮೇ ಮೊದಲ ವಾರದಲ್ಲಿ ಸಭೆ ಕರೆದು ಸಮಸ್ಯೆ ಬಗೆಹರಿಸುತ್ತೇನೆ ಎಂದು ಭರವಸೆ ನೀಡಿದ್ದರು. ಆದರೆ, ಇಂದಿಗೂ ಸಭೆ ಕರೆದಿಲ್ಲ. ಹೀಗಾಗಿ ಬೆಂಗಳೂರಿನಲ್ಲಿ ಮುಷ್ಕರ ನಡೆಸುತ್ತೇವೆ' ಎಂದು ಎಚ್ಚರಿಕೆ ನೀಡಿದ್ದಾರೆ.

ಬೇಡಿಕೆಗಳು ಏನು?

- ಮಲೆನಾಡು ಪ್ರದೇಶವನ್ನು 'ವಿಶೇಷ ಕೃಷಿ ವಲಯ'ಎಂದು ಘೋಷಿಸಬೇಕು
- ಆಶ್ರಯ ಬಡಾವಣೆ ನಿರ್ಮಾಣಕ್ಕೆ ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ 10 ಎಕರೆ ಭೂಮಿ ಮೀಸಲು ಇಡಬೇಕು
- ಪರಿಸರ ಸೂಕ್ಷ್ಮ ವಲಯ ಘೋಷಣೆ, ಕಸ್ತೂರಿ ರಂಗನ್ ವರದಿ ಯಥಾವತ್ ಜಾರಿ, ಹುಲಿ ಯೋಜನೆ ವಿಸ್ತರಣೆ ಪ್ರಸ್ತಾವ ಪರಿಶೀಲಿಸಿ ಕೈಬಿಡಬೇಕು
- ಸಾವಿರಾರು ರೈತರು ಸರ್ಕಾರಿ ಭೂಮಿಯಲ್ಲಿ ಸಾಗುವಳಿ ಮಾಡುತ್ತಿದ್ದು, ನಿರ್ಬಂಧ ಸಡಿಲಿಸಿ ಭೂ ಮಂಜೂರಾತಿಗೆ ಅವಕಾಶ ನೀಡಬೇಕು.
- ಏಪ್ರಿಲ್ 15ರಂದು ಮಲೆನಾಡು ದಿನವಾಗಿ ಆಚರಣೆ ಮಾಡಬೇಕು
- ಅಡಿಕೆ ಬೆಳೆಗಾರರ ಹಿತರಕ್ಷಣೆಗೆ ನೇಮಿಸಿದ್ದ 'ಗೋರಖ್ ಸಿಂಗ್ ವರದಿ' ಅನುಷ್ಠಾನಕ್ಕೆ ತರಬೇಕು
- ಕಾಡುಪ್ರಾಣಿಗಳಿಂದ ಬೆಳೆ ನಷ್ಟವಾಗುತ್ತಿದ್ದು, ಪರಿಹಾರ ಹೆಚ್ಚಿಸಬೇಕು.
- ಬೆಳೆ, ಜೀವನ ರಕ್ಷಣೆಗೆ ಬಂದೂಕು ಪರವಾನಗಿ ನಿಯಮಾವಳಿ ಸರಳೀಕರಣಗೊಳಿಸಬೇಕು.

'ಕವಿ ನೆನಪು' ಕೃತಿ ಬಿಡುಗಡೆ ಕಾರ್ಯಕ್ರಮ: ಶೂದ್ರ ಶ್ರೀನಿವಾಸ್ ಅಭಿಮತ

ನಗಿಸುತ್ತಲೇ ನೋವು ಹೊರಹಾಕುತ್ತಿದ್ದ ಸಿದ್ದಲಿಂಗಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಸ್ಯ ಪ್ರವೃತ್ತಿಯವರಾಗಿದ್ದ ಕವಿ ಸಿದ್ದಲಿಂಗಯ್ಯ, ಸಮಯ ಪ್ರಜ್ಞೆ ಹೊಂದಿದ್ದರು. ಇನ್ನೊಬ್ಬರಿಗೆ ನೋವಾಗದಂತೆ ನಗಿಸುತ್ತಲೇ ವ್ಯವಸ್ಥೆಯಲ್ಲಿನ ಲೋಪವನ್ನು ಹೊರಗೆಳೆಯುತ್ತಿದ್ದರು' ಎಂದು ಲೇಖಕ ಶೂದ್ರ ಶ್ರೀನಿವಾಸ್ ಅಭಿಪ್ರಾಯಪಟ್ಟರು.

ಸಾಧನಕೇರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಡಾ.ಸಿದ್ದಲಿಂಗಯ್ಯ ಅವರ ಸಂಸ್ಮರಣೆ ಕಾರ್ಯಕ್ರಮದಲ್ಲಿ ವತ್ಸಲಾ ಸುರೇಶ್ ಅವರು ಸಂಪಾದಿಸಿದ 'ಕವಿ ನೆನಪು' ಕೃತಿ ಬಿಡುಗಡೆ ಮಾಡಿ, ಮಾತನಾಡಿದರು.

'ಸಿದ್ದಲಿಂಗಯ್ಯ ಅವರು 'ಹೊಲೆಮಾದಿಗರ ಹಾಡು' ಕವನ ಸಂಕಲನವನ್ನು ಹೊರತಂದ ಬಳಿಕ ಕರ್ನಾಟಕದಾದ್ಯಂತ ಜನಮನ್ನಣೆ ಪಡೆದರು. ಅವರ ಕವಿತೆ ಪ್ರತಿ ಹಳ್ಳಿ ತಲುಪಿತು. ಅವರಿಗಿರುವ ಕ್ರಿಯಾಶೀಲತೆ, ಸಾಹಿತ್ಯ ಪ್ರೇಮ ಮತ್ತು ತುಂಟತನ ಎಲ್ಲರನ್ನೂ ಆಕರ್ಷಿಸುತ್ತಿತ್ತು. ಮಿತಿಗಳ ಚೌಕಟ್ಟಲ್ಲಿನಲ್ಲಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ಅಮೂಲ್ಯವಾದ ವಿಷಯಗಳನ್ನು ಬಿಟ್ಟು ಹೋಗಿದ್ದಾರೆ. ಹೀಗಾಗಿ, ಅವರನ್ನು ಅಧ್ಯಯನ ಮಾಡಬೇಕು' ಎಂದರು.

'ಯಾವುದೇ ಒಬ್ಬ ದೊಡ್ಡ ಲೇಖಕ ಒಂದು ಬಾರಿ ವ್ಯವಸ್ಥೆಯೊಂದಿಗೆ ಸೌಮ್ಯವಾಗಿ ವರ್ತಿಸಿದರೆ ಸಾಹಿತ್ಯದ ಆಕ್ರೋಶ, ಸಿಟ್ಟು ದುರ್ಬಲವಾಗುತ್ತದೆ. ಸಿದ್ದಲಿಂಗಯ್ಯ ಅವರು ತಮ್ಮನ್ನು ಆವರಿಸಿಕೊಂಡ ಸಂಕೋಲೆಗಳಿಂದ ಬಿಡುಗಡೆಯಾಗಲು ಪ್ರಯತ್ನಿಸುತ್ತಿದ್ದರು. ಆದರೆ, ಸಾಧ್ಯವಾಗುತ್ತಿರಲಿಲ್ಲ. ಕಡೆಯ ದಿನಗಳವರೆಗೂ ಬರೆಯಬೇಕಾದ ಕಾಳಜಿ, ಮನಸ್ಸು ಅವರಲ್ಲಿತ್ತು. ತಮ್ಮ ನೆನಪುಗಳನ್ನು ಅವರು ಬರೆದಿದ್ದರೆ ಕನ್ನಡ ಸಾಹಿತ್ಯಕ್ಕೆ ದೊಡ್ಡ ಕೊಡುಗೆಯಾಗುತ್ತಿತ್ತು' ಎಂದು ಹೇಳಿದರು.

ಕಾವ್ಯದ ಮೂಲಕ ಕಾಯಕಲ್ಪ: ಮಂಜುನಾಥ್ ಡಿ.ಎಸ್. ಅವರ 'ಕೊರಕಲಿನ ಜಾಡಿನಲ್ಲಿ' ಕೃತಿ ಬಿಡುಗಡೆ ಮಾಡಿದ ಕವಿ ದೊಡ್ಡರಂಗೇಗೌಡ, 'ಬೈಗುಳವನ್ನೇ ಕಾವ್ಯವಾಗಿ ಪರಿವರ್ತಿಸಿ, ಹೃದಯದೊಳಗಿನ ಅಸಮಾನತೆಯನ್ನು ತೀವ್ರವಾಗಿ ಬರೆದವರು ಸಿದ್ದಲಿಂಗಯ್ಯ. ವಾಮನ ಮೂರ್ತಿಯಂತಿದ್ದ ಅವರಲ್ಲಿ ಜ್ವಾಲಾಮುಖಿಯಿತ್ತು. ಅವರ ಕಾವ್ಯದಲ್ಲಿ ನಿರ್ಭಯತೆ, ವೈಚಾರಿಕತೆ ಕಾಣಬಹುದು. ರೋಗಗ್ರಸ್ಥ ಸಮಾಜಕ್ಕೆ ಕಾವ್ಯದ ಮೂಲಕ ಕಾಯಕಲ್ಪ ಒದಗಿಸಿದರು' ಎಂದು ಹೇಳಿದರು.

ಸಿದ್ದಲಿಂಗಯ್ಯನವರ ಪತ್ನಿ ರಮಾಕುಮಾರಿ, 'ಸಿದ್ದಲಿಂಗಯ್ಯ ಅವರ ಸಂಪರ್ಕಕ್ಕೆ ಬಂದವರಿಗೆ ಅವರನ್ನು ಮರೆಯಲು ಸಾಧ್ಯವಾಗುತ್ತಿರಲಿಲ್ಲ. ಶಿಷ್ಯರನ್ನು ಬೆಳೆಸುವ ಬಗೆ ಅವರಿಗೆ ತಿಳಿದಿತ್ತು. ಎಲ್ಲರ ಸ್ನೇಹಗಳಿಸಿದ್ದ ಅವರು, ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದರು' ಎಂದರು.

ಸಿದ್ದಲಿಂಗಯ್ಯ ಅವರ ಸಂಸ್ಮರಣೆ ಮತ್ತು ಕೃತಿ ಬಿಡುಗಡೆ ಸಮಾರಂಭದಲ್ಲಿ ವತ್ಸಲಾ ಸುರೇಶ್ ಅವರು ಸಂಪಾದಿಸಿದ 'ಕವಿ ನೆನಪು' ಪುಸ್ತಕವನ್ನು ದೊಡ್ಡರಂಗೇಗೌಡ (ಎಡದಿಂದ ನಾಲ್ಕನೆಯವರು) ಲೋಕಾರ್ಪಣೆ ಮಾಡಿದರು. (ಎಡದಿಂದ) ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಲೇಖಕ ಬೇಲೂರು ರಾಮಮೂರ್ತಿ, ಶೂದ್ರ ಶ್ರೀನಿವಾಸ ಮತ್ತು ರಮಾ ಸಿದ್ದಲಿಂಗಯ್ಯ ಇದ್ದಾರೆ

ಪುಸ್ತಕ ಪರಿಚಯ

- **ಪುಸ್ತಕ:** ಕವಿ ನೆನಪು
ಸಂಪಾದಕಿ: ವತ್ಸಲಾ ಸುರೇಶ್
ಪ್ರಕಾಶನ: ಸಾಧನಕೇರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ
ಬೆಲೆ: ₹250
ಪುಟಗಳು: 224
- **ಪುಸ್ತಕ:** 'ಕೊರಕಲಿನ ಜಾಡಿನಲ್ಲಿ'
ಲೇಖಕ: ಮಂಜುನಾಥ್ ಡಿ.ಎಸ್.
ಪ್ರಕಾಶನ: ಸಾಧನಕೇರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ
ಬೆಲೆ: ₹625
ಪುಟಗಳು: 224

ಚಿತ್ರಕಲಾ ಪರಿಷತ್ತು ಚುನಾವಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗೆ ಭಾನುವಾರ ಚುನಾವಣೆ ನಡೆಯಲಿದೆ. ಅಧ್ಯಕ್ಷ ಸ್ಥಾನಕ್ಕೆ ಇಬ್ಬರ ಮಧ್ಯೆ ನೇರ ಸ್ಪರ್ಧೆ ಏರ್ಪಟ್ಟಿದೆ.

208 ಮಂದಿ ಮತದಾನದ ಅರ್ಹತೆ ಹೊಂದಿದ್ದಾರೆ. ಪರಿಷತ್ತಿನ ಆವರಣದಲ್ಲಿ ಬೆಳಿಗ್ಗೆ 10 ಗಂಟೆಯಿಂದ 2 ಗಂಟೆಯವರೆಗೆ ಮತದಾನ ನಡೆಯಲಿದೆ. ಸಂಜೆ 4 ಗಂಟೆ ವೇಳೆಗೆ ಫಲಿತಾಂಶ ಘೋಷಣೆಯಾಗಲಿದೆ. ಹಾಲಿ ಅಧ್ಯಕ್ಷ ಬಿ.ಎಲ್. ಶಂಕರ್ ಹಾಗೂ ಶಿಕ್ಷಣ ತಜ್ಞ ಪ್ರೊ. ಕೆ.ಇ. ರಾಧಾಕೃಷ್ಣ ಅವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಪ್ರೊ.ಕೆ.ಎಸ್. ಅಪ್ಪಾಜಯ್ಯ, ಎಂ.ಎಸ್. ಉಮೇಶ್, ಟಿ. ಪ್ರಭಾಕರ್, ರಮಾಶರ್ಮ ಹಾಗೂ ಎ. ರಾಮಕೃಷ್ಣಪ್ಪ ಅವರು ಸ್ಪರ್ಧಿಸಿದ್ದಾರೆ. ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಡಾ.ಜಿ. ಲಕ್ಷ್ಮೀಪತಿ ಹಾಗೂ ಎಸ್.ಎನ್. ಶಶಿಧರ್ ಕಣದಲ್ಲಿದ್ದಾರೆ.

ಟಿ. ಚಂದ್ರಶೇಖರ್ ಮತ್ತು ಬಿ.ಎಲ್. ಶ್ರೀನಿವಾಸ ಅವರು ಸಹಾಯಕ ಕಾರ್ಯದರ್ಶಿ ಸ್ಥಾನಕ್ಕೆ, ಎಸ್. ರಾಮಸುಬ್ರಮಣಿಯನ್, ಎನ್. ಲಕ್ಷ್ಮೀಪತಿ ಬಾಬು ಅವರು ಖಜಾಂಚಿ ಸ್ಥಾನಕ್ಕೆ, ಅಮೃತ ವಿಮಲನಾಥನ್, ಸಿ.ಪಿ. ಉಷಾರಾಣಿ, ಟಿ.ವಿ. ತಾರಕೇಶ್ವರಿ, ಪಿ. ದಿನೇಶ್ ಮಗರ್, ಆರ್.ಜಿ. ಭಂಡಾರಿ, ಬಿ.ವೈ. ವಿನೋದಾ, ವೇಮಗಲ್ ಡಿ. ನಾರಾಯಣಸ್ವಾಮಿ, ಸುಬ್ರಮಣ್ಯ ಕುಕ್ಕೆ ಹಾಗೂ ಟಿ.ಡಿ. ಸುರೇಶ್ ಅವರು ಕಾರ್ಯಕಾರಿ ಸಮಿತಿ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.

'ಕೆಂಪೇಗೌಡರ ಜನ್ಮದಿನ ನಾಡಹಬ್ಬವಾಗಲಿ'

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಅವರ ಜನ್ಮದಿನವನ್ನು ನಾಡ ಹಬ್ಬವಾಗಿ ಸರ್ಕಾರ ಆಚರಿಸಬೇಕು ಎಂದು ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ಮರಿಮಲ್ಲಯ್ಯ ಒತ್ತಾಯಿಸಿದ್ದಾರೆ.

ಕೆಂಪೇಗೌಡರು ದೂರದೃಷ್ಟಿಯಿಂದ ನಗರವನ್ನು ಸಮುದ್ರಮಟ್ಟದಿಂದ ಸುಮಾರು 2 ಸಾವಿರ ಅಡಿಗಳಿಗಿಂತಲೂ ಎತ್ತರಮಟ್ಟದಲ್ಲಿ ಸ್ಥಾಪಿಸಿದ್ದಾರೆ. ಇಂದಿಗೂ ಇಲ್ಲಿನ ಪರಿಸರ ಸಮಶಿತೋಷ್ಣದಿಂದ ಕೂಡಿದೆ. ಸರ್ವಜನಾಂಗದ ಏಕತೆಗೆ ಒತ್ತು ನೀಡಿದ್ದಾರೆ. ಹಾಗಾಗಿ, ಎಲ್ಲರು ಕೆಂಪೇಗೌಡರ ಸ್ಮರಣೆ ಮಾಡುವುದು ಆದ್ಯ ಕರ್ತವ್ಯ' ಎಂದಿದ್ದಾರೆ.

ಒಕ್ಕಲಿಗರ ಸಂಘದಿಂದ ಕೆಂಪೇಗೌಡರ ಜಯಂತಿ ನಾಳೆ

ಬೆಂಗಳೂರು: ಇಲ್ಲಿನ ಕೆ.ಆರ್.ರಸ್ತೆಯ ಒಕ್ಕಲಿಗರ ಸಂಘ ಆವರಣದಲ್ಲಿ ಜೂನ್ 27ರಂದು ಕೆಂಪೇಗೌಡ ಜಯಂತಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ ತಿಳಿಸಿದರು.

ಅಂದು ಬೆಳಿಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಚಂದ್ರಶೇಖರನಾಥ ಸ್ವಾಮೀಜಿ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬೆಳಿಗ್ಗೆ 10ಕ್ಕೆ ಕೆಂಪೇಗೌಡ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. 10.30ಕ್ಕೆ ಕಲಾ ತಂಡಗಳ ಮೆರವಣಿಗೆ ಆರಂಭಗೊಳ್ಳಲಿದೆ ಎಂದರು.

ಕಿಮ್ಸ್ ಆಸ್ಪತ್ರೆಯಲ್ಲಿ ಸಂಘದ ಸದಸ್ಯರಿಗೆ ಶೇ 25ರಷ್ಟು ರಿಯಾಯಿತಿ ನೀಡಲಾಗುವುದು. ಈ ಹಿಂದೆ ಆಜೀವ ಸದಸ್ಯರಿಗೆ ಮಾತ್ರ ಈ ಸೌಲಭ್ಯವಿತ್ತು ಎಂದು ಹೇಳಿದರು.

ಸಂಘದಲ್ಲಿ ಕಾರ್ಯ ನಿರ್ವಹಿಸುತ್ತಿರುವ 1,363 ನೌಕರರಿಗೆ 6ನೇ ವೇತನ ಶ್ರೇಣಿ ಜಾರಿ ಮಾಡಲಾಗಿದೆ. 400ಕ್ಕೂ ಹೆಚ್ಚು ಸಿಬ್ಬಂದಿ ಕಾಯಂ ಮಾಡಲಾಗಿದೆ ಎಂದರು.

ಹಾಸನ, ಚಿಕ್ಕಬಳ್ಳಾಪುರ ಮತ್ತು ತುಮಕೂರಿನಲ್ಲಿ ಹೊಸದಾಗಿ ವಿದ್ಯಾರ್ಥಿನಿಲಯ ಸ್ಥಾಪಿಸಲಾಗಿದೆ ಎಂದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಕೋನಪ್ಪರೆಡ್ಡಿ ಮಾಹಿತಿ ನೀಡಿದರು.

ರಾಜ್ಯ ಒಕ್ಕಲಿಗರ ಸಂಘದ ಗೌರವ ಅಧ್ಯಕ್ಷ ಡಾ.ಟಿ.ಎಚ್.ಆಂಜಿನಪ್ಪ, ಲೋಕೇಶ್ ಹಾಜರಿದ್ದರು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಕೆ. ಗೋಪಾಲಯ್ಯ, ನಾರಾಯಣ ಗೌಡ, ಆಯೋಜನೆ: ರಾಷ್ಟ್ರೀಯ ಸೇವಾ ಯೋಜನೆ ಮತ್ತು ಅಬಕಾರಿ ಇಲಾಖೆ, ಸ್ಥಳ: ಕಂಠೀರವ ಕ್ರೀಡಾಂಗಣ, ಸಂಪಂಗಿರಾಮನಗರ, ಬೆಳಿಗ್ಗೆ 6.30

ಸದ್ಯೋಜಾತ ಅವರ 'ಮಾಗಧೇಯ' ಕೃತಿ ಲೋಕಾರ್ಪಣೆ: ಆಯೋಜನೆ: ಸಮನ್ವಿತ, ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಕೆಂಗುಂಟೆ ವೃತ್ತ, ಹೊರವರ್ತುಲ ರಸ್ತೆ, ಬೆಳಿಗ್ಗೆ 10

ಕೃಷ್ಣಕವಿ ಅವರ 'ಸ್ವಾತಿ ಮುತ್ತುಗಳು' ಮುಕ್ತಕ ಸಂಕಲನ ಲೋಕಾರ್ಪಣೆ ಮತ್ತು 'ಅಕ್ಷರ ಮಿಲನ' ಕಾರ್ಯಕ್ರಮ: ಉದ್ಘಾಟನೆ: ರಾಜಾ ಶೈಲೇಶಚಂದ್ರ ಗುಪ್ತ, ಉಪಸ್ಥಿತಿ: ಎಸ್.ಜಿ. ಸಿದ್ಧರಾಮಯ್ಯ, ಟಿ.ಶ್ರೀನಿವಾಸ್, ಟಿ.ಎ.ಪಿ. ನಾಗರಾಜ್, ಅಧ್ಯಕ್ಷತೆ: ಕೆ.ಎಲ್. ನಟರಾಜ್, ಆಯೋಜನೆ: ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು, ಸ್ಥಳ: ಶೇಷಾದ್ರಿಪುರ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ ಕಾರ್ಯಕ್ರಮ: ಅಧ್ಯಕ್ಷತೆ: ಸದಾನಂದ, ಅತಿಥಿಗಳು: ಬಿ.ಎಲ್. ಶ್ರೀನಿವಾಸ್, ಎಸ್. ಆರ್. ವೇಣುಗೋಪಾಲ್, ಆಯೋಜನೆ: ಸಹಮತ (ಸಾಹಿತ್ಯ ಸಾಂಸ್ಕೃತಿ ಕಲಾ ವೇದಿಕೆ), ಸ್ಥಳ: ನಂ.323, ಹೇಮ ಸದನ, 7ನೇ ಮುಖ್ಯ ರಸ್ತೆ, ಸಿಕ್ಯುಎಎಲ್ ಬಡಾವಣೆ, ಸಹಕಾರ ನಗರ, ಬೆಳಿಗ್ಗೆ 10

'ನೇತಾಜಿ ಸುಭಾಷ್ ಚಂದ್ರ ಬೋಸ್- ಹೊಸ ಶೋಧದ ಅಂಶಗಳು' ವಿಚಾರ ಸಂಕಿರಣ: ಉಪಸ್ಥಿತಿ: ಅನುಜ್‌ಧರ್, ಚಂದ್ರಚೂಡ್ ಘೋಷ್, ಅಧ್ಯಕ್ಷತೆ: ಜಿ.ಬಿ. ಹರೀಶ್, ಕೆ.ನರಹರಿ, ವಿ.ನಾಗರಾಜ್, ಆಯೋಜನೆ: ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, 2ನೇ ಮಹಡಿ, ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ಎಂ.ಸಿ. ನರಸಿಂಹನ್ ಮತ್ತು ಕೋ.ಚೆನ್ನಬಸಪ್ಪ ಅವರ ಸ್ಮರಣಾರ್ಥ ಜನ್ಮ ಶತಮಾನೋತ್ಸವ ಸಮಾರಂಭ ಮತ್ತು ಉಪನ್ಯಾಸ: ಅತಿಥಿಗಳು: ವಿ. ಗೋಪಾಲ ಗೌಡ, ಬದರಿನಾಥ್ ರಾವ್, ಕೆ. ಸುಬ್ಬ ರಾವ್, ಸಿ. ಚೆನ್ನಬಸಣ್ಣ, ಅಧ್ಯಕ್ಷತೆ: ಡಾ. ವಸುಂಧರಾ ಭೂಪತಿ, ಆಯೋಜನೆ: ಎಂ.ಎಸ್. ಕೃಷ್ಣನ್ ಸ್ಮರಣ ಸಂಸ್ಥೆ, ಇಂಡಿಯನ್ ಅಸೋಸಿಯೇಷನ್ ಆಫ್ ಲಾಯರ್ಸ್, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ಸ್ಥಳ: ತೆಲುಗು ವಿಜ್ಞಾನ ಸಮಿತಿ, ಗಾಯತ್ರಿ ದೇವಿ ಪಾರ್ಕ್ ಎಕ್ಸ್‌ಟೆನ್ಶನ್, ಚೌಡಯ್ಯ ಮೆಮೋರಿಯಲ್ ಹಾಲ್ ಹಿಂಭಾಗ, ವೈಯಾಲಿಕಾವಲ್, ಬೆಳಿಗ್ಗೆ 10.30

ಲಕ್ಷ್ಮಿ ರಂಗನಾಥ್ ಶಿಷ್ಯರಿಂದ ಭರತನಾಟ್ಯ ರಂಗ ಪ್ರವೇಶ: ಗಾಯನ: ಬಾಲ ಸುಬ್ರಹ್ಮಣ್ಯ ಶರ್ಮಾ, ಪ್ರಸ್ತುತಿ: ನಾಟ್ಯ ಮಯೂರಿ, ಮೃದಂಗ: ಶ್ರೀಹರಿ ರಂಗಸ್ವಾಮಿ, ಪಿಟೀಲು: ಹೇಮಂತ್ ಕುಮಾರ್, ಕೊಳಲು: ನರಸಿಂಹಮೂರ್ತಿ, ಆಯೋಜನೆ: ನಾಟ್ಯ ಮಯೂರಿ ಕ್ಲಾಸಿಕಲ್ ಡ್ಯಾನ್ಸ್ ಇನ್‌ಸ್ಟಿಟ್ಯೂಟ್, ಸ್ಥಳ: ಇಂದಿರಾನಗರ ಸಂಗೀತ ಸಭಾ, ಇಂದಿರಾ ನಗರ, ಬೆಳಿಗ್ಗೆ 10.30

'ಮಾಧ್ಯಮ ಪ್ರಶಸ್ತಿ' ಪ್ರದಾನ ಸಮಾರಂಭ: ವಿ.ನಾಗರಾಜ್, ರಘುನಂದನ್, ಪ್ರಶಸ್ತಿ ಪುರಸ್ಕೃತರು: ಚಿ.ಜ. ರಾಜೀವ, ಗುರುವಪ್ಪ.ಎನ್.ಟಿ. ಬಾಳೆಪುಣಿ, ದು.ಗು. ಲಕ್ಷ್ಮಣ್, ಎಚ್.ಎಸ್. ಪ್ರೇಮಾ, ಆಯೋಜನೆ: ವಿಶ್ವ ಸಂವಾದ ಕೇಂದ್ರ ಕರ್ನಾಟಕ, ಸ್ಥಳ: ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಅವರ 'ಮೀಸಲಾತಿ ಭ್ರಮೆ ಮತ್ತು ವಾಸ್ತವ' ಕೃತಿ ಬಿಡುಗಡೆ: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಉಪಸ್ಥಿತಿ: ದೇವನೂರ ಮಹಾದೇವ, ಹಂಸಲೇಖ, ಬಂಜಗೆರೆ ಜಯಪ್ರಕಾಶ್, ಮೀನಾಕ್ಷಿ ಬಾಳಿ, ಬಿ.ಎಂ. ಹನೀಫ್, ಟಿ.ಆರ್. ಚಂದ್ರಶೇಖರ್, ಬಿ.ರಾಜಶೇಖರಮೂರ್ತಿ, ಕಿಗ್ಗ ರಾಜಶೇಖರ್, ಆಯೋಜನೆ: ಜನ ಪ್ರಕಾಶನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ: 10.30

ನಾಗಮೋಹನ ದಾಸ್

ಎಸ್.ಪಿ. ಬಾಲಸುಬ್ರಹ್ಮಣ್ಯ ಅವರ ಜನ್ಮದಿನದ ಪ್ರಯುಕ್ತ ಕವಿಗೋಷ್ಠಿ, ಗೀತಗಾಯನ ಹಾಗೂ ರಸಪ್ರಶ್ನೆ ಕಾರ್ಯಕ್ರಮ: ಅಧ್ಯಕ್ಷತೆ: ಟಿ.ಎ. ನೀಲಕಂಠ ಅಡಿಗ, ಅತಿಥಿಗಳು: ಎಸ್. ಗುಣಸಾಗರಿ ನಾಗರಾಜ್, ಶಿವಕುಮಾರ ಆರಾಧ್ಯ, ಸುಂದರ ಪ್ರಕಾಶ್, ಬಿ.ನಾಗೇಶ್, ಸುಶಾಂತ್, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಎಸ್‌ಪಿಬಿ

ಡಾ.ಗೋವಿಂದ ಜಾಲಿಹಾಳ ದತ್ತಿ ಕಾರ್ಯಕ್ರಮ, ಭಕ್ತಿಗೀತೆ ಗಾಯನ ಸ್ಪರ್ಧೆ, ಬಹುಮಾನ ವಿತರಣೆ ಹಾಗೂ 2021-22ನೇ ಸಾಲಿನ ಹಳಗನ್ನಡ ಕಲಿಕಾರ್ಥಿಗಳಿಗೆ ಪ್ರಮಾಣಪತ್ರ ಪ್ರದಾನ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಪ್ರೊ.ಎಂ.ಎಚ್. ಕೃಷ್ಣಯ್ಯ, ಶಾಂತಾರಾಜು, ಎಸ್.ಅನಿಲ್‌ಕುಮಾರ್, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಬೆಳಿಗ್ಗೆ 10.30

'ವೀರವೈಷ್ಣವ' ಯಕ್ಷಗಾನ ತಾಳ ಮದ್ದಳೆ ಪರ್ವ: ಹಿಮ್ಮೇಳ: ಸುಬ್ರಹ್ಮಣ್ಯ ಧಾರೇಶ್ವರ, ಎ.ಪಿ. ಪಾಠಕ್, ಕಾರ್ತಿಕ ಧಾರೇಶ್ವರ, ಮುಮ್ಮೇಳ: ವಿ.ಉಮಾಕಾಂತ್ ಭಟ್ ಕೆರೇಕೈ, ಉಜಿರೆ ಅಶೋಕ ಭಟ್, ಬೇಗಾರು ಶಿವಕುಮಾರ, ಆರತಿ ಪಟ್ರಮೆ, ಆಯೋಜನೆ: ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಗಾನ ಸೌರಭ ಕಲಾಶಾಲೆ, ವಿಜಯನಗರ, ಮಧ್ಯಾಹ್ನ 2.30

ವಿಶ್ವಚೇತನ ಸಾಂಸ್ಕೃತಿಕ ಸಮಾವೇಶ: ಉದ್ಘಾಟನೆ: ಸತೀಶಕುಮಾರ ಎಸ್. ಹೊಸಮನಿ, ಅಧ್ಯಕ್ಷತೆ: ಎಂ.ಪ್ರಕಾಶ ಮೂರ್ತಿ, ಉಪಸ್ಥಿತಿ: ಕೆ. ರಮಾನಂದ, ಎಂ. ಶಿವಸ್ವಾಮಿ, ಸಾಂಸ್ಕೃತಿಕ ಸಮಾವೇಶದ ಅಧ್ಯಕ್ಷತೆ: ಕುವರ ಯಲ್ಲಪ್ಪ, ಆಯೋಜನೆ: ವಿಶ್ವಚೇತನ ಬಳಗ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಮಧ್ಯಾಹ್ನ 2.45

ಡಾ.ಎಚ್. ಲಕ್ಷ್ಮೀನಾರಾಯಣಸ್ವಾಮಿ ಅವರ 'ನೂಲ ಏಣಿಯ ನಡಿಗೆ' ಕೃತಿ ಲೋಕಾರ್ಪಣೆ: ಎಂ. ವೀರಪ್ಪ ಮೊಯಿಲಿ, ಅಧ್ಯಕ್ಷತೆ: ಎಚ್.ಎಸ್. ರಾಘವೇಂದ್ರರಾವ್, ಉಪಸ್ಥಿತಿ: ಎಂ.ಎಸ್. ಆಶಾದೇವಿ, ಎಲ್. ಹನುಮಂತಯ್ಯ, ಪ್ರೊ.ಬಿ. ಗಂಗಾಧರ, ಬಿ.ಕೆ. ಸುರೇಶ್, ಆಯೋಜನೆ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ ಆವರಣ, ಸಂಜೆ 4.30

'ಹಸನ್ಮುಖಿ-60' ಆರ್. ನರೇಂದ್ರಬಾಬು ಅವರಿಗೆ ಅಭಿನಂದನಾ ಸಮಾರಂಭ: ಅಧ್ಯಕ್ಷತೆ: ಜಿ.ಟಿ. ದೇವೇಗೌಡ, ಉದ್ಘಾಟನೆ: ಎಸ್.ಜಿ. ಸಿದ್ದರಾಮಯ್ಯ, ಸಾಕ್ಷ್ಯಚಿತ್ರ ಬಿಡುಗಡೆ: ಸಿ.ಮೃತ್ಯುಂಜಯ ಸ್ವಾಮಿ, ಆಯೋಜನೆ: ಆರ್. ನರೇಂದ್ರಬಾಬು ಒಡನಾಡಿಗಳ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

'ಅಭಿವ್ಯಕ್ತಿ ಹಿಂದೂಸ್ಥಾನಿ ಸಂಗೀತ ಮತ್ತು ನಾಟ್ಯ' ಕಾರ್ಯಕ್ರಮ: ಅತಿಥಿಗಳು: ಕೆ. ಕುಮಾರ, ನಂದಿನಿ ಕೆ. ಮೆಹ್ತಾ, ನಿತಿ ಮಹೇಂದ್ರಾ, ಸುಶ್ಮಾ ಎಸ್.ವಿ., ವಿದ್ಯಾ ಶಿಮ್ಲಡ್ಕ, ಸುಮನಾ ರಂಜಲಕರ್, ಸಂತೋಷ್ ಹೆಗ್ಡೆ, ಆಯೋಜನೆ: ನೃತ್ಯ ನಿಕುಂಜ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

ಕರ್ನಾಟಕ ಸಂಗೀತ ಕಾರ್ಯಕ್ರಮ: ಗಾಯನ: ಸಂಪಗೋಡು ಎಸ್. ವಿಘ್ನರಾಜ, ಪಿಟೀಲು: ಹೊಸಳ್ಳಿ ರಘುರಾಮ್, ಮೃದಂಗ: ಚೆಲುವರಾಜ್, ಘಟಂ: ಎಸ್.ಎನ್. ನಾರಾಯಣಮೂರ್ತಿ, ಆಯೋಜನೆ: ವಿಜಯನಗರ ಸಂಗೀತ ಸಭಾ ಟ್ರಸ್ಟ್, ಸ್ಥಳ: ವಿಜಯನಗರ ಮಾರುತಿ ಮಂದಿರ ಸಭಾಂಗಣ, ಸಂಜೆ 5.45

'ಆತಂಕದಲ್ಲಿ ಅಂತರ್ಜಲ' ಆನ್‌ಲೈನ್ ಉಪನ್ಯಾಸ ಮಾಲಿಕೆ: ಮುಖ್ಯ ಅತಿಥಿ: ಟಿ.ಎಂ. ಶಿವಶಂಕರ್, ಉಪಸ್ಥಿತಿ: ಕುಂಟೆಪ್ಪ ಗೌರೀಪುರ, ಆಯೋಜನೆ: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಸಂಜೆ 6

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ಎಸ್.ಎಸ್.ಘಾಟಿ ದೊಡ್ಡಬಳ್ಳಾಪುರ ತಾಲ್ಲೂಕು,ಬೆಂಗಳೂರು ಗ್ರಾಮಾಂತರ ಜಿಲ್ಲೆ
ಫೋನ್:08029550091,08029500191
ಇ-ಮೇಲ್: shrighatisubrahmanyatempleeo@gmail.com
ಸಂಖ್ಯೆ:ಎಸ್‌ಜಿಎಸ್/ಡಿವಿಎಸ್/ಸಿಆರ್/16/2022-23 ದಿನಾಂಕ: 25-06-2022
ಸಂಖ್ಯೆ: ಎಸ್‌ಜಿಎಸ್/ಡಿವಿಎಸ್/ಸಿಆರ್/17/2022-23
ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಮುಂದೂಡುವ ಪ್ರಕಟಣೆ
ದಿನಾಂಕ: 10-06-2022 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಅವಶ್ಯಕವಾಗಿರುವ ಮಾನವ ಸಂಪನ್ಮೂಲ ಸೇವೆಗಳಾದ ಭದ್ರತಾ ಸಿಬ್ಬಂದಿ, ಶುಚಿಗಾರರು, ಅಡುಗೆ ಸಹಾಯಕರು ಮತ್ತು ಡೇಟಾ ಎಂಟ್ರಿ ಆಪರೇಟರ್‌ಗಳ ಸೇವೆಗಳನ್ನು ಒದಗಿಸಲು ಆಸಕ್ತಿಯುಳ್ಳ ಸಂಸ್ಥೆಗಳಿಂದ ಟೆಂಡರ‍್ಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಆಹ್ವಾನಿಸಲಾಗಿದ್ದು, ಇ-ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕವನ್ನು 27-06-2022 ರಿಂದ ದಿನಾಂಕ:05-07-2022 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ ರವರ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/- ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಎಸ್.ಎಸ್.ಘಾಟಿ

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123. ಇ-ಮೇಲ್: nelamangala.pa@gmail.com
ಸಂಖ್ಯೆ: ನೆಯೋಪ್ರಾ/CLU/16/2022-23 ದಿನಾಂಕ: 23-06-2022
ಸಾರ್ವಜನಿಕ ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮಾನ್ಯ ಅಧ್ಯಕ್ಷರು, ಶ್ರೀ ಸಿದ್ದಗಂಗಾ ಮಠ, ತುಮಕೂರು	ನೆಲಮಂಗಲ	ಕಸಬಾ	ಯಲಚಗೆರೆ	190	08-05	ವ್ಯವಸಾಯ	ಕೈಗಾರಿಕೆ
2					191	01-02		
					ಒಟ್ಟು	09-07		

ಷರಾ:- ಸದರಿ ಪ್ರಸ್ತಾವನೆಯಲ್ಲಿ ಅರ್ಜಿದಾರರು, ಪ್ರಶ್ನಿತ ಜಮೀನಿನ ಪರಿಸರದಲ್ಲಿ ಕೈಗಾರಿಕೆ ಇಲ್ಲದೇ ಇರುವುದರಿಂದ ಪ್ರಶ್ನಿತ ಜಮೀನುಗಳಲ್ಲಿ ಉತ್ತಮ ಸೌಲಭ್ಯಗಳನ್ನೊಳಗೊಂಡ ಕೈಗಾರಿಕೆ ಸ್ಥಾಪಿಸಿದಲ್ಲಿ ಸ್ಥಳೀಯ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸುಮಾರು 100 ಜನ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುವುದು ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/1069/ಅಡ್ವರ್ಟೋರ್/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಾರ್ಡ್ ಮರು ವಿಂಗಡಣೆ ಗೊಂದಲ • ಸಂಸದ ತೇಜಸ್ವಿ ಸೂರ್ಯ ಕಚೇರಿಯಲ್ಲಿ ವರದಿ ಸಿದ್ಧ: ಆರೋಪ

ಬೈರಸಂದ್ರ–ತಿಲಕನಗರ ವಿಂಗಡಣೆ ಚಿತ್ರ–ವಿಚಿತ್ರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಾರ್ಡ್ ಮರು ವಿಂಗಡಣೆ ಬಳಿಕ ಹಲವು ವಾರ್ಡ್‌ಗಳು ಕಲಸು ಮೇಲೋಗರವಾಗಿದ್ದು, ಬೈರಸಂದ್ರ, ತಿಲಕನಗರ ವಾರ್ಡ್‌ಗಳನ್ನು ಚಿತ್ರ- ವಿಚಿತ್ರವಾಗಿ ವಿಭಾಗಿಸಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

ಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಈ ವಾರ್ಡ್‌ನಲ್ಲಿ ನಿರ್ದಿಷ್ಟ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಬಡಾವಣೆಯನ್ನು ಉದ್ದೇಶಪೂರ್ವಕವಾಗಿಯೇ ಪಕ್ಕದ ತಿಲಕನಗರಕ್ಕೆ ಸೇರಿಸಲಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಬೈರಸಂದ್ರ ಮತ್ತು ತಿಲಕನಗರ ವಾರ್ಡ್‌ಗಳ ಈ ಹಿಂದಿನ ಮತ್ತು ಮರು ವಿಂಗಡಣೆ ಬಳಿಕದ ನಕ್ಷೆಯನ್ನು ಗಮನಿಸಿದರೆ ಎಷ್ಟು ಅವೈಜ್ಞಾನಿಕವಾಗಿ ವಿಂಗಡಿಸಲಾಗಿದೆ ಎಂಬುದು ಅರ್ಥವಾಗುತ್ತದೆ ಎಂದು ಅವರು ಹೇಳುತ್ತಾರೆ.

‘ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲಲು ಅಡ್ಡಿಯಾಗಬಹುದು ಎಂಬ ಕಾರಣಕ್ಕೆ ಬೈರಸಂದ್ರ ಗ್ರಾಮವನ್ನೇ ವಿಭಾಗ ಮಾಡಲಾಗಿದೆ. ಎಲ್‌ಐಸಿ ಕಾಲೊನಿ, ಬಿಸಿಸಿ ಲೇಔಟ್ ಅನ್ನೂ ವಿಭಾಗಿಸಲಾಗಿದೆ. ನಿರ್ದಿಷ್ಟ ಸಮುದಾಯ ವಾಸ ಮಾಡುವ ಮನೆಗಳನ್ನು ಬೈರಸಂದ್ರ ವಾರ್ಡ್‌ನಿಂದ ಹೊರಗಿಡಲು ಹಲವು ರೀತಿಯ ಸರ್ಕಸ್‌ಗಳನ್ನು ಮಾಡಿದ್ದಾರೆ’ ಎಂದು ಕಾಂಗ್ರೆಸ್ ಮುಖಂಡ ಬಾಂಧವ ನಾಗರಾಜ್ ಹೇಳಿದರು.

‘ನಮ್ಮ ವಾರ್ಡ್‌ನಲ್ಲಿ ಸುಸ್ಥಿತಿಯಲ್ಲಿದ್ದ ಪಾರ್ಕ್‌ಗಳು, ಕಿತ್ತೂರುರಾಣಿ ಚೆನ್ನಮ್ಮ ಕ್ರೀಡಾಂಗಣಗಳನ್ನು ಕಸಿದುಕೊಳ್ಳಲಾಗಿದೆ. ಅಧಿಕಾರ ಇದೆ ಎಂಬ ಕಾರಣಕ್ಕೆ ಈ ರೀತಿ ಅನ್ಯಾಯ ಮಾಡಬಾರದು. ಸಾಮಾನ್ಯ ಜನ ಇದರಿಂದ ಸಮಸ್ಯೆ ಅನುಭವಿಸಬೇಕಾಗುತ್ತದೆ’ ಎಂದು ಅವರು ಕಣ್ಣೀರು ಹಾಕಿದರು.

‘ಮರು ವಿಂಗಡಣೆ ವರದಿ ಸಂಸದ ತೇಜಸ್ವಿಸೂರ್ಯ ಅವರ ಕಚೇರಿಯಲ್ಲಿ ಸಿದ್ಧವಾಗಿದೆ. ಇದರ ವಿರುದ್ಧ ದೊಡ್ಡ ಮಟ್ಟದ ಹೋರಾಟಕ್ಕೆ ನಿವಾಸಿಗಳು ಸಜ್ಜಾಗಿದ್ದಾರೆ’ ಎಂದು ಹೇಳಿದರು.

‘ಎಚ್‌ಸಿಎಲ್ ಅಸೋಸಿಯೇಷನ್‌ನ 600 ಮನೆಗಳಿದ್ದು, ಅವುಗಳಲ್ಲಿ 100 ಮನೆಗಳನ್ನು ತಿಲಕನಗರ ವಾರ್ಡ್‌ಗೆ ಸೇರಿಸಲಾಗಿದೆ. ನಾವು ನಾಗರಿಕ ಸೇವೆ ಪಡೆಯಬೇಕೆಂದರೆ ಎರಡು ಕಿಲೋ ಮೀಟರ್ ದೂರಕ್ಕೆ ಹೋಗಬೇಕಾದ ಅನಿವಾರ್ಯತೆ ಇದೆ. ಈ ರೀತಿಯ ಮೋಸದ ಕೆಲಸವನ್ನು ಯಾರೂ ಮಾಡಬಾರದು’ ಎಂದು ಅಸೋಸಿಯೇಷನ್ ಅಧ್ಯಕ್ಷ ಬಾಬುರಾವ್ ಬೇಸರ ವ್ಯಕ್ತಪಡಿಸಿದರು.

ಹೊಸ ನಾಲ್ಕು ಗ್ರಾಮಗಳು ಸೇರ್ಪಡೆ

ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ನಾಲ್ಕು ಗ್ರಾಮಗಳು ಸೇರ್ಪಡೆಯಾಗಿವೆ. ವಾರ್ಡ್‌ಗಳ ಮರುವಿಂಗಡಣೆಯಿಂದ ಈ ಬದಲಾವಣೆಯಾಗಿದ್ದು, ಸುಮಾರು ಒಂಬತ್ತು ಸಾವಿರ ಆಸ್ತಿಗಳು ಪಾಲಿಕೆಯ ತೆರಿಗೆ ವ್ಯಾಪ್ತಿಗೆ ಬರಲಿವೆ.

ಈ ಗ್ರಾಮಗಳ ಸೇರ್ಪಡೆ ಬಗ್ಗೆ ಅಧಿಸೂಚನೆಯನ್ನು ಕಳೆದ ವರ್ಷವೇ ಹೊರಡಿಸಲಾಗಿತ್ತು. ಆದರೆ, ಮೂಲ-ಸೌಕರ್ಯಗಳ ಲಭ್ಯತೆಯ ಬಗ್ಗೆ ಬಿಬಿಎಂಪಿ ಈ ಪ್ರದೇಶಗಳ ಸಮೀಕ್ಷೆಯನ್ನು ಇನ್ನೂ ಕೈಗೊಳ್ಳಬೇಕಾಗಿದೆ.

‘ಕಮ್ಮಗೊಂಡನಹಳ್ಳಿ ವಾರ್ಡ್‌ಗೆ ಸೇರ್ಪಡೆಯಾಗಿರುವ ಲಕ್ಷ್ಮೀಪುರ ಗ್ರಾಮದ ಕಾನ್ಶಿರಾಮ್ ನಗರದಲ್ಲಿನ ಆಸ್ತಿಗಳ ಸಮೀಕ್ಷಾ ಕಾರ್ಯ ಪ್ರಗತಿಯಲ್ಲಿದೆ. ಇದುವರೆಗೆ ಈ ಗ್ರಾಮದಲ್ಲಿನ 4,421 ಆಸ್ತಿಗಳನ್ನು ಗುರುತಿಸಲಾಗಿದೆ’ ಎಂದು ದಾಸರಹಳ್ಳಿ ವಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಕಗ್ಗಲಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಮಲ್ಲಸಂದ್ರ, ಉತ್ತರಹಳ್ಳಿ ಮನವರ್ತೆ ಕಾವಲು ಪ್ರದೇಶಗಳ ಸಮೀಕ್ಷೆ ಕಾರ್ಯ ಹೆಚ್ಚಿನ ಪ್ರಗತಿಯಾಗಿಲ್ಲ. ಈ ಪ್ರದೇಶಗಳನ್ನು ತಲಘಟ್ಟಪುರ ವಾರ್ಡ್‌ಗೆ ಸೇರಿಸಲಾಗಿದೆ ಎಂದರು.

‘ಎಲ್ಲಾ ಅನುಮಾನಗಳಿಗೆ ಉತ್ತರ ಇಲ್ಲ’

‘ಮರು ವಿಂಗಡಣೆ ಕುರಿತ ಎಲ್ಲಾ ಅನುಮಾನಗಳಿಗೆ ಉತ್ತರ ಇಲ್ಲ, ಆಕ್ಷೇಪಣೆ ಸಲ್ಲಿಸಲು ಎಲ್ಲರಿಗೂ ಅವಕಾಶ ಇದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸುಪ್ರೀಂ ಕೋರ್ಟ್ ಆದೇಶದಂತೆ 8 ವಾರಗಳಲ್ಲಿ ಚುನಾವಣೆ ಪ್ರಕ್ರಿಯೆ ನಡೆಸಬೇಕಿದೆ. ಕೆಲವು ವಾರ್ಡ್‌ಗಳಿಗೆ ಇತಿಹಾಸ ಪುರುಷರ ಹೆಸರುಗಳನ್ನು ಇಡಲಾಗಿದೆ. ಸ್ಥಳೀಯರ ಭಾವನೆಗಳನ್ನು ಆಧರಿಸಿ ಈ ಹೆಸರುಗಳನ್ನು ಇಡಲು ಉದ್ದೇಶಿಸಲಾಗಿದೆ. ಎಲ್ಲಾ ವಾರ್ಡ್‌ಗಳಲ್ಲೂ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸುವುದು ಅಸಾಧ್ಯ. ಹೆಸರುಗಳು ಬೇಡ ಎಂದರೂ ಆಕ್ಷೇಪಣೆ ಸಲ್ಲಿಸಬಹುದು’ ಎಂದು ಹೇಳಿದರು.

‘ಆಕ್ಷೇಪಣೆಗಳನ್ನು ನಗರಾಭಿವೃದ್ಧಿ ಇಲಾಖೆಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದಾಗಿದೆ. ಸರ್ಕಾರ ಹೊರಡಿಸಿರುವ ಅಧಿಸೂಚನೆ ಆಗಿರುವುದರಿಂದ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಆಕ್ಷೇಪಣೆ ಸಲ್ಲಿಸಲು ಅವಕಾಶ ಇಲ್ಲ’ ಎಂದರು.

ಈ ಹಿಂದೆ ಇದ್ದ ವಾರ್ಡ್‌ನ ನಕ್ಷೆ, ಮರು ವಿಂಗಡಣೆಯಾದ ಬಳಿಕದ ನಕ್ಷೆ, ಜನಸಂಖ್ಯೆ, ವಾರ್ಡ್‌ನ ವಿಸ್ತೀರ್ಣ, ವಿಧಾನಸಭಾ ಕ್ಷೇತ್ರ, ಲೋಕಸಭಾ ಕ್ಷೇತ್ರ ಸೇರಿ ಎಲ್ಲಾ ವಿವರಗಳನ್ನೂ ವೆಬ್‌ಸೈಟ್(http://bbmpdelimitation2022.com) ನೀಡಲಾಗಿದೆ. ಕ್ಷೇತ್ರವಾರು, ವಾರ್ಡ್‌ವಾರು, ಪ್ರದೇಶವಾರು ಮಾಹಿತಿಗಳನ್ನು ಪಡೆದುಕೊಳ್ಳಲು ಅವಕಾಶ ಇದೆ. ವಿವರಗಳು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಒದಗಿಸಲಾಗಿದೆ ಎಂದು ಹೇಳಿದರು.

ಐತಿಹಾಸಿಕ ವಾರ್ಡ್‌ಗಳೇ ಇಲ್ಲ

ಕೆ.ಆರ್.ಮಾರುಕಟ್ಟೆ, ಜಯನಗರ ಸೇರಿ ಹಲವು ಐತಿಹಾಸಿಕ ವಾರ್ಡ್‌ಗಳ ಹೆಸರೇ ಮಾಯವಾಗಿವೆ.

ಬೆಂಗಳೂರಿನ ಮೊದಲ ಯೋಜನಾಬದ್ಧ ಬಡಾವಣೆ ಎಂಬ ಹೆಗ್ಗಳಿಕೆ ಜಯನಗರಕ್ಕೆ ಇದೆ. ಇದಕ್ಕೆ ಅಶೋಕ ಸ್ತಂಭ ಎಂದು ಹೆಸರಿಡಲಾಗಿದೆ. ಯಶವಂತಪುರ ವಾರ್ಡ್, ರಾಗಿಗುಡ್ಡ ವಾರ್ಡ್, ಕೆ.ಆರ್. ಮಾರುಕಟ್ಟೆ, ಶೇಷಾದ್ರಿಪುರ, ಹಗದೂರು, ಸಿದ್ದಾಪುರ, ದೀಪಾಂಜಲಿ ನಗರ, ಗುಂಡಾಂಜನೇಯ ವಾರ್ಡ್, ಚಿಕ್ಕಸಂದ್ರ, ಜಾಲಹಳ್ಳಿ, ಬೃಂದಾವನ ನಗರ, ದೊಡ್ಡ ಬಿದರಕಲ್ಲು, ಬಿನ್ನಿಗನಹಳ್ಳಿ, ರಾಮಮೂರ್ತಿನಗರ, ಸರ್ವಜ್ಞನಗರ, ಲಗ್ಗೆರೆ, ಕೊಟ್ಟಿಗೆಪಾಳ್ಯ, ಇಟ್ಟಮಡು, ಪುಟ್ಟೇನಹಳ್ಳಿ, ಹೆಮ್ಮಿಗೆಪುರ ವಾರ್ಡ್‌ಗಳ ಹೆಸರೂ ಇಲ್ಲವಾಗಿವೆ.

ಕೆಂಗೇರಿ ವಾರ್ಡ್ ಹೆಸರನ್ನು ಮರು ಸೇರ್ಪಡೆ ಮಾಡಬೇಕೆಂದು ಒತ್ತಾಯಿಸಿ ಕೆಂಗೇರಿ ಹಿತರಕ್ಷಣಾ ಸಮಿತಿಯು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಮನವಿ ಸಲ್ಲಿಸಿತು. ಸಂಚಾಲಕ ಜೆ.ರಮೇಶ್, ಬಿಜೆಪಿ ಮುಖಂಡರಾದ ಅನಿಲ್ ಚಳಗೇರಿ, ರ.ಆಂಜನಪ್ಪ, ರಂಗರಾಜು ಮತ್ತಿತರರು ಇದ್ದಾರೆ

ಕೆಂಗೇರಿ ವಾರ್ಡ್: ಮರು ಸೇರ್ಪಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಬಿಬಿಎಂಪಿ ವಾರ್ಡ್ ಮರು ವಿಂಗಡಣೆಯಲ್ಲಿ ಕೈಬಿಟ್ಟಿರುವ ಕೆಂಗೇರಿ ವಾರ್ಡ್ ಹೆಸರನ್ನು ಮರು ಸೇರ್ಪಡೆ ಮಾಡಬೇಕೆಂದು ಒತ್ತಾಯಿಸಿ ಕೆಂಗೇರಿ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳು ಸಹಕಾರ ಸಚಿವ ಸೋಮಶೇಖರ್ ಅವರಿಗೆ ಮನವಿ ಸಲ್ಲಿಸಿದರು.

ಮರು ವಿಂಗಡಣೆ ಹೆಸರಿನಲ್ಲಿ ಐತಿಹಾಸಿಕ ಹಿನ್ನೆಲೆಯುಳ್ಳ ಪ್ರದೇಶಗಳನ್ನು ಇತರೆ ವಾರ್ಡ್‌ಗಳಲ್ಲಿ ವಿಲೀನ ಗೊಳಿಸುವುದು ಅಸಮಂಜಸ. ಸುಮಾರು 400 ವರ್ಷಗಳ ಇತಿಹಾಸ ಹೊಂದಿರುವ ಕೆಂಗೇರಿಯನ್ನು ಬಂಡೆ ಮಠ ಹಾಗೂ ಕೆಂಗೇರಿ ಉಪನಗರ ವಾರ್ಡ್ ಹೆಸರಿನಲ್ಲಿ ವಿಲೀನಗೊಳಿಸಲಾಗಿದೆ. ಸ್ವಾತಂತ್ರ್ಯ ಹೋರಾಟ ಸಮಯದಲ್ಲಿ ಮಹಾತ್ಮ ಗಾಂಧಿ ಅವರು ಕೆಂಗೇರಿಗೆ ಭೇಟಿ ನೀಡಿದ್ದರು. ಇಲ್ಲಿನ ವಿದ್ಯಾಪೀಠದಲ್ಲಿನ ತೆರೆದ ಬಾವಿಗೆ ಪೂಜೆ ಸಲ್ಲಿಸಿದ್ದರು. ಮೈಸೂರಿನ ಅರಸರು ಬೆಂಗಳೂರಿಗೆ ಭೇಟಿ ನೀಡುವ ವೇಳೆ ಇಲ್ಲಿ ತಂಗುತ್ತಿದ್ದರು. ಇಂತಹ ಐತಿಹಾಸಿಕ ಹಿನ್ನೆಲೆಯುಳ್ಳ ಪ್ರದೇಶವನ್ನು ಬೇರೆ ವಾರ್ಡಿನಲ್ಲಿ ವಿಲೀನಗೊಳಿಸುವುದು ಸ್ಥಳದ ಐತಿಹಾಸಿಕ ಮಹತ್ವಕ್ಕೆ ತೋರುತ್ತಿರುವ ಅಗೌರವ ಎಂದು ಬೇಸರ ವ್ಯಕ್ತಪಡಿಸಿದರು.

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ತಮ್ಮ ಅವಧಿಯಲ್ಲಿ ಕೆಂಗೇರಿಯನ್ನು ‘ಗೇಟ್ ವೇ ಆಫ್ ಬೆಂಗಳೂರು’ ಎಂದು ನಾಮಕರಣ ಮಾಡುವ ಕನಸು ಹೊಂದಿದ್ದರು. ಐತಿಹಾಸಿಕ ಕೆಂಗೇರಿ ಕರಗ, ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಓದಿದ ಶಾಲೆ, ಗಾಂಧಿ ಅವರಿಂದ ಶಿಲಾನ್ಯಾಸಗೊಂಡ ಕೆಂಗೇರಿ ಮಾರುಕಟ್ಟೆ ಮೊದಲಾದ ಐತಿಹಾಸಿಕ ಸ್ಥಳವನ್ನು ಹೊಂದಿದ್ದರೂ ಕೆಂಗೇರಿಯು ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ತನ್ನ ಮೂಲ ಹೆಸರು ಕಳೆದುಕೊಳ್ಳುವ ಆತಂಕ ಎದುರಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಚಾಲಕ ಜೆ.ರಮೇಶ್ ಮಾತನಾಡಿ, ಈ ಗೋಜಲನ್ನು ಸರ್ಕಾರ ಕೂಡಲೇ ಸರಿ ಪಡಿಸಬೇಕು ಎಂದು ಒತ್ತಾಯಿಸಿದರು.

ಕೆಂಗೇರಿಯ ಐತಿಹಾಸಿಕ ಮಹತ್ವವನ್ನು ಇನ್ನಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಎಸ್.ಟಿ.ಸೋಮಶೇಖರ್ ಪ್ರತಿಕ್ರಿಯಿಸಿದರು. ಸಹ ಸಂಚಾಲಕ ಟಿ.ಪ್ರಭಾಕರ್ ಹಾಗೂ ಕೆ.ಆರ್.ಮೂರ್ತಿ ಉಪಸ್ಥಿತರಿದ್ದರು.

ಬಿಜೆಪಿ ಶಾಸಕರಿಗಾಗಿ ವಾರ್ಡ್ ಮರುವಿಂಗಡಣೆ: ಎಚ್‌ಡಿಕೆ ಟೀಕೆ

ಬೆಂಗಳೂರು: ಬಿಬಿಎಂಪಿ ವಾರ್ಡ್‌ಗಳ ಮರು ವಿಂಗಡಣೆಯು ಬಿಜೆಪಿ ಶಾಸಕರಿಗಾಗಿ ಮಾಡಿದ ಕೆಲಸವಷ್ಟೇ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, ‘ನಗರದ ಜನರಿಗೆ ಸ್ಥಳೀಯವಾಗಿ ಅತ್ಯುತ್ತಮ ಆಡಳಿತ, ಸೇವೆಗಳು ಲಭ್ಯವಾಗಲಿ ಎಂಬ ಉದ್ದೇಶದಿಂದ ನಾನು ಮುಖ್ಯಮಂತ್ರಿಯಾಗಿದ್ದಾಗ ಬಿಬಿಎಂಪಿ ರಚಿಸಿದ್ದೆ. ಈಗಿನ ಬಿಜೆಪಿ ಸರ್ಕಾರವು ಅದರ ಮೂಲ ಆಶಯವನ್ನೇ ಬುಡಮೇಲು ಮಾಡಿ ರಾಜಕೀಯ ಸ್ವಾರ್ಥ ಸಾಧನೆಯ ಷಡ್ಯಂತ್ರ ನಡೆಸಿದೆ’ ಎಂದು ಕಿಡಿಕಾರಿದ್ದಾರೆ.

ಅಧಿಕಾರದ ಪಿಪಾಸುವಾಗಿರುವ ಬಿಜೆಪಿಗೆ ಮತ್ತೊಂದು ಪಕ್ಷ ಅಧಿಕಾರದಲ್ಲಿರುವುದು ಅಪಥ್ಯ. ತನ್ನ ಕೆಟ್ಟ ಆಡಳಿತಕ್ಕೆ ಬೇಸತ್ತು ಬೆಂಗಳೂರಿಗರು ಬೇರೆ ಪಕ್ಷಕ್ಕೆ ಎಲ್ಲಿ ಮತ ಹಾಕಿಬಿಟ್ಟಾರೋ ಎಂಬ ಭೀತಿಯಿಂದ ಚುನಾವಣೆಯನ್ನೇ ನಡೆಸಲಿಲ್ಲ. ಕೋರ್ಟ್ ಚಾಟಿ ಬೀಸಿದ ಮೇಲೆ ಚುನಾವಣೆ ಎನ್ನುತ್ತಿರುವ ಸರ್ಕಾರ, ಈಗ ವಾರ್ಡ್ ವಿಂಗಡಣೆಯ ನಾಟಕ ಆಡಿದೆ. ಅದರ ಸ್ವರೂಪ ನೋಡಿದರೆ ಬಿಜೆಪಿಯ ಅಧಿಕಾರದ ವಿಕೃತಿ ಯಾವ ಮಟ್ಟದಲ್ಲಿದೆ ಎನ್ನುವುದು ಅರ್ಥವಾಗುತ್ತದೆ ಎಂದು ಕುಟುಕಿದ್ದಾರೆ.

ವಾರ್ಡ್ ವಿಂಗಡಣೆಯಲ್ಲಿ ಬೆಂಗಳೂರು ನಗರದ ಸಮಗ್ರತೆ, ಅನನ್ಯತೆಯನ್ನು ಕಡೆಗಣಿಸಲಾಗಿದೆ. ಐತಿಹಾಸಿಕ ವಾರ್ಡುಗಳ ಹೆಸರುಗಳನ್ನು ಬದಲಿಸಿ ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರಿನ ಚರಿತ್ರೆಯ ಕುರುಹುಗಳನ್ನು ಅಳಿಸಿ ಹಾಕಲು ಸರ್ಕಾರ ಮುಂದಾಗಿದೆ. ಪಠ್ಯಪುಸ್ತಕ ತಿರುಚಿ ಅಪಚಾರ ಎಸಗಿದಂತೆ ನಾಡಪ್ರಭುಗಳು ಮತ್ತು ಮೈಸೂರು ಒಡೆಯರ ಕೀರ್ತಿಗೆ ಚ್ಯುತಿ ತರುವ ಹುನ್ನಾರ ಇದರ ಹಿಂದಿದೆ ಎಂದು ಹರಿಹಾಯ್ದಿದ್ದಾರೆ.

ಅಕ್ಟೋಬರ್ ಒಳಗೆ ಬಿಬಿಎಂಪಿ ಚುನಾವಣೆ

ಚುನಾವಣೆ ಮುಂದೂಡುವ ಉದ್ದೇಶ ಸರ್ಕಾರಕ್ಕೆ ಇಲ್ಲ: ಸಚಿವ ಸೋಮಶೇಖರ್

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯನ್ನು ಅಕ್ಟೋಬರ್ ಒಳಗೆ ನಡೆಸಲಾಗುವುದು’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಅಂದ್ರಹಳ್ಳಿಯಲ್ಲಿ ಬೆಸ್ಕಾಂ ಹಾಗೂ ವಿದ್ಯುತ್ ವಾಣಿ ಪರಿಸರ ಸಂಘಟನೆ ಆಶ್ರಯದಲ್ಲಿ ಶನಿವಾರ ನಡೆದ ಸಸಿ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸುಪ್ರೀಂ ಕೋರ್ಟ್ ಆದೇಶದಂತೆ ಅಕ್ಟೋಬರ್ ಒಳಗಾಗಿ ಬಿಬಿಎಂಪಿಗೆ ಚುನಾವಣೆ ನಡೆಸಬೇಕು. ವಾರ್ಡ್‌ಗಳ ಸಂಖ್ಯೆ ಹೆಚ್ಚಿಸಿ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ತಕರಾರು ಸಲ್ಲಿಸಲು ಸಾರ್ವಜನಿಕರಿಗೆ ಹದಿನೈದು ದಿನಗಳ ಕಾಲಾವಕಾಶ ನೀಡಲಾಗಿದೆ. ಆ ನಂತರ ಮತ್ತೊಮ್ಮೆ ಕರಡು ಪರಿಶೀಲಿಸಿ ವಾರ್ಡ್‌ಗಳಿಗೆ ಮೀಸಲಾತಿ ಪ್ರಕಟಿಸಲಾಗುತ್ತದೆ’ ಎಂದರು.

ಅಂದ್ರಹಳ್ಳಿಯಲ್ಲಿ ನಡೆದ ಸಸಿ ನೆಡುವ ಕಾರ್ಯಕ್ರಮಕ್ಕೆ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು. ಯಲಹಂಕ ರಾಮಕೃಷ್ಣ ವೇದಾಂತ ಆಶ್ರಮದ ಅಭಯಾನಂದ ಮಹಾರಾಜ್, ಬೆಸ್ಕಾಂ ಎಂಜಿನಿಯರ್ ರಮೇಶ್, ಕುಮಾರ್ ನಾಯಕ್, ಮಹಾಂತೇಶ್, ಬಸವರಾಜ ಇದ್ದರು.

‘ಚುನಾವಣೆ ಮುಂದೂಡುವ ಉದ್ದೇಶ ಸರ್ಕಾರಕ್ಕೆ ಇಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘ಹೊರವಲಯ ದೊಡ್ಡ ಬಿದರಕಲ್ಲು ವಾರ್ಡ್‌ನಲ್ಲಿ ಮೂಲಸೌಕರ್ಯ ಕಲ್ಪಿಸಲು ಸಿದ್ಧತೆಗಳು ನಡೆದಿದೆ. ಇಡೀ ವಾರ್ಡ್‌ಗೆ ಕಾವೇರಿ ನೀರು ಸರಬರಾಜು ಮಾಡಲಾಗುತ್ತದೆ. ನಂತರ, ಡಾಂಬರೀಕರಣ ನಡೆಯಲಿದೆ. ಜಲಮಂಡಳಿ ಕಾಮಗಾರಿ ಮುಗಿದಿರುವ ರಸ್ತೆಗಳಲ್ಲಿ ಡಾಂಬರೀಕರಣ ಆರಂಭವಾಗಿದೆ. ಎರಡು ತಿಂಗಳಲ್ಲಿ ನೀರು ಸರಬರಾಜು ಮತ್ತು ಡಾಂಬರೀಕರಣ ನಡೆಯಲಿದೆ’ ಎಂದರು.

ಹಲವೆಡೆ ಮಳೆ: ರಸ್ತೆಯಲ್ಲಿ ಹರಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶನಿವಾರ ಉತ್ತಮ ಮಳೆ ಸುರಿಯಿತು. ಹಲವು ಪ್ರದೇಶಗಳಲ್ಲಿ ಕಾಲುವೆಗಳು ತುಂಬಿ, ರಸ್ತೆ ಮೇಲೆಯೇ ನೀರು ಹರಿಯಿತು.

ಹಲವು ದಿನಗಳಿಂದ ನಗರದಲ್ಲಿ ಮೋಡ ಕವಿದ ವಾತಾವರಣ ಕಾಣಿಸುತ್ತಿದ್ದು, ಕೆಲವೆಡೆ ಮಾತ್ರ ತುಂತುರು ಮಳೆ ಆಗಿತ್ತು. ಶನಿವಾರವೂ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನ ಹಲವೆಡೆ ಮಳೆಯಾಯಿತು.

ಕೆಂಗೇರಿ, ರಾಜರಾಜೇಶ್ವರಿ ನಗರ, ನಾಯಂಡಹಳ್ಳಿ, ದೀಪಾಂಜಲಿನಗರ, ಗಿರಿನಗರ, ಹನುಮಂತನಗರ, ಬಸವನಗುಡಿ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಶೇಷಾದ್ರಿಪುರ, ಆರ್.ಟಿ.ನಗರ, ಗಾಂಧಿನಗರ, ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ಮಳೆ ಸುರಿಯಿತು.

ನಗರದಲ್ಲಿ ಶನಿವಾರ ಮಳೆ ಸುರಿದು ಆನಂದರಾವ್ ವೃತ್ತ ರಸ್ತೆಯಲ್ಲಿ ನಿಂತುಕೊಂಡಿದ್ದ ನೀರಿನಲ್ಲೇ ವಾಹನಗಳು ಸಂಚರಿಸಿದವು – ಪ್ರಜಾವಾಣಿ ಚಿತ್ರ

ಎಂ.ಜಿ. ರಸ್ತೆ, ಅಶೋಕನಗರ, ಶಿವಾಜಿನಗರ, ಹಲಸೂರು, ಇಂದಿರಾನಗರ, ದೊಮ್ಮಲೂರು, ಹೆಣ್ಣೂರು, ಬಾಣಸವಾಡಿ, ಶಾಂತಿನಗರ, ಲಾಲ್‌ಬಾಗ್, ವಿಲ್ಸನ್ ಗಾರ್ಡನ್, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್ ಹಾಗೂ ಇತರೆಡೆಯೂ ಮಳೆ ಇತ್ತು.

ಮೆಜೆಸ್ಟಿಕ್ ರೈಲ್ವೆ ಸೇತುವೆ, ಚಿಕ್ಕಪೇಟೆ, ಅವೆನ್ಯೂ ರಸ್ತೆ, ಬಿವಿಕೆ ಅಯ್ಯಂಗಾರ್ ರಸ್ತೆ ಸೇರಿದಂತೆ ಹಲವೆಡೆ ರಸ್ತೆ ಮೇಲೆಯೇ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು.

ಮಳೆ ಸುರಿಯುವ ವೇಳೆಯಲ್ಲಿ ಕೆಲವರು, ಕೊಡೆ ಹಿಡಿದು ಹೆಜ್ಜೆ ಹಾಕಿದರು. ಸವಾರರು, ತಮ್ಮ ದ್ವಿಚಕ್ರ ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ ಅಂಗಡಿ-ಮಳಿಗೆಗಳಲ್ಲಿ ಆಶ್ರಯ ಪಡೆದುಕೊಂಡಿದ್ದ ದೃಶ್ಯಗಳು ಕಂಡುಬಂದವು.

‘ಕೆಲದಿನ ಮಳೆ ಬಿಡುವು ನೀಡಿತ್ತು. ಶನಿವಾರ ಉತ್ತಮ ಮಳೆ ಆಗಿದೆ. ರಸ್ತೆಗಳಲ್ಲಿ ನೀರು ಹರಿಯುತ್ತಿದ್ದ ಬಗ್ಗೆ ಮಾತ್ರ ದೂರುಗಳು ಬಂದಿದ್ದವು. ಅದನ್ನು ಹೊರತುಪಡಿಸಿ ಯಾವುದೇ ದೂರುಗಳು ಬಂದಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಬೆಂಗಳೂರು ರೇಸ್

ಸೂಪರ್‌ನ್ಯಾಚುರಲ್ ಗೆಲ್ಲುವ ನಿರೀಕ್ಷೆ

ಕೋಲ್ಟ್ಸ್ ಟ್ರಯಲ್ ಸ್ಟೇಕ್ಸ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೂಪರ್‌ನ್ಯಾಚುರಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮ್ಯಾಕ್ಸ್ ಮುಲ್ಲರ್ 6, ಕ್ಲಾಸಿಕ್ ಚಾರ್ಮ್ 1, ಹೆಬನೆರೊ 2
2ನೇ ರೇಸ್: ಮೌಂಟ್ ವ್ಯೂ 4, ಅಪ್ಸರ 1, ಲೇಡಿ ಸುಪ್ರೀಮೋಸ್ 5
3ನೇ ರೇಸ್: ರೌಡಿ 5, ಫಾರ್ಚೂನೇಟ್ ಸನ್ 1, ಸ್ಯಾಡ್ಲರ್ಸ್ ಲೆಗಸಿ 6
4ನೇ ರೇಸ್: ಸೂಪರ್‌ನ್ಯಾಚುರಲ್ 11, ಒನ್ಸ್ ಯು ಗೋ ಬ್ಲ್ಯಾಕ್ 8, ಸಿರೇನಿಯಸ್ 3
5ನೇ ರೇಸ್: ಅಸ್ಕೊವಾಲ್ 2, ಅಜ್ಟೆಕ್ ಕ್ವೀನ್ 3, ಏಸೆರಾಸ್ 7
6ನೇ ರೇಸ್: ಒನ್ಲಿ ಯೂ 4, ಶುಭಂಕರ್ 5, ರಾಪ್ಸೋಡಿ ಇನ್ ಗ್ರೀನ್ 3
7ನೇ ರೇಸ್: ಫಾರೆಸ್ಟಿ 2, ನಾಟಿ ಇನ್ ಬ್ಲೂ 3, ಡೆಲ್ ಮಾರ್ 1

ಉತ್ತಮ ಬೆಟ್: ಅಸ್ಕೊವಾಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ಹೆಬ್ಬಾವಿನ ಹಿಡಿತ’ದಿಂದ ಪಕ್ಷ ಉಳಿಸಲು ಹೋರಾಟ: ಶಿಂಧೆ

ಮುಂಬೈ (ಪಿಟಿಐ): ಮಹಾ ವಿಕಾಸ್ ಆಘಾಡಿ (ಎಂವಿಎ) ಎಂಬ ‘ಹೆಬ್ಬಾವಿನ ಹಿಡಿತ’ದಿಂದ ಶಿವಸೇನಾವನ್ನು ಉಳಿಸಲು ನಾನು ಹೋರಾಡುತ್ತಿದ್ದೇನೆ ಎಂಬುದನ್ನು ಪಕ್ಷದ ಕಾರ್ಯಕರ್ತರು ಅರ್ಥಮಾಡಿಕೊಳ್ಳಬೇಕು ಎಂದು ಶಿವಸೇನಾ ಬಂಡಾಯ ನಾಯಕ ಏಕನಾಥ ಶಿಂಧೆ ಶನಿವಾರ ಸಂಜೆ ಹೇಳಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ನಿಷ್ಠರಾಗಿರುವ ಸೇನಾ ಕಾರ್ಯಕರ್ತರು ಬಂಡಾಯ ಶಾಸಕರಿಗೆ ಸೇರಿದ ಕೆಲ ಸ್ಥಳಗಳಲ್ಲಿ ಕಲ್ಲು ತೂರಿದ್ದು ಮತ್ತು ಪುಣೆಯಲ್ಲಿ ಶಾಸಕರ ಕಚೇರಿಯನ್ನು ಧ್ವಂಸಗೊಳಿಸಿ ಪ್ರತಿಭಟನೆ ನಡೆಸಿದ ಬೆನ್ನಲ್ಲೇ ಶಿಂಧೆ ಈ ಟ್ವೀಟ್ ಮೂಲಕ ಮನವಿ ಮಾಡಿದ್ದಾರೆ.

‘ಒಳಜಗಳಕ್ಕೆ ಆಂತರಿಕ ವೈಮನಸ್ಸೇ ಕಾರಣ’

ನರಗುಂದ (ಗದಗ ಜಿಲ್ಲೆ): ‘ಮಹಾರಾಷ್ಟ್ರ ಆಘಾಡಿ ಸರ್ಕಾರದ ಪತನ ಅಥವಾ ಒಳಜಗಳಕ್ಕೆ ಶಿವಸೇನೆಯ ಆಂತರಿಕ ವೈಮನಸ್ಸುಗಳೇ ಕಾರಣ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಶನಿವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಜೆಪಿಯ ಯಾರೊಬ್ಬರೂ ಅಲ್ಲಿನ ಸರ್ಕಾರವನ್ನು ಕೆಡಹುವ ದುಸ್ಸಾಹಸಕ್ಕೆ ಮುಂದಾಗಿಲ್ಲ’ ಎಂದರು.

17 ನಗರಗಳ ಚಿಕಿತ್ಸಾ ಸೌಕರ್ಯ ವೃದ್ಧಿಗೆ ಯೋಜನೆ

ನವದೆಹಲಿ (ಪಿಟಿಐ): ‘ಭಾರತದಲ್ಲಿ ಉಪಶಮನ ಪಡೆಯಿರಿ’ ಯೋಜನೆ ಅಡಿ ಬೆಂಗಳೂರು ಸೇರಿ ದೇಶದ 17 ನಗರಗಳಲ್ಲಿ ವೈದ್ಯಕೀಯ ಮೂಲಸೌಕರ್ಯ ಉತ್ತಮಪಡಿಸಲು ಸರ್ಕಾರವು ರೂಪುರೇಷೆಯನ್ನು ಸಿದ್ಧಪಡಿಸಿದೆ.

ದೆಹಲಿ, ಪುಣೆ, ಅಹಮದಾಬಾದ್, ಗುರುಗ್ರಾಮ, ಬೆಂಗಳೂರು, ಅಮೃತಸರ, ಕೊಚ್ಚಿ, ಕೊಯಮತ್ತೂರು, ಮುಂಬೈ, ಕೋಲ್ಕತ್ತ, ಗುಂಟೂರು, ಆಳಪ್ಪುಳ, ಗುವಾಹಟಿ, ಚೆನ್ನೈ, ಚಂಡೀಗಡ, ವೆಲ್ಲೂರು ಮತ್ತು ಹೈದರಾಬಾದ್ ನಗರಗಳನ್ನು ಈ ಯೋಜನೆಗಾಗಿ ಗುರುತಿಸಲಾಗಿದೆ. ಈ ನಗರಗಳ ಒಟ್ಟು 37 ಆಸ್ಪತ್ರೆಗಳನ್ನು ಇದಕ್ಕಾಗಿ ಆಯ್ದುಕೊಳ್ಳಲಾಗಿದೆ. ಅವುಗಳಲ್ಲಿ 30 ಖಾಸಗಿ ಆಸ್ಪತ್ರೆಗಳಿವೆ.

ವಿದೇಶಗಳಿಂದ ಭಾರತಕ್ಕೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಬರುವ 44 ದೇಶಗಳನ್ನು ಗುರುತಿಸಲಾಗಿದೆ. ಆ ದೇಶಗಳಿಂದ ಚಿಕಿತ್ಸೆಗಾಗಿ ಭಾರತಕ್ಕೆ ಬರುವ ರೋಗಿಗಳು ಮತ್ತು ಅವರ ಜೊತೆ ಬರುವವರಿಗೆ ವೈದ್ಯಕೀಯ ವೀಸಾ ನೀಡಿಕೆ ನಿಯಮ ಸಡಿಲಿಸುವ ಮತ್ತು ಇತರ ಅಗತ್ಯಗಳನ್ನು ಸರಳೀಕರಿಸುವ ದಿಸೆಯಲ್ಲಿಯೂ ಕೇಂದ್ರ ಆರೋಗ್ಯ ಸಚಿವಾಲಯ ಕೆಲಸ ಮಾಡುತ್ತಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಮುರ್ಮು ಕುರಿತ ಪೋಸ್ಟ್: ಆರ್‌ಜಿವಿ ವಿರುದ್ಧ ಬಿಜೆಪಿ ದೂರು

ಹೈದರಾಬಾದ್: ರಾಷ್ಟ್ರಪತಿ ಸ್ಥಾನದ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರ ವಿರುದ್ಧ ಅವಹೇಳನಕಾರಿ ಪೋಸ್ಟ್ ಪ್ರಕಟಿಸಿದ ಹಿನ್ನೆಲೆಯಲ್ಲಿ ಚಿತ್ರ ನಿರ್ದೇಶಕ ರಾಮ್ ಗೋಪಾಲ್ ವರ್ಮಾ (ಆರ್‌ಜಿವಿ) ವಿರುದ್ಧ ತೆಲಂಗಾಣದಲ್ಲಿ ಬಿಜೆಪಿ ದೂರು ದಾಖಲಿಸಿದೆ.



‘ದ್ರೌಪದಿ ರಾಷ್ಟ್ರಪತಿಯಾದರೆ, ಪಾಂಡವರು ಯಾರು? ಎಲ್ಲಕ್ಕಿಂತ ಮುಖ್ಯವಾಗಿ ಕೌರವರು ಯಾರು’ ಎಂದು ಪ್ರಶ್ನಿಸಿ ಶುಕ್ರವಾರ ವರ್ಮಾ ಟ್ವೀಟ್ ಮಾಡಿದ್ದರು.

ಈ ಟ್ವೀಟ್ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾದ ಬೆನ್ನಲ್ಲೇ, ವರ್ಮಾ ವಿರುದ್ಧ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿ ತೆಲಂಗಾಣ ಬಿಜೆಪಿಯ ಹಿರಿಯ ನಾಯಕ ಗುಡೂರು ನಾರಾಯಣರೆಡ್ಡಿ ಅವರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಸ್ಪಷ್ಟನೆ: ಈ ಬಗ್ಗೆ ಸ್ಪಷ್ಟನೆ ನೀಡಿರುವ ವರ್ಮಾ, ‘ಮಹಾಭಾರತದ ದ್ರೌಪದಿ ನನ್ನ ನೆಚ್ಚಿನ ಪಾತ್ರ. ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಆ ಹೆಸರಿಗೆ ಸಂಬಂಧಿಸಿದ ಪಾತ್ರಗಳನ್ನು ನೆನಪಿಸಿಕೊಂಡಿದ್ದೇನೆ. ಯಾರ ಭಾವನೆಗಳಿಗೂ ಧಕ್ಕೆ ತರುವ ಉದ್ದೇಶ ನನ್ನದಲ್ಲ’ ಎಂದು ಟ್ವೀಟ್ ಮಾಡಿದ್ದಾರೆ.

ಡಿಪೊಗಳಿಗೆ ಸರಬರಾಜು ಸ್ಥಗಿತ: ಖಾಸಗಿ ಪೆಟ್ರೋಲ್ ಬಂಕ್‌ಗಳಲ್ಲಿ ಭರ್ತಿ

ಡೀಸೆಲ್‌ಗಾಗಿ ಬಿಎಂಟಿಸಿ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲದ ಸುಳಿಯಲ್ಲಿ ಸಿಲುಕಿರುವ ಬಿಎಂಟಿಸಿ ಈಗ ಡೀಸೆಲ್‌ಗಾಗಿಯೂ ಪರದಾಡುವ ಸ್ಥಿತಿ ಎದುರಾಗಿದೆ. ಡಿಪೊಗಳಿಗೆ ಇಂಧನ ಪೂರೈಕೆಯಾಗದೆ, ಖಾಸಗಿ ಪೆಟ್ರೋಲ್ ಬಂಕ್‌ಗಳ ಬಳಿ ಸಾಲುಗಟ್ಟಿ ನಿಲ್ಲುವಂತಾಗಿದೆ.

ಎಚ್‌ಪಿಸಿಎಲ್‌ನಿಂದ ಇಂಧನ ಖರೀದಿಸುತ್ತಿದ್ದ ಬಿಎಂಟಿಸಿ, ₹70 ಕೋಟಿ ಬಾಕಿ ಉಳಿಸಿಕೊಂಡಿದೆ. ಇದಲ್ಲದೇ ಸಗಟು ಖರೀದಿ ದರ ಪ್ರತಿ ಲೀಟರ್ ಡೀಸೆಲ್‌ಗೆ ₹119 ಆಗಿದೆ. ಚಿಲ್ಲರೆ ವ್ಯಾಪಾರದಲ್ಲಿ ಡೀಸೆಲ್ ದರ ಲೀಟರ್‌ಗೆ ₹87 ಇದೆ. ಇದರಿಂದಾಗಿ ಬಿಎಂಟಿಸಿ, ಚಿಲ್ಲರೆ ವ್ಯಾಪಾರಿಗಳಿಂದಲೇ ಡೀಸೆಲ್ ಖರೀದಿಸಿ ಬಸ್‌ಗಳ ಸಂಚಾರವನ್ನು ಸುಗಮ ಮಾಡಿಕೊಂಡಿತ್ತು. ಚಿಲ್ಲರೆ ವ್ಯಾಪಾರಿಗಳೇ ಟ್ಯಾಂಕರ್‌ಗಳಲ್ಲಿ ಪ್ರತಿದಿನ ಸಂಸ್ಥೆಗಳ ಡಿಪೊಗಳಲ್ಲಿರುವ ಬಂಕ್‌ಗಳಿಗೆ ಪೂರೈಕೆ ಮಾಡುತ್ತಿದ್ದರು. ಅಂದಿನ ಡೀಸೆಲ್ ಮೊತ್ತವನ್ನು ಅಂದೇ ಪಾವತಿಸಿ ಬಿಎಂಟಿಸಿ ಕೈತೊಳೆದುಕೊಳ್ಳುತ್ತಿತ್ತು. ಈ ಪ್ರಕ್ರಿಯೆ ಎರಡು ತಿಂಗಳಿಂದ ನಡೆದುಕೊಂಡು ಬಂದಿದೆ.

ಈಗ ಎರಡು ದಿನಗಳಿಂದ ಬಂಕ್‌ಗಳಿಗೆ ಪೂರೈಕೆ ಮಾಡುವುದನ್ನು ವ್ಯಾಪಾರಿಗಳು ಸ್ಥಗಿತಗೊಳಿಸಿದ್ದಾರೆ. ಡಿಪೊಗಳ ಬಂಕ್‌ಗಳಲ್ಲಿ ಡೀಸೆಲ್ ಖಾಲಿಯಾಗಿ ಬಸ್‌ಗಳು ಡಿಪೋ ಸಮೀಪದ ಪೆಟ್ರೋಲ್ ಬಂಕ್‌ಗಳಲ್ಲಿ ಡೀಸೆಲ್‌ಗಾಗಿ ಸಾಲುಗಟ್ಟಿ ನಿಲ್ಲುತ್ತಿವೆ. ಇದರಿಂದಾಗಿ ಬಂಕ್‌ಗಳ ಮುಂದೆ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಪೀಣ್ಯದಲ್ಲಿ ಶನಿವಾರ ಬಹುತೇಕ ಪೆಟ್ರೋಲ್ ಬಂಕ್‌ಗಳಲ್ಲಿ ಬಸ್‌ಗಳ ಸಾಲು ಇತ್ತು.

'ನಮ್ಮ ಡಿಪೊಗಳಲ್ಲಿನ ಬಂಕ್‌ಗಳಿಗೆ ಟ್ಯಾಂಕರ್‌ಗಳ ಮೂಲಕ ಡೀಸೆಲ್ ಪೂರೈಸುತ್ತಿದ್ದ ವ್ಯಾಪಾರಿಗಳಿಗೆ ಕಂಪನಿಗಳು ಬೆದರಿಕೆ ಹಾಕುತ್ತಿವೆ. ಬಿಎಂಟಿಸಿಗೆ ಡೀಸೆಲ್ ಪೂರೈಸಿದರೆ ಪರವಾನಗಿ ರದ್ದುಪಡಿಸುವ ಬೆದರಿಕೆ ಹಾಕುತ್ತಿವೆ. ಇದರಿಂದಾಗಿ ವ್ಯಾಪಾರಿಗಳು ನಮಗೆ ಡೀಸೆಲ್ ಪೂರೈಸಲು ಹೆದರುತ್ತಿದ್ದಾರೆ' ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ ಹೇಳಿದರು.

'ಸಗಟು ಡೀಸೆಲ್ ದರವನ್ನು ಲೀಟರ್‌ಗೆ ₹119ಕ್ಕೆ ಏರಿಸಲಾಗಿದೆ. ಚಿಲ್ಲರೆಯಾಗಿ ನಮಗೆ ₹87ಕ್ಕೆ ಡೀಸೆಲ್ ಸಿಗುತ್ತಿದೆ. ದುಬಾರಿ ಮೊತ್ತದಲ್ಲೇ ನಾವು ಡೀಸೆಲ್ ಖರೀದಿ ಮಾಡಬೇಕಾದ ಅನಿವಾರ್ಯವನ್ನು ಕಂಪನಿಗಳು ಸೃಷ್ಟಿಸುತ್ತಿವೆ. ಚಿಲ್ಲರೆ ವ್ಯಾಪಾರಿಗಳನ್ನೂ ಬೆದರಿಸಿ ನಮಗೆ ಪೂರೈಕೆ ಸ್ಥಗಿತಗವಾಗುವಂತೆ ಮಾಡಿವೆ' ಎಂದು ದೂರಿದರು.

'ಸಮಸ್ಯೆ ಸರಿಪಡಿಸುವ ಸಂಬಂಧ ಕೇಂದ್ರ ಪೆಟ್ರೋಲಿಯಂ ಸಚಿವಾಲಯ ಮತ್ತು ರಾಜ್ಯದಲ್ಲಿರುವ ಎಲ್ಲ ತೈಲ ಕಂಪನಿಗಳು ಸಮನ್ವಯಕಾರರಿಗೆ ಪತ್ರ ಬರೆದಿದ್ದೇವೆ. ಸಮಸ್ಯೆ ಸರಿಪಡಿಸದಿದ್ದರೆ ಬಸ್‌ಗಳನ್ನು ರಸ್ತೆಗೆ ಇಳಿಸುವುದು ಕಷ್ಟವಾಗಲಿದೆ. ಖಾಸಗಿ ಪೆಟ್ರೋಲ್ ಬಂಕ್‌ಗಳಿಗೆ ಬಸ್‌ಗಳು ಹೋದರೆ ಸಂಚಾರ ದಟ್ಟಣೆ ಸಮಸ್ಯೆಯೂ ಹೆಚ್ಚಾಗಲಿದೆ. ಪೊಲೀಸ್ ಆಯುಕ್ತರಿಗೂ ಪತ್ರ ಬರೆದಿದ್ದೇವೆ' ಎಂದು ಹೇಳಿದರು.

ಬಂಕ್‌ಗಳಲ್ಲೂ ಇಂಧನ ಖಾಲಿ

ಸಾರಿಗೆ ಸಂಸ್ಥೆಗಳ ಸಮಸ್ಯೆ ಒಂದೆಡೆಯಾದರೆ, ಪೆಟ್ರೋಲ್ ಬಂಕ್‌ಗಳಿಗೂ ಡೀಸೆಲ್ ಮತ್ತು ಪೆಟ್ರೋಲ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ನಗರದಲ್ಲಿ ಹಲವು ಬಂಕ್‌ಗಳಲ್ಲಿ ಇಂಧನ ಖಾಲಿ ಎಂಬ ಫಲಕಗಳನ್ನು ಹಾಕಲಾಗಿದೆ.

'ಎಚ್‌ಪಿಸಿಎಲ್ ಮತ್ತು ಬಿಪಿಸಿಎಲ್ ಕಂಪನಿಗಳು ಬೇಡಿಕೆಗೆ ತಕ್ಕಷ್ಟು ಇಂಧನ ಪೂರೈಕೆ ಮಾಡುತ್ತಿಲ್ಲ. ಕಚ್ಚಾ ತೈಲದ ಬೆಲೆ ಏರಿಕೆಯಾಗಿದೆ ಎನ್ನುವ ಕಾರಣಕ್ಕೆ ನಮಗೆ ಇಂಧನ ಪೂರೈಕೆ ಮಾಡುತ್ತಿಲ್ಲ' ಎಂದು ಬಂಕ್ ಮಾಲೀಕರು ಬೇಸರ ವ್ಯಕ್ತಪಡಿಸುತ್ತಾರೆ.

'ಗ್ರಾಹಕರನ್ನು ವಾಪಸ್ ಕಳುಹಿಸಬೇಕಾದ ಸ್ಥಿತಿ ಇದೆ ಎಂದು ಸಮಸ್ಯೆಯನ್ನು ವಿವರಿಸಿದ ಬಳಿಕ ಶನಿವಾರ ಸ್ವಲ್ಪ ಪ್ರಮಾಣದ ಇಂಧನ ಪೂರೈಕೆ ಮಾಡಿದ್ದಾರೆ. ಸೋಮವಾರದಿಂದ ಮತ್ತೆ ಅದೇ ಸ್ಥಿತಿಯಾಗುವ ಸಾಧ್ಯತೆ ಇದೆ' ಎಂದು ಹೇಳಿದರು.

ಕಾರ್ಯಾಚರಣೆಗೂ ತೊಡಕು

ಡೀಸೆಲ್‌ಗಾಗಿ ಪೆಟ್ರೋಲ್ ಬಂಕ್‌ಗಳ ಬಳಿ ಬಿಎಂಟಿಸಿ ಬಸ್‌ಗಳು ಕಾದು ನಿಂತರೆ ಬಸ್‌ಗಳ ಕಾರ್ಯಾಚರಣೆ ಮೇಲೂ ಪರಿಣಾಮ ಬೀರಲಿದೆ.

ಕೆಲವು ಡಿಪೊಗಳಲ್ಲಿ ಮೂರು ದಿನಕ್ಕೆ ಸಾಕಾಗುವಷ್ಟು ದಾಸ್ತಾನು ಇದ್ದರೆ, ಇನ್ನೂ ಕೆಲವು ಡಿಪೊಗಳಲ್ಲಿ ಡೀಸೆಲ್ ಖಾಲಿಯಾಗಿದೆ. ಭಾನುವಾರ ಕಾರ್ಯಾಚರಣೆ ಶೇ 20ರಷ್ಟು ಕಡಿಮೆ ಇರಲಿದ್ದು, ತೊಂದರೆ ಕಾಣಿಸುವುದಿಲ್ಲ. ಆದರೆ, ಸೋಮವಾರದ ತನಕ ಸಮಸ್ಯೆ ಪರಿಹಾರವಾಗದಿದ್ದರೆ ಸಂಚಾರ ದಟ್ಟಣೆ ಜತೆಗೆ ಕಾರ್ಯಾಚರಣೆಯಲ್ಲೂ ವ್ಯತ್ಯಯವಾಗುವ ಸಾಧ್ಯತೆ ಇದೆ ಎಂದು ಬಿಎಂಟಿಸಿ ಅಧಿಕಾರಿಗಳು ಹೇಳುತ್ತಾರೆ.

ಬಾಗಲಗುಂಟೆ ಠಾಣೆಯಲ್ಲಿ ಎಫ್‌ಐಆರ್

ಹಣದಾಸೆಗೆ ಗರ್ಭಪಾತ: ಗರ್ಭಚೀಲ, ಕರುಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣದಾಸೆಗಾಗಿ ಮಹಿಳೆಯೊಬ್ಬರಿಗೆ ಗರ್ಭಪಾತ ಮಾಡಲು ಹೋಗಿ ಗರ್ಭಚೀಲ ಹಾಗೂ ಕರುಳಿಗೆ ಹಾನಿ ಉಂಟು ಮಾಡಿದ ಆರೋಪದಡಿ ಮಲ್ಲಸಂದ್ರದ ಸರ್ಕಾರಿ ಆಸ್ಪತ್ರೆಯ ಶುಶ್ರೂಷಕಿ ಗಂಗಲಕ್ಷ್ಮಿ ವಿರುದ್ಧ ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅವೈಜ್ಞಾನಿಕ ಗರ್ಭಪಾತದಿಂದ ಅಸ್ವಸ್ಥಗೊಂಡಿರುವ 27 ವರ್ಷದ ಮಹಿಳೆ, ವಾಣಿ ವಿಲಾಸ್ ಆಸ್ಪತ್ರೆಯಲ್ಲಿ ಸದ್ಯ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಹೇಳಿಕೆ ಆಧರಿಸಿ ಗಂಗಲಕ್ಷ್ಮಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಇಬ್ಬರು ಮಕ್ಕಳ ತಾಯಿ: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ನಿವಾಸಿಯಾದ ಮಹಿಳೆಗೆ ಇಬ್ಬರು ಮಕ್ಕಳಿದ್ದಾರೆ. ಮೂರನೇ ಬಾರಿ ಅವರು ಗರ್ಭ ಧರಿಸಿದ್ದರು. ಬೆಂಗಳೂರಿನಲ್ಲಿರುವ ಅಕ್ಕನ ಮನೆಗೆ ಇತ್ತೀಚೆಗೆ ಬಂದಿದ್ದ ಅವರು, 'ಎರಡು ಮಕ್ಕಳು ಸಾಕು. ಮೂರನೇ ಮಗು ಬೇಡ' ಎಂಬುದಾಗಿ ಹೇಳಿ ಗರ್ಭಪಾತ ಮಾಡಿಸಲು ತೀರ್ಮಾನಿಸಿದ್ದರು. ಅಣ್ಣ ಹಾಗೂ ಅತ್ತಿಗೆ ಜೊತೆ ಜೂನ್ 11ರಂದು ಮಲ್ಲಸಂದ್ರದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದ ಮಹಿಳೆಗೆ ಶುಶ್ರೂಷಕಿ ಗಂಗಲಕ್ಷ್ಮಿ ಭೇಟಿಯಾಗಿದ್ದರು. ತಾವೇ ಗರ್ಭಪಾತ ಮಾಡುವುದಾಗಿ ಹೇಳಿದ್ದ ಗಂಗಲಕ್ಷ್ಮಿ, ಆರಂಭದಲ್ಲಿ ₹ 4,500 ಕೇಳಿದ್ದರು. ಅಷ್ಟು ಹಣವಿಲ್ಲವೆಂದಿದ್ದ ಮಹಿಳೆ, ₹ 3,000 ನೀಡಲು ಒಪ್ಪಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಜೂನ್ 12ರಂದು ಪುನಃ ಆಸ್ಪತ್ರೆಗೆ ಬಂದಿದ್ದ ಮಹಿಳೆಯನ್ನು ಗಂಗಲಕ್ಷ್ಮಿ ಅವರು ಆಸ್ಪತ್ರೆಯ ಕೊಠಡಿಗೆ ಕರೆದೊಯ್ದಿದ್ದರು. ಅವೈಜ್ಞಾನಿಕವಾಗಿ ಶಸ್ತ್ರಚಿಕಿತ್ಸೆ ನಡೆಸಿ, ಗುಪ್ತಾಂಗದ ಒಳಗೆ ಹಾನಿ ಮಾಡಿದ್ದರು. ಇದರಿಂದ ತೀವ್ರ ರಕ್ತಸ್ರಾವವಾಗಿತ್ತು. ವಿಪರೀತ ರಕ್ತ ಸೋರುತ್ತಿದ್ದರಿಂದ ಗಾಬರಿಗೊಂಡ ಗಂಗಲಕ್ಷ್ಮಿ, 'ಗರ್ಭಪಾತ ಆಗುತ್ತಿಲ್ಲ. ಕೂಡಲೇ ವಾಣಿ ವಿಲಾಸ್ ಆಸ್ಪತ್ರೆಗೆ ಕರೆದೊಯ್ಯಿರಿ. ಆಸ್ಪತ್ರೆಯಲ್ಲಿ ಗರ್ಭಪಾತಕ್ಕೆ ಯತ್ನಿಸಿದ ವಿಷಯವನ್ನು ಯಾರಿಗೂ ಹೇಳಬೇಡಿ' ಎಂದಿದ್ದರು. ಆಂಬುಲೆನ್ಸ್‌ನಲ್ಲಿ ಮಹಿಳೆಯನ್ನು ತಾವೇ ಕಳುಹಿಸಿಕೊಟ್ಟಿದ್ದರು. ವಾಣಿ ವಿಲಾಸ್ ಆಸ್ಪತ್ರೆ ವೈದ್ಯರು, ತಪಾಸಣೆ ನಡೆಸಿದಾಗಲೇ ವಿಷಯ ಗೊತ್ತಾಗಿತ್ತು. ಅವರೇ ಠಾಣೆಗೆ ಕರೆ ಮಾಡಿ ಸಿಬ್ಬಂದಿಯನ್ನು ಆಸ್ಪತ್ರೆಗೆ ಕರೆಸಿಕೊಂಡಿದ್ದರು' ಎಂದೂ ತಿಳಿಸಿವೆ.

ಐಎಂಎಗೆ ಪೊಲೀಸರ ಪತ್ರ

ನಿರ್ಲಕ್ಷ್ಯದಿಂದ ಗಂಭೀರವಾದ ಗಾಯಗೊಳಿಸಿದ (ಐಪಿಸಿ 338) ಆರೋಪದಡಿ ಗಂಗಲಕ್ಷ್ಮಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಬಾಗಲಗುಂಟೆ ಪೊಲೀಸರು, ಪ್ರಕರಣದ ಬಗ್ಗೆ ವೈಜ್ಞಾನಿಕ ವರದಿ ನೀಡುವಂತೆ ಭಾರತೀಯ ವೈದ್ಯಕೀಯ ಸಂಘಕ್ಕೆ (ಐಎಂಎ) ಪತ್ರ ಬರೆದಿದ್ದಾರೆ.

'ಶುಶ್ರೂಷಕಿ ಮೇಲಿನ ಆರೋಪದ ಬಗ್ಗೆ ಐಎಂಎ ಕಡೆಯಿಂದ ವರದಿ ಪಡೆಯಲಿದ್ದೇವೆ. ನಂತರ, ವಿಚಾರಣೆ ನಡೆಸಿ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಐಷಾರಾಮಿ ಜೀವನಕ್ಕಾಗಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸುವ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಜಗಜೀವನರಾಮ್ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತೌಫಿಕ್ ಪಾಷಾ, ಅಮೀನ್ ಪಾಷಾ, ಸಲ್ಮಾನ್ ಹಾಗೂ ಅಫ್ರಿದ್ ಖಾನ್ ಬಂಧಿತರು. ಇವರಿಂದ ₹ 9.80 ಲಕ್ಷ ಮೌಲ್ಯದ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸ್ನೇಹಿತರಾದ ನಾಲ್ವರು, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದರು. ಕದ್ದ ವಾಹನಗಳನ್ನು ಮಾರಾಟ ಮಾಡಿ, ಬಂದ ಹಣವನ್ನು ಹಂಚಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು. ಮೋಜು– ಮಸ್ತಿಗೂ ಹಣ ಖರ್ಚು ಮಾಡುತ್ತಿದ್ದರು' ಎಂದರು.

'ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ವಾಹನಗಳನ್ನು ಗುರುತಿಸಿ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದರು. ವಿಜಯನಗರ, ಸಂಪಿಗೆಹಳ್ಳಿ, ಬಸವನಗುಡಿ, ಕೆಂಪೇಗೌಡ, ಚನ್ನಮ್ಮನಕೆರೆ ಅಚ್ಚುಕಟ್ಟು, ಸಿದ್ದಾಪುರ ಸೇರಿದಂತೆ ವಿವಿಧ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದರು.

ಆರೋಪಿಗಳಿಂದ ಜಪ್ತಿ ಮಾಡಲಾದ ದ್ವಿಚಕ್ರ ವಾಹನಗಳು

ಜಿಲ್ಲಾಧಿಕಾರಿ ಮಂಜುನಾಥ ಬಂಧನಕ್ಕೆ ಎಎಪಿ ಆಗ್ರಹ

ಬೆಂಗಳೂರು: '₹5 ಲಕ್ಷ ಲಂಚ ಪಡೆದ ಪ್ರಕರಣದಲ್ಲಿ ಆರೋಪಿಯಾಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅವರನ್ನು ಅಮಾನತು ಗೊಳಿಸಿ, ವಿಚಾರಣೆ ನಡೆಸಬೇಕು' ಎಂದು ಎಎಪಿ ಆಗ್ರಹಿಸಿದೆ.

'ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯ ಅರ್ಜಿದಾರರ ಪರ ಆದೇಶ ನೀಡಲು ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗಳು ₹15 ಲಕ್ಷ ಬೇಡಿಕೆ ಇಟ್ಟಿದ್ದರು. ಮುಂಗಡವಾಗಿ ₹5 ಲಕ್ಷ ಪಡೆದಿರುವುದು ಎಸಿಬಿ ದಾಳಿಯಿಂದ ಸಾಬೀತಾಗಿದೆ' ಎಂದು ಎಎಪಿ ರಾಜ್ಯ ವಕ್ತಾರ ಕೆ. ಮಥಾಯಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಕರಣದಲ್ಲಿ ಜೆ.ಮಂಜುನಾಥ್ ಅವರನ್ನು ಮೂರನೇ ಆರೋಪಿ ಎಂದು ಎಸಿಬಿ ವರದಿ ಸ್ಪಷ್ಟವಾಗಿ ಹೇಳಿದೆ. ಅವರನ್ನು ಶೀಘ್ರವೇ ಹುದ್ದೆಯಿಂದ ಅಮಾನತು ಮಾಡಿ ಬಂಧಿಸಿ ವಿಚಾರಣೆ ಗೊಳಪಡಿಸಬೇಕು. 'ಕಂದಾಯ ಸಚಿವ ಆರ್. ಅಶೋಕ ಅವರು ಅವ್ಯವಹಾರಗಳನ್ನು ಮಾಡಬೇಕೆಂದೇ ಮಂಜುನಾಥ್ ಅವರನ್ನು ಜಿಲ್ಲಾಧಿಕಾರಿಯನ್ನಾಗಿ ನೇಮಿಸಿದ್ದಾರೆ. ಎಸಿಬಿಯ ವರದಿಯ ಕುರಿತು ಅವರು ಪ್ರತಿಕ್ರಿಯಿಸಬೇಕು. ಜಿಲ್ಲಾಧಿಕಾರಿಯ ವಿರುದ್ಧದ ಎಲ್ಲಾ ಭ್ರಷ್ಟಾಚಾರ ಪ್ರಕರಣಗಳ ಕುರಿತು ಸಮಗ್ರ ತನಿಖೆಯಾಗಬೇಕು' ಒತ್ತಾಯಿಸಿದರು.

ಬೆದರಿಸಿ ಆಸ್ಟ್ರೇಲಿಯಾ ಪ್ರಜೆ ಸುಲಿಗೆ

ಬೆಂಗಳೂರು: ಹೋಟೆಲ್ ಬಾಡಿಗೆ ವಿಚಾರವಾಗಿ ನಡೆದ ಗಲಾಟೆ ವೇಳೆ ಮಧ್ಯಪ್ರವೇಶಿಸಿ ಸಹಾಯದ ಸೋಗಿನಲ್ಲಿ ಆಸ್ಟ್ರೇಲಿಯಾ ಪ್ರಜೆಯನ್ನು ಅಪಹರಿಸಿ ಸುಲಿಗೆ ಮಾಡಿದ್ದ ಆರೋಪದಡಿ ಸೈಯದ್ ಇಮ್ರಾನ್ ಎಂಬಾತನನ್ನು ಗೋವಿಂದಪುರ ಪೊಲೀಸರು ಬಂಧಿಸಿದ್ದಾರೆ.

'ಜೂನ್ 23ರಂದು ನಡೆದಿರುವ ಘಟನೆ ಸಂಬಂಧ ಆಸ್ಟ್ರೇಲಿಯಾ ಪ್ರಜೆ ಅಸಿಫ್ ಹಮ್ಮೀಯ ಅವರಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿ ಇಮ್ರಾನ್‌ನನ್ನು ಬಂಧಿಸಲಾಗಿದ್ದು, ಇನ್ನಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ 'ಪ್ರಜಾವಾಣಿ'ಗೆ ತಿಳಿಸಿದರು.

₹ 13,500 ಬಾಡಿಗೆಗಾಗಿ ಗಲಾಟೆ: 'ನ್ಯೂಜಿಲೆಂಡ್‌ನಲ್ಲಿ ಸಂಸ್ಥೆಯೊಂದರ ಸಹ ಮಾಲೀಕರಾದ ಅಸಿಫ್ ಹಮ್ಮೀಯ, ಕೆಲಸದ ಕಾರಣ ನಗರಕ್ಕೆ ಬಂದಿದ್ದರು. ಕಾಡುಗೊಂಡನಹಳ್ಳಿ ಠಾಣೆ ವ್ಯಾಪ್ತಿಯ 'ಫಾರ್ಚೂನ್ ಇನ್' ಹೋಟೆಲ್‌ನಲ್ಲಿ ಕೊಠಡಿ ಬಾಡಿಗೆ ಪಡೆದು ಉಳಿದುಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ. 15 ದಿನಗಳ ಬಾಡಿಗೆ '₹13,500 ಪಾವತಿಸಲು ವ್ಯವಸ್ಥಾಪಕರು ಹೇಳಿದ್ದರು. ತಮ್ಮ ಬಳಿ ನಗದು ಇಲ್ಲ. ಆನ್‌ಲೈನ್ ಮೂಲಕ ಪಾವತಿ ಮಾಡುವುದಾಗಿ ಹಮ್ಮೀಯ ಹೇಳಿದರು. ವ್ಯವಸ್ಥಾಪಕ ಒಪ್ಪಲಿಲ್ಲ.'

'ಈ ವಿಚಾರವಾಗಿ ಪರಸ್ಪರ ಕೈ ಕೈ ಮಿಲಾಯಿಸಿದ್ದರು. ಹೋಟೆಲ್ ಖಾಲಿ ಮಾಡಲು ಹಮ್ಮೀಯ, ಬ್ಯಾಗ್ ತರಲು ಕೊಠಡಿಗೆ ಹೋಗಿದ್ದಾಗ ಅವರ ಮೇಲೆ ವ್ಯವಸ್ಥಾಪಕ, ಸಿಬ್ಬಂದಿ, ಹಲ್ಲೆ ಮಾಡಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ.

ಪೊಲೀಸ್ ಬಳಿ ಕರೆದೊಯ್ಯುವುದಾಗಿ ಅಪಹರಣ: ಹೋಟೆಲ್‌ನ 'ಇನ್ನೊಂದು ಕೊಠಡಿಯಲ್ಲಿದ್ದ ಆರೋಪಿ ಸೈಯದ್ ಇಮ್ರಾನ್, ಸಹಚರರ ಮಧ್ಯಪ್ರವೇಶಿಸಿ ವಿದೇಶಿ ಪ್ರಜೆ ಪರ ಮಾತನಾಡಿದ್ದರು. ಪೊಲೀಸ್ ಠಾಣೆಗೆ ಕರೆದೊಯ್ಯುವುದಾಗಿ ಹೇಳಿ ಬೈಕ್‌ನಲ್ಲಿ ಹಮ್ಮೀಯ ಅವರನ್ನು ಹತ್ತಿಸಿಕೊಂಡು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಬೆದರಿಸಿದ್ದರು. ಬ್ಯಾಗ್ ಹಾಗೂ ಇತರ ವಸ್ತುಗಳನ್ನು ಆರೋಪಿಗಳು, ಸುಲಿಗೆ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

ಆಟೊ ಕದಿಯುತ್ತಿದ್ದ ಆರೋಪಿ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ನಗರದಲ್ಲಿ ಆಟೊ ಕಳ್ಳತನ ಮಾಡುತ್ತಿದ್ದ ಆರೋಪಿ ಶೇಖ್ ವಾಸೀಂ ಅವರನ್ನು ಕಲಾಸಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ಸಿದ್ದಾಪುರ ನಿವಾಸಿ ವಾಸೀಂ, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಈತನಿಂದ ₹ 16 ಲಕ್ಷ ಮೌಲ್ಯದ 8 ಆಟೊ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ಆಟೊಗಳನ್ನು ಆರೋಪಿ ಕದಿಯುತ್ತಿದ್ದ. ತನ್ನದೇ ಆಟೊ ವೆಂದು ಹೇಳಿ ಮಧ್ಯವರ್ತಿಗಳ ಮೂಲಕ ಮಾರುತ್ತಿದ್ದ. ದಾಖಲೆ ಕೇಳಿದರೆ, ಕೆಲದಿನ ಬಿಟ್ಟು ಕೊಡುವುದಾಗಿ ಹೇಳಿ ನಾಪತ್ತೆಯಾಗುತ್ತಿದ್ದ. 'ಆಟೊ ಮಾರಾಟದಿಂದ ಬಂದ ಹಣವನ್ನು ಮದ್ಯ, ದುಶ್ಚಟಗಳಿಗಾಗಿ ಖರ್ಚು ಮಾಡುತ್ತಿದ್ದ. ಕಲಾಸಿಪಾಳ್ಯ ಠಾಣೆ ವ್ಯಾಪ್ತಿಯಲ್ಲೂ ಆಟೊ ಕದ್ದಿದ್ದ. ಅದರ ಮಾಲೀಕರು ನೀಡಿದ್ದ ದೂರಿನನ್ವಯ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ' ಎಂದರು.

ಎಲೆಕ್ಟ್ರಾನಿಕ್ ಬೀಗ (ಇಸೀಲ್) ದುರುಪಯೋಗ ಆರೋಪ

ಎನ್‌ಆರ್‌ಐ ವಿರುದ್ಧದ ದೂರು ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದೇಶಕ್ಕೆ ಸರಕನ್ನು ರಫ್ತು ಮಾಡುವ ಕಂಟೈನೇರ್‌ಗಳಿಗೆ ಅಳವಡಿಸುವ ಎಲೆಕ್ಟ್ರಾನಿಕ್ ಬೀಗಗಳನ್ನು (ಇ-ಸೀಲ್) ದುರುಪಯೋಗಪಡಿಸಿಕೊಳ್ಳಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಅನಿವಾಸಿ ಭಾರತೀಯರೊಬ್ಬರ ವಿರುದ್ಧ ಬೆಂಗಳೂರು ವಲಯದ ಕಂದಾಯ ವಿಚಕ್ಷಣಾ ವಿಭಾಗದ ಅಧಿಕಾರಿ ದಾಖಲಿಸಿದ್ದ ದೂರನ್ನು ಹೈಕೋರ್ಟ್ ವಜಾಗೊಳಿಸಿದೆ.

'ಇಂದಿರಾ ನಗರದ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ಬೆಂಗಳೂರು ವಲಯದ ಕಂದಾಯ ವಿಚಕ್ಷಣಾ ವಿಭಾಗದ ಅಧಿಕಾರಿ ದಾಖಲಿಸಿರುವ ದೂರನ್ನು ರದ್ದುಗೊಳಿಸಬೇಕು' ಎಂದು ಕೋರಿ ಡೇವಿಡ್ ಮಥಾಯ್ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಈ ಪ್ರಕರಣದಲ್ಲಿ ಅರ್ಜಿದಾರರಾದ 66 ವರ್ಷದ ಡೇವಿಡ್ ಮಥಾಯ್ ಇ-ಸೀಲ್ (ಎಲೆಕ್ಟ್ರಾನಿಕ್ ಬೀಗ) ತಯಾರಿಸುವ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಎಂದು ಅವರ ವಿರುದ್ಧ ಆರೋಪ ಮಾಡಲಾಗಿದೆ. ಆದರೆ ಅವರು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಲ್ಲ ಎಂಬುದು ದಾಖಲೆಗಳಿಂದ ತಿಳಿದು ಬಂದಿದೆ. ಈ ಅಂಶವನ್ನು ಅವರ ಪರ ವಕೀಲ ಪಿ.ಪ್ರಸನ್ನಕುಮಾರ್ ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಡೇವಿಡ್, ಈ ಹಿಂದೆ ಕಂಪನಿಯ ಸಲಹೆಗಾರರಾಗಿದ್ದರು ಎಂಬ ಏಕಮಾತ್ರ ಕಾರಣದಿಂದ ಪ್ರಕರಣವನ್ನು ತಪ್ಪಾಗಿ ದಾಖಲಿಸಲಾಗಿದೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ದೂರನ್ನು ರದ್ದುಗೊಳಿಸಿ ಆದೇಶಿಸಿದೆ.

ಪ್ರಕರಣವೇನು?: 'ಮೆಸರ್ಸ್ ಐಬಿ ಟ್ರ್ಯಾಕ್ ಸಲ್ಯೂಶನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ' ತಾನು ರಫ್ತು ಮಾಡಬೇಕಿದ್ದ ಸರಕಿನ ಕಂಟೇನರ್‌ಗಳಿಗೆ ಅಳವಡಿಸುವ ಎಲೆಕ್ಟ್ರಾನಿಕ್ ಬೀಗಗಳನ್ನು (ಈ-ಸೀಲ್) ದುರುಪಯೋಗಪಡಿಸಿಕೊಂಡಿದೆ' ಎಂದು ಆರೋಪಿಸಿ ಬೆಂಗಳೂರು ವಲಯದ ಕಂದಾಯ ವಿಚಕ್ಷಣಾ ವಿಭಾಗದ ಅಧಿಕಾರಿ ಇಂದಿರಾ ನಗರದ ಪೊಲೀಸ್ ಠಾಣೆಯಲ್ಲಿ 2019ರ ಜುಲೈ 16ರಂದು ದೂರು ದಾಖಲಿಸಿದ್ದರು. ಪ್ರಕರಣದಲ್ಲಿ ಡೇವಿಡ್ ಅವರನ್ನೂ ಆರೋಪಿಯನ್ನಾಗಿ ಹೆಸರಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ನಾಲ್ವರು ಸಮುದ್ರಪಾಲು: ಇಬ್ಬರ ಮೃತದೇಹ ಪತ್ತೆ

ಕುಮಟಾ (ಉತ್ತರ ಕನ್ನಡ): ತಾಲ್ಲೂಕಿನ ಬಾಡದ ಬಳಿ ಶನಿವಾರ ಸಮುದ್ರಕ್ಕಿಳಿದ ನಾಲ್ವರು ಪ್ರವಾಸಿಗರು, ಅಲೆಗಳ ಸೆಳೆತಕ್ಕೆ ಕೊಚ್ಚಿಕೊಂಡು ಹೋಗಿದ್ದಾರೆ. ಅವರಲ್ಲಿ ಇಬ್ಬರ ಮೃತದೇಹಗಳು ಸಿಕ್ಕಿದ್ದು, ಇನ್ನಿಬ್ಬರಿಗೆ ಹುಡುಕಾಟ ಮುಂದುವರಿದಿದೆ.

ಮೃತರನ್ನು ಬೆಂಗಳೂರಿನ ಕಸ್ತೂರಬಾ ನಗರದ ಅರ್ಜುನ್ (23, ಪೀಣ್ಯದ ಚೈತ್ರಶ್ರೀ (27) ಎಂದು ಗುರುತಿಸಲಾಗಿದೆ. ರಾಜಾಜಿನಗರದ ತೇಜಸ್.ಡಿ (22) ಹಾಗೂ ಕನಕಪುರ ರಸ್ತೆಯ ಕಿರಣಕುಮಾರ (27) ಎಂಬುವವರಿಗಾಗಿ ಶೋಧ ನಡೆಸಲಾಗುತ್ತಿದೆ. ಅವರು ಬೆಂಗಳೂರಿನ ಲೆಕ್ಕ ಪರಿಶೋಧನಾ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿದ್ದರು. ಶನಿವಾರ ಬೆಳಿಗ್ಗೆ 2 ಬಸ್‌ಗಳಲ್ಲಿ ಸುಮಾರು 85 ಮಂದಿ ಬಾಡದ ಸಿಲ್ವರ್ ಸ್ಯಾಂಡ್ ಬೀಚ್ ರೆಸಾರ್ಟ್‌ಗೆ ಬಂದಿದ್ದರು. ಅವರಲ್ಲಿ ನಾಲ್ವರು ಮಧ್ಯಾಹ್ನ ಊಟದ ಸಮಯದಲ್ಲಿ ಫೋಟೊ ತೆಗೆಯಲು ನೀರಿಗಿಳಿದಾಗ ಅವಘಡ ನಡೆದಿದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

₹ 44.97 ಲಕ್ಷ ಮೌಲ್ಯದ ಚಿನ್ನ ವಶ

ದೇವನಹಳ್ಳಿ: ತಾಲ್ಲೂಕಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದುಬೈನಿಂದ ಬಂದಿದ್ದ ಪ್ರಯಾಣಿಕರೊಬ್ಬರು ಅಕ್ರಮವಾಗಿ ಸಾಗಿಸುತ್ತಿದ್ದ ಪೇಸ್ಟ್ ರೂಪದ 881.9 ಗ್ರಾಂ ಚಿನ್ನವನ್ನು ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಶನಿವಾರ ದುಬೈನಿಂದ ಆಗಮಿಸಿದ ಪ್ರಯಾಣಿಕರನ್ನು ತಪಾಸಣೆ ನಡೆಸಲಾಯಿತು. ಅಕ್ರಮವಾಗಿ ಚಿನ್ನ ಸಾಗಣೆ ಮಾಡುತ್ತಿದ್ದ ಪ್ರಕರಣ ಪತ್ತೆಯಾಗಿದೆ. ಪ್ರಯಾಣಿಕನಿಂದ ವಶಕ್ಕೆ ಪಡೆದ ಚಿನ್ನದ ಒಟ್ಟು ಮೌಲ್ಯ ₹ 44.97 ಲಕ್ಷವಾಗಿದೆ. ಪ್ರಕರಣ ದಾಖಲಿಸಿಕೊಂಡಿದ್ದು ತನಿಖೆ ಪ್ರಗತಿಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆ್ಯಸಿಡ್ ಎರಚಿದ ಆರೋಪ: ಮಹಿಳೆ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: 'ಅಪಾರ್ಟ್‌ಮೆಂಟ್‌ನ ನೆಲಮಾಳಿಗೆಯಲ್ಲಿ (ಬೇಸ್‌ಮೆಂಟ್) ನಿಲ್ಲಿಸಿದ್ದ ವಾಹನದ ಮೇಲೆ ಆ್ಯಸಿಡ್ ಎರಚಿ ಹಾನಿ ಉಂಟು ಮಾಡಿದ್ದಾರೆ' ಎಂಬ ಆರೋಪ ಹೊತ್ತ ಮಹಿಳೆಯ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿಚಾರಣೆಯನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಕುರಿತಂತೆ ಶಿವಾನಂದ ನಗರದ ಆದಿತ್ಯ ಸ್ವಾಯೆ ಅಪಾರ್ಟ್‌ಮೆಂಟ್‌ನ ಎಕ್ಸಿಕ್ಯುಟಿವ್ ಬ್ಲಾಕ್‌ನಲ್ಲಿ ವಾಸವಿರುವ 37 ವರ್ಷದ ರಿಚಾ ಸಿಂಗ್ ಚಿತ್ರಾಂಶಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ನೆಲಮಾಳಿಗೆಯಲ್ಲಿ ನಿಲ್ಲಿಸಲಾದ ವಾಹನದ ಮೇಲೆ ರಿಚಾ ಸಿಂಗ್ ಆ್ಯಸಿಡ್ ಎರಚಿದ್ದಾರೆ ಎಂಬುದು ಪ್ರಶ್ನಾರ್ಹವಾಗಿದೆ. ತನಿಖೆಯಲ್ಲಿ ದೂರನ್ನು ಪುಷ್ಟೀಕರಿಸುವ ಯಾವುದೇ ಬಲವಾದ ಸಾಕ್ಷ್ಯಗಳಿಲ್ಲ. ಕೇವಲ ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆ ಮತ್ತು ದೂರುದಾರರ ಫಿರ್ಯಾದು ಅನುಸರಿಸಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಆದ್ದರಿಂದ, ಮೆಯೊಹಾಲ್‌ನ 43ನೇ ಎಸಿಸಿಎಂ ಕೋರ್ಟ್‌ನಲ್ಲಿ ದಾಖಲಾಗಿರುವ ಪ್ರಕರಣದ ವಿಚಾರಣೆ ರದ್ದುಗೊಳಿಸಲಾಗಿದೆ' ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

ಪ್ರಕರಣವೇನು?: ಜಗದೀಶ್ ನಗರದಲ್ಲಿರುವ ಶಿವಾನಂದ ನಗರದ ಆದಿತ್ಯ ಸ್ವಾಯೆ ಅಪಾರ್ಟ್‌ಮೆಂಟ್‌ನ ಎಕ್ಸಿಕ್ಯುಟಿವ್ ಬ್ಲಾಕ್‌ನ 306ನೇ ಸಂಖ್ಯೆಯ ಫ್ಲ್ಯಾಟ್‌ನಲ್ಲಿ ರಿಚಾ ಸಿಂಗ್ ಚಿತ್ರಾಂಶಿ ವಾಸವಿದ್ದಾರೆ. ಇವರ ವಿರುದ್ಧ ಇದೇ ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘದ ಅಧ್ಯಕ್ಷರಾದ ಸಂತೋಷಿ ಪ್ರಸಾದ್ ಪೊಲೀಸರಿಗೆ ದೂರು ನೀಡಿದ್ದರು. 'ನೆಲಮಾಳಿಗೆಯಲ್ಲಿ ನಿಲ್ಲಿಸಿದ್ದ ನನ್ನ ವಾಹನದ ಮೇಲೆ ಆ್ಯಸಿಡ್ ಎರಚಿ ಹಾನಿಗೊಳಿಸಿದ್ದಾರೆ' ಎಂದು ಆರೋಪಿಸಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ಮಾರತ್‌ಹಳ್ಳಿ ಉಪ ವಿಭಾಗದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಲಯ ರಿಚಾ ಸಿಂಗ್ ಅವರಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ರಿಚಾ ಸಿಂಗ್ ಹೈಕೋರ್ಟ್ ಮೆಟ್ಟಿಲೇರಿದ್ದರು. ರಿಚಾ ಸಿಂಗ್ ಪರ ವಕೀಲೆ ಸುಮಂಗಲಾ ಐ. ಗಚ್ಚಿನಮಠ ವಾದ ಮಂಡಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Our clients intend to purchase the schedule mentioned property from its absolute owner **Dr. A. R. Sathyanarayana Moorthy,** aged about 78 years, S/o. Late. A. Ramachandra Setty, R/at No. 254, 44th "A" Cross Road, 9th Main, 5th Block, Jayanagara,shakambari nagra Ward No.179, Bengaluru – 560 041. The public are hereby given notice that any person/s claiming any right, title or interest of any nature or having any lien, charge or enforceable right in respect of the schedule property or anybody having objection to the transaction may put forth their claims in writing with the undersigned together with supporting documents within 15 days from this date, failing which it will be presumed that no valid claims or objections subsist against the said person and the Schedule Property is free from all encumbrances.

SCHEDULE PROPERTY

All that piece and parcel of residential house bearing No. 254, New Municipal No. 9, previously Corporation No. 717 (Old No. 254-9), situated at 44th "A" Cross Road, 5th Block, Jayanagara, Bangalore-560041, Measuring EAST to WEST: 15.24 meters (50 feet) and NORTH to SOUTH: 22.86 meters (75 feet), in all measuring 348.38 Square Meters (3750 Square feet), consisting of residential house measuring 2300 Square feet of built-up area, within the administrative jurisdiction of Bruhat Bengaluru Mahanagara Palike, Ward No.179 , shakambari nagara, having assigned P.I.D. No. 58-128-9 and bounded on the; **EAST BY:** Property bearing No. 253; **WEST BY:** Property bearing No. 255; **NORTH BY:** Property bearing No. 248 and 249; and **SOUTH BY:** 44th "A" Cross Road; Together with all rights, hereditaments and appurtenances above and beneath the schedule property.

D.R.P.Babu & Associates
Advocates,
No.87, "Shreshta Bumi",
U-203, 2nd Floor,
K.R.Road, Bangalore-04.
Mobile Nos: 99001 76271
98457 12345
Place: BANGALORE
Date: 24/06/2022

ROUNAQH

PERSONAL

Change of Name

14880099K SEP/DSR KAMAL 2ATC Mother Name records UGANTI Instead of UGANTI DEVI Notary KV Mani, Bangalore

JOSEPH RAVI C. from 100 feet Road, #318, Vidyanagar, Mandya-571401. have Changed my Daughter Name from Monika.J to VEDIKA VINITHA RAJ Vide Affidavit Dated 01-06-2017 Before Notary. M.Shiva Shankar Swamy, Mandya.

DIGEMBER SINGH F/o 14868688N-Hav- MUKESH KUMAR. R/a Manpur, Palwal, Haryana changed name form DIGEMBER SINGH to DIGAMBAR notary K.V.Mani Bangalore.

JC670780L NB/SUB LAMAKHADE ASHOK LAXMAN 2ATC Mother Name Records KAMAL instead of KAMAL LAXMAN LAMKHADE, Notary KV Mani

I, SIMA. S D/o. Abani Sarma residing at No.38, C Block, Shrushti Layout, Behind Om Shakti Temple, Basavanapura Man road, K.R. Puram, Bengaluru-560036 have changed my name from DULU MONI DEVI to SIMA. S vide affidavit dated 28/12/2021 before notary Umamaheswary M.N., Bangalore.

Lost

LOSS OF DOCUMENT

That our member **Smt S.Narmada** has approached for loan against the following schedule property and further she has represented that her **original Sale Deed has been misplaced** for which she has taken the certified copy of the same and all other property papers stands in the name of Smt.S.Narmada. The property will be Mortgaged to **THE BHARAT CO-OPERATIVE BANK LTD, SCHEDULE OF THE PROPERTY**

All the piece and parcel of **site No.71 MUDA PID No.59993 Heritage Nagara Layout Bandipalya and Uttanahalli, Mysore** measuring East to West **39.4 feet** North to South **59.0 feet totally 2325 sq. feet** and bounded as follows. **East by:**Road, **West by:** Housing Society Site. **North by:** Site No.70 **South by:** Road, Any persons having objections against the said transactions with regard to the aforesaid property or the documents thereof or against the owner of objecting to such loan/ mortgage should register in the name of The Bharath Co-operative Bank their claims with documentary evidence with the undersigned within 15 days of the issuance of this public notice after which no claims will be entertained as to any nature of dispute or claim against our borrower for mortgage of the property and/or exercise any right title or claim over the said property on any account whatsoever.

THE BHARAT CO-OPERATIVE BANK LTD., #30, 15 Cross, 3 Block, Jayanagar, Bangalore-11 Ph No.26632783, 26633566. **Email :** ceo@bcbbank.co

EDUCATION CORNER ಕ್ಲಾಸಿಫೈಡ್ಸ್

Golden opportunity for SSLC / PUC passed student's ...
SIDDAGANGA INSTITUTE OF PARAMEDICAL SCIENCES
(Recognised by Ministry of Medical Education, Govt of Karnataka)
43, Narasimhaswamy Layout, Service Road, Near Laggere Last Bus Stop, Laggere, Bengaluru-560058
ADMISSIONS ARE OPEN 2022-2023
JOB ORIENT DIPLOMA IN PARAMEDICAL COURSES
LABORATORY / RADIOLOGY / DIALYSIS
OPERATION THEATER / OPHTHALMIC
Eligibility & Duration: 3 years for SSLC & 2 years for PUC (Science)
For admission contact: 9844068838 / 9036181812
SGGNG-22301

HEARTY CONGRATULATIONS !!
CMR NATIONAL PU COLLEGE BANGALORE
FOR SECURING 94% in PCMB 2nd PU
MEHWISH FATHMA
BEST WISHES FROM : GRAND FATHER : GULAM MAHMOOD LECTURER (RETIRED) & RELATIVES

R.E.S. POLYTECHNIC
Recognised by Govt. of Karnataka & Approved by AICTE
ADMISSIONS FOR 10th PASS or PUC FAIL / PASS
♦ Electrical & Electronics ♦ Computer Science
♦ Civil Engineering ♦ Mechanical Engineering
PUC Pass Join 2 yrs Diploma Engineering
PUC Fail Join 3 yrs Diploma Engineering
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-22307

NARGUND GROUP OF INSTITUTIONS
ADMISSION OPEN FOR 2022-2023
+91 8026720604 | +91 9886201746
+91 7019425622 | +91 9448270604
office@nargund.edu.in
www.nargund.edu.in
2nd main, Dattatreyanagar, BSK 3rd stage, Bangalore-85
BANGALORE CAMPUS
Nargund College of Pharmacy — B. Pharm | D. Pharm | Pharm. D M. Pharm | Ph. D
Nargund College of Physiotherapy — Bachelor of Physiotherapy
Nargund Independent PU College — PCMB | HEBA
KOPPAL CAMPUS
Dr. Gurachar Nargund College of Pharmacy — B. PHARM | D. PHARM
Bheemajja PU College — PCMB | HEBA

AUTOMOTIVE

Four Wheelers Selling

Others

VEHICLE FOR SALE (SCHOOL BUS)- SWARAJ MAZDA-2012. 32-SEATER, GOOD CONDITION. CONTACT: 080-26396720/ 9343738553

SALVAGE QUOTATIONS required for burnt vehicle without RC KA04 MR 1062/ Renault Kwid/ 2016. Contact: 9620666715

Hyundai

ACCIDENT HYUNDAI Creta 1.6 CRDI AutoSX+ for sale Without RC; KA02MN3989; Mfg:03/2018; Vehicle is at Blue Hyundai Mysore Road, Bengaluru, Mob:9845360007; please quote your offer to New India Assurance, Anandrao Circle, Bengaluru, on or before 04.07.2022

ACCIDENT VEHICLE: KA-51-MM-1182 Hyundai Verna Diesel 2018, Without RC, Send Quotation- gkmadhu@hotmail.com gkmadhu97@gmail.com 9632029798 Last date 4.7.2022

Maruti

ALTO LXI, 2012 Model, 82,575 KMS, Single Owner, Well-maintained, Very Good Condition, Immediate Sale. Srinivas-9900966333

BUSINESS

Business to Business

Business

HIGH RETURN 100% safe INVESTMENT OPPORTUNITY Min 1 Cr and above. Contact: 7676253631

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

Business Offers

Business Centre

RUNNING HOTEL Available For RENT, 1500 Sqft. Ground Floor, Suitable For HOTEL Longford Road, Opposite Hockey Stadium, Shanthinagar, Bangalore-27 Call 9731395308, 9538628390.

Finance

FINANCE AGAINST Land & Building Properties Industries Schools Hospitals Projects & NRI Funds.7358729820

General

RUNNING BAR (CL9) FOR LEASE (ARAKERE, Bannerghatta Road) with MRP Counter, 2 Dine, Terrace Garden &.Kitchen Contact: 8904522650

Machinery & Tools

DIES USED for Manufacturing EI Lamination Cores upto type 100 for sale Contact: 9980801474 Bangalore

MORE Classifieds IN SUPPLEMENT

ಫೆಬ್ರುವರಿಯಿಂದೀಚೆಗೆ ಕಲಬುರಗಿಯಲ್ಲಿ ಮೂವರು ನರೇಗಾ ಕಾರ್ಮಿಕರ ಸಾವು

ಕೆಂಡದಂಥ ಬಿಸಿಲಲ್ಲೇ ಖಾತ್ರಿ ಕೆಲಸ!

• ಮನೋಜಕುಮಾರ್ ಗುದ್ದಿ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕೆಂಡದಂಥ ಬಿಸಿಲಿನ ಮಧ್ಯೆಯೇ ಹೊಟ್ಟೆಪಾಡಿಗಾಗಿ ಕಾರ್ಮಿಕರು ಉದ್ಯೋಗ ಖಾತ್ರಿ ಕೆಲಸವನ್ನು ಮಾಡಬೇಕಾದ ಅನಿವಾರ್ಯತೆ ಇದೆ.

ಫೆಬ್ರುವರಿಯಿಂದ ಈವರೆಗೆ ಕಲಬುರಗಿ ಜಿಲ್ಲೆಯ ವಿವಿಧೆಡೆ ಕೆಲಸದ ಸ್ಥಳದಲ್ಲಿ ಮೂವರು ಕೂಲಿ ಕಾರ್ಮಿಕರು ಮೃತಪಟ್ಟಿದ್ದಾರೆ. ಕೆಲಸ ನಡೆಯುವ ಸ್ಥಳದಲ್ಲಿ ಸಂಬಂಧಿಸಿದ ಗ್ರಾಮ ಪಂಚಾಯಿತಿಯು ಟೆಂಟ್ ಹಾಕಿಸಿ ಸೂಕ್ತ ನೆರಳಿನ ವ್ಯವಸ್ಥೆಯ ಜೊತೆಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಬೇಕು. ಕೂಲಿ ಕೆಲಸಕ್ಕೆ ಬಂದ ಮಹಿಳೆಯರೊಂದಿಗೆ ಇರುವ ಮಕ್ಕಳಿಗೆ ಹಾಲು, ಬಿಸ್ಕತ್ ವ್ಯವಸ್ಥೆ ಮಾಡಬೇಕು. ಜೊತೆಗೆ ವೈದ್ಯಕೀಯ ಕಿಟ್ ಇಡಬೇಕು ಎಂಬುದು ನಿಯಮ. ಆದರೆ, 'ಪ್ರಜಾವಾಣಿ' ನರೇಗಾ ಕೆಲಸ ನಡೆಯುವ ಸ್ಥಳಗಳಿಗೆ ಭೇಟಿ ನೀಡಿದಾಗ ನೀರು, ನೆರಳಿನ ವ್ಯವಸ್ಥೆಯನ್ನೂ ಮಾಡದೇ ಇರುವುದು ಕಂಡುಬಂತು.

60 ದಾಟಿದ ವೃದ್ಧರಿಗೆ ಕಡಿಮೆ ಶ್ರಮದ ಕೆಲಸ ಕೊಡಬೇಕು. ಆದರೆ, ಯುವಕರು ಮಾಡುವ ತಗ್ಗು ತೋಡುವ ಕೆಲಸವನ್ನೇ ಹಿರಿಯರೂ ಮಾಡಬೇಕಿದೆ. ನಿಗದಿತ ಅಳತೆಯ ತಗ್ಗು ತೋಡದಿದ್ದರೆ ಕಡಿಮೆ ಕೂಲಿ ನೀಡುವುದಾಗಿ ಬೆದರಿಸುತ್ತಾರೆ ಎಂಬ ಆರೋಪಗಳೂ ಇವೆ.

ಚಿತ್ತಾಪುರ ತಾಲ್ಲೂಕಿನ ಹಲಕರ್ಟಿಯ ಮಲ್ಲಣ್ಣ ಇಸಬಾ (68), ಆಳಂದ ತಾಲ್ಲೂಕು ರುದ್ರವಾಡಿಯ ಸೂರ್ಯಕಾಂತ ಕಲ್ಯಾಣಿ ಪಂಚಾಳ (42) ಮತ್ತು ಶಹಾಬಾದ್ ತಾಲ್ಲೂಕು ಹೊನಗುಂಟಾ ಗ್ರಾಮದ ಶಂಕರ ಸಾಯಿಬಣ್ಣ (37) ಕೆಲಸ ಮಾಡುವ ಸಂದರ್ಭದಲ್ಲೇ ಮೃತಪಟ್ಟಿದ್ದಾರೆ.

'ಶಂಕರ ಅವರ ಸಾವಿಗೆ ಹೃದಯಾಘಾತವೇ ಕಾರಣ ಎಂಬುದು ಅವರ ಮರಣೋತ್ತರ ಪರೀಕ್ಷೆಯಿಂದ ಗೊತ್ತಾಗಿದೆ' ಎಂದು ವೈದ್ಯ ಡಾ. ಬೀರನಾಥ ತಿಳಿಸಿದ್ದಾರೆ. 'ಸೂರ್ಯಕಾಂತ ಕಲ್ಯಾಣಿ ಪ್ರಜ್ಞೆ ತಪ್ಪಿ ಕುಸಿದು ಬಿದ್ದರು' ಎಂದು ವೈದ್ಯರು ತಿಳಿಸಿದ್ದಾರೆ. ಮಲ್ಲಣ್ಣ ಇಸಬಾ ಅವರ ಮರಣೋತ್ತರ ಪರೀಕ್ಷೆಗೆ ಕುಟುಂಬದವರು ಒಪ್ಪಲಿಲ್ಲ.

'ಕೆಲಸ ನಡೆಯುವ ಸ್ಥಳಗಳಲ್ಲಿ ಆಗಾಗ ಕೂಲಿಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಿದರೆ ಅನುಕೂಲವಾಗುತ್ತದೆ. ನೀರು ಮತ್ತು ನೆರಳಿನ ವ್ಯವಸ್ಥೆ ಮಾಡಬೇಕು. ನರೇಗಾ ಅಧಿಕಾರಿಗಳು ಟೆಂಟ್, ಕುಡಿಯುವ ನೀರಿನ ಬಿಲ್ ಸೇರಿಸಿಯೇ ಅಂದಾಜು ಪಟ್ಟಿ ತಯಾರಿಸಿರುತ್ತಾರೆ. ಆದರೂ, ಕನಿಷ್ಠ ಸೌಲಭ್ಯ ಕಲ್ಪಿಸುವುದಿಲ್ಲ' ಎಂದು ಮಲ್ಲಣ್ಣ ಇಸಬಾ ಅವರ ಸಂಬಂಧಿ ಈರಣ್ಣ ಇಸಬಾ ಬೇಸರ ವ್ಯಕ್ತಪಡಿಸಿದರು.

ಕಲಬುರಗಿ ತಾಲ್ಲೂಕಿನ ಹೊನ್ನಕಿರಣಗಿ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಕೆಲಸ ಇತ್ತೀಚೆಗೆ ನಡೆಯಿತು

ಕಾರ್ಮಿಕರಿಗೆ ಇ–ಹಾಜರಾತಿ ಕಿರಿಕಿರಿ

ಒಂದನೇ ಪುಟದಿಂದ...

ಕಾರ್ಮಿಕರಿಗೆ ಆಗುತ್ತಿರುವ ಸಮಸ್ಯೆಯ ಬಗ್ಗೆ ಆಯಾ ಜಿಲ್ಲಾ ಪಂಚಾಯಿತಿಗಳು ಕೂಡ ಸರ್ಕಾರಕ್ಕೆ ಮಾಹಿತಿ ರವಾನಿಸಿವೆ. ಆದರೆ, ಸರ್ಕಾರ ಇದುವರೆಗೆ ಕಿವಿಗೊಟ್ಟಿಲ್ಲ. ಪರಿಣಾಮ ಕಾರ್ಮಿಕರು ಕೆಲಸಕ್ಕೆ ಬರುತ್ತಿಲ್ಲ.

ನರೇಗಾ ಯೋಜನೆಯಡಿ ಶೇ 50 ರಿಂದ 60ರಷ್ಟು ಕಾಮಗಾರಿ ಏಪ್ರಿಲ್‌ನಿಂದ ಜೂನ್‌ವರೆಗೆ ಕೈಗೆತ್ತಿಕೊಳ್ಳಲಾಗುತ್ತದೆ. ಈ ಅವಧಿಯಲ್ಲಿ ಬಿಸಿಲು ಇರುವುದರಿಂದ ಕೆರೆ, ಕಟ್ಟೆಗಳು ಬತ್ತಿಹೋಗಿರುತ್ತವೆ. ಹೂಳು ತೆಗೆಯುವುದು ಸುಲಭ ಎಂಬ ಕಾರಣಕ್ಕಾಗಿ ವರ್ಷದ ಹೆಚ್ಚಿನ ಕೆಲಸ ಈ ಅವಧಿಯಲ್ಲೇ ನಡೆಯುತ್ತದೆ. ಆದರೆ, ಈ ವರ್ಷ ನಿರಾಶಾದಾಯಕವಾಗಿದೆ. ವರ್ಷಕ್ಕೆ ಸರಾಸರಿ 12ರಿಂದ 13 ಕೋಟಿ ಮಾನವ ದಿನಗಳು ಸೃಜನೆಯಾಗುತ್ತವೆ. ಪ್ರಸಕ್ತ ಸಾಲಿನಲ್ಲಿ ಇದುವರೆಗೆ 3 ಕೋಟಿ ಮಾನವ ದಿನಗಳಷ್ಟೇ ಸೃಜನೆಯಾಗಿದ್ದು, ಶೇ 25ರಷ್ಟೇ ಪ್ರಗತಿ ಸಾಧ್ಯವಾಗಿದೆ.

ಅತಿ ಹೆಚ್ಚು ಬಿಸಿಲಿರುವ ಜಿಲ್ಲೆಗಳಲ್ಲಿ ಈ ಹಿಂದೆ ಬೆಳಿಗ್ಗೆ 6ರಿಂದ ಮಧ್ಯಾಹ್ನ 12ರವರೆಗೆ ಕೆಲಸ ನಿರ್ವಹಿಸಲು ಕಾರ್ಮಿಕರಿಗೆ ಅವಕಾಶ ಮಾಡಿಕೊಡಲಾಗಿತ್ತು. ಬಿಸಿಲು ನೆತ್ತಿಗೇರುತ್ತಿದ್ದಂತೆ ಅವರು ಕೆಲಸ ಮುಗಿಸಿಕೊಂಡು ಮನೆ ಸೇರುತ್ತಿದ್ದರು. ಆದರೆ, ಬದಲಾದ ಸಮಯ ಬೇಸಿಗೆಯಲ್ಲಿ ಪ್ರತಿಕೂಲ ಆಗಿರುವುದರಿಂದ ಕಾರ್ಮಿಕರು ಕೆಲಸದ ಕಡೆಗೆ ಮುಖ ಮಾಡುತ್ತಿಲ್ಲ.

'ಪಾರದರ್ಶಕತೆ ತರಬೇಕು ಎನ್ನುವ ಸದುದ್ದೇಶದಿಂದ ಕೇಂದ್ರ ಸರ್ಕಾರ ಎನ್.ಎಂ.ಎಂ.ಎಸ್. ಜಾರಿಗೆ ತಂದಿದೆ. ಆದರೆ, ಬಿಸಿಲು ಹೆಚ್ಚಿರುವ ಜಿಲ್ಲೆಗಳ ಕಾರ್ಮಿಕರಿಗೆ ಇದರಿಂದ ಬಹಳ ಸಮಸ್ಯೆಯಾಗುತ್ತಿದೆ. ಕೆಲ ಜಿಲ್ಲೆಗಳಲ್ಲಿ ಕೆಂಡದಂತಹ ಬಿಸಿಲಿನಲ್ಲಿ ಕೆಲಸ ಮಾಡುವಾಗ ಆಯಾಸ, ಬಳಲಿಕೆ, ಆರೋಗ್ಯ ಸಮಸ್ಯೆಯಿಂದ ಮೂರ್ನಾಲ್ಕು ಕಾರ್ಮಿಕರು ಮೃತಪಟ್ಟಿದ್ದಾರೆ. ಸಹಜವಾಗಿಯೇ ಕಾರ್ಮಿಕರು ಆತಂಕದಲ್ಲಿದ್ದಾರೆ. ಯೋಜನೆಯಿಂದ ದೂರ ಉಳಿಯಲು ಇದೂ ಕಾರಣ. ಬೇಸಿಗೆಯಲ್ಲಾದರೂ ನಿಯಮದಲ್ಲಿ ಬದಲಾವಣೆ ತರುವುದು ಸೂಕ್ತ' ಎನ್ನುತ್ತಾರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹಿರಿಯ ಅಧಿಕಾರಿಗಳು.

'ಸ್ಥಳೀಯವಾಗಿ ಸಂಪನ್ಮೂಲ ಸೃಷ್ಟಿಸಿ, ಸ್ಥಳೀಯರಿಗೆ ಉದ್ಯೋಗ ಕೊಟ್ಟು ವಲಸೆ ತಡೆಯುವುದು ನರೇಗಾ ಮುಖ್ಯ ಉದ್ದೇಶ. ಆದರೆ, 'ಸೋಷಿಯಲ್ ಸೆಕ್ಯೂರಿಟಿ' ಮತ್ತು 'ಕ್ವಾಲಿಟಿ ವರ್ಕ್' ಒಟ್ಟಿಗೆ ಮಾಡಲು ಸಾಧ್ಯವಾಗುವುದಿಲ್ಲ. ಈ ಯೋಜನೆಯಡಿ 50 ವರ್ಷ ಮೇಲಿನವರೆಲ್ಲ ಕೆಲಸ ಮಾಡುತ್ತಾರೆ. ಶ್ರಮದಾಯಕ ಕೆಲಸ ಇರುವುದರಿಂದ ಕಟ್ಟುಪಾಡು ವಿಧಿಸಿದರೆ ಕಷ್ಟವಾಗುತ್ತದೆ' ಎಂದು ತಿಳಿಸಿದರು.

> **ಉರಿ ಬಿಸ್ಲಾಗ ಮನ್ಯಾಗ ಕೂರಕ್ಕ ಆಗಲ್ಲ. ಬೆಂಕಿ ಉಗುಳೋ ಬಿಸ್ಲಾಗ ಕೆಲ್ಸ ಮಾಡ್ಲಾಕ ಆಗ್ತದ್ಯಾನರಿ. ಬೆಳ್ಗಿ, ಸಂಜಿ ಹೊತ್ತು ಛಾಳ್ ಉತ್ಮ**
> **ಹುಲುಗಪ್ಪ,** ನರೇಗಾ ಕಾರ್ಮಿಕ, ವಿಜಯನಗರ

> **ದಿನಕ್ಕೆ ಎರಡು ಬಾರಿ ಇ-ಹಾಜರಾತಿ ಪಡೆಯುವ ನಿಯಮ ರದ್ದುಗೊಳಿಸಿ, ಈ ಹಿಂದಿನಂತೆ ನಿರ್ದಿಷ್ಟ ಅಳತೆಯ ಕೆಲಸ ಮಾಡಲು ಬಿಡಬೇಕು**
> **ಭಾಸ್ಕರ್,** ಕಾರ್ಮಿಕ ಮುಖಂಡ

ನರೇಗಾಕ್ಕೆ ನಾರಿಶಕ್ತಿ ಬಲ

• ಸಂಧ್ಯಾ ಹೆಗಡೆ

ಮಂಗಳೂರು: ದುರಿತ ಕಾಲದಲ್ಲಿ ದುಡಿಮೆಗೆ ಆಧಾರವಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಪಡೆದಿದ್ದ ವೃತ್ತಿಪರ ಉದ್ಯೋಗಿಗಳು ಕೋವಿಡೋತ್ತರ ಕಾಲದಲ್ಲಿ ಮತ್ತೆ ಹಳೆಯ ಉದ್ಯೋಗಕ್ಕೆ ಮರಳಿದ್ದಾರೆ. ಆದರೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉದ್ಯೋಗ ಕಾರ್ಡ್‌ಗಳ ಬೇಡಿಕೆ ತಗ್ಗಿಲ್ಲ.

ನರೇಗಾ ಯೋಜನೆಗೆ ನಾರಿಶಕ್ತಿಯ ಬಲ ಸೇರಿದೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಕಾರ್ಡ್ ಪಡೆಯುತ್ತಿದ್ದು, 10,419 ಹೊಸ ಕಾರ್ಡ್‌ಗಳು ವಿತರಣೆಯಾಗಿವೆ. ಜಿಲ್ಲೆಯಲ್ಲಿ ಒಟ್ಟು 1.51 ಲಕ್ಷ ಉದ್ಯೋಗ ಕಾರ್ಡ್‌ಗಳು ವಿತರಣೆಯಾಗಿವೆ.

ಕಾಮಗಾರಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಶೇ 42ರಷ್ಟು ಇತ್ತು. ಈಗ ಈ ಪ್ರಮಾಣ ಶೇ 50ರ ಸನಿಹದಲ್ಲಿದೆ. ಪರಿಣಾಮವಾಗಿ ಕಳೆದ ಸಾಲಿನಲ್ಲಿ ಜಿಲ್ಲೆಯಲ್ಲಿ 16 ಲಕ್ಷ ಮಾನವ ದಿನಗಳ ಗುರಿ ಮೀರಿ, 17.15 ಲಕ್ಷ ಮಾನವ ದಿನಗಳು ಸೃಜನೆಯಾಗಿವೆ. ಈ ವರ್ಷ ಜಿಲ್ಲಾ ಪಂಚಾಯಿತಿ 18 ಲಕ್ಷ ಮಾನವ ದಿನಗಳ ಗುರಿ ನಿಗದಿಪಡಿಸಿದೆ.

'ನಾವು ಮಹಿಳೆಯರು ಒಟ್ಟಾಗಿ ಕೆಲಸ ಮಾಡುವುದರಿಂದ ಶ್ರಮದ ದುಡಿಮೆಯಾದರೂ ದಣಿವು ಮರೆಸುತ್ತದೆ. ಕೂಲಿಯ ಮೊತ್ತ ಹೆಚ್ಚಿದ್ದು ಅನುಕೂಲವಾಗಿದೆ. ಜಾಬ್ ಕಾರ್ಡ್ ಸಿಗಲು ಸಹ ಸಮಸ್ಯೆ ಆಗಲಿಲ್ಲ' ಎನ್ನುತ್ತಾರೆ ಸುಳ್ಯದ ಕಮಲಾ ಬಾಳಿಗ.

'ಕುಟುಂಬದಲ್ಲಿ ಎಲ್ಲ ಸದಸ್ಯರಿಗೆ ಜಾಬ್ ಕಾರ್ಡ್‌ಗಳು ಸಿಗುತ್ತವೆ. ಆದರೆ, ಒಂದು ಕುಟುಂಬಕ್ಕೆ 100 ದಿನಗಳ ಉದ್ಯೋಗದ ಮಿತಿ ಇರುವುದರಿಂದ ಎಲ್ಲ ಸದಸ್ಯರು ಕಾರ್ಡ್ ಪಡೆದರೂ, ದಿನಗಳು ಹಂಚಿಕೆ ಆಗಿದ್ದರಿಂದ ಹೆಚ್ಚು ಪ್ರಯೋಜನ ಆಗಲಿಲ್ಲ' ಎಂದು ಮಂಗಳೂರು ಸಮೀಪದ ಮೂಲ್ಕಿಯ ಮಹಿಳೆಯೊಬ್ಬರು ಬೇಸರಿಸಿಕೊಂಡರು.

ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಮಂಡೆಕೋಲು ಗ್ರಾಮ ಪಂಚಾಯಿತಿಯಲ್ಲಿ ಬಸಿಗಾಲುವೆ ನಿರ್ಮಾಣದಲ್ಲಿ ಮಹಿಳೆಯರು

ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ವರ್ಷ 4,132 ಹೊಸ ಜಾಬ್ ಕಾರ್ಡ್ ವಿತರಣೆಯಾಗಿದೆ. ಉಡುಪಿ ಜಿಲ್ಲೆಯಲ್ಲಿ ಕೋವಿಡ್ ಲಾಕ್‌ಡೌನ್ ವೇಳೆ ಮಹಾನಗರ, ಹೊರರಾಜ್ಯಗಳಿಂದ ತವರಿಗೆ ಮರಳಿ ನರೇಗಾ ನೆಚ್ಚಿಕೊಂಡಿದ್ದವರು, ಕೆಲವು ಅತಿಥಿ ಶಿಕ್ಷಕರು, ಸಣ್ಣ ಕಂಪನಿಗಳ ಉದ್ಯೋಗಿಗಳು ಪುನಃ ಮೂಲ ಕೆಲಸಕ್ಕೆ ಮರಳಿದ್ದಾರೆ.

ಕೂಲಿಗಾಗಿ ತಿಂಗಳು, ಸಾಮಗ್ರಿ ವೆಚ್ಚಕ್ಕೆ ವರ್ಷ!

ಕೂಲಿಕಾರರಿಗೆ ಸಂಕಟ, ಸಾಮಗ್ರಿ ಪೂರೈಸಿದವರಿಗೆ ಇಕ್ಕಟ್ಟು

• ಚಿದಂಬರಪ್ರಸಾದ

ಹಾಸನ: ಕೂಲಿಗಾಗಿ ತಿಂಗಳು, ಸಾಮಗ್ರಿ ವೆಚ್ಚಕ್ಕಾಗಿ ವರ್ಷ ಕಾಯಿರಿ!

–ಇದು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ನರೇಗಾ ಕೂಲಿಕಾರರು ಮತ್ತು ಸಾಮಗ್ರಿ ಪೂರೈಕೆದಾರರಿಗೆ ನೀಡಿರುವ ಅಲಿಖಿತ ಸೂಚನೆ. ಕೂಲಿ ಸ್ವಲ್ಪ ತಡವಾಗಿ ಬಂದರೂ ಸಾಮಗ್ರಿ ವೆಚ್ಚಕ್ಕಾಗಿ ವರ್ಷ ಕಾಯಲೇಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ.

ರಾಜ್ಯದ ಬಹುತೇಕ ಕಡೆ ಕಳೆದ ವರ್ಷ ಬಾಕಿಯಿದ್ದ ಕಾಮಗಾರಿಗಳನ್ನು ಪೂರ್ಣಗೊಳಿಸುತ್ತಿದ್ದು, ಈ ವರ್ಷ ಕೆಲವೆಡೆ ಮಾತ್ರ ಹೊಸದಾಗಿ ಕೆಲಸ ಆರಂಭಿಸಲಾಗಿದೆ. ಅವು ಕೂಡ ತೆವಳುತ್ತಿವೆ.

ಉತ್ತರ ಕರ್ನಾಟಕ ಭಾಗದ ಕೆಲವೆಡೆ ಮಾತ್ರ ಕಾರ್ಮಿಕರ ಕೂಲಿ ಮತ್ತು ಸಾಮಗ್ರಿ ಪೂರೈಕೆದಾರರಿಗೆ ಸಕಾಲದಲ್ಲಿ ಹಣ ಪಾವತಿಯಾದರೆ, ಉಳಿದೆಲ್ಲೆಡೆ ವಿಳಂಬವಾಗುತ್ತಿದೆ.

'ಸಾಮಗ್ರಿಗಳನ್ನು ಸರಬರಾಜು ಮಾಡಿ, ಕೆಲಸ ಮುಗಿದ ಎಂಟು ತಿಂಗಳಿನಿಂದ ಒಂದು ವರ್ಷದ ನಂತರ ಹಣ ಬಿಡುಗಡೆಯಾಗುತ್ತದೆ. ಅಲ್ಲೀವರೆಗೆ ಕಾಯಲೇಬೇಕು' ಎಂದು ಹಾಸನ ಜಿಲ್ಲೆಯ ಹಿರೀಸಾವೆಯ ನರೇಗಾ ಕಾಮಗಾರಿಗೆ ಸಾಮಗ್ರಿ ವಿತರಕ ದೇವರಾಜು ಅಸಹಾಯಕತೆ ತೋಡಿಕೊಂಡರು.

'ಕೂಲಿ ಹಂಚಿಕೆ ಮತ್ತು ಸಾಮಗ್ರಿ ಪೂರೈಕೆ ಮೊದಲಿಗಿಂತ ವಿಳಂಬವಾಗುತ್ತಿದೆ. ತಂತ್ರಾಂಶದಲ್ಲಿ ಸಮಸ್ಯೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಮೊದಲು ವಾರಕ್ಕೆ ಅಥವಾ 15 ದಿನಕ್ಕೆ ಸರಿಯಾಗಿ ಕೂಲಿ ಪಾವತಿಯಾಗುತ್ತಿತ್ತು. ಈಗ ಕೆಲವೊಮ್ಮೆ ಒಂದು ತಿಂಗಳಾಗುತ್ತದೆ' ಎಂಬುದು ಜಾಬ್ ಕಾರ್ಡ್ ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಹರಿಣಾಕ್ಷಿ ಅವರ ಸಂಕಟ.

'ನರೇಗಾ ಯೋಜನೆಯಡಿ ಸಕಾಲಕ್ಕೆ ಹಣ ಬಿಡುಗಡೆ ಆಗುತ್ತಿಲ್ಲ' ಎಂಬುದಕ್ಕೆ ಇವೆರಡೂ ಜ್ವಲಂತ ನಿದರ್ಶನಗಳು.

'ಯೋಜನೆಯಡಿ ಏಪ್ರಿಲ್, ಮೇ ತಿಂಗಳ ಅನುದಾನ ಇನ್ನೂ ಬಿಡುಗಡೆಯಾಗದೇ ಇರುವುದರಿಂದ ಹಣ ಪಾವತಿ ವಿಳಂಬವಾಗಿದೆ' ಎನ್ನುವುದು ಅಧಿಕಾರಿಗಳ ಮಾತು. ಎಲ್ಲೆಲ್ಲೂ ಅನುದಾನದ್ದೇ ಸಮಸ್ಯೆ.

> **ತೋಟದಲ್ಲಿ ಬದು ನಿರ್ಮಾಣ, ಹಳ್ಳದ ಕೆಲಸ ಮಾಡಿದ್ದೇನೆ. ನಿತ್ಯ ₹310 ರಂತೆ 7 ದಿನ ಕೆಲಸ ಮಾಡಿದರೆ, 20– 30 ದಿನಗಳ ನಂತರ ಖಾತೆಗೆ ಹಣ ಬರುತ್ತದೆ.**
> **ಸತೀಶ್**
> ಕಾರ್ಮಿಕ, ಹಿರೀಸಾವೆ, ಹಾಸನ ಜಿಲ್ಲೆ

> **ಉದ್ಯೋಗ ಖಾತರಿ ಅಡಿ ಕಾಮಗಾರಿಯೊಂದಕ್ಕೆ ಆರೇಳು ತಿಂಗಳ ಹಿಂದೆ ಮರಳು ಪೂರೈಸಿದ್ದೆ. ಇದುವರೆಗೆ ಹಣ ಪಾವತಿಯಾಗಿಲ್ಲ.**
> **ನಾಗರಾಜ ಎಂ.**
> ಸಾಮಗ್ರಿ ಪೂರೈಕೆದಾರ, ಹುಬ್ಬಳ್ಳಿ ತಾಲ್ಲೂಕು

ಕೇಂದ್ರ ಸರ್ಕಾರದಿಂದ ಈ ಬಾರಿಯ ಬಜೆಟ್‌ನಲ್ಲಿ ನರೇಗಾ ಯೋಜನೆಯ ಅನುದಾನವನ್ನು ಶೇ 25 ರಷ್ಟು ಕಡಿತಗೊಳಿಸಲಾಗಿದೆ. 2021–22 ರಲ್ಲಿ ದೇಶದಲ್ಲಿ ಒಟ್ಟು ₹ 1,11,170 ಕೋಟಿ ಖರ್ಚಾಗಿದ್ದರೂ, ಈ ಬಾರಿಯ ಬಜೆಟ್‌ನಲ್ಲಿ ₹73 ಸಾವಿರ ಕೋಟಿ ಅನುದಾನವನ್ನು ಮೀಸಲಿಡಲಾಗಿದೆ' ಎನ್ನುತ್ತವೆ ಮೂಲಗಳು.

ತುಮಕೂರು ಜಿಲ್ಲಾ ಪಂಚಾಯಿತಿಯಿಂದ ಕೂಲಿ ವೆಚ್ಚವು 15 ದಿನಗಳ ಒಳಗೆ ಪಾವತಿಯಾಗುತ್ತಿದ್ದು, ಸಾಮಗ್ರಿ ವೆಚ್ಚ ವಿಳಂಬವಾಗುತ್ತಿದೆ. ಕಾಮಗಾರಿ ಮುಗಿದು ತಿಂಗಳಾದರೂ ವೆಚ್ಚ ಪಾವತಿಯಾಗುತ್ತಿಲ್ಲ.

'ಗ್ರಾಮ ಪಂಚಾಯಿತಿಯಿಂದಲೇ ನಡೆಯುವ ಕಾಮಗಾರಿಗೆ ಬೇಗನೇ ಕೂಲಿ ಪಾವತಿಯಾಗುತ್ತದೆ. ಅದನ್ನು ಹೊರತುಪಡಿಸಿ, ಕಾರ್ಮಿಕರಿಗೆ ಸಂಬಂಧಿಸಿದ ಕಾಮಗಾರಿಗಳ ಕೂಲಿ ಹಣದ ಪಾವತಿ ವಿಳಂಬವಾಗುತ್ತಿದೆ' ಎಂದು ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ನರೇಗಾ ಕಾರ್ಮಿಕರಾದ ನಿಂಗಮ್ಮ ಸವಣೂರ ಆರೋಪಿಸುತ್ತಾರೆ.

'ಕೆಲ ತಿಂಗಳುಗಳ ಹಿಂದೆ ಸಾಮಗ್ರಿ ಪೂರೈಕೆ ಮತ್ತು ಕೂಲಿ ಹಣ ಪಾವತಿಯಲ್ಲಿ ವ್ಯತ್ಯಯವಾಗಿತ್ತು. ಇದೀಗ, ಕಾಮಗಾರಿಯ ಪ್ರಗತಿ ಆಧರಿಸಿ ಸಕಾಲದಲ್ಲಿ ಕಾರ್ಮಿಕರ ಹಾಗೂ ಸಾಮಗ್ರಿ ಪೂರೈಕೆದಾರರ ಹಣ ಪಾವತಿಸಲಾಗುತ್ತಿದೆ' ಎಂದು ಹುಬ್ಬಳ್ಳಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರ ಕಂದಕೂರ ತಿಳಿಸಿದ್ದಾರೆ.

'ಮಾರ್ಚ್ ತಿಂಗಳ ಕೂಲಿ ಹಣವನ್ನು ಇನ್ನೂ ನೀಡಿಲ್ಲ, ಎರಡು ತಿಂಗಳಿಂದ ಕಾಮಗಾರಿಗಳಿಗೆ 'ನ್ಯಾಷನಲ್ ಮೊಬೈಲ್ ಮಾನಿಟರಿಂಗ್ ಸಿಸ್ಟಂ' (ಎನ್.ಎಂ.ಎಂ.ಎಸ್) ತೆಗೆಯದೇ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಕೆಲಸ ಮಾಡಿರುವ ಕೆಲ ಕಾಮಗಾರಿಗಳಿಗೂ ಎನ್.ಎಂ.ಎಂ.ಎಸ್ ನೀಡದೇ ಪಂಚಾಯಿತಿಗಳಿಗೆ ಅಲೆಯುವಂತಾಗಿದೆ. ಮೇಟಿಗಳಿಗೆ ನೀಡುವ ಶೇ 5 ರಷ್ಟು ಹಣವನ್ನೂ ನೀಡಿಲ್ಲ. ಮತ್ತೊಂದೆಡೆ ಸಲಕರಣೆಗೆ ನೀಡುತ್ತಿದ್ದ ₹ 10 ಕೂಲಿ ಕಡಿತ ಮಾಡಿ ಸರ್ಕಾರ ಕೂಲಿಕಾರರಿಗೆ ಅನ್ಯಾಯ ಮಾಡುತ್ತಿದೆ' ಎಂದು ಮಂಡ್ಯ ಜಿಲ್ಲೆಯ ಮಳ್ಳವಳ್ಳಿ ತಾಲ್ಲೂಕಿನ ದುಗ್ಗನಹಳ್ಳಿ ಕೂಲಿಕಾರ ಮಹಿಳೆ ವರದೇವಿ ದೂರಿದ್ದಾರೆ.

ಅಪೊಲೊ ಆಸ್ಪತ್ರೆಯಿಂದ ಅರಣ್ಯ ಕಾವಲುಗಾರರಿಗೆ ಚಿಕಿತ್ಸಾ ನೆರವು

ಬೆಂಗಳೂರು: ಅರಣ್ಯ ಕಾವಲುಗಾರರಿಗೆ ಅನ್ವಯಿಸುವಂತೆ ಗುಣಮಟ್ಟದ ಚಿಕಿತ್ಸೆ ಒದಗಿಸಲು ಹಾಗೂ ಅವರ ವೈದ್ಯಕೀಯ ವೆಚ್ಚ ಭರಿಸಲು ಅಪೊಲೊ ಆಸ್ಪತ್ರೆಯು ಮುಂದಾಗಿದೆ.

ಅರಣ್ಯ ಮತ್ತು ವನ್ಯಜೀವಿಗಳ ರಕ್ಷಣೆಯಲ್ಲಿ ಮುಖ್ಯ ಪಾತ್ರವಹಿಸುವ, ಅರಣ್ಯದಲ್ಲಿ ವಾಸವಿರುವ ಸಮುದಾಯಗಳ ಆರೋಗ್ಯ ರಕ್ಷಣೆಗೆ ಒತ್ತುನೀಡಲಾಗುತ್ತದೆ ಎಂದು ಆಸ್ಪತ್ರೆ ತಿಳಿಸಿದೆ.

ಅಪೊಲೊ ಆಸ್ಪತ್ರೆಯ ಸಿಎಸ್‌ಆರ್ ಚಟುವಟಿಕೆ ಉಪಾಧ್ಯಕ್ಷೆ, ಯುಆರ್ ಲೈಫ್‌ನ ಸ್ಥಾಪಕಿ ಉಪಾಸನಾ ಕಮಿನೇನಿ ಕೊನಿಡೆಲ ಅವರು ಈ ಕುರಿತು ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ವನ್ಯಜೀವಿಗಳ ಜೊತೆಗಿನ ಸಂಘರ್ಷದ ವೇಳೆ ಗಾಯಗೊಳ್ಳುವ ಅರಣ್ಯ ಕಾವಲುಗಾರರಿಗೆ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸಲಾಗುವುದು. ಅರಣ್ಯ ಸಂಬಂಧಿ ಚಟುವಟಿಕೆಗಳ ವೇಳೆ ಸಂಭವಿಸಿದ ಯಾವುದೇ ಪೆಟ್ಟು, ಗಾಯಗಳಿಗೆ ಸಂಬಂಧಿಸಿದಂತೆ ಚಿಕಿತ್ಸೆ ಒದಗಿಸಲಾಗುವುದು ಎಂದು ತಿಳಿಸಿದ್ದಾರೆ.

ಮರದ ಆಶ್ರಯ

ಗ್ರಾಮಾಂತರ ಭಾಗದ ಜನರಿಗೆ ನರೇಗಾ ನೆರವಾಗುತ್ತಿದೆ. ಈ ಬಾರಿ ಯಾವುದೇ ರೀತಿಯ ತೊಂದರೆಯಾಗದಂತೆ 15 ದಿನಗಳ ಒಳಗೆ ಕೂಲಿ ವೆಚ್ಚ ಬರುತ್ತದೆ. ಸಾಮಗ್ರಿ ವೆಚ್ಚ ಸ್ವಲ್ಪ ತಡವಾಗುತ್ತಿದೆ. ಈ ಹಿಂದೆ ಕೂಲಿ ಹಣಕ್ಕಾಗಿಯೇ ತಿಂಗಳುಗಟ್ಟಲೆ ಕಾಯಬೇಕಾಗಿತ್ತು. ಈಗ ಅದು ತಪ್ಪಿದೆ.

ಕೆಲಸದ ಸ್ಥಳದಲ್ಲಿ ನೆರಳಿನ ವ್ಯವಸ್ಥೆ ಮಾಡಿಲ್ಲ. ಮರ, ಗಿಡಗಳ ಆಶ್ರಯ ಪಡೆಯುತ್ತೇವೆ. ಉಳಿದಂತೆ ಗ್ರಾಮ ಪಂಚಾಯಿತಿಯಿಂದ ಸಹಕಾರ ಸಿಗುತ್ತಿದೆ.

ದಿಲೀಪ್
ನರೇಗಾ ಕಾರ್ಮಿಕ, ಮಾವತ್ತೂರು, ತುಮಕೂರು ಜಿಲ್ಲೆ

ಅಧಿಕಾರಿಗಳಿಗೆ ಇಚ್ಛಾಶಕ್ತಿ ಇಲ್ಲ



ಅಧಿಕಾರಿಗಳು, ಜನಪ್ರತಿನಿಧಿಗಳು ನರೇಗಾ ಹಣವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಯೋಜನೆ ಅನುಷ್ಠಾನಕ್ಕೆ ಬಂದು ಹಲವು ವರ್ಷಗಳು ಕಳೆದರೂ ಸರಿಯಾಗಿ ಅನುಷ್ಠಾನವಾಗುತ್ತಿಲ್ಲ. ಅಧಿಕಾರಿಗಳಿಗೆ ಈ ಬಗ್ಗೆ ಕಾಳಜಿ, ಇಚ್ಛಾಶಕ್ತಿಯಿಲ್ಲ.

ಕಾಮಗಾರಿ ಮಾಡದೆ ಬಿಲ್ ಮಾಡುವ ಕೆಲಸ ಮಾಡುತ್ತಿದ್ದಾರೆ. ಸಾಮಾನ್ಯ ಜನರಿಗೆ ನೆರವು ಸಿಗುತ್ತಿರುವುದು ಕಡಿಮೆಯಾಗುತ್ತಿದೆ. ಹೋರಾಟಗಳು ವ್ಯರ್ಥವಾಗುತ್ತಿವೆ. ಗ್ರಾಮಾಂತರ ಮಟ್ಟದಲ್ಲಿ ನರೇಗಾ ಯೋಜನೆ ಹಳ್ಳ ಹಿಡಿಯುತ್ತಿದೆ.

ಎಚ್.ಎ.ಜಯರಾಮಯ್ಯ, ಹೋರಾಟಗಾರ, ತುಮಕೂರು

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 26-6-1997

• ಕೇಂದ್ರದಲ್ಲಿ ಮತ್ತೆ ರೈತರ ಸರ್ಕಾರ: ಗೌಡರ ಪಣ

ಕೃಷ್ಣರಾಜ ಸಾಗರ (ಮಂಡ್ಯ ಜಿಲ್ಲೆ) ಜೂನ್ 25 – 'ಕೇಂದ್ರದಲ್ಲಿ ರೈತರ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಲು ಪಣ ತೊಟ್ಟು ಕೆಲಸ ಮಾಡುವೆ. ಇದಕ್ಕಾಗಿ ಇದೇ ಜುಲೈನಿಂದ ದೇಶದಾದ್ಯಂತ ಪ್ರವಾಸ ಮಾಡುವೆ' ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಬುಧವಾರ ಇಲ್ಲಿ ತಿಳಿಸಿದರು.

ನವೀಕರಣಗೊಂಡಿರುವ ವಿಶ್ವೇಶ್ವರಯ್ಯ ನಾಲೆಗೆ ಕೃಷ್ಣರಾಜ-ಸಾಗರದಿಂದ ನೀರು ಹರಿಸಿದ ಬಳಿಕ ಸಾರ್ವಜನಿಕ ಸಭೆಯುನ್ನುದ್ದೇಶಿಸಿ ಅವರು ಮಾತನಾಡಿದರು.

50 ವರ್ಷಗಳ ಹಿಂದೆ — ಸೋಮವಾರ, 26-6-1972

• ಹದಿನೈದು ಎಕರೆ ತರಿ ಜಮೀನು ಮಿತಿಗೆ ರಾಜ್ಯ ಸಂಸ್ಥಾ ಕಾಂಗ್ರೆಸ್ ಕರೆ

ಬೆಂಗಳೂರು, ಜೂನ್ 25 – ಹದಿನೈದು ಎಕರೆ ಸ್ಟಾಂಡರ್ಡ್ ಜಮೀನು, 75 ಎಕರೆಗಳಿಗೆ ಮೀರದಂತೆ ಖುಷ್ಕಿ ಜಮೀನು ಪರಿಮಿತಿ ಹಾಗೂ ನಗರಾಸ್ಥಿಯ ಮೇಲೆ 5 ಲಕ್ಷ ರೂ. ಪರಿಮಿತಿ ಇರಬೇಕೆಂದು ಇಂದು ಇಲ್ಲಿ ನಡೆದ ಮೈಸೂರು ಪ್ರದೇಶ ಕಾಂಗ್ರೆಸ್ (ಸಂಸ್ಥಾ) ಸಮಿತಿ ಒತ್ತಾಯ ಮಾಡಿತು. ಈ ಕ್ರಮಗಳನ್ನು ಶೀಘ್ರವಾಗಿ ಕಾರ್ಯರೂಪಕ್ಕೆ ತರಬೇಕೆಂದೂ ಸಭೆ ಒತ್ತಾಯ ಮಾಡಿತು.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜೂನ್ 26, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ತ್ರಯೋದಶಿ ಗಂ. 27-26 ನಕ್ಷತ್ರ: ಕೃತ್ತಿಕಾ ಗಂ. 13-06 ಯೋಗ: ಧೃತಿ ಗಂ. 05-53, ಕರಣ: ಗರಜೆ ಗಂ. 14-17, ಮಿಥುನ ಮಾಸದ 11 ನೇ ದಿನ.
ರಾಹುಕಾಲ: ಸಾಯಂಕಾಲ 04:30–06:00
ಸೂರ್ಯೋದಯ: 06-10 ಸೂರ್ಯಾಸ್ತ: 06-57
ಮುಸ್ಲಿಂ ದಿನಾಂಕ: 26 ಜುಲ್ಹಾಯಿದ್ ದಿನ ವಿಶೇಷ: ಪಕ್ಷ ಪ್ರದೋಷ
ಅದೃಷ್ಟ ಸಂಖ್ಯೆ: 5, 11

ಮೇಷ: ಈ ದಿನದ ನಿಮ್ಮ ನಿಯೋಜಿತವಾದ ಕಾರ್ಯ ಕಲಾಪಕ್ಕೆ ಚಿಕ್ಕ-ಪುಟ್ಟ ಅಡ್ಡಿ ಆತಂಕಗಳು ಎದುರಾಗಬಹುದು. ಆದರೇ ಈ ಕೆಲಸದಿಂದ ಹಿಂತಿರುಗುವ ಆಲೋಚನೆಗಳು ಸರಿಯಲ್ಲ. ಗಣಪತಿಯನ್ನು ಪ್ರಾರ್ಥಿಸಿ ಶುಭವಾಗುವುದು.

ವೃಷಭ: ಕೆಲವು ಸವಾಲುಗಳನ್ನು ಎದುರಿಸುವ ಸಂದರ್ಭಗಳು ನಿಮಗೆ ಎದುರಾಗಬಹುದು ಮತ್ತು ಅದರಲ್ಲಿ ನೀವು ಸಮ್ಮಿಶ್ರ ಫಲಿತಾಂಶ ಪಡೆಯುವಿರಿ. ಕುಟುಂಬದಲ್ಲಿ ಸುಖ ದುಃಖದ ವಾತಾವರಣ ಕಣ್ಣಾಮುಚ್ಚಾಲೆಯಂತಿರುವುದು.

ಮಿಥುನ: ಚಲನಚಿತ್ರ ಯಶಸ್ವಿಗೊಂಡು ನಿರೀಕ್ಷೆಗೂ ಮೀರಿದ ಲಾಭ ಗಳಿಸುವಿರಿ. ಸ್ನೇಹಿತರ ಆರೋಗ್ಯ ವಿಚಾರಿಸಲು ಆಸ್ಪತ್ರೆಗೆ ಹೋಗುವ ಸಂಭವ. ಬೆಳ್ಳಿ ವಸ್ತುಗಳ ಮಾರಾಟ ಮಾಡುವವರಿಗೆ ಹೆಚ್ಚಿನ ಆದಾಯ.

ಕರ್ಕಾಟಕ: ಬಹುದಿನಗಳ ನಂತರ ಗೆಳೆಯನ ಭೇಟಿ ಮತ್ತು ಅವರ ಸಲಹೆಗಳಿಂದ ಜೀವನ ಮಹತ್ವದ ತಿರುವೊಂದನ್ನು ಪಡೆದುಕೊಳ್ಳಲಿದೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಮೂಡಲಿದೆ. ವೈದ್ಯ ವೃತ್ತಿಯವರಿಗೆ ಲಾಭದ ದಿನ.

ಸಿಂಹ: ವಿಲಾಸಿ ವಸ್ತುಗಳ ಖರೀದಿಯಂಥಹ ಅನಾವಶ್ಯಕ ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಲೇ ಬೇಕಾದ ಪರಿಸ್ಥಿತಿ ತೋರಲಿದೆ. ಸಾಕು ಪ್ರಾಣಿಗಳ ಆರೋಗ್ಯದ ಬಗ್ಗೆ ಗಮನವಿರಲಿ. ಕೃಷಿ ಕಾರ್ಯವು ಭರದಿಂದ ಸಾಗುವುದು.

ಕನ್ಯಾ: ಗೃಹದಲ್ಲಿ ಹೊಂದಾಣಿಕೆಯ ಕೊರತೆಯಿಂದ ಸಣ್ಣಪುಟ್ಟ ಭಿನ್ನಾಭಿಪ್ರಾಯ, ದುಡುಕುತನ ಹೆಚ್ಚಾಗಲಿದೆ. ನಿರುದ್ಯೋಗಿಗಳಿಗೆ ಉದ್ಯೋಗಕ್ಕಾಗಿ ಅಲೆದಾಟ ತಪ್ಪದು. ನಾಲ್ಕಾರು ಜನರ ಬಳಕೆಯಿಂದಾಗಿ ಜ್ಞಾನಾರ್ಜನೆಯಾಗುವುದು.

ತುಲಾ: ವ್ಯಾಪಾರದಲ್ಲಿ ನಿರೀಕ್ಷಿತ ಲಾಭ. ಮಕ್ಕಳಿಗೆ ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡಿ. ಶ್ರೀ ಮಹಾವಿಷ್ಣುವನ್ನು ಸ್ತುತಿಸಿದಲ್ಲಿ ಮನೆಯಲ್ಲಿ ಆರೋಗ್ಯ, ಐಶ್ವರ್ಯಗಳ ವೃದ್ಧಿಯಾಗುವುದು.

ವೃಶ್ಚಿಕ: ಆರ್ಥಿಕ ರಂಗದವರಿಗೆ ಮತ್ತು ಜವಳಿ ವ್ಯಾಪಾರಿಗಳಿಗೆ ನೂತನ ಹೂಡಿಕೆಯ ಯೋಚನೆ ಉತ್ತಮವಲ್ಲ. ಹಿರಿಯರೊಡನೆ ಮಾಡಿದ ಅನಾವಶ್ಯಕವಾದ ತರ್ಕ, ವಿವಾದಗಳಿಂದ ಅಧಿಕಪ್ರಸಂಗಿ ಎನ್ನುವ ಪಟ್ಟವನ್ನು ಹೊಂದುವಿರಿ.

ಧನು: ಬದಲಾಗುವ ಬದುಕಿನ ಗತಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿ. ವೃತ್ತಿಯಲ್ಲಿನ ಕಾರ್ಯ ನಿರ್ವಹಣೆ ಮೆಚ್ಚುಗೆಗೆ ಪಾತ್ರವಾಗುವುದು. ಕೃಷಿ ಉತ್ಪನ್ನಗಳ ಮಾರಾಟ ಪ್ರತಿನಿಧಿಗಳಿಗೆ ಹೆಚ್ಚಿನ ಕಮಿಷನ್ ದೊರೆಯಲಿದೆ.

ಮಕರ: ಉನ್ನತ ಶಿಕ್ಷಣದವರಿಗೆ ಕೀರ್ತಿ ಮತ್ತು ಸಾಮಾಜಿಕ ಗೌರವ ಪ್ರಾಪ್ತಿ. ವ್ಯವಹಾರದಲ್ಲಿ ವಂಚನೆಯ ಸಾಧ್ಯತೆ ಇರುವುದರಿಂದ ಜಾಗರೂಕತೆಯಿಂದ ವ್ಯವಹರಿಸಿ. ಆತ್ಮವಂಚನೆಯನ್ನು ಮಾಡಿಕೊಳ್ಳಬೇಡಿ.

ಕುಂಭ: ಸಂಗೀತ, ಸಾಹಿತ್ಯ, ಚಿತ್ರರಂಗದ ಕಲಾವಿದರಿಗೆ ಕೈತುಂಬಾ ಕೆಲಸವಿದ್ದರೂ ಆರ್ಥಿಕವಾಗಿ ಶ್ರಮಕ್ಕೆ ತಕ್ಕಂತಹ ಫಲ ಸಿಗಲಾರದು. ಗೆಳೆಯರಲ್ಲಿ ಮಿತ್ರತ್ವ ಹಾಗು ಶತ್ರುತ್ವ ಹೊಂದಿದವರು ಇರುತ್ತಾರೆಂದು ಮರೆಯದಿರಿ.

ಮೀನ: ನಿರ್ದಾಕ್ಷಿಣ್ಯ ಕಾರ್ಯ ವೈಖರಿಯಿಂದ ಅಧಿಕಾರಿಗಳಿಗೂ ನಿಮಗೂ ಸಂಪರ್ಕ ದೂರಾಗುವಂತಾಗಲಿದೆ. ಕೆಲವು ವಿಚಾರದಲ್ಲಾದರೂ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳಿ, ಅದರ ಫಲ ದೇವರು ಕೊಡುತ್ತಾನೆ.

ಪದಬಂಧ 5000 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ನಕ್ಷತ್ರಗಳ ಗುಂಪು (4)
5.ಕೈಯಲ್ಲಿರುವ ಹಣ (3)
6.ಈತ ಆನೆ ನಡೆಸುವಾತ (4)
8.ಎಲ್ಲೆಯಿಂದ ಹೊರಹಾಕುವಿಕೆ (4)
12.ನಡುವೆ ಕೈಯಿರಿಸಿದಾಗಿನ ಘಟನೆ! (4)
14.ಒಪ್ಪವಾಗಿ ಮಾಡಿದ ತರ್ಜುಮೆ (4)
15.ವಿಷ್ಣುವಿನ ದಶಾವತಾರಗಳಲ್ಲಿ ಮೂರನೆಯದು (3)
16.ಮಾನವುಳ್ಳ ವಸ್ತುಸ್ಥಿತಿ (4)

ಮೇಲಿಂದ ಕೆಳಕ್ಕೆ
1.ಬೇರೆಡೆಗೆ ಹೋಗದಂತೆ ತಡೆಹಿಡಿಯುವಿಕೆ (5)
2.ಈತ ಲಗ್ನವಾಗುತ್ತಿರುವವ (4)
3.ಕೊನೆಗೆ ವಿಕ್ರಯಿಸು ಎನ್ನುವಾಗಿನ ಅಸಾಂಗತ್ಯ! (4)
4.ಒಂದು ಪಂಗಡಕ್ಕೆ ಸೇರಿದ ಜನವರ್ಗವು ಜಗದಲ್ಲಿದೆ! (3)
7.ಕೊರಳಲ್ಲಿ ಧರಿಸುವ ಚಿನ್ನದ ಆಭರಣ (2)
9.ಪಾಕದೊಳಗಿರುವ ಬಾಣಸಿಗ ಕಾಣುತ್ತಿದ್ದನೆಯೇ? (3)
10.ಫೋಟೊ ತೆಗೆಯುವುದು (5)
11.ಮಕರಂದವನ್ನು ನೀಡುವ ಕೀಟ (2)
12.ತೋರಿಸುವಿಕೆಯನ್ನು ಹೀಗೆನ್ನಿ (4)
13.ಕೆಟ್ಟ ಸ್ವಭಾವವಿಲ್ಲಿ ತಿರುವು ಮುರುವಾಗಿದೆಯಲ್ಲಾ? (4)
14.ಅಡಗಿಕೊಳ್ಳಲು ಸೂಕ್ತವಾದ ಅರಣ್ಯ (3)

1	■	2	■	■	3			4
5			■	■		■	■	
	■		■	■	6		7	
	■	8		9		■		■
	■	■	■		■	■	■	10
■	11	■	12			13	■	
14				■	■		■	
	■	■		■	■	15		
16				■	■		■	

4999ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಾಗೆಬಂಗಾರ 4.ಅಧಮ
5.ವಿಲೋಮ 9.ಯತ್ನ
10.ದಬ್ಬಣ 11.ಅಳು
12.ನನಸು 14.ಬರಡು
15.ಮರಣಕಾಲ

ಮೇಲಿಂದ ಕೆಳಕ್ಕೆ:
1.ದಿಬಂ 2.ಕಾಮ
3.ರವಿ 4.ಅಭಯದಾನ
6.ಮರಳುಗಾಡು 7.ಛೇದನ
8.ಕೋಣಸು 13.ಸುಮ
14.ಬಲ 16.ಣಹ

ಸುಡೊಕು 5386

				6	7	4		
3		4					7	2
	7	1		4	8		6	3
	4			3			8	
8		9		7				
	5		8		4		9	7
2				9		7	3	
		3						
6			4			5		9

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5385 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

₹1,350 ಕೋಟಿ ಹಣ ಸಂಗ್ರಹಿಸಿದ ದೂರು: 10 ದಿನ ಇ.ಡಿ ವಶದಲ್ಲಿ ಸುಶೀಲ್

ಮಂತ್ರಿ ಡೆವಲಪರ್ಸ್‌ ನಿರ್ದೇಶಕ ಬಂಧನ

ಪ್ರಜಾವಾಣಿ ವಾರ್ತೆ



ಸುಶೀಲ್ ಮಂತ್ರಿ

ಬೆಂಗಳೂರು: ವಸತಿ ಯೋಜನೆಗಳ ಹೆಸರಿನಲ್ಲಿ ಗ್ರಾಹಕರಿಂದ ಸಾವಿರಾರು ಕೋಟಿ ರೂಪಾಯಿ ಸಂಗ್ರಹಿಸಿ ವಂಚಿಸಿದ ಆರೋಪದ ಮೇಲೆ ರಿಯಲ್ ಎಸ್ಟೇಟ್ ಉದ್ಯಮಿ, ಮಂತ್ರಿ ಡೆವಲಪರ್ಸ್‌ ನಿರ್ದೇಶಕ ಸುಶೀಲ್ ಪಾಂಡುರಂಗ ಮಂತ್ರಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ರಾತ್ರಿ ಬಂಧಿಸಿದೆ.

ಗ್ರಾಹಕರಿಗೆ ವಂಚನೆ, ಹಣಕಾಸು ಸಂಸ್ಥೆಗಳಿಗೆ ಮೋಸ ಹಾಗೂ ಹಣದ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಸುಶೀಲ್ ಮಂತ್ರಿ ಅವರಿಗೆ ಇ.ಡಿ ಅಧಿಕಾರಿಗಳು ಸೂಚಿಸಿದ್ದರು. ಉದ್ಯಮಿ ವಿಚಾರಣೆಗೆ ಹಾಜರಾಗಿದ್ದರು.

₹ 5,000 ಕೋಟಿ ಬಾಕಿ

ರಿಯಲ್ ಎಸ್ಟೇಟ್ ಉದ್ಯಮದ ಹೆಸರಿನಲ್ಲಿ ವಿವಿಧ ಹಣಕಾಸು ಸಂಸ್ಥೆಗಳಿಂದ ಸುಮಾರು ₹ 5,000 ಕೋಟಿ ಮೊತ್ತದ ಸಾಲ ಪಡೆದಿದ್ದ ಸುಶೀಲ್ ಮಂತ್ರಿ, ಅದನ್ನೂ ಪಾವತಿ ಮಾಡಿಲ್ಲ. ಈ ಪೈಕಿ ಸುಮಾರು ₹ 1,000 ಕೋಟಿಯಷ್ಟು ಮೊತ್ತ ಅನುತ್ಪಾದಕ ಆಸ್ತಿಯ (ಎನ್‌ಪಿಎ) ಪಟ್ಟಿ ಸೇರಿದೆ ಎಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಹಕರಿಗೆ ವಂಚಿಸಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಾಕ್ಷ್ಯ ನಾಶ, ಸಾಕ್ಷಿಗಳ ಮೇಲೆ ಪ್ರಭಾವ ಬೀರುವುದು ಅಥವಾ ದೇಶ ತೊರೆಯುವ ಅನುಮಾನದ ಮೇಲೆ ಸುಶೀಲ್ ಅವರನ್ನು ಬಂಧಿಸಲಾಗಿದೆ.

ಜಾರಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಎನ್‌. ಸೋಮಶೇಖರ ನೇತೃತ್ವದ ತಂಡ, ಸುಶೀಲ್ ಮಂತ್ರಿ ಅವರನ್ನು ಶುಕ್ರವಾರ ರಾತ್ರಿ 10.30ಕ್ಕೆ ಬಂಧಿಸಿದೆ. ವಿಚಾರಣೆ ವೇಳೆ ಹಾಜರಿದ್ದ ಮಂತ್ರಿ ಡೆವಲಪರ್ಸ್‌ ಮುಖ್ಯ ಹಣಕಾಸು ಅಧಿಕಾರಿ ಎ. ಅನಿಲ್ ಕುಮಾರ್ ಅವರಿಗೆ ರಾತ್ರಿ 10.35ಕ್ಕೆ ಲಿಖಿತವಾಗಿ ಬಂಧನದ ವಿಷಯವನ್ನು ತಿಳಿಸಲಾಗಿದೆ.

ಮಂತ್ರಿ ಡೆವಲಪರ್ಸ್‌ನ ವಿವಿಧ ವಸತಿ ಯೋಜನೆಗಳಲ್ಲಿ ಫ್ಲ್ಯಾಟ್ ನಿರ್ಮಿಸಿ ಕೊಡುವುದಾಗಿ ನಂಬಿಸಿ 1,200ಕ್ಕೂ ಹೆಚ್ಚು ಕುಟುಂಬಗಳಿಂದ ₹ 1,350 ಕೋಟಿಗೂ ಹೆಚ್ಚು ಹಣ ಸಂಗ್ರಹಿಸಿ ವಂಚಿಸಿರುವ ಆರೋಪದ ಮೇಲೆ ನಗರದ ಸುಬ್ರಮಣ್ಯಪುರ ಪೊಲೀಸ್ ಠಾಣೆಯಲ್ಲಿ ಸುಶೀಲ್ ಮಂತ್ರಿ ಮತ್ತು ಇತರರ ವಿರುದ್ಧ 2020ರ ಫೆಬ್ರುವರಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಈ ಪ್ರಕರಣದ ಕುರಿತು ಪ್ರಾಥಮಿಕ ತನಿಖೆ ನಡೆಸಿದ್ದ ಇ.ಡಿ ಅಧಿಕಾರಿಗಳು, 2022ರ ಮಾರ್ಚ್‌ 22ರಂದು ನ್ಯಾಯಾಲಯಕ್ಕೆ ವರದಿಯೊಂದನ್ನು ಸಲ್ಲಿಸಿ ತನಿಖೆ ಆರಂಭಿಸಿದ್ದರು.

‘ಮಂತ್ರಿ ಡೆವಲಪರ್ಸ್‌ ಹೆಸರಿನಲ್ಲಿ ಆಕರ್ಷಕ ಯೋಜನೆಗಳನ್ನು ಘೋಷಿಸಿ ಸಾವಿರಾರು ಗ್ರಾಹಕರಿಂದ ಹಣ ಸಂಗ್ರಹಿಸಲಾಗಿತ್ತು. ಈ ಮೊತ್ತವನ್ನು ಅದೇ ಉದ್ದೇಶಕ್ಕೆ ಬಳಸದೇ ಬೇರೆ ಬೇರೆ ಖಾತೆಗಳಿಗೆ ವರ್ಗಾಯಿಸಿ, ಸ್ವಂತ ಉದ್ದೇಶಕ್ಕೆ ಬಳಸಿರುವುದು ಪತ್ತೆಯಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿ ಒದಗಿಸದೇ ಸುಶೀಲ್ ತನಿಖೆಗೆ ಅಡ್ಡಿಪಡಿಸುತ್ತಿದ್ದಾರೆ. ಹಣ ವರ್ಗಾವಣೆ, ಬ್ಯಾಂಕ್ ಖಾತೆಗಳ ವಿವರ, ಹಣದ ಬಳಕೆ ಕುರಿತು ಮಾಹಿತಿ ನೀಡಿಲ್ಲ. ಕೆಲವು ದಾಖಲೆಗಳನ್ನು ಸಲ್ಲಿಸುವಂತೆ ತನಿಖಾ ತಂಡ ನೀಡಿದ್ದ ಸೂಚನೆಯನ್ನೂ ಪಾಲಿಸಿಲ್ಲ’ ಎಂದು ತನಿಖಾಧಿಕಾರಿ ತಿಳಿಸಿದ್ದಾರೆ. ಬಂಧನದ ಬಳಿಕ ಆರೋಪಿಯನ್ನು ವಿಶೇಷ ಕೋರ್ಟ್‌ಗೆ ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ ಹತ್ತು ದಿನಗಳ ಕಾಲ ತನಿಖಾ ತಂಡದ ವಶಕ್ಕೆ ಪಡೆಯಲಾಗಿದೆ.

ಎಸ್‌ಎಂಕೆ ಸೇರಿ ಮೂವರಿಗೆ ಕೆಂಪೇಗೌಡ ಪ್ರಶಸ್ತಿ

ಎಸ್‌.ಎಂ. ಕೃಷ್ಣ

ಪ್ರಕಾಶ್ ಪಡುಕೋಣೆ

ನಾರಾಯಣ ಮೂರ್ತಿ

ಬೆಂಗಳೂರು: ಕರ್ನಾಟಕ ಸರ್ಕಾರ ಮೊದಲ ಬಾರಿಗೆ ಕೊಡುತ್ತಿರುವ ‘ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ’ಗೆ ಮಾಜಿ ಮುಖ್ಯಮಂತ್ರಿ ಎಸ್‌.ಎಂ. ಕೃಷ್ಣ, ಇನ್ಫೊಸಿಸ್ ಸಂಸ್ಥಾಪಕ ಎನ್‌. ಆರ್‌. ನಾರಾಯಣ ಮೂರ್ತಿ ಮತ್ತು ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಅವರನ್ನು ಆಯ್ಕೆ ಮಾಡಲಾಗಿದೆ.

ಜೂನ್ 27ರಂದು ಕೆಂಪೇಗೌಡರ 513ನೇ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರಶಸ್ತಿ ತಲಾ ₹ 5 ಲಕ್ಷ ನಗದು, ಫಲಕವನ್ನು ಹೊಂದಿದೆ.

ಕೃಷ್ಣ ಅವರನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌. ಅಶ್ವತ್ಥ ನಾರಾಯಣ ಅವರು ಶನಿವಾರ ಭೇಟಿಯಾಗಿ ಪ್ರಶಸ್ತಿ ಸ್ವೀಕರಿಸುವಂತೆ ಆಹ್ವಾನ ನೀಡಿದರು. ಸ್ಟಾರ್ಟ್‌ ಅಪ್ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ನೇತೃತ್ವದ ಸಮಿತಿ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಿದೆ.

ಬೆಂಗಳೂರಿನಲ್ಲಿ ಶನಿವಾರ ನಡೆದ ಅಖಿಲ ಭಾರತ ಅಂಚೆ ನೌಕರರ ಸಂಘದ 33ನೇ ವಿಭಾಗೀಯ ಸಮಾವೇಶದಲ್ಲಿ ಅಖಿಲ ಭಾರತ ಅಂಚೆ ನೌಕರರ ಸಂಘದ ಕರ್ನಾಟಕ ವೃತ್ತದ ಕಾರ್ಯಾಧ್ಯಕ್ಷ ಜಿ.ಜಾನಕಿರಾಮ್ ಮಾತನಾಡಿದರು. (ಎಡದಿಂದ) ಉಪಾಧ್ಯಕ್ಷೆ ವರಲಕ್ಷ್ಮಿ, ಆರ್‌. ಶ್ರೀನಿವಾಸ್, ಪಿ. ಮಲ್ಲಿಕಾರ್ಜುನ, ಬಿ. ವಿಜಯ ನಾಯರಿ ಇದ್ದರು — ಪ್ರಜಾವಾಣಿ ಚಿತ್ರ

‘ಅಂಚೆ ಇಲಾಖೆ ಖಾಸಗೀಕರಣ ಹುನ್ನಾರದ ವಿರುದ್ಧ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂಚೆ ಇಲಾಖೆಯ ಎಲ್ಲ ವ್ಯವಸ್ಥೆಗಳನ್ನು ಖಾಸಗೀಕರಣಗೊಳಿಸುವ ಹುನ್ನಾರ ನಡೆಯುತ್ತಿದೆ’ ಎಂದು ಅಖಿಲ ಭಾರತ ಅಂಚೆ ನೌಕರರ ಸಂಘದ ಕರ್ನಾಟಕ ವೃತ್ತದ ಕಾರ್ಯಾಧ್ಯಕ್ಷ ಜಿ.ಜಾನಕಿರಾಮ್ ಹೇಳಿದರು.

ನಗರದಲ್ಲಿ ಶನಿವಾರ ನಡೆದ ಅಖಿಲ ಭಾರತ ಅಂಚೆ ನೌಕರರ ಸಂಘದ 33ನೇ ವಿಭಾಗೀಯ ಸಮಾವೇಶದಲ್ಲಿ ಮಾತನಾಡಿದ ಅವರು, ‘ಖಾಸಗೀಕರಣದ ವಿರುದ್ಧ ಹೋರಾಟ ಮಾಡಬೇಕಿದೆ. ಖಾಸಗೀಕರಣಕ್ಕೆ ನೌಕರರು ವಿರೋಧ ವ್ಯಕ್ತಪಡಿಸಿದ್ದಾರೆ. ಅಂಚೆ ಇಲಾಖೆಯಲ್ಲಿದ್ದ ಪಾರ್ಸೆಲ್ ಸೇವೆ ಸಹ ಪ್ರತ್ಯೇಕಗೊಳಿಸುವ ಕಾರ್ಯ ನಡೆಯುತ್ತಿದೆ’ ಎಂದು ಹೇಳಿದರು.

‘ಅಂಚೆ ಇಲಾಖೆಯ ಉಳಿತಾಯ ಖಾತೆಯನ್ನು ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್ (ಐಪಿಪಿಬಿ) ಆಗಿ ಪರಿವರ್ತಿಸಲಾಗಿದೆ. ಇದು ಸುರಕ್ಷಿತ ಅಲ್ಲ. ಇತ್ತೀಚೆಗೆ ಶಹಾಪುರದಲ್ಲಿ ಗ್ರಾಹಕರಿಗೆ ಮೋಸ ಎಸಗಲಾಗಿದೆ. ಇದರ ವಿರುದ್ಧ ಧ್ವನಿಯೆತ್ತಬೇಕು’ ಎಂದರು. ವೃತ್ತ ಕಾರ್ಯದರ್ಶಿ ಪಿ.ಮಲ್ಲಿಕಾರ್ಜುನ ಮಾತನಾಡಿ, ‘ಖಾಸಗೀಕರಣದಿಂದ ನೌಕರರು ಹಾಗೂ ಗ್ರಾಹಕರಿಗೆ ಮೋಸ ಆಗಲಿದೆ’ ಎಂದರು.

ಅಖಿಲ ಭಾರತ ಅಂಚೆ ನೌಕರರ ಸಂಘದ ಅಧ್ಯಕ್ಷ ಡಿ.ರವಿಶಂಕರ್, ಅಮಿತ್ ಕುಮಾರ್ ಜಹ, ಕೆ.ರಾಧಾಕೃಷ್ಣ, ಚಂದನ್ ಸ್ವಾಮಿ, ಬಿ.ವಿಜಯ್ ನಾಯರಿ, ಆರ್‌.ಶ್ರೀನಿವಾಸ್, ಎಸ್‌ಸಿ–ಎಸ್‌ಟಿ ಒಕ್ಕೂಟದ ವೃತ್ತ ಕಾರ್ಯದರ್ಶಿ ವಿ.ಕೃಷ್ಣಮೂರ್ತಿ ಇದ್ದರು.

‘ಡಿಕೆಶಿಗಾಗಿ ಆಪ್ತರಿಂದ ಹವಾಲಾ ವಹಿವಾಟು’

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ‘ಕಪ್ಪು ಹಣ’ವನ್ನು ಸಕ್ರಮಗೊಳಿಸಲು ಅವರ ಆಪ್ತರಾದ ಸುನೀಲ್ ಕುಮಾರ್ ಶರ್ಮ ಮತ್ತು ಇತರರು ‘ಹವಾಲಾ’ ವಹಿವಾಟು ನಡೆಸುತ್ತಿದ್ದರು ಎಂದು ಜಾರಿ ನಿರ್ದೇಶನಾಲಯ (ಇ.ಡಿ) ನವದೆಹಲಿಯ ಚುನಾಯಿತ ಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪಪಟ್ಟಿಯಲ್ಲಿ ಹೇಳಿದೆ.

2017ರಲ್ಲಿ ಡಿಕೆಶಿ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿಮಾಡಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದರು. ಆಗ, ದೆಹಲಿಯ ವಿವಿಧ ಸ್ಥಳಗಳಲ್ಲಿ ₹ 8.59 ಕೋಟಿ ನಗದು ವಶಕ್ಕೆ ಪಡೆಯಲಾಗಿತ್ತು.

ಶಿವಕುಮಾರ್, ಅವರ ನಿಕಟವರ್ತಿಗಳಾದ ಉದ್ಯಮಿ ಸಚಿನ್ ನಾರಾಯಣ್, ಶರ್ಮಾ ಟ್ರಾನ್ಸ್‌ಪೋರ್ಟ್‌ ಮಾಲೀಕ ಸುನೀಲ್ ಕುಮಾರ್ ಶರ್ಮಾ, ದೆಹಲಿಯ ಆಂಜನೇಯ ಹನುಮಂತಯ್ಯ ಮತ್ತು ರಾಜೇಂದ್ರ ಎನ್‌. ವಿರುದ್ಧ ವಿಚಾರಣೆ ಆರಂಭಿಸುವಂತೆ ಕೋರಿ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ, ಹವಾಲಾ ವಹಿವಾಟಿನ ಆಪಾದನೆ ಮಾಡಿದೆ. ‘ಶಿವಕುಮಾರ್ ಅವರ ಅಕ್ರಮ ಗಳಿಕೆಯನ್ನು ಸಕ್ರಮಗೊಳಿಸಲು ಸುನೀಲ್ ಕುಮಾರ್ ಶರ್ಮಾ ಬೆಂಗಳೂರಿನಿಂದ ದೆಹಲಿಯವರೆಗೂ ಹವಾಲಾ ವಹಿವಾಟು ನಡೆಸುತ್ತಾರೆ. ಮದ್ಯ ಮಾರಾಟದಲ್ಲಿ ತೊಡಗಿರುವ ಸಚಿನ್ ನಾರಾಯಣ್, ಅದನ್ನೇ ಬಳಸಿಕೊಂಡು ಶಿವಕುಮಾರ್ ಅವರ ಅಕ್ರಮ ಸಂಪತ್ತನ್ನು ಸಕ್ರಮಗೊಳಿಸಲು ನೆರವಾಗುತ್ತಿದ್ದಾರೆ’ ಎಂಬ ಆರೋಪ ಇ.ಡಿ ವರದಿಯಲ್ಲಿದೆ.

ಬರಗೂರು ಹೇಳಿಕೆಯಲ್ಲೇ ‘ಪಕ್ಷದ ವಾಸನೆ’

‘ಶಿಕ್ಷಣಕ್ಕೆ ನಿಷ್ಠೆ’ ಹೇಳಿಕೆಗೆ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ವಸಂತಕುಮಾರ್ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಯ ಅಧ್ಯಕ್ಷರಾಗಿದ್ದ ಬರಗೂರು ರಾಮಚಂದ್ರಪ್ಪ ಅವರು ತಮ್ಮ ಸಮಿತಿ ಶಿಕ್ಷಣಕ್ಕೆ ನಿಷ್ಠವಾಗಿ ಪಠ್ಯ ಪರಿಷ್ಕರಣೆ ಮಾಡಿತ್ತು. ತಮ್ಮದು ಪಕ್ಷದ ಪಠ್ಯವಲ್ಲ ಎಂದು ಹೇಳುತ್ತಿರುವುದರಲ್ಲಿಯೇ ಒಂದು ‘ಪಕ್ಷದ ಪಠ್ಯ’ವಾಗಿರುವ ವಾಸನೆಯಿದೆ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಂದು ಬಿ.ವಿ. ವಸಂತಕುಮಾರ್ ಟೀಕಿಸಿದ್ದಾರೆ.

‘ಆರನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿರುವ ‘ಅಲಿಘಡ ಚಳವಳಿ’ ಪಾಠದಲ್ಲಿ ಮುಡಂಬಡಿತ್ತಾಯ ಸಮಿತಿ ಬರೆದಿದ್ದ ‘ಸರ್ ಸಯ್ಯದ್‌ರವರು ರಾಷ್ಟ್ರೀಯ ಕಾಂಗ್ರೆಸ್‌ನಿಂದ ದೂರವೇ ಉಳಿದು ಮುಸಲ್ಮಾನ ಸಮುದಾಯವನ್ನು ಒಗ್ಗೂಡಿಸಿದರು’ ಎಂಬ ಸಾಲನ್ನು ಬರಗೂರು ಸಮಿತಿ ಕೈಬಿಟ್ಟು, ‘ಕುರಾನ್ ಗ್ರಂಥವು ಮಾತ್ರ ಪ್ರಮಾಣೀಕೃತ’ ಎಂಬ ಸಾಲು ಸೇರಿಸಿದೆ. ಇದು ಯಾವ ಪಕ್ಷದ ಮತದ ತುಷ್ಟೀಕರಣ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಬರಗೂರು ಸಮಿತಿಯು ‘ಸಮಾಜವಾದ’ ಎಂಬ ಪಾಠದಲ್ಲಿ ‘ಅಲ್ಲಿ ಎಲ್ಲರೂ ಎಲ್ಲರಿಗಾಗಿ ದುಡಿಯುವ ಸಂಸ್ಕೃತಿ ಎಲ್ಲರಲ್ಲೂ ಬೆಳೆದು ಪ್ರತಿಯೊಬ್ಬರೂ ಸುಖವಾಗಿರುವ ವ್ಯವಸ್ಥೆ ನಿರ್ಮಾಣವಾಗುತ್ತದೆ. ಈ ವ್ಯವಸ್ಥೆಯ ಪ್ರತಿಪಾದಕರು ಕಾರ್ಲ್‌ಮಾರ್ಕ್ಸ್‌. ಒಟ್ಟಿನಲ್ಲಿ ಸಮತಾವಾದವು ಮಾನವ ಪರವಾದ ಸರ್ಕಾರಿ ವ್ಯವಸ್ಥೆಯಾಗಿದ್ದು, ಪ್ರತಿಯೊಬ್ಬ ಪ್ರಜೆಯೂ ಸಮಾನತೆಯಿಂದ ಶೋಷಣೆಮುಕ್ತ ಜೀವನ ನಡೆಸಬಹುದಾಗಿದೆ’ ಎಂದು ಬರೆದಿದ್ದಾರೆ. 12ನೇ ವಯಸ್ಸಿನ ಮಕ್ಕಳಲ್ಲಿ ‘ ಸಮತಾವಾದವು ಮಾನವ ಪರವಾದ ಸರ್ಕಾರಿ ವ್ಯವಸ್ಥೆ’ ಎಂದು ಬಿತ್ತುವುದು ಬರಗೂರು ಸಮಿತಿಯ ಉದ್ದೇಶ ಎಂಬುದು ಅರ್ಥವಾಗುತ್ತದೆ’ ಎಂದಿದ್ದಾರೆ.

‘10ನೇ ತಗರತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದ ‘ಭಾರತ ನಮ್ಮ ಮಾತೃಭೂಮಿ’ ಪಾಠದ ಹೆಸರನ್ನು ಬರಗೂರು ಸಮಿತಿ ‘ಭಾರತದ ಸ್ಥಾನ ಮತ್ತು ವಿಸ್ತೀರ್ಣ’ ಎಂದು ಬದಲಿಸಿದೆ. ‘ರಾಷ್ಟ್ರ’ ಪರಿಕಲ್ಪನೆಯನ್ನು ಕಮ್ಯುನಿಸ್ಟ್ ಸಿದ್ಧಾಂತ ಒಪ್ಪುವುದಿಲ್ಲ ನಿಜ. ಕಾಂಗ್ರೆಸ್, ಜೆಡಿಎಸ್ ನಾಯಕರು ಒಪ್ಪುವುದಿಲ್ಲವೇ? ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರ ಪ್ರೀತಿಗೇಕೆ ಇಷ್ಟೊಂದು ಪ್ರತಿರೋಧ’ ಎಂದೂ ವಸಂತಕುಮಾರ್ ಪ್ರಶ್ನಿಸಿದ್ದಾರೆ.

‘ಪಠ್ಯದಲ್ಲಿ ಕಯ್ಯಾರರ ಹೆಸರು ಸೇರಲಿ’

ಮಂಗಳೂರು: ‘ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ 7ನೇ ತರಗತಿಯ ಸಮಾಜ ವಿಜ್ಞಾನ ಪುಸ್ತಕದಲ್ಲಿ ಕಯ್ಯಾರ ಕಿಂಞಣ್ಣ ರೈ ಅವರ ಹೆಸರು ಕೈಬಿಟ್ಟಿರುವುದು ಸರಿಯಲ್ಲ’ ಎಂದು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ಹೇಳಿದ್ದಾರೆ.

‘ಕಯ್ಯಾರರು ಕರ್ನಾಟಕ ಏಕೀಕರಣಕ್ಕಾಗಿ ಕೊನೆ ಉಸಿರಿನ ತನಕ ಹೋರಾಡಿದ್ದರು ಎಂದು ಕರ್ನಾಟಕ ಏಕೀಕರಣ ಹಾಗೂ ಗಡಿ ವಿವಾದಗಳು ಎಂಬ ಪಠ್ಯದಲ್ಲಿ ಇತ್ತು. ಈಗ ಆ ವಾಕ್ಯ ತೆಗೆದು ಮಂಜೇಶ್ವರ ಗೋವಿಂದ ಪೈಯವರ ಹೆಸರು ಸೇರಿಸಲಾಗಿದೆ. ಗೋವಿಂದ ಪೈಯವರಿಗೆ ಏಕೀಕರಣ ವಿಷಯದಲ್ಲಿ ಪರಿಣಾಮಕಾರಿ ಹೋರಾಟ ಮಾಡಲು ಅವಕಾಶ ಸಿಕ್ಕಿರಲಿಲ್ಲ. ಕಯ್ಯಾರರು ನಿಧನರಾಗುವವರೆಗೂ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು ಎಂದು ಆಗ್ರಹಿಸುತ್ತ ಹೋರಾಡಿದ್ದರು’.

‘ಗೋವಿಂದ ಪೈ ಅವರ ಹೆಸರು ಸೇರಿಸಿರುವುದಕ್ಕೆ ಆಕ್ಷೇಪ ಇಲ್ಲ. ಆದರೆ ಕಯ್ಯಾರರ ಹೆಸರು ತೆಗೆದು ಬಂಟ ಸಮುದಾಯಕ್ಕೆ ಅವಮಾನ ಮಾಡಲಾಗಿದೆ. ಕಯ್ಯಾರರು ಬಂಟರ ಹೆಮ್ಮೆ. ಅವರಿಗೆ ಮಾಡುವ ಅವಮಾನ ಬಂಟ ಸಮುದಾಯಕ್ಕೆ ಮಾಡುವ ಅನ್ಯಾಯವಾಗುತ್ತದೆ’ ಎಂದು ಹರೀಶ್ ಶೆಟ್ಟಿ ಹೇಳಿದ್ದಾರೆ.

ಇದೇ 30ರಂದು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಕಾರ್ಯಕಾರಿ ಸಮಿತಿ ಸಭೆ ನಡೆಯಲಿದ್ದು ಅಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಲೋಪ ಸರಿಪಡಿಸದಿದ್ದರೆ ಹೋರಾಟ: ಕಾಗಿನೆಲೆ ಸ್ವಾಮೀಜಿ

ಹರಿಹರ: ‘ಪಠ್ಯ–ಪುಸ್ತಕಗಳಲ್ಲಿ ಬಸವಣ್ಣ, ಕನಕದಾಸ, ಕುವೆಂಪು ಅವರಂತಹ ಮಹನೀಯರ ಪರಿಚಯದ ಪಾಠಗಳಲ್ಲಿ ಆಗಿರುವ ಲೋಪ ಸರಿಪಡಿಸದಿದ್ದರೆ ಹೋರಾಟಕ್ಕೆ ಇಳಿಯಬೇಕಾಗುತ್ತದೆ’ ಎಂದು ಕಾಗಿನೆಲೆ ಕನಕ ಗುರುಪೀಠದ ಪೀಠಾಧಿಪತಿ ನಿರಂಜನಾನಂದಪುರಿ ಸ್ವಾಮೀಜಿ ಸರ್ಕಾರಕ್ಕೆ ಶನಿವಾರ ಎಚ್ಚರಿಸಿದರು.

‘ಮಹನೀಯರ ಪರಿಚಯ ಸತ್ಯ ದಿಂದ ಕೂಡಿರಬೇಕು. ಮಕ್ಕಳಿಗೆ ಇಲ್ಲಸಲ್ಲದ್ದು ಕಲಿಸಬಾರದು. ಆಗಿರುವ ಲೋಪವನ್ನು ಶೀಘ್ರ ಸರಿಪಡಿಸಲು ಮುಖ್ಯಮಂತ್ರಿ, ಶಿಕ್ಷಣ ಸಚಿವರಿಗೆ ಆಗ್ರಹಿಸುತ್ತೇನೆ. ತಪ್ಪಿದಲ್ಲಿ ಎಲ್ಲರ ಜೊತೆಗೂಡಿ ಹೋರಾಟಕ್ಕೆ ಇಳಿಯಬೇಕಾಗುತ್ತದೆ. ಸರ್ಕಾರ ಕಷ್ಟ ಎದುರಿಸಬೇಕಾಗುತ್ತದೆ’ ಎಂದರು.

ತಿಂಗಳಲ್ಲಿ ಸಂಶೋಧನಾ ಕೇಂದ್ರದ ವರದಿ: ‘ಹಿಂದುಳಿದ ಕುರುಬ ಸಮಾಜ ವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬೇಡಿಕೆ ಕುರಿತಂತೆ ಬುಡಕಟ್ಟು ಸಂಶೋಧನಾ ಕೇಂದ್ರದಿಂದ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗಿದೆ. ವರದಿ ಬಂದ ನಂತರ ಕೇಂದ್ರ ಸರ್ಕಾರಕ್ಕೆ ಅದನ್ನು ರವಾನಿಸಬೇಕಿದೆ. ಈ ದಿಸೆಯಲ್ಲಿ ಪ್ರಯತ್ನ ನಡೆದಿದೆ. ಕುರುಬ ಸಮಾಜಕ್ಕೆ ಪರಿಶಿಷ್ಟ ಪಂಗಡ ಮೀಸಲಾತಿ ನೀಡುವ ಮೂಲಕ ಸಾಮಾಜಿಕ ನ್ಯಾಯ ನೀಡಬೇಕು’ ಎಂದು ಸ್ವಾಮೀಜಿ ಆಗ್ರಹಿಸಿದರು.

ಸಿಗದ ಪಠ್ಯಪುಸ್ತಕ: ತಪ್ಪದ ಗೋಳಾಟ

ಒಂದನೇ ಪುಟದಿಂದ...

1ರಿಂದ 10ನೇ ತರಗತಿಯ ಪಠ್ಯಪುಸ್ತಕ ಮುದ್ರಣ ಮತ್ತು ವಿತರಣೆಯಲ್ಲಿ ವಿಳಂಬವಾಗಿದೆ. ಮುಖ್ಯವಾಗಿ 8, 9 ಮತ್ತು 10ನೇ ತರಗತಿಯ ಸಮಾಜ ವಿಜ್ಞಾನ, ಕನ್ನಡ ವಿಷಯದ ಪುಸ್ತಕಗಳ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.

ಕರ್ನಾಟಕ ಪುಸ್ತಕ ಸಂಘದ ವೆಬ್‌ಸೈಟ್‌ನಲ್ಲಿಯೂ ಕೆಲ ವಿಷಯಗಳ ಪುಸ್ತಕಗಳ ಪಿಡಿಎಫ್ ಕೂಡ ಲಭ್ಯ ಇಲ್ಲ. ಸಾರ್ವಜನಿಕರಿಗೆ ದೊರೆಯುವಂತೆ ಕೆಲವು ಪಠ್ಯಪುಸ್ತಕಗಳನ್ನು ಅಪ್‌ಲೋಡ್ ಮಾಡಿದ್ದರೂ, ಅವುಗಳನ್ನು ಬಳಸುವಂತಿಲ್ಲ ಎಂಬ ವಾಟರ್ ಮಾರ್ಕ್‌ ಹಾಕಿರುವುದು ಕಗ್ಗಂಟಾಗಿದೆ.

‘ಸಮಾಜ ವಿಜ್ಞಾನ ಮತ್ತು ಕನ್ನಡ ವಿಷಯಗಳ ಪಠ್ಯಪುಸ್ತಕಗಳು ಸಿಕ್ಕಿಲ್ಲ. ಸದ್ಯಕ್ಕೆ, ಶಿಕ್ಷಕರ ಪಾಠ ಪ್ರವಚನದ ಮೇಲೆ ಅವಲಂಬನೆಯಾಗಿದ್ದೇವೆ’ ಎಂದು ವಿದ್ಯಾರ್ಥಿಗಳು ಹೇಳುತ್ತಾರೆ.

ಕಳೆದ ವರ್ಷವೇ ಸುಮಾರು ₹3 ಕೋಟಿ ಮೊತ್ತದ ಆರು ಲಕ್ಷಕ್ಕೂ ಹೆಚ್ಚು ಪುಸ್ತಕಗಳು ಬಾಕಿ ಉಳಿದಿದ್ದವು. ಹೀಗಾಗಿ, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪಠ್ಯಪುಸ್ತಕ ಮರುಮುದ್ರಣದಿಂದ ಆರ್ಥಿಕ ಹೊರೆ ಹೆಚ್ಚಾಗುತ್ತದೆ ಎಂದು ಆರ್ಥಿಕ ಇಲಾಖೆ ಅಭಿಪ್ರಾಯಪಟ್ಟಿತ್ತು. ಆದರೆ, ಸರ್ಕಾರ ಈ ಅಭಿಪ್ರಾಯಕ್ಕೆ ಮನ್ನಣೆ ನೀಡದೇ ಪರಿಷ್ಕರಣೆ ಕಾರ್ಯ ಕೈಗೊಂಡಿತ್ತು.

‘ಮುದ್ರಣದ ಟೆಂಡರ್ ಪ್ರಕ್ರಿಯೆಯನ್ನು ಈ ಬಾರಿ ತಡವಾಗಿ ಕೈಗೊಳ್ಳಲಾಯಿತು. ಪಠ್ಯದಲ್ಲಿ ಪದೇ ಪದೇ ಬದಲಾವಣೆಗಳನ್ನು ಮಾಡಿದ್ದರಿಂದ ಮುದ್ರಕರ ಕೈಗೆ ಪರಿಷ್ಕೃತ ಪಠ್ಯದ ಅಂತಿಮ ಪಿಡಿಎಫ್ ಇರುವ ಸಿ.ಡಿ ತಲುಪುವುದು ಮತ್ತಷ್ಟು ವಿಳಂಬವಾಯಿತು. ನವೆಂಬರ್‌ನಲ್ಲೇ ಟೆಂಡರ್ ಪ್ರಕ್ರಿಯೆ ಮುಗಿದಿದ್ದರೆ ಸಕಾಲಕ್ಕೆ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಬಹುದಾಗಿತ್ತು’ ಎನ್ನುವುದು ಮುದ್ರಕರ ಅಭಿಪ್ರಾಯ. ಒಟ್ಟಾರೆಯಾಗಿ 84 ಶೀರ್ಷಿಕೆಗಳ ಪರಿಷ್ಕರಣೆ ಮತ್ತು ಮುದ್ರಣ ಕಾರ್ಯ ಕೈಗೊಂಡಿದ್ದರಿಂದ ಕೋಟ್ಯಂತರ ರೂಪಾಯಿ ಹೊರೆಯಾಗಿದೆ ಎಂದು ಅಂದಾಜಿಸಲಾಗಿದೆ.

ರಾಜ್ಯದಲ್ಲಿ ಇದುವರೆಗೆ ಶೇ 85ರಷ್ಟು ಪಠ್ಯಪುಸ್ತಕಗಳು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ತಲುಪಿವೆ. ಆದರೆ, ಎಲ್ಲ ಪಠ್ಯ ಪುಸ್ತಕಗಳು ವಿದ್ಯಾರ್ಥಿಗಳ ಕೈಸೇರಲು ಕನಿಷ್ಠ 15 ದಿನಗಳಿಗೂ ಹೆಚ್ಚು ಸಮಯಾವಕಾಶ ಬೇಕಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಪ್ರತಿಕ್ರಿಯೆ ಪಡೆಯಲು ಕರ್ನಾಟಕ ಪಠ್ಯ ಪುಸ್ತಕ ಸಂಘದ ನಿರ್ದೇಶಕ ಎಂ.ಪಿ. ಮಾದೇಗೌಡ ಅವರನ್ನು ಸಂಪರ್ಕಿಸಿದರೂ ಮೊಬೈಲ್ ಕರೆ ಸ್ವೀಕರಿಸಲಿಲ್ಲ.

ಚಾಮರಾಜನಗರ: ಕೈಗಾರಿಕಾ ಪ್ರದೇಶ ವಿಸ್ತರಣೆಗೆ ಪರಿಸರವಾದಿಗಳಿಂದಲೂ ವಿರೋಧ

ವನ್ಯಜೀವಿಗಳ ಆವಾಸಕ್ಕೆ ಕುತ್ತು; ಆತಂಕ

• ಸೂರ್ಯನಾರಾಯಣ ವಿ.

ಚಾಮರಾಜನಗರ: ತಾಲ್ಲೂಕಿನ ಬದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶ ವಿಸ್ತರಣೆಗೆ ಮೇಲಾಜಿಪುರ ಸೇರಿದಂತೆ ಸುತ್ತಮುತ್ತಲಿನ ರೈತರು ವಿರೋಧ ವ್ಯಕ್ತಪಡಿಸಿರುವ ಬೆನ್ನಲ್ಲೇ, ಪರಿಸರವಾದಿಗಳಿಂದಲೂ ಆಕ್ಷೇಪ ವ್ಯಕ್ತವಾಗಿದೆ.

ಈಗಿನ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ಜವನ ಗುಡ್ಡ (ಕರಡಿಕೊಳ ಗುಡ್ಡ) ಸುತ್ತಮುತ್ತಲಿನ ಪ್ರದೇಶದಲ್ಲಿ ನೂರಾರು ಸಂಖ್ಯೆಯಲ್ಲಿ ಕೃಷ್ಣಮೃಗಗಳು ಆಶ್ರಯ ಪಡೆದಿವೆ. ಚಿರತೆ, ನವಿಲು, ಕಾಡು ಹಂದಿ ಸೇರಿದಂತೆ ಸಣ್ಣಪುಟ್ಟ ಪ್ರಾಣಿಗಳೂ ಇವೆ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಕೈಗಾರಿಕಾ ಪ್ರದೇಶ ವಿಸ್ತರಣೆಗೆ ಗುರುತಿಸಿರುವ 1,189.09 ಎಕರೆ ಪ್ರದೇಶದಲ್ಲಿ ಈ ಪ್ರದೇಶ ಸೇರಿದೆ. ಕೆಐಡಿಬಿ ಈಗಾಗಲೇ ಭೂಸ್ವಾಧೀನಕ್ಕಾಗಿ ಅಧಿಸೂಚನೆ ಹೊರಡಿಸಿದೆ. ನೋಟಿಸ್ ನೀಡಿ ಜಮೀನು ಮಾಲೀಕರಿಂದ ಅಭಿಪ್ರಾಯ ಸಂಗ್ರಹಿಸುತ್ತಿದೆ.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್ ಹಾಗೂ ಸಿಬ್ಬಂದಿ ಮೇಲಾಜಿಪುರಕ್ಕೆ ಭೇಟಿ ನೀಡಿ ಸ್ಥಳೀಯರಿಂದ ಮಾಹಿತಿ ಕಲೆ ಹಾಕಿದರು

‘ಕೈಗಾರಿಕಾ ಪ್ರದೇಶಕ್ಕಾಗಿ ಜಮೀನು ಸ್ವಾಧೀನ ಪಡಿಸಿಕೊಂಡರೆ ಅಳಿವಿನಂಚಿನಲ್ಲಿರುವ ಕೃಷ್ಣಮೃಗಗಳು ಸೇರಿದಂತೆ ವನ್ಯಪ್ರಾಣಿಗಳ ಆವಾಸ ನಾಶವಾಗಲಿದೆ. ಅರಣ್ಯ ಇಲಾಖೆ ಮಧ್ಯಪ್ರವೇಶಿಸಿ, ಈ ಪ್ರದೇಶವನ್ನು ಸಂರಕ್ಷಿಸಲು ಕ್ರಮ ವಹಿಸಬೇಕು’ ಎಂಬುದು ಸ್ಥಳೀಯರು ಹಾಗೂ ಪರಿಸರವಾದಿಗಳ ಒತ್ತಾಯಿಸಿದ್ದಾರೆ.

ಕೃಷ್ಣಮೃಗಗಳ ನೆಲೆ: ಬದನಗುಪ್ಪೆ, ಕೆಲ್ಲಂಬಳ್ಳಿ ಪ್ರದೇಶದಲ್ಲಿ ಸಾಕಷ್ಟು ಕೃಷ್ಣಮೃಗಗಳಿವೆ. ಇತ್ತೀಚೆಗೆ ನಂಜನಗೂಡು ಹೆದ್ದಾರಿಯಲ್ಲೇ ಅಪರಿಚಿತ ವಾಹನ ಡಿಕ್ಕಿ ಹೊಡೆದು ಕೃಷ್ಣಮೃಗ ಮೃತಪಟ್ಟಿತ್ತು. ಜವನಗುಡ್ಡ ಸುತ್ತಮುತ್ತಲಿನ ಪ್ರದೇಶದಲ್ಲಿ ಕೃಷ್ಣಮೃಗಗಳಿದ್ದು, ಸ್ಥಳೀಯರ ಪ್ರಕಾರ, 500ಕ್ಕೂ ಹೆಚ್ಚು ಕೃಷ್ಣಮೃಗಗಳು ಇವೆ.

‘ಸಮೀಪದ ಉಮ್ಮತ್ತೂರಿನಲ್ಲಿ ಕೃಷ್ಣಮೃಗ ಸಂರಕ್ಷಿತ ಪ್ರದೇಶ ಇದೆ. ಅಲ್ಲಿಂದ ಈ ಪ್ರದೇಶಕ್ಕೆ ಸಂಪರ್ಕ ಇದೆ. ಎರಡೂ ಪ್ರದೇಶಗಳ ನಡುವೆ ಕೃಷ್ಣಮೃಗಗಳು ಓಡಾಡುತ್ತವೆ’ ಎಂದು ಹೇಳುತ್ತಾರೆ ಸ್ಥಳೀಯರು ಹಾಗೂ ಪರಿಸರವಾದಿಗಳು.

‘ನವಿಲು, ಕಾಡು ಹಂದಿ, ಮುಳ್ಳು ಹಂದಿ, ಮೊಲಗಳು, ಚಿರತೆಗಳು ಈ ಭಾಗದಲ್ಲಿವೆ. ಕೆಐಡಿಬಿ ಈ ಕೃಷಿ ಜಮೀನುಗಳಲ್ಲದೆ, ಪ್ರಾಣಿಗಳಿರುವ ಜಾಗವನ್ನು ಕೈಗಾರಿಕೆಗೆ ಗುರುತಿಸಿದ್ದಾರೆ. ಸ್ವಾಧೀನ ಪಡಿಸಿಕೊಂಡರೆ ಪ್ರಾಣಿಗಳಿಗೆ ತೀವ್ರ ತೊಂದರೆಯಾಗಲಿದೆ’ ಎಂದು ಮೇಲಾಜಿಪುರದ ರೈತ ಅಶೋಕ್ ‘ಪ್ರಜಾವಾಣಿ’ಗೆ ತಿಳಿಸಿದರು.

ಈ ಪ್ರದೇಶ ರಕ್ಷಿಸಲು ಸ್ಥಳೀಯರು ಹಾಗೂ ವನ್ಯಪ್ರೇಮಿಗಳು, ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಮಾಡುತ್ತಿದ್ದಾರೆ.

‘ಈ ಹಿಂದೆ, ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸಲು ಅನುಮತಿ ನೀಡುವಾಗ ಅರಣ್ಯ ಮತ್ತು ಪರಿಸರ ಇಲಾಖೆಯು ಬದನಗುಪ್ಪೆ-ಕೆಲ್ಲಂಬಳ್ಳಿ ಪ್ರದೇಶದ ಸುತ್ತಮುತ್ತಲಿರುವ ವನ್ಯಜೀವಿಗಳ ಉಪಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಅನುಮೋದನೆ ನೀಡಿದೆ’ ಎಂಬುದು ಪರಿಸರ ಪ್ರೇಮಿಗಳ ಆರೋಪ.

ಕಂದಾಯ ಜಮೀನು ಹೆಚ್ಚು

‘ಬದನಗುಪ್ಪೆ-ಕೆಲ್ಲಂಬಳ್ಳಿ ಪ್ರದೇಶದಲ್ಲಿ ಕಂದಾಯ ಜಮೀನಿದ್ದು, ನಮ್ಮ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ’ ಎಂಬುದು ಸ್ಥಳೀಯರ ದೂರು. ‘ಪ್ರಾಣಿಗಳ ರಕ್ಷಣೆಗೆ ಕ್ರಮವಹಿಸುವುದು ಅವರ ಜವಾಬ್ದಾರಿ ಅಲ್ಲವೇ’ ಎಂಬುದು ಅವರ ಪ್ರಶ್ನೆ.

‘ನಮ್ಮ ಮನವಿಯಂತೆ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಅಧಿಕಾರಿಗಳು ಶುಕ್ರವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಕೃಷ್ಣಮೃಗಗಳ ಹಿಂಡುಗಳನ್ನು ನೇರವಾಗಿ ಕಂಡಿದ್ದಾರೆ. ಅವುಗಳ ಆವಾಸ ರಕ್ಷಣೆಗೆ ಇಲಾಖೆ ಕ್ರಮ ವಹಿಸಬೇಕು’ ಎಂದು ರೈತ ಅಶೋಕ್ ಒತ್ತಾಯಿಸಿದರು.

ಕೈಗಾರಿಕೆಗೆ ಗುರುತಿಸಿರುವ ಜಾಗದಲ್ಲಿ ಕೃಷ್ಣಮೃಗ ಸೇರಿ ಹಲವು ಪ್ರಾಣಿಗಳಿವೆ. ಅದನ್ನು ಸಂರಕ್ಷಿತ ಪ್ರದೇಶ ಎಂದು ಘೋಷಿಸಲು ಕ್ರಮ ವಹಿಸಬೇಕು

ಡಿ.ಎಸ್‌.ದೊರೆಸ್ವಾಮಿ, ಪರಿಸರವಾದಿ

ಅಲ್ಲಿನ ಸ್ಥಿತಿಗತಿ ಅರಿಯಲು ಎಸಿಎಫ್ ನೇತೃತ್ವದಲ್ಲಿ ಸಮಿತಿ ನಡೆಸಲಾಗಿದೆ. ವರದಿ ಸಿದ್ಧಪಡಿಸಿ ಬೆಂಗಳೂರಿನ ಕಚೇರಿಗೆ ಸಲ್ಲಿಸಲಾಗುವುದು

ಡಾ.ಸಂತೋಷ್‌ಕುಮಾರ್, ಡಿಸಿಎಫ್, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ

ಸುದ್ದಿ 2 ನಿಮಿಷ

ಕೋವಿಡ್: 15,940 ಹೊಸ ಪ್ರಕರಣ



ನವದೆಹಲಿ (ಪಿಟಿಐ): ದೇಶದಲ್ಲಿ ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ತಾಸುಗಳ ಅವಧಿಯಲ್ಲಿ ಹೊಸದಾಗಿ 15,940 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದೇ ಅವಧಿಯಲ್ಲಿ 20 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ಒಟ್ಟು ಕೋವಿಡ್ ಪೀಡಿತರ ಸಂಖ್ಯೆ 4,33,78,234ಕ್ಕೆ ತಲುಪಿದೆ. ಮೃತಪಟ್ಟವರ ಸಂಖ್ಯೆ 5,24,974ಕ್ಕೆ ಏರಿದೆ. ಹೊಸ ಪ್ರಕರಣಗಳೂ ಸೇರಿ ಸಕ್ರಿಯ ಪ್ರಕರಣಗಳ ಸಂಖ್ಯೆ 91,779ಕ್ಕೆ ಏರಿಕೆಯಾಗಿದೆ. ಚೇತರಿಕೆ ಪ್ರಮಾಣ ಶೇ 98.58 ರಷ್ಟಿದೆ. ದೈನಂದಿನ ಪಾಸಿಟಿವಿಟಿ ಪ್ರಮಾಣ ಶೇ 4.39ರಷ್ಟಿದೆ.

ರಾಹುಲ್ ಕಚೇರಿ ಧ್ವಂಸ: 19 ಜನ ಬಂಧನ

ವಯನಾಡ್ (ಪಿಟಿಐ): ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಕಚೇರಿ ಧ್ವಂಸ ಪ್ರಕರಣ ಸಂಬಂಧ ಕೇರಳದ ಆಡಳಿತಾರೂಢ ಸಿಪಿಎಂನ ವಿದ್ಯಾರ್ಥಿ ಸಂಘಟನೆಯಾದ ಎಸ್‌ಎಫ್‌ಐನ 19 ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ವಿರೋಧ ಪಕ್ಷ ಕಾಂಗ್ರೆಸ್ ನೇತೃತ್ವದ ಯುಡಿಎಫ್, ಕೇಂದ್ರದ ನರೇಂದ್ರ ಮೋದಿ ಸರ್ಕಾರವನ್ನು ಮೆಚ್ಚಿಸಲು ಸಿಪಿಎಂ ಪರಿವಾರದ ಕಾರ್ಯಸೂಚಿಯ ಭಾಗವಾಗಿ ಪಕ್ಷದ ವಿದ್ಯಾರ್ಥಿ ಘಟಕದ ಕಾರ್ಯಕರ್ತರು ಸಂಸದರ ಕಚೇರಿ ಮೇಲೆ ದಾಳಿ ನಡೆಸಿದ್ದಾರೆ ಎಂದು ಆರೋಪಿಸಿದೆ.

ಹಿಂಸಾಚಾರದಲ್ಲಿ ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರ ಕಚೇರಿ ಸಿಬ್ಬಂದಿ ಅವಿಶಿತ್ ಎಂಬುವರು ಭಾಗಿಯಾಗಿದ್ದರು ಎಂದು ಆರೋಪಿಸಿದೆ. ಆದರೆ, ಆರೋಪ ತಿರಸ್ಕರಿಸಿದ ಸಚಿವೆ, ವೈಯಕ್ತಿಕ ಕಾರಣಗಳಿಂದ ತಿಂಗಳ ಆರಂಭದಲ್ಲಿ ಆತನನ್ನು ಕಚೇರಿಯಿಂದ ಬಿಡುಗಡೆ ಮಾಡಲಾಗಿತ್ತು ಎಂದು ಸ್ಪಷ್ಟಪಡಿಸಿದ್ದಾರೆ.

ಇಂದಿನಿಂದ ಪ್ರಧಾನಿ ಮೋದಿ ಜರ್ಮನಿ, ಯುಎಇ ಪ್ರವಾಸ

ನವದೆಹಲಿ(ಪಿಟಿಐ): ಜರ್ಮನಿ ಮತ್ತು ಅರಬ್ ಸಂಯುಕ್ತ ಸಂಸ್ಥಾನ(ಯುಎಇ) ಪ್ರವಾಸದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು 12ಕ್ಕೂ ಹೆಚ್ಚು ವಿಶ್ವ ನಾಯಕರ ಜೊತೆ ಸಭೆ ನಡೆಸಲಿದ್ದಾರೆ. ಅಲ್ಲದೆ, 15ಕ್ಕೂ ಹೆಚ್ಚು ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜರ್ಮನಿಯಲ್ಲಿ ನಡೆಯಲಿರುವ ಜಿ-7 ರಾಷ್ಟ್ರಗಳ ಶೃಂಗಸಭೆಯಲ್ಲಿ ವಿಶ್ವ ನಾಯಕರ ಜೊತೆ ಆಹಾರ ಭದ್ರತೆ, ಭಯೋತ್ಪಾದನೆ ನಿಗ್ರಹ, ಇಂಧನ, ಪರಿಸರ, ಹವಾಮಾನ, ಲಿಂಗ ಸಮಾನತೆ ಮತ್ತು ಪ್ರಜಾಪ್ರಭುತ್ವದ ವಿಚಾರಗಳ ಕುರಿತು ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತೇನೆ ಎಂದು ಪ್ರಧಾನಿ ಮೋದಿ ಅವರು ತಿಳಿಸಿದ್ದಾರೆ. ಮಾನವೀಯತೆ ಮೇಲೆ ಪರಿಣಾಮ ಬೀರುವ ಪ್ರಮುಖ ವಿಚಾರಗಳ ಬಗ್ಗೆ ಅಂತರರಾಷ್ಟ್ರೀಯ ಸಹಭಾಗಿತ್ವಕ್ಕೆ ಶಕ್ತಿ ತುಂಬುವ ನಿಟ್ಟಿನಲ್ಲಿ ಜರ್ಮನಿಯು ಭಾರತ, ಅರ್ಜೆಂಟೀನಾ, ಇಂಡೊನೇಷ್ಯಾ, ಸೆನೆಗಲ್ ಮತ್ತು ದಕ್ಷಿಣ ಆಫ್ರಿಕಾ ದೇಶಗಳಿಗೆ ಆಹ್ವಾನ ನೀಡಿದೆ. ಈ ಹಿನ್ನೆಲೆಯಲ್ಲಿ ಮೋದಿ ಅವರು ಶನಿವಾರ ರಾತ್ರಿ ಜರ್ಮನಿಯತ್ತ ಪ್ರಯಾಣ ಬೆಳೆಸಿದರು.

ಜರ್ಮನಿಯ ಮುನ್‌ಶೆನ್ ನಗರದಲ್ಲಿ ಅನಿವಾಸಿ ಭಾರತೀಯರು ಏರ್ಪಡಿಸಿರುವ ಕಾರ್ಯಕ್ರಮವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಇದು ಕೋವಿಡ್ ಅಂತ್ಯದ ಬಳಿಕ ಅತಿದೊಡ್ಡ ಕಾರ್ಯಕ್ರಮವಾಗಿ ಹೊರಹೊಮ್ಮುವ ನಿರೀಕ್ಷೆಯಿದೆ.

ಮೋದಿ ಅವರು ಜೂನ್ 26 ಮತ್ತು 27ರಂದು ಜಿ-7 ರಾಷ್ಟ್ರಗಳ ಶೃಂಗದಲ್ಲಿ ಭಾಗವಹಿಸಲು ಜರ್ಮನಿ ಪ್ರವಾಸ ಕೈಗೊಂಡಿದ್ದಾರೆ. ಜೂನ್ 28ರಂದು ಯುಎಇಗೆ ಪ್ರಯಾಣಿಸಲಿದ್ದು, ಆ ದೇಶದ ಮಾಜಿ ಅಧ್ಯಕ್ಷ ಶೇಖ್ ಖಲೀಫಾ ಬಿನ್ ಝಾಯೆದ್ ಅಲ್ ನಹ್ಯಾನ್ ಅವರ ಸಾವಿಗೆ ಸಂತಾಪ ಸೂಚಿಸಲಿದ್ದಾರೆ.

ಈ ಎರಡೂ ದೇಶಗಳ 60 ಗಂಟೆಗಳ ಈ ಪ್ರವಾಸದ ವೇಳೆ ಮೋದಿ ಅವರು ಜಿ-7 ಸದಸ್ಯ ರಾಷ್ಟ್ರಗಳ ಜೊತೆಗಷ್ಟೇ ಅಲ್ಲದೆ, ಇತರ ದೇಶಗಳ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

ವಿಶ್ವದ ಶ್ರೀಮಂತ ರಾಷ್ಟ್ರಗಳ ಕೂಟವಾದ ಜಿ-7 ಶೃಂಗ ಸಭೆಯಲ್ಲಿ ಜಾಗತಿಕ ಆಹಾರ ಮತ್ತು ಇಂಧನ ಬಿಕ್ಕಟ್ಟಿಗೆ ಕಾರಣವಾಗಿರುವ ಉಕ್ರೇನ್ ಬಿಕ್ಕಟ್ಟಿನ ಬಗ್ಗೆ ಚಿತ್ತ ಹರಿಸುವ ಸಾಧ್ಯತೆಯಿದೆ.

₹ 28.56 ಲಕ್ಷ ನಷ್ಟಭರ್ತಿ: ವಿಆರ್‌ಎಲ್‌ಗೆ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರಕು ಸಾಗಣೆ ವೇಳೆ ₹ 28.56 ಲಕ್ಷ ಮೊತ್ತದ ರಬ್ಬರ್ ಬೆಂಕಿಗಾಹುತಿಯಾದ ಕಾರಣ ಗ್ರಾಹಕರಿಗೆ ಸಂಪೂರ್ಣ ನಷ್ಟ ಭರಿಸಿಕೊಡಬೇಕು’ ಎಂದು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಪ್ರಧಾನ ಪೀಠವು ವಿಆರ್‌ಎಲ್ ಲಾಜಿಸ್ಟಿಕ್ಸ್ ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿಸಿದೆ.

ಈ ಕುರಿತಂತೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ, ‘ಮೆಸರ್ಸ್ ಕರ್ನಾಟಕ ರಬ್ಬರ್ ಟ್ರೇಡಿಂಗ್ ಕಾರ್ಪೊರೇಷನ್’ ಮಾಲೀಕ ಕೆ.ಶಫಿ ನೀಡಿದ್ದ ದೂರನ್ನು ಆಯೋಗದ ನ್ಯಾಯಾಂಗ ಸದಸ್ಯರಾದ ಕೆ.ಬಿ.ಸಂಗಣ್ಣವರ ಮತ್ತು ಎಂ.ದಿವ್ಯಶ್ರೀ ವಿಚಾರಣೆ ನಡೆಸಿದರು.

ದೂರುದಾರರ ಪರ ಹೈಕೋರ್ಟ್ ವಕೀಲ ಪ್ರಶಾಂತ್ ಟಿ.ಪಂಡಿತ್, ‘ಗ್ರಾಹಕ ರಕ್ಷಣಾ ಕಾಯ್ದೆ–1986ರ ಕಲಂ 12ರ ಪ್ರಕಾರ ವಿಆರ್‌ಎಲ್ ಲಾಜಿಸ್ಟಿಕ್ಸ್ ಕಂಪನಿಯವರು ಸೇವಾ ನ್ಯೂನತೆ ಮತ್ತು ಕಂಪನಿಯ ಕರ್ತವ್ಯದ ವಿವರಣೆಯನ್ನು ಆಧರಿಸಿ ಗ್ರಾಹಕರಿಗೆ ಆದ ಸಂಪೂರ್ಣ ನಷ್ಟವನ್ನು ತುಂಬಿಕೊಡಲು ಬಾಧ್ಯಸ್ಥರು’ ಎಂಬ ವಾದವನ್ನು ನ್ಯಾಯಪೀಠ ಪುರಸ್ಕರಿಸಿದೆ.

2013ರ ಮೇ 18ರಿಂದ ₹ 28.56 ಲಕ್ಷವನ್ನು ಪಾವತಿ ಮಾಡುವ ದಿನದವರೆಗೆ ಶೇ 18ರ ಬಡ್ಡಿ ದರದಲ್ಲಿ ನೀಡಬೇಕು. ವ್ಯಾಜ್ಯದ ವೆಚ್ಚವಾಗಿ ₹ 50 ಸಾವಿರ ಪಾವತಿಸಬೇಕು ಎಂದು ನ್ಯಾಯಪೀಠ ಆದೇಶಿಸಿದೆ.

ಪ್ರಕರಣವೇನು?: ವಿಆರ್‌ಎಲ್ ಲಾಜಿಸ್ಟಿಕ್‌ಗೆ ಸೇರಿದ ಲಾರಿಯು ಮೇಲ್ಕಂಡ ಮೌಲ್ಯದ ನೈಸರ್ಗಿಕ ರಬ್ಬರ್ ಅನ್ನು ಸುಳ್ಯದಿಂದ ಹರಿಯಾಣದ ಸೋನೆಪತ್‌ಗೆ ಸಾಗಿಸಬೇಕಿತ್ತು. ಮಾರ್ಗಮಧ್ಯೆ ಲಾರಿಯು ರಾಷ್ಟ್ರೀಯ ಹೆದ್ದಾರಿಯಲ್ಲಿ 2013ರ ಮೇ 18ರಂದು ಬೆಂಕಿಗೆ ಆಹುತಿಯಾಗಿತ್ತು. ಕಂಪನಿಯು ನಷ್ಟ ತುಂಬಿಕೊಡದಿದ್ದರಿಂದ ಶಫಿ ಅವರು, ಗ್ರಾಹಕರ ನ್ಯಾಯಾಲಯಕ್ಕೆ ದೂರು ಸಲ್ಲಿಸಿದ್ದರು.

ಕುಷ್ಟಗಿ ತಾಲ್ಲೂಕಿನ ಕೋನಾಪುರ ಮತ್ತು ಪರಮನಹಟ್ಟಿ ಗ್ರಾಮಗಳಿಗೆ ಬಸ್ ಸಂಚಾರ ಸೇವೆ ಆರಂಭಗೊಂಡಿದ್ದು ವಿದ್ಯಾರ್ಥಿಗಳು ಸಂಭ್ರಮಿಸಿದರು

ವಿದ್ಯಾರ್ಥಿಗಳ ಪ್ರತಿಭಟನೆಗೆ ಸ್ಪಂದನೆ: ಗ್ರಾಮಗಳಿಗೆ ಬಂತು ಬಸ್

ಹನುಮಸಾಗರ (ಕೊಪ್ಪಳ ಜಿಲ್ಲೆ): ಕುಷ್ಟಗಿ ತಾಲ್ಲೂಕಿನ ಕೋನಾಪುರ ಮತ್ತು ಪರಮನಹಟ್ಟಿ ಗ್ರಾಮಗಳ ವಿದ್ಯಾರ್ಥಿಗಳು ಬಸ್ ಸೌಲಭ್ಯಕ್ಕೆ ಒತ್ತಾಯಿಸಿ ಶುಕ್ರವಾರ ನಡೆಸಿದ ಪ್ರತಿಭಟನೆಗೆ ಸ್ಪಂದನೆ ಸಿಕ್ಕಿದ್ದು, ಶನಿವಾರ ಬಸ್ ಸಂಚಾರ ಸೇವೆ ಆರಂಭಗೊಂಡಿತು.

ಗ್ರಾಮಗಳಿಗೆ ಬಸ್ ಬರುತ್ತಿದ್ದಂತೆ ವಿದ್ಯಾರ್ಥಿಗಳು ಸಂಭ್ರಮಿಸಿದರು. ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದರು.

‘ಬಸ್ ಸೌಲಭ್ಯವಿಲ್ಲದೇ ನಿತ್ಯ 4 ಕಿ.ಮೀ ನಡೆದು ಹೋಗಬೇಕಿತ್ತು. ಸಮಸ್ಯೆಯನ್ನು ಮನಗಾಣಿಸಲು ಪ್ರತಿಭಟಿಸಿದ್ದೆವು. ಈಗ ಬಸ್ ಸಂಚಾರ ಆರಂಭಗೊಂಡಿದ್ದು, ಖುಷಿ ತಂದಿದೆ’ ಎಂದು ವಿದ್ಯಾರ್ಥಿಗಳು ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಮಹಾರಾಷ್ಟ್ರ ರಾಜಕೀಯ ಬಿಕ್ಕಟ್ಟಿಗೆ ಯಾರು ಕಾರಣ?
ಭಾಗವಹಿಸುವವರು:
ಸಲೀಂ ಅಹಮದ್, ವಿಧಾನಪರಿಷತ್ತಿನ ಸದಸ್ಯ ಹಾಗೂ ಕಾರ್ಯಾಧ್ಯಕ್ಷ, ಕೆಪಿಸಿಸಿ
ವರಲಕ್ಷ್ಮಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ, ಸಿಪಿಐ(ಎಂ)
ಅರುಣ ಶಹಾಪುರ, ವಿಧಾನಪರಿಷತ್ತಿನ ಮಾಜಿ ಸದಸ್ಯ, ಬಿಜೆಪಿ
ಎಲ್. ಗಂಗಾಧರ ಮೂರ್ತಿ, ರಾಜ್ಯವಕ್ತಾರ, ಜೆಡಿಎಸ್
ಸಂವಾದ
ಸಂಜೆ 4 ರಿಂದ 5

ಒಬಿಸಿ ಮೀಸಲಾತಿಗೆ ಕುಂಚಿಟಿಗರ ಆಗ್ರಹ

ಪ್ರಜಾವಾಣಿ ವಾರ್ತೆ

ತುಮಕೂರು: ‘ಸಮುದಾಯವನ್ನು ಯಾವುದೇ ಹಂತದಲ್ಲಿ ಇನ್ನು ಮುಂದೆ ನಿರ್ಲಕ್ಷ್ಯಿಸಿದರೆ ಸುಮ್ಮನಿರುವುದಿಲ್ಲ’ ಎಂದು ಕುಂಚಿಟಿಗ ಒಕ್ಕಲಿಗರು ಎಚ್ಚರಿಸಿದ್ದಾರೆ. ಇಲ್ಲಿನ ಗಾಜಿನ ಮನೆಯಲ್ಲಿ ಶನಿವಾರ ಸಮಾವೇಶ ನಡೆಸಿದ ಅವರು ಶಕ್ತಿ ಪ್ರದರ್ಶಿಸಿ, ಈ ಎಚ್ಚರಿಕೆಯ ಸಂದೇಶವನ್ನು ರವಾನಿಸಿದರು.

ತುಮಕೂರು, ಚಿತ್ರದುರ್ಗ, ದಾವಣಗೆರೆ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಭಾಗದಲ್ಲಿ ಸಮುದಾಯದ ಜನರು ಹೆಚ್ಚಿದ್ದಾರೆ. ಎಲ್ಲರೂ ಒಗ್ಗೂಡಬೇಕು. ಹಿಂದಿನ ವೈಮನಸ್ಸು, ಆಗಿರುವ ವ್ಯತ್ಯಾಸಗಳು, ಕಹಿ ಘಟನೆಗಳನ್ನು ಮರೆತು ಒಟ್ಟಾಗಿ ಸಾಗಬೇಕು ಎಂದು ಸಮಾಜದ ಮುಖಂಡರು ಕೋರಿದರು.

ಒಬಿಸಿಗೆ ಸೇರಿಸಲು ಒತ್ತಾಯ: ಕುಂಚಿಟಿಗರನ್ನು ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳ ಪಟ್ಟಿಗೆ (ಒಬಿಸಿ) ಸೇರಿಸಬೇಕು ಎಂದು ಪ್ರಮುಖವಾಗಿ ಒತ್ತಾಯಿಸಲಾಯಿತು. ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ನಡೆದು, ಒಬಿಸಿ ಪಟ್ಟಿಗೆ ಸೇರಿಸಲು ಕೇಂದ್ರಕ್ಕೆ ಈಗಾಗಲೇ ಶಿಫಾರಸು ಮಾಡಲಾಗಿದ್ದು, ಒಪ್ಪಿಗೆ ನೀಡಬೇಕು ಎಂದು ಒತ್ತಾಯಿಸಲಾಯಿತು.

ಒಕ್ಕಲಿಗ ಸಮುದಾಯದ ಇತರ ಪಂಗಡಗಳನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಒಬಿಸಿ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ. ಆದರೆ ಕುಂಚಿಟಿಗರನ್ನು ಮಾತ್ರ ಕೈಬಿಟ್ಟು ತಾರತಮ್ಯ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತುಮಕೂರಿನ ಗಾಜಿನ ಮನೆಯಲ್ಲಿ ಶನಿವಾರ ನಡೆದ ಕುಂಚಿಟಿಗ ಒಕ್ಕಲಿಗರ ಸಮಾವೇಶದಲ್ಲಿ ಭಾಗವಹಿಸಿದ್ದ ಜನರು

‘ಇದರಿಂದಾಗಿ ಕೇಂದ್ರ ಸರ್ಕಾರದ ಉದ್ಯೋಗ ಹಾಗೂ ಶಿಕ್ಷಣ ಮೀಸಲಾತಿಯಿಂದ ಸಮುದಾಯ ವಂಚಿತವಾಗಿದೆ. ರಾಜ್ಯದಲ್ಲಿ ಒಬಿಸಿ ಪಟ್ಟಿಗೆ ಸೇರಿಸಿದಂತೆ ಕೇಂದ್ರದಲ್ಲೂ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು’ ಎಂದು ಬೇಡಿಕೆಯನ್ನು ಸಲ್ಲಿಸಲಾಯಿತು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿ ಮಠದ ನಂಜಾವಧೂತ ಸ್ವಾಮೀಜಿ, ಮುಖಂಡರಾದ ಎಚ್‌.ಡಿ.ಕುಮಾರಸ್ವಾಮಿ, ಡಿ.ವಿ. ಸದಾನಂದಗೌಡ, ಟಿ.ಬಿ.ಜಯಚಂದ್ರ ಇತರರು ಮಾತನಾಡಿದರು.

ಹಿಂದೆ ಕೇಂದ್ರದ ಒಬಿಸಿ ಪಟ್ಟಿಗೆ ಕುಂಚಿಟಿಗರ ಸೇರ್ಪಡೆಗೆ ಶಿಫಾರಸು ಮಾಡಿದ್ದು, ಆಗ ತಿರಸ್ಕರಿಸಲಾಗಿದೆ. ಈಗ ಮತ್ತೊಮ್ಮೆ ಸಲ್ಲಿಕೆಯಾಗಿರುವ ವರದಿಯನ್ನು ಪರಿಗಣಿಸಿ, ಮೀಸಲಾತಿ ನೀಡಬೇಕು ಎಂದು ಸಮಾವೇಶದಲ್ಲಿ ಮಾತನಾಡಿದ ಈ ಎಲ್ಲ ಪ್ರಮುಖರು ಒತ್ತಾಯಿಸಿದರು.

ಅಮೆರಿಕ: ಗರ್ಭಪಾತದ ಹಕ್ಕು ನಿಷೇಧಿಸಿದ ಕೋರ್ಟ್

ವಾಷಿಂಗ್ಟನ್/ ವಿಶ್ವಸಂಸ್ಥೆ(ಎಪಿ/ಪಿಟಿಐ): ಅಮೆರಿಕದಲ್ಲಿ ಕಳೆದ 50 ವರ್ಷಗಳಿಂದ ಜಾರಿಯಲ್ಲಿದ್ದ, ಮಹಿಳೆಯರ ಗರ್ಭಪಾತದ ಸಾಂವಿಧಾನಿಕ ಹಕ್ಕನ್ನು ಸುಪ್ರೀಂ ಕೋರ್ಟ್ ಶುಕ್ರವಾರ ರದ್ದುಗೊಳಿಸಿದೆ. ಇದರಿಂದಾಗಿ ಅಮೆರಿಕದ ಹಲವು ರಾಜ್ಯಗಳಲ್ಲಿ ಇನ್ನು ಮುಂದಿನ ದಿನಗಳಲ್ಲಿ ಗರ್ಭಪಾತವನ್ನು ನಿಷೇಧಿಸುವ ಸಾಧ್ಯತೆ ಹೆಚ್ಚಾಗಿದೆ.

ಸಾಂದರ್ಭಿಕ ಚಿತ್ರ

ಅಮೆರಿಕದ ಮಹಿಳೆಯರಿಗೆ ಗರ್ಭಪಾತ ಮಾಡಿಸಿಕೊಳ್ಳಲು ಅವಕಾಶ ನೀಡಿದ್ದ 50 ವರ್ಷದ ಹಿಂದಿನ ತೀರ್ಪನ್ನು ಸುಪ್ರೀಂ ಕೋರ್ಟ್ 6-3 ಮತಗಳಿಂದ ರದ್ದುಗೊಳಿಸುವ ತೀರ್ಮಾನವನ್ನು ಶುಕ್ರವಾರ ಕೈಗೊಂಡಿತ್ತು. ಈ ತೀರ್ಪಿನ ಪ್ರಕಾರ ಮುಂದಿನ ದಿನಗಳಲ್ಲಿ ಗರ್ಭಪಾತಕ್ಕೆ ಸಂಬಂಧಿಸಿ ಕಾನೂನು ರಚಿಸುವುದು ರಾಜ್ಯಗಳಿಗೆ ಸಂಬಂಧಿಸಿರಲಿದೆ. ಅಲ್ಲದೆ, ಕೆಲವು ರಾಜ್ಯಗಳು ಗರ್ಭಪಾತವನ್ನು ನಿಷೇಧ ಮಾಡುವುದಾಗಿ ಘೋಷಣೆ ಮಾಡಿವೆ.

ವಿವಿಧೆಡೆ ಪ್ರತಿಭಟನೆ: ಸುಪ್ರೀಂಕೋರ್ಟ್ ತೀರ್ಪಿನ ಪರವಾಗಿ ಹಾಗೂ ವಿರೋಧಿಸಿ ಅಮೆರಿಕದಲ್ಲಿ ಪ್ರತಿಭಟನೆಗಳು ನಡೆದಿವೆ.

ಗರ್ಭಪಾತ ವಿರೋಧಿಸಿ ಶುಕ್ರವಾರ ರಾತ್ರಿ ಅರಿಜೋನಾ ಕ್ಯಾಪಿಟಲ್‌ನಲ್ಲಿ ಮತಪ್ರದರ್ಶನ ನಡೆಸುತ್ತಿದ್ದವರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು.

‘ಗರ್ಭಪಾತದ ಹಕ್ಕು ರಕ್ಷಿಸಲು ಯತ್ನಿಸುವೆ’

ಸುಪ್ರೀಂ ಕೋರ್ಟ್‌ನಿಂದ ರದ್ದಾಗಿರುವ ಗರ್ಭಪಾತದ ಸಾಂವಿಧಾನಿಕ ಹಕ್ಕನ್ನು ರಕ್ಷಿಸಲು ಯತ್ನಿಸುವುದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಭರವಸೆ ನೀಡಿದ್ದಾರೆ. ‘ಇಷ್ಟಕ್ಕೇ ಎಲ್ಲವೂ ಮುಗಿದಿಲ್ಲ. ಹಕ್ಕುಗಳನ್ನು ರಕ್ಷಿಸುವ ಡೆಮಾಕ್ರಟ್ ಪಕ್ಷದ ಹೆಚ್ಚು ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು’ ಎಂದು ಅವರು ಜನರಿಗೆ ಮನವಿ ಮಾಡಿದ್ದಾರೆ.

ಶ್ವೇತಭವನದಲ್ಲಿ ಮಾತನಾಡಿದ ಅವರು, ‘ದೇಶದಾದ್ಯಂತ ಮಹಿಳೆಯರ ಆರೋಗ್ಯ ಮತ್ತು ಜೀವನ ಅಪಾಯದಲ್ಲಿದೆ. ಇದು ನ್ಯಾಯಾಲಯ ಮತ್ತು ದೇಶಕ್ಕೆ ದುಃಖಕರ ಸಂಗತಿ’ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಅಮೆರಿಕ: ಬಂದೂಕು ನಿಯಂತ್ರಣ ಮಸೂದೆಗೆ ಬೈಡನ್ ಅಂಕಿತ

ವಾಷಿಂಗ್ಟನ್ (ಎಪಿ): ‘ಉಭಯ ಪಕ್ಷೀಯ ಬಂದೂಕು ನಿಯಂತ್ರಣ ಮಸೂದೆ’ಗೆ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಶನಿವಾರ ಸಹಿ ಹಾಕಿದ್ದಾರೆ. ಈ ಮಸೂದೆಗೆ ಅಮೆರಿಕದ ಕಾಂಗ್ರೆಸ್‌ನ (ಸಂಸತ್) ಉಭಯ ಸದನಗಳು ಶುಕ್ರವಾರ ವಷ್ಟೇ ಅನುಮೋದನೆ ನೀಡಿದ್ದವು.

ಅಮೆರಿಕದಲ್ಲಿ ಇತ್ತೀಚೆಗೆ ಬಂದೂಕುಧಾರಿಗಳು ನಡೆಸಿದ ಸಾಮೂಹಿಕ ಗುಂಡಿನ ದಾಳಿಗಳಲ್ಲಿ ಸಾಕಷ್ಟು ಜನರು ಪ್ರಾಣ ಕಳೆದುಕೊಂಡಿದ್ದರು. ಕಳೆದ ತಿಂಗಳು ಟೆಕ್ಸಾಸ್‌ನ ಯುವಾಲ್ಡೆಯ ಪ್ರಾಥಮಿಕ ಶಾಲೆಯಲ್ಲಿ ಬಂದೂಕುಧಾರಿಯೊಬ್ಬ ನಡೆಸಿದ್ದ ಗುಂಡಿನ ದಾಳಿಯಲ್ಲಿ 19 ವಿದ್ಯಾರ್ಥಿಗಳು ಹಾಗೂ ಇಬ್ಬರು ಶಿಕ್ಷಕರು ಮೃತಪಟ್ಟಿದ್ದರು. ಈ ಘಟನೆ ನಡೆದ ತಿಂಗಳ ಬಳಿಕ, 13 ಶತಕೋಟಿ ಡಾಲರ್ ಮೊತ್ತದ ಪ್ಯಾಕೇಜ್‌ನ ಈ ಮಸೂದೆಯನ್ನು ಸಿದ್ಧಪಡಿಸಲಾಗಿತ್ತು.

ಓಸ್ಲೊದಲ್ಲಿ ಶೂಟೌಟ್: ಇಬ್ಬರ ಸಾವು

ಓಸ್ಲೊ (ಪಿಟಿಐ): ನಾರ್ವೆ ರಾಜಧಾನಿ ಓಸ್ಲೊ ನಗರದಲ್ಲಿ ರಾತ್ರಿ ಪಾರ್ಟಿ ವೇಳೆ ಬಂದೂಕುಧಾರಿಯೊಬ್ಬ ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದು, 10 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಶಂಕಿತ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತೃತೀಯ ಲಿಂಗಿಗಳು ಹಮ್ಮಿಕೊಂಡಿದ್ದ ವಾರ್ಷಿಕ ಕಾರ್ಯಕ್ರಮ ‘ಪ್ರೈಡ್ ಫೆಸ್ಟಿವಲ್’ ನಡೆಯುತ್ತಿದ್ದ ವೇಳೆ ಈ ದಾಳಿ ನಡೆದಿದೆ. ಈ ಭಯೋತ್ಪಾದಕರ ಕೃತ್ಯ ಇರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಮುಂಬೈ ದಾಳಿ ಸಂಚುಕೋರನಿಗೆ 15 ವರ್ಷ ಜೈಲು

ಲಾಹೋರ್ (ಪಿಟಿಐ): ಭಯೋತ್ಪಾದಕರಿಗೆ ಹಣಕಾಸಿನ ನೆರವು ನೀಡಿದ ಪ್ರಕರಣಕ್ಕೆ ಸಂಬಂಧಿಸಿ 2008ರ ಮುಂಬೈ ದಾಳಿಯ ಪ್ರಮುಖ ಸಂಚುಕೋರ ಸಾಜಿದ್ ಮಜೀದ್ ಮೀರ್‌ಗೆ ಪಾಕಿಸ್ತಾನದ ಭಯೋತ್ಪಾದನಾ ನಿಗ್ರಹ ನ್ಯಾಯಾಲಯವು 15 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಈತ ಮೃತಪಟ್ಟಿದ್ದಾನೆ ಎಂದು ಈ ಹಿಂದೆ ಪಾಕಿಸ್ತಾನವು ಘೋಷಿಸಿತ್ತು. ಅಂತರರಾಷ್ಟ್ರೀಯ ಕಾರ್ಯಪಡೆಯ (ಎಫ್‌ಎಟಿಎಫ್) ‘ಬೂದುಪಟ್ಟಿ’ಯಿಂದ ಹೊರಬರುವ ನಿಟ್ಟಿನಲ್ಲಿ ಪಾಕಿಸ್ತಾನವು ಈ ಕ್ರಮ ಕೈಗೊಂಡಿದೆ ಎನ್ನಲಾಗಿದೆ.

ಲೈಸಿಚಾನ್ಸ್ಕ್ ವಶಕ್ಕೆ ರಷ್ಯಾ ಯತ್ನ

ಕೀವ್ (ಎಪಿ): ಕೀವ್ : ಪೂರ್ವ ಉಕ್ರೇನ್‌ನ ಎರಡನೇ ನಗರ ಲೈಸಿಚಾನ್ಸ್ಕ್ ವಶಪಡಿಸಿಕೊಳ್ಳಲು ರಷ್ಯಾ ಪಡೆಗಳು ಪ್ರಯತ್ನಿಸುತ್ತಿದ್ದು, ವಾರಗಳ ಹೋರಾಟದ ನಂತರ ಉಕ್ರೇನ್ ಪಡೆಗಳು ಈ ನಗರದಿಂದ ವಾಪಸಾಗಲು ಪ್ರಾರಂಭಿಸಿವೆ ಎಂದು ಉಕ್ರೇನ್‌ನ ಪ್ರಾದೇಶಿಕ ಸೇನಾ ಗವರ್ನರ್ ಸೆರ್‌ಹಿಯ್ ಹೈಡೇ ತಿಳಿಸಿದ್ದಾರೆ.

ನಗರದ ಹೃದಯಭಾಗದಿಂದ ದೂರವಿರುವ ಪ್ರದೇಶಗಳ ಮೇಲೆ ರಷ್ಯಾ ಕ್ಷಿಪಣಿ ದಾಳಿ ಆರಂಭಿಸಿದೆ. ದಕ್ಷಿಣದಿಂದ ಲೈಸಿಚಾನ್ಸ್ಕ್ ನಗರ ನಿರ್ಬಂಧಿಸಲು ಪ್ರಯತ್ನಿಸುತ್ತಿವೆ.

ರಷ್ಯಾದ ಬಾಂಬ್ ದಾಳಿಯಿಂದ ಸೆವೆರೊಡೊನೆಟ್ಸ್ಕ್‌ನ ಹೆಚ್ಚಿನ ಭಾಗ ಹಾನಿಗೊಂಡಿದೆ. ಉಕ್ರೇನ್ ಪಡೆಗಳ ನೂರಾರು ಸೈನಿಕರು ನಗರದ ಅಂಚಿನಲ್ಲಿರುವ ರಾಸಾಯನಿಕ ಕಾರ್ಖಾನೆಯಲ್ಲಿ ಸುಮಾರು 500 ನಾಗರಿಕರೊಂದಿಗೆ ಆಶ್ರಯ ಪಡೆದಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

Drivers
REQUIRED VAN driver contact Kenmore school, 31, Kanakapura road, Basavanagudi, Bangalore-04, 9901501185 kenmoreschool@gmail.com

ಬೆಂಗಳೂರಿನ ಬಾಣಸವಾಡಿ ಮನೆಯಲ್ಲಿ ಅಡುಗೆ (Veg & Non-Veg)ಕೆಲಸ ಹಾಗೂ ಮನೆಯ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಯಸ್ಸು: 30-40 ವರ್ಷದೊಳಗಿರಬೇಕು. ಸಂಬಳ:10,000. ಉಚಿತ ಊಟ ಮತ್ತು ವಸತಿ ಕೊಡಲಾಗುವುದು. 98450 77680.

ಬೆಂಗಳೂರಿನಲ್ಲಿರುವ ಹೋಟೆಲ್‌ಗಳಿಗೆ ರೆಡಿಮಿಕ್ಸ್ ಮಸಾಲ ಬಳಸಿ ಬಿರಿಯಾನಿ ಮಾಡಲು ಬರುವವರು ಚೆಫ್ಸ್ (ಬಟ್ಲರು) ಬೇಕಾಗಿದ್ದರೆ. ಸಂಬಳ 16000-20000/- ಸಂಪರ್ಕಿಸಿ:8105999349.

Teachers/ Professors
WANTED
For Nandini Vidyanikethana Co-Ed Residential School, Roadhalli, Narayanapura Post, Devanahalli Tq., Bangalore Rural Dist.-562135.
1. Trained Graduate / P.G Teachers for Maths, Physics, Kannada & Hindi
2. Trained Pre-Primary Teachers.
Candidates should be proficient in English. Outstation teachers will be given free accommodation.
Contact nos.: 9845756791, 9686196154
Email: nandiniicse@gmail.com

WANTED TEACHERS for Hindi, Social and Science. Navodaya High School, Avathi, Devanahalli tq, Bangalure Rural Dist. Contact- 8105857102/ 9663491387. Email- sudhavn46@gmail.com

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ನಿರುದ್ಯೋಗಿಗಳಿಗೆ ಸದವಕಾಶ. ನಮ್ಮ ಕಂಪನಿಯ ಅಮೃತಬಳ್ಳಿ ನೋನಿಯನ್ನು ಕಾರಿನಲ್ಲಿ ಹೋಗಿ ಪ್ರಚಾರಮಾಡಿ ಬಿಜಿನೆಸ್ ಮಾಡಿ ದಿನಕ್ಕೆ 800- 1200ರೂವರೆಗೆ ಪ್ರತಿದಿನ ಸಂಪಾದಿಸಿ. (ಉಚಿತ ವಸತಿ). 8904379634/ 9513670249

Wanted
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000/-. 9538811104, 9538811223

General
ಬೇಕಾಗಿದ್ದಾರೆ: FRESH Fruits ಅಂಗಡಿಗೆ ಬಿಲ್ಲಿಂಗ್ ಮತ್ತು ಹೆಲ್ಪರ್ ಕೆಲಸಕ್ಕೆ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. (ಯುವಕರಿಗೆ ವಸತಿ ಸೌಲಭ್ಯವಿದೆ). ವಯಸ್ಸು: 18ರಿಂದ 25, ವೇತನ: 12,000. ಸಮಯ: ಬೆಳಿಗ್ಗೆ 6 ರಿಂದ ಮಧ್ಯಾಹ್ನ 2 (1st Shift), ಮಧ್ಯಾಹ್ನ 2 ರಿಂದ ರಾತ್ರಿ 10 (2nd Shift) (8 ಗಂಟೆ ಡ್ಯೂಟಿ). ಶಿಕ್ಷಣ: 10 ಪಾಸಾಗಿರಬೇಕು. ವಿಳಾಸ: ನಂ. 6/1ಎ, ವಿಶ್ವನೀಡಂ ಅಂಚೆ, ಸುಂಕದಕಟ್ಟೆ, ಮಾಗಡಿರಸ್ತೆ, ಬೆಂಗಳೂರು - 560 091. ಸಂಪರ್ಕಿಸಿ: ಪುರುಷೋತ್ತಮ್: 8951389775

Accounts & Finance
ACCOUNTANT REQD for Seema Traders, APMC Yard, Yeshwantpur. Female candidates only. Contact: 9448077986, raviseema14@gmail.com

Cook
ಮಂಗಳೂರಿನಲ್ಲಿ ಕೇಕು ಮಾಸ್ಟರ್ ಬೇಕಾಗಿದ್ದಾರೆ. ಸಂಬಳ 20 to 25000. ವಸತಿ ಮತ್ತು ಊಟ ಕೊಡಲಾಗುವುದು. 9008713596

ಭವಿಷ್ಯ
Astrology
ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಶ್ರೀರಾಘವೇಂದ್ರ ಕುಲಕರ್ಣಿ: ಜನ ವಶೀಕರಣ, ಲಕ್ಷ್ಮಿ ವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣ, ಇನ್ನಿತರ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ಫೋನಿನ ಮೂಲಕ ಪರಿಹಾರ: 9535759222

“ಶ್ರೀಭಗವತಿ ಜ್ಯೋತಿಷ್ಯಾಲಯ” ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

“ಶ್ರೀಆದಿಶಕ್ತಿ ಜ್ಯೋತಿಷ್ಯಂ” ಎಲ್ಲಿಯೂ ಪರಿಹಾರವಾಗದ ಕಠಿಣ ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ
Travel
ಆಗಸ್ಟ್‌ನಲ್ಲಿ 14 ದಿನಗಳ ಅಷ್ಟ ಜ್ಯೋತಿರ್ಲಿಂಗ ಅಕ್ಟೋಬರ್‌ನಲ್ಲಿ 12 ದಿನಗಳ ಬದರಿನಾಥ್, ಕೇದಾರನಾಥ್ ಯುಮುನೋತ್ರಿ,ಗಂಗೋತ್ರಿ. ನವಂಬರ್‌ನಲ್ಲಿ 8 ದಿನಗಳ ಕಾಶಿ,ಗಯಾ ಕೋಲ್ಕತ,ಭುವನೇಶ್ವರ್. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು. 9448294477

19.09.2022 ರಿಂದ 13 ದಿನಗಳು ಗಂಗೋತ್ರಿ ಯಮುನೋತ್ರಿ, ಬದ್ರಿನಾಥ್, ಕೇದಾರನಾಥ್, ಹರಿದ್ವಾರ್, ದೆಹಲಿ ಪ್ರವಾಸ. ಶ್ರೀಗಂಗಾ ಟೂರಿಸ್ಟ್. 9480253807

Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 13/07/22 ಪೂರಿ ಜಗನ್ನಾಥ್, ಕೋನಾರ್ಕ್, ಚಂದ್ರಭಾಗ ಬೀಚ್, ಭುವನೇಶ್ವರ್. 12/07/22 ಮಧ್ಯಪ್ರದೇಶ 2 ಜ್ಯೋತಿರ್ಲಿಂಗ ದರ್ಶನ. 9591017782

ಇತರೆ
Dance/ Music Classes
KEYBOARD SINGING Film Acting Direction classes Online/Offline started at Nelamangala Bangalore Contact 9945874176

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್
Agricultural Land
Out-Station
ಕೃಷಿ ಹಾಗೂ ಶೈಕ್ಷಣಿಕ ಸಂಸ್ಥೆಯ ಉದ್ದೇಶಕ್ಕಾಗಿ 5 ರಿಂದ 10 ಎಕರೆ ಭೂಮಿ ದೊಡ್ಡಬಳ್ಳಾಪುರದ ಸುತ್ತಮುತ್ತ (ಗೌರಿಬಿದನೂರು, ದೊಡ್ಡಬೆಳವಂಗಲ, ಮಧುಗಿರಿ, ಕೊರಟಗೆರೆ, ತೂಬಗೆರೆ, ಮೆಳೆಕೋಟೆ, ಚಿಕ್ಕಮಧುರೆ, ತೊಂಡೆಬಾವಿ) ಬೇಕಾಗಿದೆ. ಸಂಪರ್ಕಿಸಿ: 96327 69888

ವ್ಯಾಪಾರ
Business Offers
Machinery & Tools
STONE CRUSHER Good Condition (12/10 Size) along with Conveyor Belts, Vibrator Jali. Contact: 9133361013

ವೈವಾಹಿಕ
Brides Wanted
Muslim
37 URDU Sunni Muslim MS MCh Ortho Surgeon Chennai Divorced seeking MD/MS DOCTOR bride. Contact jafahmed33@gmail.com

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಬಂಡಾಯ ಬಣಕ್ಕೆ ಸೇನಾ ಸ್ಥಾಪಕನ ಹೆಸರು ಇರಿಸಿದ್ದಕ್ಕೆ ಉದ್ಧವ್ ಠಾಕ್ರೆ ವಿರೋಧ

ಬಾಳಾ ಠಾಕ್ರೆ ಹೆಸರಿಗಾಗಿ ಕಿತ್ತಾಟ

ಮುಂಬೈ (ಪಿಟಿಐ): ಶಿವಸೇನಾ ಸ್ಥಾಪಕ ಬಾಳಾಸಾಹೇಬ್ ಠಾಕ್ರೆ ಹೆಸರನ್ನು ಬಳಸಿಕೊಳ್ಳುವ ವಿಚಾರದಲ್ಲಿ ಪಕ್ಷದ ಈಗಿನ ಮುಖ್ಯಸ್ಥ ಉದ್ಧವ್ ಠಾಕ್ರೆ ಮತ್ತು ಏಕನಾಥ ಶಿಂಧೆ ನೇತೃತ್ವದ ಬಂಡಾಯ ಗುಂಪಿನ ನಡುವೆ ಹಗ್ಗಜಗ್ಗಾಟ ನಡೆದಿದೆ.

ಶಿವಸೇನಾ ಮತ್ತು ಅದರ ಸ್ಥಾಪಕ ಬಾಳಾಠಾಕ್ರೆ ಅವರ ಹೆಸರನ್ನು ಯಾವುದೇ ರಾಜಕೀಯ ಪಕ್ಷ ಅಥವಾ ಗುಂಪು ಬಳಸುವಂತಿಲ್ಲ ಎಂಬ ನಿರ್ಣಯವನ್ನು ಮುಂಬೈನಲ್ಲಿ ನಡೆದ ಶಿವಸೇನಾ ರಾಷ್ಟ್ರೀಯ ಕಾರ್ಯಕಾರಿಣಿಯು ಅಂಗೀಕರಿಸಿದೆ. ಆದರೆ, ಗುವಾಹಟಿಯ ಪಂಚತಾರಾ ಹೋಟೆಲ್‌ನಲ್ಲಿ ತಂಗಿರುವ ಶಿಂಧೆ ನೇತೃತ್ವದ ಗುಂಪು, ತಮ್ಮ ಗುಂಪಿಗೆ 'ಶಿವಸೇನಾ (ಬಾಳಾಸಾಹೇಬ್)' ಎಂದು ಹೆಸರು ಇರಿಸಿದೆ.

'ಶಿವಸೇನಾ ಪಕ್ಷವು ಬಾಳಾಠಾಕ್ರೆ ಅವರಿಗೆ ಸೇರಿದ್ದು. ಹಿಂದುತ್ವ ಮತ್ತು ಮರಾಠಿ ಅಸ್ಮಿತೆಯ ತೀವ್ರ ಸಿದ್ಧಾಂತವನ್ನು ಮುಂದಕ್ಕೆ ಒಯ್ಯಲು ಪಕ್ಷವು ಬದ್ಧವಾಗಿದೆ. ಈ ಹಾದಿಯನ್ನು ಎಂದಿಗೂ ಬದಲಾಯಿಸುವುದಿಲ್ಲ' ಎಂದು ಪಕ್ಷದ ಸಂಸದ ಸಂಜಯ ರಾವುತ್ ಹೇಳಿದ್ದಾರೆ.

'ಮತ ಪಡೆಯಲು ಬಯಸುವವರು ಅವರವರ ತಂದೆಯ ಹೆಸರು ಬಳಸಬೇಕೇ ವಿನಾ ಶಿವಸೇನಾದ ಪಿತಾಮಹ ಬಾಳಾಸಾಹೇಬ್ ಅವರ ಹೆಸರನ್ನು ಅಲ್ಲ' ಎಂದು ಕಾರ್ಯಕಾರಿಣಿಯಲ್ಲಿ ಉದ್ಧವ್ ಹೇಳಿದ್ದಾಗಿ ಶಿವಸೇನಾದ ಮುಖ್ಯ ವಕ್ತಾರ ಸಂಜಯ ರಾವುತ್ ಉಲ್ಲೇಖಿಸಿದ್ದಾರೆ.

ಅನಧಿಕೃತ ವ್ಯಕ್ತಿಗಳು ಅಥವಾ ಪಕ್ಷಾಂತರಿಗಳ ಗುಂಪುಗಳು ಶಿವಸೇನಾ ಅಥವಾ ಬಾಳಾಸಾಹೇಬ್ ಠಾಕ್ರೆ ಅವರ ಹೆಸರನ್ನು ದುರುಪಯೋಗ ಮಾಡಿಕೊಳ್ಳಬಾರದು ಎಂದು ಚುನಾವಣಾ ಆಯೋಗ ಹಾಗೂ ವಿಧಾನಸಭೆಗೆ ಪತ್ರ ಬರೆಯಲಾಗುವುದು ಎಂದೂ ಉದ್ಧವ್ ಹೇಳಿದ್ದಾರೆ.

ಪಕ್ಷಕ್ಕೆ ವಿಶ್ವಾಸದ್ರೋಹ ಎಸಗಿದವರ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರವನ್ನು ಉದ್ಧವ್ ಠಾಕ್ರೆ ಅವರಿಗೆ ನೀಡಿ ರಾಷ್ಟ್ರೀಯ ಕಾರ್ಯಕಾರಿಣಿಯು ನಿರ್ಧಾರ ಕೈಗೊಂಡಿದೆ. ಆದರೆ, ಬಂಡಾಯ ಎದ್ದಿರುವ ಶಾಸಕರ ಗುಂಪಿನ ನಾಯಕ ಏಕನಾಥ ಶಿಂಧೆ ವಿರುದ್ಧ ತಕ್ಷಣಕ್ಕೆ ಯಾವುದೇ ಕ್ರಮವನ್ನು ಕಾರ್ಯಕಾರಿಣಿಯು ಕೈಗೊಂಡಿಲ್ಲ.

ಸಭೆಯಲ್ಲಿ ಆರು ನಿರ್ಣಯಗಳನ್ನು ಅಂಗೀಕರಿಸಲಾಗಿದೆ. ಬಂಡಾಯ ಶಾಸಕರ ನಡೆಯನ್ನು ಕಾರ್ಯಕಾರಿಣಿಯು ಖಂಡಿಸಿದೆ. ಪಕ್ಷವು ಉದ್ಧವ್ ಅವರ ಜತೆಗೆ ಇದೆ ಎಂದು ಘೋಷಿಸಲಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಮುಂದೆ ನಡೆಯಲಿರುವ ಎಲ್ಲ ಚುನಾವಣೆಗಳಲ್ಲಿಯೂ ಸೇನಾ ಸ್ಪರ್ಧಿಸಲಿದೆ ಎಂಬ ನಿರ್ಣಯವನ್ನೂ ಕೈಗೊಳ್ಳಲಾಗಿದೆ.

ಏಕನಾಥ ಶಿಂಧೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ಪಕ್ಷವು ಚಿಂತಿಸುತ್ತಿದೆ ಎನ್ನಲಾಗಿದೆ.

ಕಲ್ಯಾಣ್‌ನ ಸಂಸದ ಡಾ. ಶ್ರೀಕಾಂತ್ ಶಿಂಧೆ ಅವರ ಕಚೇರಿಯ ಫಲಕವನ್ನು ಶಿವಸೈನಿಕರು ಶನಿವಾರ ಧ್ವಂಸ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಶ್ರೀಕಾಂತ್, 'ಏಕನಾಥ ಶಿಂಧೆಯ ಕಾರಣಕ್ಕೆ ನಾವು ಸುಮ್ಮನಿದ್ದೇವೆ. ಇಲ್ಲದಿದ್ದರೆ, ತಿರುಗೇಟು ನೀಡಲು ನಮಗೆ ಗೊತ್ತಿದೆ' ಎಂದಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಶಿವಸೇನಾ ಕಾರ್ಯಕಾರಿಣಿ ಮುಗಿಸಿ ಹೊರಬಂದ ಸಂದರ್ಭ ಪಿಟಿಐ ಚಿತ್ರ

ಗುಜರಾತ್‌ಗೆ ಶಿಂಧೆ ಭೇಟಿ?

- ಏಕನಾಥ ಶಿಂಧೆ ಅವರು ಶನಿವಾರ ಮುಂಜಾನೆಗೂ ಮುನ್ನ ಗುಜರಾತ್‌ಗೆ ಬಂದು ಬಿಜೆಪಿ ಮುಖಂಡ ದೇವೇಂದ್ರ ಫಡಣವೀಸ್ ಜತೆಗೆ ಮಾತುಕತೆ ನಡೆಸಿದ್ದಾರೆ ಎಂದು ಹೇಳಲಾಗಿದೆ. ಆದರೆ, ಇದನ್ನು ಯಾರೂ ದೃಢಪಡಿಸಿಲ್ಲ
- ಬಂಡಾಯ ಶಾಸಕರ ಗುಂಪು ಔಪಚಾರಿಕವಾಗಿ ಸಭೆ ಸೇರಿ ದೀಪಕ್ ಕೇಸರ್‌ಕರ್ ಅವರನ್ನು ವಕ್ತಾರನನ್ನಾಗಿ ನೇಮಿಸಿದೆ
- ಏಕನಾಥ ಶಿಂಧೆ ಅವರ ಮಗ ಶ್ರೀಕಾಂತ್ ಶಿಂಧೆ ಅವರು ಠಾಣೆಯಲ್ಲಿ ಸಮಾವೇಶ ನಡೆಸಿದ್ದಾರೆ
- ಸೇನಾದ ಹಿರಿಯ ಮುಖಂಡರಾದ ಅನಂತ್ ಗೀತೆ ಮತ್ತು ರಾಮದಾಸ್ ಕದಂ ಅವರು ಶಿವಸೇನಾ ರಾಷ್ಟ್ರೀಯ ಕಾರ್ಯಕಾರಿಣಿಗೆ ಹಾಜರಾಗಿಲ್ಲ. ಬಂಡಾಯ ಗುಂಪಿನ ನಾಯಕ ಶಿಂಧೆ ಅವರೂ ಗೈರುಹಾಜರಾಗಿದ್ದಾರೆ

16 ಬಂಡಾಯ ಶಾಸಕರಿಗೆ ನೋಟಿಸ್

ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ವಿರುದ್ಧ ಬಂಡಾಯ ಎದ್ದಿರುವ ಶಿವಸೇನಾದ 16 ಶಾಸಕರಿಗೆ ಅಲ್ಲಿನ ವಿಧಾನಸಭಾ ಕಾರ್ಯಾಲಯವು ನೋಟಿಸ್ ನೀಡಿದೆ. ಸೋಮವಾರ ಸಂಜೆಯ ಒಳಗೆ ಲಿಖಿತ ಪ್ರತಿಕ್ರಿಯೆ ನೀಡಬೇಕು ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ. ಈ 16 ಶಾಸಕರನ್ನು ಅನರ್ಹಗೊಳಿಸಬೇಕು ಎಂದು ಶಿವಸೇನಾದ ಮುಖ್ಯ ಸಚೇತಕ ಸುನಿಲ್ ಪ್ರಭು ಅವರು ಸ್ಪೀಕರ್‌ಗೆ ಪತ್ರ ಬರೆದು ಕೋರಿದ್ದರು.

ಮುಂಬೈನಲ್ಲಿ ಬುಧವಾರ ನಡೆದ ಪಕ್ಷದ ಸಭೆಯಲ್ಲಿ ಭಾಗವಹಿಸುವಂತೆ ಈ ಶಾಸಕರಿಗೆ ಸೂಚನೆ ನೀಡಲಾಗಿತ್ತು. ಈ ಶಾಸಕರು ಸಭೆಗೆ ಹಾಜರಾಗಿರಲಿಲ್ಲ.

'ಯಾವುದೇ ಪಕ್ಷದ ಜತೆ ವಿಲೀನ ಇಲ್ಲ'

ಶಿವಸೇನಾದ ಬಂಡಾಯ ಶಾಸಕರ ಗುಂಪು ಯಾವುದೇ ರಾಜಕೀಯ ಪಕ್ಷದ ಜತೆಗೆ ವಿಲೀನ ಆಗುವುದಿಲ್ಲ ಎಂದು ಬಂಡಾಯ ಶಾಸಕ ದೀಪಕ್ ಕೇಸರ್‌ಕರ್ ಶನಿವಾರ ಹೇಳಿದ್ದಾರೆ. ತಮ್ಮ ಗುಂಪಿಗೆ ಮೂರನೇ ಎರಡಷ್ಟು ಶಾಸಕರ ಬೆಂಬಲ ಇದೆ. ತಮ್ಮ ಬಲವನ್ನು ವಿಧಾನಸಭೆಯಲ್ಲಿ ಸಾಬೀತು ಮಾಡಲಾಗುವುದು ಎಂದೂ ಅವರು ಹೇಳಿದ್ದಾರೆ.

ಬಂಡಾಯ ಗುಂಪಿನ ನಾಯಕ ಏಕನಾಥ ಶಿಂಧೆ ಮತ್ತು ಇತರರು ತಂಗಿರುವ ಗುವಾಹಟಿಯ ಪಂಚತಾರಾ ಹೋಟೆಲ್‌ನಿಂದ ವರ್ಚುವಲ್ ಮಾಧ್ಯಮಗೋಷ್ಠಿ ನಡೆಸಿ ಕೇಸರ್‌ಕರ್ ಮಾತನಾಡಿದ್ದಾರೆ. ತಾವು ಯಾರೂ ಶಿವಸೇನಾವನ್ನು ಬಿಟ್ಟಿಲ್ಲ. ತಮ್ಮ ಗುಂಪಿಗೆ 'ಶಿವಸೇನಾ (ಬಾಳಾಸಾಹೇಬ್)' ಎಂದು ಹೆಸರು ಇರಿಸಲಾಗಿದೆ. ಶಿಂಧೆ ಅವರನ್ನು ಈ ಗುಂಪಿನ ನಾಯಕನನ್ನಾಗಿ ಆಯ್ಕೆ ಮಾಡಲಾಗಿದೆ. 55 ಶಾಸಕರ ಬೆಂಬಲ ಇರುವ ಗುಂಪಿನ ನಾಯಕನ ಸ್ಥಾನಕ್ಕೆ 16–17 ಶಾಸಕರ ಬೆಂಬಲ ಇರುವವರು ಬರಲಾಗದು. ವಿಧಾನಸಭೆಯಲ್ಲಿ ಸೇನಾ ಸದನ ನಾಯಕ ಸ್ಥಾನದಿಂದ ಶಿಂಧೆ ಅವರನ್ನು ತೆಗೆದಿರುವ ಉಪ ಸ್ಪೀಕರ್ ನರಹರಿ ಝಿರ್ವಾಲ್ ಕ್ರಮವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಯಾವುದೇ ರಾಜಕೀಯ ಪಕ್ಷ ತಮಗೆ ಬೆಂಬಲ ನೀಡಿಲ್ಲ. ಗುವಾಹಟಿಯಲ್ಲಿ ತಂಗಿರುವ ಶಾಸಕರೇ ಅವರವರ ಖರ್ಚನ್ನು ಭರಿಸುತ್ತಿದ್ದಾರೆ ಎಂದು ಕೇಸರ್‌ಕರ್ ಹೇಳಿದ್ದಾರೆ. ಬಂಡಾಯ ಶಾಸಕರು ಸೂರತ್ ಮತ್ತು ಗುವಾಹಟಿಯಲ್ಲಿ ತಂಗುವುದಕ್ಕಾಗಿ ಆಗಿರುವ ಭಾರಿ ಮೊತ್ತದ ಖರ್ಚನ್ನು ಭರಿಸುವುದು ಯಾರು ಎಂದು ಎನ್‌ಸಿಪಿ ಪ್ರಶ್ನಿಸಿದೆ.

ಇದಕ್ಕೆ 'ಕಪ್ಪು ಹಣ' ಬಳಕೆ ಆಗುತ್ತಿದೆಯೇ ಎಂಬ ಬಗ್ಗೆ ಆದಾಯ ತೆರಿಗೆ ಇಲಾಖೆ ಮತ್ತು ಜಾರಿ ನಿರ್ದೇಶನಾಲಯ ತನಿಖೆ ನಡೆಸಬೇಕು ಎಂದೂ ಕೋರಿದೆ.

ಮಹಾರಾಷ್ಟ್ರ: ಶಿವಸೈನಿಕರ ಆಕ್ರೋಶ ತೀವ್ರ

ಒಂದನೇ ಪುಟದಿಂದ...

ಶ್ರೀಕಾಂತ್ ಶಿಂಧೆ ಅವರ ಕಚೇರಿಯಲ್ಲಿ ಮಧ್ಯಾಹ್ನ 1 ಗಂಟೆ ಸುಮಾರಿಗೆ ಈ ದಾಳಿ ನಡೆದಿದೆ.

ಕಲ್ಲುತೂರಾಟ ನಡೆಸಿದ 8–10 ಜನರನ್ನು ಪೊಲೀಸರು ಬೆನ್ನಟ್ಟಿರುವ ವಿಡಿಯೊ ವೈರಲ್ ಆಗಿದೆ. ಐವರು ಶಿವಸೇನಾ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ.

ದಾಳಿ ಘಟನೆಗಳಿಗೆ ಪ್ರತಿಕ್ರಿಯೆ ನೀಡಿರುವ ಸಾವಂತ್, ದಾಳಿಕೋರರಿಗೆ ತಿರುಗೇಟು ನೀಡುವುದಾಗಿ ಹೇಳಿದ್ದಾರೆ.

'ಶಾಸಕರಾದ ತಾನಾಜಿ ಸಾವಂತ್ ಹಾಗೂ ಜ್ಞಾನರಾಜ್ ಚೌಗಲೆ ಇಬ್ಬರಿಗೂ ಪಕ್ಷದಲ್ಲಿ ಸೂಕ್ತ ಸ್ಥಾನಮಾನ ನೀಡಲಾಗಿದೆ. ಅವರ ಕ್ಷೇತ್ರಗಳಿಗೆ ಕೋಟಿಗಟ್ಟಲೆ ಅನುದಾನ ಹರಿದಿದೆ. ಅವರು ಏನಾದರೂ ಹೇಳಬೇಕಿದ್ದರೆ ಉದ್ಧವ್ ಅವರನ್ನು ಭೇಟಿಯಾಗಿ ಅವರ ಸಮ್ಮುಖದಲ್ಲಿ ಮಾತನಾಡಬೇಕು' ಎಂದು ಉಸ್ಮಾನಾಬಾದ್ ನಗರ ಪರಿಷತ್ ಮುಖ್ಯಸ್ಥ ಸೋಮನಾಥ್ ಗುರವ್ ಹೇಳಿದ್ದಾರೆ.

ಮುಂಬೈನಲ್ಲಿ ಶಿವಸೇನಾ ಭವನಕ್ಕೆ ಬಂದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರನ್ನು ಸುತ್ತುವರಿದ ಕಾರ್ಯಕರ್ತರು ಶಿಂಧೆ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಬಂಡಾಯಗಾರರ ವಿರುದ್ಧ ಘೋಷಣೆ ಕೂಗಿದರು.

ಸಾಮಾಜಿಕ ಕಾರ್ಯಕರ್ತೆ ತೀಸ್ತಾ ವಶಕ್ಕೆ

ಒಂದನೇ ಪುಟದಿಂದ...

ತೀಸ್ತಾ ಅವರನ್ನು ಅಹಮದಾಬಾದ್‌ಗೆ ಕರೆದೊಯ್ಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಗುಜರಾತ್ ಗಲಭೆ ಪ್ರಕರಣದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸಿಗೆ ಧಕ್ಕೆ ತರಲು ವ್ಯವಸ್ಥಿತ ಅಭಿಯಾನ ನಡೆದಿದೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಎಎನ್‌ಐಗೆ ನೀಡಿದ ಸಂದರ್ಶನದಲ್ಲಿ ಆರೋಪಿಸಿದ್ದರು. ಅದರ ಮರುದಿನವೇ ತೀಸ್ತಾ ಅವರ ಬಂಧನವಾಗಿದೆ.

2002ರ ಗುಜರಾತ್ ಗಲಭೆ ಪ್ರಕರಣಗಳಲ್ಲಿ 'ಮುಗ್ಧ' ಜನರನ್ನು ಸಿಲುಕಿಸುವುದಕ್ಕಾಗಿ ದಾಖಲೆಗಳನ್ನು ತಿರುಚಿದ ಮತ್ತು ಅಪರಾಧ ಒಳಸಂಚು ನಡೆಸಿದ ಆರೋಪದಲ್ಲಿ ತೀಸ್ತಾ, ಮಾಜಿ ಐಪಿಎಸ್ ಅಧಿಕಾರಿಗಳಾದ ಆರ್.ಬಿ.ಶ್ರೀಕುಮಾರ್ ಮತ್ತು ಸಂಜೀವ್ ಭಟ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

2002ರ ಗೋಧ್ರೋತ್ತರ ಗಲಭೆ ಪ್ರಕರಣದಲ್ಲಿ, ಆಗ ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಮತ್ತು ಇತರರನ್ನು ವಿಶೇಷ ತನಿಖಾ ತಂಡವು (ಎಸ್‌ಐಟಿ) ಆರೋಪಮುಕ್ತಗೊಳಿಸಿದ್ದನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದ ಮರುದಿನ ತೀಸ್ತಾ ಅವರ ಬಂಧನವಾಗಿದೆ. ಗಲಭೆಯ ಹಿಂದೆ ದೊಡ್ಡ ಪಿತೂರಿ ಇದೆ ಎಂದು ಆರೋಪಿಸಿ ಝಕಿಯಾ ಜಾಫ್ರಿ ಅವರು ದೂರು ದಾಖಲಿಸಿದ್ದರು. ಝಕಿಯಾ ಅವರನ್ನು ತೀಸ್ತಾ ಅವರ ಎನ್‌ಜಿಒ ಕಾನೂನು ಹೋರಾಟದ ಉದ್ದಕ್ಕೂ ಬೆಂಬಲಿಸಿದೆ.

ಝಕಿಯಾ ಅವರ ಗಂಡ ಎಹ್ಸಾನ್ ಜಾಫ್ರಿ ಅವರನ್ನು ಗಲಭೆ ಸಂದರ್ಭದಲ್ಲಿ ಹತ್ಯೆ ಮಾಡಲಾಗಿತ್ತು.

ಮುಂಬೈನ ಜುಹುನಲ್ಲಿರುವ ನಿವಾಸದಿಂದ ತೀಸ್ತಾ ಅವರನ್ನು ವಶಕ್ಕೆ ಪಡೆಯಲಾಗಿದೆ. ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿಯೇ ಕಾರ್ಯಾಚರಣೆ ನಡೆಸಲಾಗಿದೆ ಎಂದು ಮುಂಬೈನ ಪೊಲೀಸ್ ಅಧಿಕಾರಿ ಹೇಳಿದ್ದಾರೆ.

2002ರ ಗಲಭೆ ಮರು ತನಿಖೆ ಸಾಧ್ಯತೆಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ನೀಡಿದ ತೀರ್ಪು ತೆರೆ ಎಳೆದಿದೆ. 'ಪ್ರಕರಣವು ಜೀವಂತವಾಗಿ ಇರುವಂತೆ ನೋಡಿಕೊಳ್ಳುವುದಕ್ಕಾಗಿ ಕುತಂತ್ರ ಹೆಣೆಯಲಾಗಿದೆ' ಎಂಬುದು ಸ್ಪಷ್ಟ ಎಂದು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ಪೀಠವು ಹೇಳಿತ್ತು. ಗುಜರಾತ್ ಸರ್ಕಾರದ 'ಅತೃಪ್ತ' ಪೊಲೀಸ್ ಅಧಿಕಾರಿಗಳು ಕೂಡ ಇದರಲ್ಲಿ ಭಾಗಿಯಾಗಿರಬಹುದು ಎಂದು ಪೀಠ ಹೇಳಿತ್ತು.

ಅಹಮದಾಬಾದ್ ಅಪರಾಧ ವಿಭಾಗದ ಇನ್‌ಸ್ಪೆಕ್ಟರ್ ಡಿ.ಬಿ. ಬರಾದ್ ಅವರು ತೀಸ್ತಾ, ಭಟ್ ಹಾಗೂ ಶ್ರೀಕುಮಾರ್ ವಿರುದ್ಧ ದೂರು ನೀಡಿದ್ದರು. ಗರಿಷ್ಠ ಪ್ರಮಾಣದ ಶಿಕ್ಷೆ ನೀಡಲು ಅರ್ಹವಾದ ಅಪರಾಧದಲ್ಲಿ ಹಲವು ವ್ಯಕ್ತಿಗಳನ್ನು ಸಿಲುಕಿಸಲು ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಿ ಕಾನೂನು ಪ್ರಕ್ರಿಯೆಯನ್ನು ದಾರಿ ತಪ್ಪಿಸಿದ್ದಾರೆ ಎಂದು ಅವರು ಈ ಮೂವರ ವಿರುದ್ಧ ಆರೋಪ ಮಾಡಿದ್ದರು. 'ತೊಂದರೆ ನೀಡುವ ಉದ್ದೇಶ ಇಟ್ಟುಕೊಂಡೇ ಅಮಾಯಕ ಜನರ ವಿರುದ್ಧ ದುರುದ್ದೇಶಪೂರಿತ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿದ್ದರು' ಎಂದು ಆರೋಪಿಸಿದ್ದಾರೆ.

ಪ್ರಕರಣದ ತನಿಖೆಗೆ ನೇಮಕವಾಗಿದ್ದ ವಿಶೇಷ ತನಿಖಾ ತಂಡದ ಎದುರು ಈ ಸಂಬಂಧ ಹಲವು ದಾಖಲೆಗಳನ್ನು ಸಲ್ಲಿಸಲಾಗಿತ್ತು. ಇವುಗಳ ಆಧಾರದ ಮೇಲೆ ಎಫ್‌ಐಆರ್ ದಾಖಲಾಗಿದೆ. ತೀಸ್ತಾ ಅವರು ದಾಖಲೆಗಳನ್ನು ತಿರುಚಿರುವ ಜೊತೆಗೆ ಸಾಕ್ಷಿಗಳ ಮನವೊಲಿಸಿ, ಖಾಲಿ ಹಾಳೆಗಳ ಮೇಲೆ ಸಹಿ ಮಾಡಿಸಿಕೊಂಡಿದ್ದಾರೆ ಎಂದೂ ಆರೋಪಿಸಲಾಗಿದೆ. ಝಕಿಯಾ ವಿಚಾರದಲ್ಲೂ ಹೀಗೆಯೇ ಆಗಿದೆ ಎಂದು ದೂರಲಾಗಿದೆ. ಸಂಜೀವ್ ಭಟ್ ಹಲವು ದಾಖಲೆ ತಿರುಚಿದ್ದಾರೆ ಎಂದು ಆರೋಪಿಸಲಾಗಿದೆ. ಸಂಜೀವ್ ಭಟ್ ಅವರಿಗೆ ಈ ಹಿಂದೆಯೇ ಜೀವಾವಧಿ ಶಿಕ್ಷೆ ಆಗಿದ್ದು ಜೈಲಿನಲ್ಲಿದ್ದಾರೆ. ಶ್ರೀಕುಮಾರ್ ಅವರನ್ನು ಗಾಂಧಿನಗರದಲ್ಲಿ ಬಂಧಿಸಲಾಗಿದೆ.

ಜೀವ ಭಯ

'ಗುಜರಾತ್ ಪೊಲೀಸರು ನನ್ನ ಮನೆಗೆ ನುಗ್ಗಿದ್ದಾರೆ. ಎಫ್‌ಐಆರ್‌ನ ಪ್ರತಿ ಅಥವಾ ವಾರಂಟ್ ಅನ್ನು ತೋರಿಸಿಲ್ಲ. ನನ್ನ ಎಡಕೈಯಲ್ಲಿ ದೊಡ್ಡ ತರಚಿದ ಗಾಯವಾಗಿದೆ. ನನ್ನ ಜೀವಕ್ಕೆ ಅಪಾಯ ಇದೆ ಎಂದು ಭಯವಾಗುತ್ತಿದೆ' ಎಂದು ತೀಸ್ತಾ ನೀಡಿದ ದೂರಿನಲ್ಲಿ ಹೇಳಲಾಗಿದೆ.

ಬಾಲನಟರ ಹಕ್ಕು ರಕ್ಷಣೆಗೆ ಮಾರ್ಗಸೂಚಿ

ನವದೆಹಲಿ (ಪಿಟಿಐ): ಸಿನಿಮಾ, ಕಿರುತೆರೆ, ರಿಯಾಲಿಟಿ ಶೋ ಒಳಗೊಂಡಂತೆ ಮನರಂಜನಾ ಉದ್ಯಮ ಕ್ಷೇತ್ರದಲ್ಲಿ ಬಾಲನಟರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು (ಎನ್‌ಸಿಪಿಸಿಆರ್) ಕರಡು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಬಾಲನಟ ನಿರಂತರವಾಗಿ 27 ದಿನ ಕೆಲಸ ಮಾಡುವಂತಿಲ್ಲ ಹಾಗೂ ಬಾಲನಟನ ಆದಾಯದಲ್ಲಿ ಶೇ 20 ರಷ್ಟನ್ನು ಆತನ ಹೆಸರಿನಲ್ಲಿಯೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿಯಾಗಿ ಇಡಬೇಕು ಎಂಬುದು ಕರಡು ಮಾರ್ಗಸೂಚಿ ಪ್ರಮುಖ ಅಂಶವಾಗಿದೆ.

ಸಿನಿಮಾ, ಕಿರುತರೆ ಅಲ್ಲದೇ ಟಿ.ವಿ. ಧಾರಾವಾಹಿಗಳು, ಸುದ್ದಿ ಮತ್ತು ಸಂವಹನ ಮಾಧ್ಯಮ, ಒಟಿಟಿ ವೇದಿಕೆಯಲ್ಲಿನ ಅಡಕಗಳು, ಸಾಮಾಜಿಕ ಜಾಲತಾಣಗಳು ಅಥವಾ ಮಕ್ಕಳು ಭಾಗಿಯಾಗುವ ಎಲ್ಲ ರೀತಿಯ ಮನರಂಜನಾತ್ಮಕ ಚಟುವಟಿಕೆಗಳು ಈ ಮಾರ್ಗಸೂಚಿಗಳ ಪರಿಧಿಗೆ ಒಳಪಡಲಿವೆ.

ಕೆಲಸದ ಸ್ಥಳದಲ್ಲಿ ಆರೋಗ್ಯಕರವಾದ ವಾತಾವರಣ ಕಲ್ಪಿಸುವುದು. ಚಿತ್ರೀಕರಣದಲ್ಲಿ ಬಾಲನಟರನ್ನು ತೊಡಗಿಸಿಕೊಳ್ಳುವ ಮುನ್ನ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಅನುಮತಿ ಪಡೆಯಬೇಕು. ಶೋಷಣೆಗೆ ಒಳಗಾಗದಂತೆ ಮುಂಜಾಗ್ರತೆ ವಹಿಸಲಾಗಿದೆ ಎಂಬ ಘೋಷಣಾ ವಿವರಗಳನ್ನು ಚಿತ್ರೀಕರಣ ಸ್ಥಳದಲ್ಲಿ ಪ್ರದರ್ಶಿಸುವುದು ಅಗತ್ಯ.

ಕುಡಿವ ನೀರು ಪೆಟ್ರೋಲ್‌ಗಿಂತ ದುಬಾರಿ!

ಗುವಾಹಟಿ: ದಕ್ಷಿಣ ಅಸ್ಸಾಂನ ಪ್ರವಾಹಪೀಡಿತ ಸಿಲ್ಚಾರ್ ಪಟ್ಟಣದಲ್ಲಿ ಕುಡಿಯುವ ನೀರು ಪೆಟ್ರೋಲ್‌ಗಿಂತಲೂ ದುಬಾರಿಯಾಗಿದೆ.

'ಪ್ರವಾಹದ ಪರಿಣಾಮವಾಗಿ ವಿವಿಧ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕ್ಷಾಮ ತಲೆದೋರಿದ್ದು, ₹20 ಬೆಲೆಯ ಒಂದು ಲೀಟರ್ ಕುಡಿಯುವ ನೀರಿನ ಬಾಟಲಿಯನ್ನು ₹100ಕ್ಕೆ ಮಾರಾಟ ಮಾಡಲಾಗುತ್ತಿದೆ. ಕೆಲವೆಡೆ ಒಂದು ಲೀಟರ್ ನೀರಿನ ಬಾಟಲಿಯ ದರ ₹150ಕ್ಕೇರಿದೆ' ಎಂದು ಸಿಲ್ಚಾರ್ ಪಟ್ಟಣದ ಸೋನೈ ರಸ್ತೆ ಬಳಿಯ ನಿವಾಸಿ ಬಿಜು ದಾಸ್ ತಿಳಿಸಿದ್ದಾರೆ.

'ಸಂಗ್ರಹಿಸಿಟ್ಟಿದ್ದ ಕುಡಿಯುವ ನೀರು ಖಾಲಿಯಾಗಿದೆ. ಸೋಮವಾರದಿಂದ ವಿದ್ಯುತ್ ಸಂಪರ್ಕ ಕೂಡ ಕಡಿತಗೊಂಡಿದೆ. ನೆರೆ ನೀರಿನಲ್ಲೇ ಒಂದು ಕಿ.ಮೀ. ದೂರ ನಡೆದು ಹೋಗಿ ನೀರಿನ ಬಾಟಲಿ ಖರೀದಿಸಿ ತಂದಿದ್ದೇನೆ' ಎಂದೂ ಅವರು ಹೇಳಿದ್ದಾರೆ.

ಸಿಲ್ಚಾರ್‌ನ ವಿವಿಧ ಪ್ರದೇಶಗಳಲ್ಲಿ ಶನಿವಾರವೂ ನೀರಿನ ಮಟ್ಟ ಕಡಿಮೆಯಾಗಿಲ್ಲ ಎಂದು ತಿಳಿಸಿದ್ದಾರೆ.

ಬಿಎಸ್‌ಪಿ ಬೆಂಬಲ

ಲಖನೌ (ಪಿಟಿಐ): ರಾಷ್ಟ್ರಪತಿ ಚುನಾವಣೆಗೆ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿರುವ ದ್ರೌಪದಿ ಮುರ್ಮು ಅವರಿಗೆ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಬೆಂಬಲ ಘೋಷಿಸಿದೆ. ಜುಲೈ 18ರಂದು ನಡೆಯಲಿರುವ ಚುನಾವಣೆಗೆ ಮುರ್ಮು ಅವರು ಶುಕ್ರವಾರವಷ್ಟೇ ನಾಮಪತ್ರ ಸಲ್ಲಿಸಿದ್ದಾರೆ.

ಪಕ್ಷದ ಆಂದೋಲನದಲ್ಲಿ ಆದಿವಾಸಿ ಸಮಾಜದ ಪಾತ್ರ ಮುಖ್ಯವಾದುದು ಎಂಬುದನ್ನು ಪರಿಗಣಿಸಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಪಕ್ಷದ ಮುಖ್ಯಸ್ಥೆ ಮಾಯಾವತಿ ತಿಳಿಸಿದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ
ಸಂ:ಕಾ.ಇಂ:ಲೋ.ಇ:ಹಾವಿ:ಹಾಸನ:ಜೆಇಂ–4/2022–23 ದಿನಾಂಕ.23.06.2022
ಟೆಂಡರ್ ಮುಂದೂಡಿಕೆ ಪ್ರಕಟಣೆ
ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 38/2021–22 ದಿನಾಂಕ 09.02.2022 ರಲ್ಲಿ ಕರೆಯಲಾಗಿದ್ದ ಟೆಂಡರ್ ಪ್ರಕಟಣೆಯಲ್ಲಿನ ಕ್ರಮ ಸಂಖ್ಯೆ 01, ಹಾಗೂ 02 ರ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ಮುಂದೂಡಲಾಗಿದ್ದು ಅಂತರ್‌ಜಾಲದಲ್ಲಿ ದಿನಾಂಕ: 02.07.2022 ರಂದು 16.00 ಘಂಟೆವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು http://www.eproc.karnataka.gov.in ನಲ್ಲಿ ಡೌನಲೋಡ್ ಮಾಡಿ ಅವಶ್ಯ ಮಾಹಿಗಳೊಂದಿಗೆ ಹಾಗೂ ನಿಗಧಿತ ಇಎಂಡಿ ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯುವುದು.
ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/223/2022–23

ಚಿನ್ನ, ಬೆಳ್ಳಿ (ಬೆಂಗಳೂರು)	
ಸ್ಟ್ಯಾಂಡರ್ಡ್ ಚಿನ್ನ (10 ಗ್ರಾಂ)	₹52,700
ಆಭರಣ ಚಿನ್ನ (1 ಗ್ರಾಂ)	₹4,900
ಬೆಳ್ಳಿ (ಕೆ.ಜಿಗೆ)	₹61,600

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈಂಡ್)	₹1540 (1540)
ಸೋಯಾ (ರಿಫೈಂಡ್)	₹1340 (1340)
ಸೂರ್ಯಕಾಂತಿ (ರಿಫೈಂಡ್)	₹1650 (1680)
ಪಾಮೋಲಿನ್	₹1255 (1255)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ರಾಮನಗರ ರೇಷ್ಮೆಗೂಡು ಧಾರಣೆ	
ಮಿಶ್ರತಳಿ (ಸಿ.ಬಿ)	₹333-598
ದ್ವಿತಳಿ (ಬಿ.ವಿ)	₹444-836

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹174
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹157

ಕಾಫಿ ಧಾರಣೆ (50ಕೆ.ಜಿಗೆ) ಮೂಡಿಗೆರೆ	
ಎಪಿ	₹16200
ಎಸಿ	₹8960
ಆರ್‌ಪಿ	₹9750
ಆರ್‌ಸಿ	₹4670

'ನೋಂದಣಿ ಆಗದ ಆಹಾರ ಬ್ರ್ಯಾಂಡ್‌ಗೆ ವಿನಾಯಿತಿ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಣಿ ಆಗದೇ ಇರುವ ಆಹಾರ ಉತ್ಪನ್ನಗಳ ಬ್ರ್ಯಾಂಡ್‌ಗಳನ್ನು ತೆರಿಗೆ ವಿನಾಯಿತಿ ಪಟ್ಟಿಯಿಂದ ಕೈಬಿಡದೇ ಇರುವಂತೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಈ ಕುರಿತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದು, ನೋಂದಣಿ ಆಗದೇ ಇರುವ ಆಹಾರ ಉತ್ಪನ್ನಗಳಿಗೆ ತೆರಿಗೆ ವಿಧಿಸುವುದರಿಂದ ಅವುಗಳ ದರ ಹೆಚ್ಚಾಗಲಿದ್ದು ಜನರಿಗೆ ಹೊರೆಯಾಗಲಿದೆ. ಅಲ್ಲದೆ, ಇಂತಹ ಉತ್ಪನ್ನಗಳನ್ನು ತಯಾರಿಸುತ್ತಿರುವ ಸಣ್ಣ ಉದ್ದಿಮೆಗಳಿಗೂ ಸಮಸ್ಯೆಯಾಗಲಿದೆ ಎಂದು ಹೇಳಿದೆ.

ತಜ್ಞರು, ಉದ್ಯಮವಲಯ ಮತ್ತು ಗ್ರಾಹಕರ ಜೊತೆ ಚರ್ಚೆ ನಡೆಸಿದ ಬಳಿಕ ಅಂತಿಮ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ ಎಂದೂ ಅಭಿಪ್ರಾಯಪಟ್ಟಿದೆ.

ತೆರಿಗೆ ದರಗಳನ್ನು ಕಡಿಮೆ ಮಾಡುವ ಸಂಬಂಧ ರಚನೆ ಆಗಿರುವ ಸಮಿತಿಯು ನೋಂದಣಿ ಆಗದೇ ಇರುವ ಆಹಾರ ಉತ್ಪನ್ನಗಳ ಬ್ರ್ಯಾಂಡ್‌ಗಳನ್ನು ತೆರಿಗೆ ವಿನಾಯಿತಿ ಪಟ್ಟಿಯಿಂದ ಕೈಬಿಡುವ ಬಗ್ಗೆ ಆಲೋಚನೆ ನಡೆಸುತ್ತಿರುವುದಾಗಿ ವರದಿಯಾಗಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಎಫ್‌ಕೆಸಿಸಿಐ ಈ ಪತ್ರ ಬರೆದಿದೆ.

ಮುಂಬೈ ಧಾರಣೆ	
ಶೇಂಗಾ	
25-6-2022	
ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	9950-10050
ದಪ್ಪ ಗುಜರಾತ್(ಹೊಸ)	10650-10750
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	1265 (1270)
ಪಾಮ್ ವಾರದ ಡೆಲಿವರಿ	1253 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1630 (1660)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	50,650 (50,700)
ಬೆಳ್ಳಿ ಕೆ.ಜಿ	59,875 (59,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೇಂದ್ರ ಹಣಕಾಸು ಸಚಿವಾಲಯದ ಅಧಿಸೂಚನೆ ಪ್ರಕಟ

ಜಿಎಸ್‌ಟಿ ಪರಿಹಾರ ಸೆಸ್ 2026ರವರೆಗೆ ವಿಸ್ತರಣೆ

ನವದೆಹಲಿ (ಪಿಟಿಐ): ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳು ಮತ್ತು ಐಷಾರಾಮಿ ಸರಕುಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಡಿ ವಿಧಿಸುವ ಪರಿಹಾರ ಸೆಸ್ ಅನ್ನು 2026ರ ಮಾರ್ಚ್ 31ರವರೆಗೆ ವಿಸ್ತರಣೆ ಮಾಡಿ ಕೇಂದ್ರ ಹಣಕಾಸು ಸಚಿವಾಲಯವು ಶನಿವಾರ ಅಧಿಸೂಚನೆ ಹೊರಡಿಸಿದೆ.

ಸೆಸ್ ಅವಧಿಯು ಇದೇ 30ಕ್ಕೆ ಅಂತ್ಯವಾಗಬೇಕಿತ್ತು. ಆದರೆ, ವರಮಾನ ಸಂಗ್ರಹದಲ್ಲಿ ಆಗಿರುವ ಕೊರತೆಯನ್ನು ಸರಿದೂಗಿಸಲು ಕಳೆದ ಎರಡು ಹಣಕಾಸು ವರ್ಷದಲ್ಲಿ ಮಾರುಕಟ್ಟೆಯಿಂದ ಸಾಲ ಪಡೆಯಲಾಗಿದೆ. ಅದನ್ನು ಮರುಪಾವತಿ ಮಾಡಲು ಸೆಸ್ ಸಂಗ್ರಹಿಸುವ ಅವಧಿಯನ್ನು 2026ರವರೆಗೆ ವಿಸ್ತರಿಸಲು 2021ರ ಸೆಪ್ಟೆಂಬರ್‌ನಲ್ಲಿ ನಡೆದ ಜಿಎಸ್‌ಟಿ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಅಧಿಸೂಚನೆಯ ಪ್ರಕಾರ, ಪರಿಹಾರ ಸೆಸ್ ಅವಧಿಯು 2022ರ ಜುಲೈ 1 ರಿಂದ 2026ರ ಮಾರ್ಚ್ 31ರವರೆಗೆ ಮುಂದುವರಿಯಲಿದೆ.

'ಸೆಸ್ ಅವಧಿ ವಿಸ್ತರಣೆ ಮಾಡಿರುವುದರಿಂದ ತಂಬಾಕು, ಸಿಗರೇಟ್, ಐಷಾರಾಮಿ ಕಾರುಗಳು ಮತ್ತು ಹಡಗಿನ ಮೇಲಿನ ಗರಿಷ್ಠ ತೆರಿಗೆ ದರವು ಮುಂದುವರಿಯಲಿದೆ' ಎಂದು ಎಎಂಆರ್‌ಜಿ ಆ್ಯಂಡ್ ಅಸೋಸಿಯೇಟ್ಸ್‌ನ ಪಾಲುದಾರ ರಜತ್ ಮೋಹನ್ ಹೇಳಿದ್ದಾರೆ.

ಜಿಎಸ್‌ಟಿ ವ್ಯವಸ್ಥೆಯನ್ನು 2017ರ ಜುಲೈ 1ರಂದು ದೇಶದಾದ್ಯಂತ ಜಾರಿಗೊಳಿಸಲಾಗಿತ್ತು. ಇದರಿಂದ ರಾಜ್ಯಗಳಿಗೆ ಆಗುವ ವರಮಾನ ನಷ್ಟವನ್ನು ಐದು ವರ್ಷಗಳವರೆಗೆ ತುಂಬಿಕೊಡುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿತ್ತು. ಪರಿಹಾರ ತುಂಬಿಕೊಡುವ ವ್ಯವಸ್ಥೆಯು ಇದೇ 30ಕ್ಕೆ ಕೊನೆಗೊಳ್ಳಲಿದೆ.

> ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರವು ಐದು ವರ್ಷಗಳ ನಂತರವೂ ಸಿಗಲಿದೆಯೇ ಎನ್ನುವುದು ಜಿಎಸ್‌ಟಿ ಮಂಡಳಿ ಸಭೆಯಲ್ಲಿ ನಿರ್ಧಾರ ಆಗಲಿದೆ
> **ಅಭಿಷೇಕ್ ಜೈನ್,** ಕೆಪಿಎಂಜಿ ಇಂಡಿಯಾದ ಪರೋಕ್ಷ ತೆರಿಗೆಯ ಪಾಲುದಾರ

ಕೇಂದ್ರ ಪಡೆದಿರುವ ಸಾಲ

₹1.1 ಲಕ್ಷ ಕೋಟಿ
2020–21

₹1.59 ಲಕ್ಷ ಕೋಟಿ
2021–22

₹7,500 ಕೋಟಿ
2021–22ರಲ್ಲಿ ಸಾಲಕ್ಕೆ ಪಾವತಿಸಿರುವ ಬಡ್ಡಿ

₹14 ಸಾವಿರ ಕೋಟಿ
2022–23ರಲ್ಲಿ ಪಾವತಿಸಬೇಕಿರುವ ಬಡ್ಡಿ

ಎಫ್‌ಐಐ ಹೊರಹರಿವು ಅಬಾಧಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣದುಬ್ಬರ ಏರಿಕೆ ಮತ್ತು ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಹೆಚ್ಚಳದ ಪರಿಣಾಮವಾಗಿ ಭಾರತದಿಂದ ವಿದೇಶಿ ಸಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಬಂಡವಾಳ ಹಿಂದಕ್ಕೆ ಪಡೆಯುವುದು ಹೆಚ್ಚಾಗುತ್ತಿದೆ.

ಜೂನ್ 24ಕ್ಕೆ ಕೊನೆಗೊಂಡ ವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 12,112 ಕೋಟಿ ಮೊತ್ತದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಮೌಲ್ಯ ವೃದ್ಧಿಯಾಗುತ್ತಿರುವ ಜೊತೆಗೆ ಅಮೆರಿಕದ ಬಾಂಡ್ ಗಳಿಕೆಯು ಇನ್ನಷ್ಟು ಏರಿಕೆ ಕಾಣುವ ನಿರೀಕ್ಷೆ ಇದೆ. ಹೀಗಾಗಿ ಭಾರತದಿಂದ ಎಫ್‌ಐಐ ಹೊರಹರಿವು ಮುಂದುವರಿಸಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಬಂಡವಾಳ ಹೊರಹರಿವು (ಕೋಟಿಗಳಲ್ಲಿ)

ಬ್ರೆಂಟ್ ದರ ಇಳಿಕೆ: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ವಾರದ ವಹಿವಾಟಿನಲ್ಲಿ ಒಂದು ಬ್ಯಾರಲ್‌ಗೆ 9.69 ಡಾಲರ್ ಕಡಿಮೆ ಆಗಿದ್ದು, 111.27 ಡಾಲರ್‌ಗಳಿಂದ 120.96 ಡಾಲರ್‌ಗೆ ಇಳಿಕೆ ಆಗಿದೆ.

ಕ್ರ್ಯಾಷ್ ಟೆಸ್ಟ್: 2023ರ ಏಪ್ರಿಲ್ 1ರಿಂದ ಜಾರಿ

ನವದೆಹಲಿ (ಪಿಟಿಐ): ದೇಶದಲ್ಲಿಯೇ ಹೊಸ ಕಾರುಗಳ ಕ್ರ್ಯಾಷ್ ಟೆಸ್ಟ್ ನಡೆಸಿ ರ‍್ಯಾಂಕಿಂಗ್ ನೀಡುವ 'ಭಾರತ್ ನ್ಯೂ ಕಾರ್ ಅಸೆಸ್‌ಮೆಂಟ್ ಪ್ರೊಗ್ರಾಂ'ಗೆ (ಭಾರತ್ ಎನ್‌ಸಿಎಪಿ) 2023ರ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

ಕೇಂದ್ರ ಸರ್ಕಾರವು ಶನಿವಾರ ನೀಡಿರುವ ಅಧಿಕೃತ ಹೇಳಿಕೆಯ ಪ್ರಕಾರ, ಪ್ರಯಾಣಿಕರನ್ನು ಸಾಗಿಸುವ, ಎಂಟು ಆಸನಗಳು ಇರುವ, 3.5 ಟನ್‌ಗಿಂತಲೂ ಕಡಿಮೆ ತೂಕದ, ದೇಶದಲ್ಲಿ ತಯಾರಾದ ಅಥವಾ ಆಮದು ಮಾಡಿಕೊಂಡಿರುವ ವಾಹನಗಳಿಗೆ 'ಭಾರತ್ ಎನ್‌ಸಿಎಪಿ' ಅನ್ವಯವಾಗಲಿದೆ.

ವಯಸ್ಕರ ಸುರಕ್ಷತೆ, ಮಕ್ಕಳ ಸುರಕ್ಷತೆ ಹಾಗೂ ಸುರಕ್ಷತೆಗೆ ನೆರವಾಗುವ ತಂತ್ರಜ್ಞಾನಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ ಎಂದು ತಿಳಿಸಲಾಗಿದೆ.

'ಫಾಸ್ಟ್ಯಾಗ್: ವ್ಯಕ್ತಿಯಿಂದ ವ್ಯಕ್ತಿಗೆ ಹಣ ವರ್ಗಾವಣೆ ಸಾಧ್ಯವಿಲ್ಲ'

ನವದೆಹಲಿ (ಪಿಟಿಐ): ಫಾಸ್ಟ್ಯಾಗ್ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ ಹಣ ವರ್ಗಾಯಿಸಲು ಆಗುವುದಿಲ್ಲ ಎಂದು ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಶನಿವಾರ ಸ್ಪಷ್ಟಪಡಿಸಿದೆ.

ಕಾರಿನ ಗ್ಲಾಸ್ ಸ್ವಚ್ಛ ಮಾಡುವಂತೆ ನಟಿಸಿ ಬಾಲಕನೊಬ್ಬ ತನ್ನ ಕೈಯಲ್ಲಿದ್ದ ಆ್ಯಪಲ್ ಸ್ಮಾರ್ಟ್‌ವಾಚ್ ಮೂಲಕ ಪೇಟಿಎಂ ಫಾಸ್ಟ್ಯಾಗ್ ಸ್ಟಿಕ್ಕರ್ ಸ್ಕ್ಯಾನ್ ಮಾಡಿ ಚಾಲಕನ ಖಾತೆಯಿಂದ ಹಣ ದೋಚುತ್ತಿರುವಂತೆ ಕಾಣುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಈ ವಿಡಿಯೊ ಆಧಾರ ರಹಿತವಾಗಿದೆ ಎಂದು ಹೇಳುವ ಮೂಲಕ ಹಣ ದೋಚುವ ಸಾಧ್ಯತೆಯನ್ನು ಎನ್‌ಪಿಸಿಐ ತಳ್ಳಿಹಾಕಿದೆ.

ಟೋಲ್ ಮತ್ತು ಪಾರ್ಕಿಂಗ್ ಪ್ಲಾಜಾ ನಿರ್ವಾಹಕರನ್ನು ಒಳಗೊಂಡು ನೋಂದಣಿ ಮಾಡಿಕೊಂಡಿರುವ ವ್ಯಾಪಾರಿಗಳು ಮಾತ್ರವೇ ನಿಗದಿತ ಸ್ಥಳಗಳಲ್ಲಿ ಫಾಸ್ಟ್ಯಾಗ್ ಮೂಲಕ ಹಣ ಪಡೆಯಬಹುದು. ವ್ಯಕ್ತಿಯಿಂದ ವ್ಯಾಪಾರಿಗೆ ಮಾತ್ರವೇ ಫಾಸ್ಟ್ಯಾಗ್ ಕೆಲಸ ಮಾಡುತ್ತದೆ ಎಂದು ತಿಳಿಸಿದೆ.

ಮಯೂರ
ಜುಲೈ 2022 ಸಂಚಿಕೆಯಲ್ಲಿ
ಸುಮಧುರ ಬರಹಗಳ ಗುಚ್ಛ
ಪ್ರೇಮಾಯತನ ಕರ್ನಾಟಕದ ಸಾಬರಮತಿ
ಪಂಡಿತ ತಾರಾನಾಥರ ಕೊಡುಗೆಯನ್ನು ದಾಖಲಿಸುವ ರಹಮತ್ ತರೀಕೆರೆ ಅವರ ವಿಶಿಷ್ಟ ಲೇಖನ
ವಿಮರ್ಶಕ ಡಿ.ಎಸ್. ನಾಗಭೂಷಣ ಕುರಿತ ನೆನಪಿನ ಬರಹ ಅಗ್ರಹಾರ ಕೃಷ್ಣಮೂರ್ತಿ
ಕತೆಗಳು
- ಶರಣಬಸವ ಕೆ. ಗುಡದಿನ್ನಿ
- ಕಾವ್ಯಾ ಕಡಮೆ
- ಗುರುಪ್ರಸಾದ್ ಕಂಟಲಗೆರೆ
- ಪಿ.ಬಿ. ಪ್ರಸನ್ನ
- ವಸುಮತಿ ಉಡುಪ
- ವೆಂಕಟ ಶಿವಪ್ರಸಾದ ರಾವು
- ಸೋನಾಲಿ ಲೋಹಾರ
- ಪಿ. ವತ್ಸಲ
ಪ್ರಬಂಧಗಳು
ಪಾಂಡಿಚೇರಿಯ ಪಡ್ಡೋಲಗದಲ್ಲಿ ಥ್ರೀಡೀ ದೋಸೆ ನಾಗೇಶ ಹೆಗಡೆ
ಇದು 'ಬರಿ' ಇಂಕು ಪೆನ್ನಲ್ಲ! ಚಂದ್ರಕಾಂತ ವಡ್ಡು
ವಠಾರವೆಂಬ ಸ್ನೇಹ ಬಳ್ಳಿಯೂ... ಆರತಿ ಘಟಿಕಾರ್
ಮಾತು–ಕತೆ
ಕಾವ್ಯವು ಒಂಟಿತನ ಮತ್ತು ಸಮುದಾಯದ ನಡುವಿನ ಸೇತುವೆ
ಲ್ಯಾಟಿನ್ ಅಮೆರಿಕ ಕವಿ ಆಕ್ಟೇವಿಯಾ ಪಾಜ್ ಸಂದರ್ಶನ ಕನ್ನಡಕ್ಕೆ: ಹೇಮಾ ಎಸ್.
₹15 ನಿಮ್ಮ ಪ್ರತಿಗಳಿಗೆ ಏಜೆಂಟರನ್ನು ಸಂಪರ್ಕಿಸಿ
editormy@mayura.co.in /mayuramonthly
mayuraezine.com 080-45557333/264

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.
REFUND FOR TICKET HOLDERS (50% Value)
of Fifth T-20 (Night) International Match between
India and South Africa
M.Chinnaswamy Stadium, Bangalore
held on Sunday, 19th June, 2022 from 7:00 PM onwards
Spectators who bought Tickets - Online and Box office can claim 50% Refund from 10:00 AM to 7:00 PM on July, 1, 2 & 3rd , 2022 (Friday, Saturday & Sunday)
The Karnataka State Cricket Association (KSCA) has decided to offer refund of 50% of the face value of the Ticket to all valid Ticket holders. The refunds shall be made at the following counters.

Sl.No.	Stands	Price (Rs.)	Gate No.
	REFUND OF TICKETS		
1	G Upper / G Lower 1 and G Lower 2	750/-	Gate No. 5- Cubbon Road
2	A & B Upper and B Lower	2000/-	Gate No. 2- Cubbon Road
3	D Corporate	4000/-	Gate No. 18 - Queens Road
4	N Stand	5000/-	Gate No. 18- Queens Road
5	E-Executive	6000/-	Gate No. 18- Queens Road
	ONLINE SALES		
6	Grand Terrace	6000/-	Gate No. 18- Queens Road
7	P Corporate	10,000/-	Gate No. 19- Queens Road
8	Pavilion Terrace	15,000/-	
9	P2 Stand	20,000/-	

This 50% refund will be made only to those who have retained their original Ticket and subject to conditions stated below.
Conditions for Refund of Tickets.
1.Verification of security features of the Ticket submitted.
2.Tickets shall not be tampered / mutilated / torn / overwritten and reducing visibility
3.Maximum Five (5) Tickets per person is allowed for claiming Refund.
4.No Complimentary Tickets shall be eligible for refund.
5.In case of refusal of Refund at the Counter, KSCA's decision is final.
6.Public are requested to kindly carry minimum currency change to facilitate refund.
7.For further details please visit KSCA Website https://www.ksca.cricket
8.For queries please mail to help@insider.in or call at helpline +91 810 498 3140.
Sd/-
Hon. Secretary-KSCA

ಎಸ್‌ಡಿಎಸ್ ಟಿಆರ್‌ಸಿ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
Reg, No.SOR/BLU/DR/671/09-10 dated 3-09-2009
ಸೋಮೇಶ್ವರನಗರ 1ನೇ ಮುಖ್ಯರಸ್ತೆ, ಧರ್ಮಾರಾಮ್ ಕಾಲೇಜು ಅಂಚೆ (ನಿಮಾನ್ಸ್ ಹತ್ತಿರ), ಬೆಂಗಳೂರು – 560 029 ದೂರವಾಣಿ; 080-26088571/623/667
email:sdstbrgicd@gmail.com, director.rgicd@gmail.com
ಸಂಖ್ಯೆ: ಎಸ್‌ಡಿಎಸ್/ಟೆಂಡರ್/04/05/2022–23 ದಿನಾಂಕ:–22.06.2022
ಇ–ಪ್ರಕ್ಯೂರ್‌ಮೆಂಟ್ ಅಧಿಸೂಚನೆ
ವಿಷಯ:– ಎಸ್‌ಡಿಎಸ್ ಟಿಆರ್‌ಸಿ ಮತ್ತು ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆಗೆ ಭದ್ರತಾ ಸಿಬ್ಬಂದಿ ಮತ್ತು ಮಾನವ ಸಂಪನ್ಮೂಲ ಸಿಬ್ಬಂದಿ ಸೇವೆಗಳನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ಈ ಸಂಸ್ಥೆಗೆ ಅವಶ್ಯಕವಾಗಿ ಬೇಕಾಗಿರುವ ಭದ್ರತಾ ಸಿಬ್ಬಂದಿ ಮತ್ತು ಮಾನವ ಸಂಪನ್ಮೂಲ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೂಲಕ ಖಾಸಗಿ ಸಂಸ್ಥೆಗಳಿಂದ ಈ ಸೇವೆಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಧಿಸೂಚನೆ ಈ ಕೆಳಕಂಡಂತಿರುತ್ತದೆ.

ಅಧಿಸೂಚನೆ ಸಂಖ್ಯೆ	ಭದ್ರತಾ ಸಿಬ್ಬಂದಿ ಸೇವೆಗಳು SDS/TENDER/ 05/2022-23	ಮಾನವ ಸಂಪನ್ಮೂಲ ಸೇವೆಗಳು SDS/ TENDER/ 04/2022-23
ಇ–ಪೋರ್ಟಲ್ ನಲ್ಲಿ ಟೆಂಡರ್ ದಾಖಲಾತಿ ಲಭ್ಯವಾಗುವ ದಿನಾಂಕ	27.06.2022	27.06.2022
ಪ್ರಿ–ಬಿಡ್ ಸಭೆಯ ದಿನಾಂಕ	04.07.2022 ಬೆಳಿಗ್ಗೆ 11.00 ಗಂಟೆಗೆ	04.07.2022 ಬೆಳಿಗ್ಗೆ 11.30 ಗಂಟೆಗೆ
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ	20.07.2022 05.00 ಗಂಟೆಯವರೆಗೆ	20.07.2022 05.00 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರಯುವ ದಿನಾಂಕ ಮತ್ತು ವೇಳೆ	22.07.2022 ಬೆಳಿಗ್ಗೆ 11.30 ಗಂಟೆಗೆ	22.07.2022 ಬೆಳಿಗ್ಗೆ 11.30 ಗಂಟೆಗೆ
ಇ.ಎಂ.ಡಿ ಮೊತ್ತ	ರೂ.1,00,000=00	ರೂ.1,00,000=00

ಸಹಿ/–
ನಿರ್ದೇಶಕರು, ಎಸ್‌ಡಿಎಸ್ ಟಿಆರ್‌ಸಿ ಮತ್ತು ಆರ್‌ಜಿಐಸಿಡಿ
ವಾಸಾಸಂಇ/ವಾಪ್ರ/1030/ಅಲಕ್‌ನಂದ/2022–23
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ · 6 ಅಡಿ ದೈಹಿಕ ಅಂತರ ಪಾಲಿಸಿ · ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಗವೇ ನಾವಾಗಿ... 11

ಬಯೋ ಹ್ಯಾಕಿಂಗ್!

ಮನುಷ್ಯನ ದೇಹವನ್ನೇ ಒಂದು ಕಂಪ್ಯೂಟರ್ ಪ್ರೋಗ್ರಾಮಿನಂತೆ ಭಾವಿಸಿ, ಅದರ ಅಂತರಾಳವನ್ನು ಹೊಕ್ಕು, ಒಳಗಿನ ದೋಷಗಳನ್ನು ಸರಿಪಡಿಸುವ ಸಾಧನವಿದ್ದರೆ ಎಷ್ಟು ಚೆನ್ನ ಅಲ್ಲವೇ? ಪ್ರಾಚೀನ ವಿಧಾನಗಳಿಂದ ಹಿಡಿದು ಆಧುನಿಕ ಡಿಎನ್‌ಎ ತಂತ್ರಜ್ಞಾನದವರೆಗೆ ಯಾವುದಾದರೂ ಸರಿಯೇ, ಅದನ್ನು ಬಳಸಿಕೊಂಡು ಚಿರಯೌವನವನ್ನು ಪಡೆಯುವ ಅಂತಹ ಪ್ರಯೋಗವೊಂದು ಈಗ ನಡೆಯುತ್ತಿದೆ...

ಎಂ.ವಿ. ಕೇಶವಮೂರ್ತಿ

ಪ್ರತಿದಿನ ಬೆಳಿಗ್ಗೆ ಎಂಟು ಗಂಟೆಗೆ ಏಳುವ ಕೆನಡಾದ ಜಗದ್ವಿಖ್ಯಾತ ಐಸ್ ಹಾಕಿ ಆಟಗಾರ ಡಂಕನ್ ಕೀತ್ ತನ್ನ ಮನೆಯ ಮೊದಲ ಮಹಡಿಯಲ್ಲಿರುವ ವ್ಯಾಯಾಮ ಶಾಲೆಗೆ ತೆರಳುತ್ತಾನೆ. ಮೊದಲಿಗೆ ದೇಹವನ್ನು ಕೆಲಕಾಲ ಸೂರ್ಯನ ಕಿರಣಗಳಿಗೊಡ್ಡಿ ನಂತರ ಕೆಂಪು ಹಾಗೂ ಆವೆಗೆಂಪು ಬೆಳಕು ಸೂಸುವ ಬಲ್ಬಿನ ಕೆಳಗೆ ಎಂಟು ನಿಮಿಷ ಮಲಗುತ್ತಾನೆ. ಆನಂತರ ಅಷ್ಟೇ ಸಮಯ ಎಲೆಕ್ಟ್ರೋ ಮ್ಯಾಗ್ನೆಟಿಕ್ ಕಿರಣಗಳನ್ನು ಸೂಸುವ ಚಾಪೆಯ ಮೇಲೆ ಮಲಗುತ್ತಾನೆ. ಬಳಿಕ ತನ್ನ ಆಹಾರದಲ್ಲಿ ಗ್ಲುಟಾಥಿಯೋನ್ ಹಾಗೂ ವಿಟಮಿನ್ 'ಸಿ' ಇರುವಂತೆ ನೋಡಿಕೊಳ್ಳುತ್ತಾನೆ. ಅಲ್ಲದೇ ಆಗಾಗ ಅಶ್ವಗಂಧವನ್ನೂ ತನ್ನ ಆಹಾರದೊಂದಿಗೆ ಸೇವಿಸುತ್ತಾನೆ. ರಾತ್ರಿ ಮಲಗುವಾಗ ಜಲಜನಕದ ಇನ್ಹೇಲರ್ ಉಪಯೋಗಿಸಿ ಅದನ್ನು ಹೀರುತ್ತಾ ಮಲಗುತ್ತಾನೆ. ಈ ಎಲ್ಲಾ ಪ್ರಕ್ರಿಯೆಗಳು ತಾನು ಪ್ರತಿದಿನವೂ ಅತ್ಯಂತ ಕ್ರಿಯಾಶೀಲನಾಗಿರುವುದಕ್ಕೆ ಸಹಕಾರಿ ಎಂಬುದು ಆತನ ಬಲವಾದ ನಂಬಿಕೆ.

ಜೋಯಲ್ ಎರಿಕ್ ಪಿಂಟೊ ಎಂಬ ನ್ಯೂಟ್ರಿಷಿಯನಿಸ್ಟ್‌ನ ದಿನಚರಿಯನ್ನೊಮ್ಮೆ ನೋಡೋಣ. ಮುಂಜಾನೆ ಎದ್ದಕೂಡಲೇ ಹಾಲು ಹಾಕದ ಕಾಫಿಯ ಮೇಲೆ ದೊಡ್ಡ ಬೆಣ್ಣೆಯ ಮುದ್ದೆಯನ್ನಿಟ್ಟು, ಆತ ಕುಡಿಯುತ್ತಾನೆ. ತಾನು ತಿನ್ನುವ ಆಹಾರದ ಪ್ರತೀ ಅಗುಳನ್ನೂ ತೂಕಮಾಡಿ, ಅದರಿಂದ ಎಷ್ಟು ಕ್ಯಾಲೊರಿ ಉತ್ಪತ್ತಿಯಾಗುತ್ತದೆಂದು ಲೆಕ್ಕಹಾಕಿ ಬಳಿಕ ತಿನ್ನುತ್ತಾನೆ. ಕೈ ಹೆಬ್ಬೆರಳಿನ ತುದಿಗೆ ಸದಾ ಗ್ಲುಕೋಮಿಟರ್ ಅಂಟಿಸಿಕೊಂಡು ಸದಾ ರಕ್ತದ ಗ್ಲುಕೋಸು ಎಷ್ಟಿದೆ ಎಂದು ನೋಡುತ್ತಲೇ ಇರುತ್ತಾನೆ. ವ್ಯಾಯಾಮ ಮಾಡಿದ್ದನ್ನು ಅಳತೆ ಮಾಡಲು ಸಾಧನವೊಂದನ್ನು ಇಟ್ಟುಕೊಂಡಿದ್ದಾನೆ. ಅದರ ಮುಖಾಂತರ ತಾನು ಎಷ್ಟು ಹೆಜ್ಜೆಗಳನ್ನು ಹಾಕಿದ ಎಂಬುದೂ ಸೇರಿದಂತೆ ಹಲವು ದಾಖಲೆಗಳನ್ನಿಡುತ್ತಾನೆ. ತನ್ನ ಮನೆಯ ಬಾಲ್ಕನಿಯಲ್ಲಿ ಪ್ರತಿದಿನ ಹಲವು ಗಂಟೆಗಳವರೆಗೆ ಮೊಬೈಲು ಫೋನನ್ನು ಮುಟ್ಟದೆಯೇ ವಾಕಿಂಗ್ ಮಾಡುತ್ತಾನೆ. ಸಂಜೆಯ ಹೊತ್ತಿಗೆಲ್ಲಾ ರಾತ್ರಿಯ ಊಟವನ್ನೂ ಮುಗಿಸಿಬಿಡುತ್ತಾನೆ. ರಾತ್ರಿ ಮಲಗುವಾಗ ಯಾವುದೇ ಬಲ್ಬುಗಳನ್ನು ಉರಿಸುವುದಿಲ್ಲ. ಕಾರಣ ತನ್ನ ಮೆದುಳಿಗೆ ಇದು ರಾತ್ರಿ ಎಂಬುದು ಮನದಟ್ಟಾಗಲಿ ಎಂಬ ಕಾರಣಕ್ಕಾಗಿ. ತಾನು ಆರೋಗ್ಯವಾಗಿರಲು ಈ ಅಭ್ಯಾಸಗಳು ಅನಿವಾರ್ಯ ಎಂಬುದು ಪಿಂಟೊನ ಅಭಿಮತ.

ಈ ಇಬ್ಬರ ದಿನಚರಿಗಳು ನಮಗೆ ಸ್ವಲ್ಪ ವಿಚಿತ್ರ ಹಾಗೂ ವಿಭಿನ್ನವಾಗಿ ಕಂಡರೂ ಸದ್ಯ ಜನಪ್ರಿಯವಾಗುತ್ತಿರುವ ವಿಶಿಷ್ಟವಾದ ಅಭ್ಯಾಸವೊಂದು ಇದಾಗಿದ್ದು ಇದನ್ನು ಶಾಸ್ತ್ರೀಯವಾಗಿ ಬಯೋ ಹ್ಯಾಕಿಂಗ್ ಅಥವಾ ಡು ಇಟ್ ಯುವರ್ ಸೆಲ್ಫ್ ಬಯಾಲಜಿ ಅಥವಾ ಗ್ಯಾರೇಜ್ ಬಯಾಲಜಿ ಎಂದು ಕರೆಯಲಾಗುತ್ತದೆ. ವಿದೇಶಗಳಲ್ಲಿ ಇತ್ತೀಚೆಗೆ ಬಹಳ ವೇಗವಾಗಿ ಜನಪ್ರಿಯಗೊಳ್ಳುತ್ತಿರುವ ಈ ಪ್ರಯೋಗ ಸಾವಕಾಶವಾಗಿ ಭಾರತದಲ್ಲಿಯೂ ಪ್ರಚಾರ ಪಡೆಯುತ್ತಿದೆ. ಜೈವಿಕ ತಂತ್ರಜ್ಞಾನದ ಪ್ರಯೋಗಗಳನ್ನು ಸಾಧಾರಣವಾಗಿ ಪ್ರಯೋಗಾಲಯಗಳಲ್ಲಿ ಮಾಡಲಾಗುತ್ತದೆ. ಆದರೆ, ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ತಮ್ಮ ಮೇಲೆಯೇ ಪ್ರಯೋಗಿಸಿಕೊಳ್ಳುತ್ತಾ ಅದರಿಂದ ತಮ್ಮ ಜೀವನವನ್ನು ಆರೋಗ್ಯಯುತವಾಗಿ ಇರುವಂತೆ ಹಸನುಗೊಳಿಸಿಕೊಳ್ಳುವ ವ್ಯವಸ್ಥೆಯೇ ಈ ಬಯೋ ಹ್ಯಾಕಿಂಗ್. ನಮ್ಮ ದೇಹವನ್ನು ಆರೋಗ್ಯವಾಗಿಡಲು ಸದ್ಯ ಲಭ್ಯವಿರುವ ತಂತ್ರಜ್ಞಾನಕ್ಕಿಂತಲೂ ಕಾರ್ಯಕ್ಷಮತೆಯುಳ್ಳ ನವೀನವಾದ ಯಾವುದಾದದರೂ ತಂತ್ರಜ್ಞಾನವನ್ನು ಹುಡುಕುತ್ತಾ ಸಾಗುವ ಈ ವಿಧಾನ ಇತ್ತೀಚೆಗೆ ನಮ್ಮ ವಂಶವಾಹಿಯ ಬದಲಾವಣೆ ತಂದುಕೊಳ್ಳುವ ಮಟ್ಟಕ್ಕೆ ಬೆಳೆದು ನಿಂತಿದೆ.

ಶಾಸ್ತ್ರೀಯವಾದ ಸಂಶೋಧನೆಗಳಿಗೆ ಹಲವಾರು ತೊಡಕುಗಳಿರುತ್ತವೆ. ಆದರೆ, ಈ ಬಯೋ ಹ್ಯಾಕಿಂಗ್ ವಿಚಾರದಲ್ಲಿ ಆ ಸಮಸ್ಯೆ ಇರುವುದಿಲ್ಲ. ಇಲ್ಲಿ ವ್ಯಕ್ತಿಯೊಬ್ಬ ಸ್ವಯಂ ತನ್ನ ದೇಹದ ಮೇಲೆ ವಿವಿಧ ಪ್ರಯೋಗಗಳನ್ನು ಮಾಡುವ ಮುಖಾಂತರ ತನ್ನ ದೇಹಕ್ಕೆ ಯಾವ ಪ್ರಮಾಣದಲ್ಲಿ ಏನನ್ನು ನೀಡಬೇಕು, ಯಾವಾಗ ನೀಡಬೇಕು, ಹೇಗೆ ಹತೋಟಿಯಲ್ಲಿಟ್ಟರೆ ತಾನು ಆರೋಗ್ಯವಂತನಾಗಿರಬಹುದು ಇತ್ಯಾದಿ ವಿಚಾರಗಳ ಬಗ್ಗೆ ಸ್ವತಃ ಅಧ್ಯಯನ ಮಾಡಿ, ಕಂಡುಕೊಂಡ ಮಾರ್ಗವನ್ನು ನಂತರ ತನ್ನ ಮೇಲೆಯೇ ಪ್ರಯೋಗಿಸಿಕೊಳ್ಳುತ್ತಾನೆ.

ಬಯೋ ಹ್ಯಾಕಿಂಗ್ ಎಂದರೇನು?

ಏನಿದು ಬಯೋ ಹ್ಯಾಕಿಂಗ್ ಎಂಬುದನ್ನು ಮೊದಲಿಗೆ ತಿಳಿದುಕೊಳ್ಳೋಣ. ಗಣಕಯಂತ್ರಗಳಿಗೆ ಯಾವುದೇ ಆದೇಶವನ್ನು ನೀಡಬೇಕಾದರೆ ಅದಕ್ಕೆ ಅದರದ್ದೇ ಆದ ಭಾಷೆಯೊಂದರ ಮುಖಾಂತರ ನಿರ್ದೇಶನಗಳನ್ನು ನೀಡಬೇಕಾಗುತ್ತದೆ, ಇದನ್ನು ಪ್ರೋಗ್ರಾಮಿಂಗ್ ಎಂದು ಕರೆಯಲಾಗುತ್ತದೆ. ಇಂತಹ ಪ್ರೋಗ್ರಾಮುಗಳ ಮಧ್ಯೆ ನುಗ್ಗಿ ಅದರ ಅಂತರಾಳವನ್ನು ತಿಳಿದಕೊಳ್ಳುವುದನ್ನೇ ಹ್ಯಾಕಿಂಗ್ ಎಂದು ಕರೆಯಲಾಗುತ್ತದೆ. ಹೀಗೆಯೇ ಮನುಷ್ಯನ ದೇಹವನ್ನೇ ಒಂದು ಕಂಪ್ಯೂಟರ್ ಪ್ರೋಗ್ರಾಮಿನಂತೆ ಭಾವಿಸಿ ಅದರ ಅಂತರಾಳವನ್ನು ಹೊಕ್ಕಿ ಅದನ್ನು ಸರಿಪಡಿಸಲು ಸಾಧ್ಯವಿರುವ ಪ್ರಾಚೀನವಾದ ವಿಧಾನಗಳಿಂದ ಹಿಡಿದು ಇತ್ತೀಚಿನ ಡಿಎನ್‌ಎ ತಂತ್ರಜ್ಞಾನದವರೆಗೂ ಯಾವುದಾದರೂ ಸರಿಯೇ, ಅದನ್ನು ಬಳಸಿಕೊಂಡು ದೇಹವನ್ನು ಆರೋಗ್ಯವಾಗಿಡುವುದಕ್ಕೆ ಪ್ರಯತ್ನಿಸುವುದನ್ನೇ ಬಯೋ ಹ್ಯಾಕಿಂಗ್ ಅಥವಾ ಡು ಇಟ್ ಯುವರ್ ಸೆಲ್ಫ್ ಬಯಾಲಜಿ ಎಂದು ಕರೆಯಲಾಗುತ್ತದೆ.

ಬಯೋ ಹ್ಯಾಕಿಂಗ್ ವಿಧಾನಗಳೇನು?

ಭಾರತದಲ್ಲಿ ಬಹಳ ಪ್ರಾಚೀನಕಾಲದಿಂದಲೂ ಉಪವಾಸ ಒಂದು ಪದ್ಧತಿಯಂತೆಯೇ ನಮ್ಮ ಜನಜೀವನದೊಳಗೆ ಸೇರಿಹೋಗಿದೆ. ಹೀಗೆ ನಿಯಮಿತವಾಗಿ ಉಪವಾಸ ಮಾಡುವುದೂ ಸೇರಿದಂತೆ ಹಲವಾರು ಬಗೆಯ ವಿಧಾನಗಳನ್ನು ಬಯೋ ಹ್ಯಾಕಿಂಗ್ ಒಳಗೊಂಡಿದೆ. ಆಹಾರವನ್ನು ಅಳತೆಮಾಡಿ ತಿನ್ನುವುದು, ತಮ್ಮ ದೇಹ ಪ್ರಕೃತಿಗೆ ಹೊಂದುವಂತಹ ಆಹಾರವನ್ನೇ ಅಭಿವೃದ್ಧಿಪಡಿಸಿಕೊಂಡು ಸೇವಿಸುವುದು, ನಡೆದಾಡುವಾಗ ಹೆಜ್ಜೆಗಳನ್ನು ಲೆಕ್ಕ ಹಾಕುವುದು, ನಿದ್ದೆ ಎಷ್ಟುಹೊತ್ತು ಮಾಡಿದೆ ಎಂಬುದರ ಬಗ್ಗೆ ನಿಗಾ ಇಡುವುದು, ರಕ್ತದ ಸಕ್ಕರೆ ಅಂಶವನ್ನು ಸದಾ ಗಮನಿಸುತ್ತಿರುವುದು, ನಿತ್ಯ ಪ್ರಾಣಾಯಾಮ, ನಿಗದಿತ ವ್ಯಾಯಾಮ ನಡೆಸುವುದು, ಮಂಜುಗೆಡ್ಡೆಯಿಂದ ಸ್ನಾನ ಮಾಡುವುದು ಅಥವಾ ಮೂಳೆಯವರೆಗೆ ಕೊರೆಯಬಲ್ಲ ಥಂಡಿ ದ್ರಾವಕವಿರುವ ಡಬ್ಬಿಯೊಳಗೆ ಕೂರುವುದು, ಅತಿನೇರಳೆ ಕಿರಣಗಳಿಗೆ ಮೈಯೊಡ್ಡುವುದು, ಸ್ಟೆಮ್ ಸೆಲ್ ಥೆರಪಿಗೆ ಒಳಗಾಗುವುದು, ವೃದ್ಧಾಪ್ಯವನ್ನು ತಡೆಗಟ್ಟಲು ಯುವಕರ ರಕ್ತವನ್ನು ತಮ್ಮ ದೇಹಕ್ಕೆ ಹರಿಸಿಕೊಳ್ಳುವುದು, ಡಿಎನ್‌ಎಯಲ್ಲಿ ಏನಾದರೂ ಸಮಸ್ಯೆ ಇದ್ದರೆ ಇತ್ತೀಚೆಗೆ ಜನಪ್ರಿಯವಾಗುತ್ತಿರುವ ಕ್ರಿಸ್ಪರ್ ತಂತ್ರಜ್ಞಾನದ ಮುಖಾಂತರ ಅದನ್ನು ಸರಿಪಡಿಸಿಕೊಳ್ಳಲು ಯತ್ನಿಸುವುದು ಹೀಗೆ ಹತ್ತು ಹಲವಾರು ವಿಧಾನಗಳನ್ನು ಬಯೋ ಹ್ಯಾಕಿಂಗ್ ಒಳಗೊಂಡಿದೆ.

ಡಿಎನ್‌ಎ ತಂತ್ರಜ್ಞಾನವನ್ನು ಬಳಸಿಕೊಂಡು ನಮ್ಮ ದೇಹದಲ್ಲಿ ಬದಲಾವಣೆ ತಂದು ವಂಶವಾಹಿ ಸಂಬಂಧಿತ ಕಾಯಿಲೆಗಳು ಇಲ್ಲವೆ ವೃದ್ಧಾಪ್ಯದಂತಹ ಸಮಸ್ಯೆಗಳು ಸುಳಿಯದಂತೆ ನೋಡಿಕೊಳ್ಳಲು ಮೆದುಳಿನ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಅಥವಾ ವೈರಾಣುಗಳ ಭೀತಿಯಿಂದ ಪಾರಾಗಲು ಹವಣಿಸುವ ಪರಿಪಾಟ ಇತ್ತೀಚಿಗೆ ತೀವ್ರಗತಿಯಲ್ಲಿ ಜನಪ್ರಿಯಗೊಳ್ಳುತ್ತಿದೆ.

11ನೇ ಪುಟಕ್ಕೆ...

ಮಕ್ಕಳಿಗೆ ಏನು ಕಲಿಸಬೇಕು?

ಜ.ನಾ. ತೇಜಶ್ರೀ

ನಾನಾಗ ನಾಲ್ಕನೇ ಕ್ಲಾಸಿನ ವಿದ್ಯಾರ್ಥಿ. 'ಬುಲ್‌ಬುಲ್ಸ್' ಎಂಬ ಪಠ್ಯೇತರ ಚಟುವಟಿಕೆಗಳ ಗುಂಪಿನ ಸದಸ್ಯೆಯಾಗಿದ್ದೆ. ವಾರಾಂತ್ಯದಲ್ಲಿ ಶಾಲೆಯ ನಿತ್ಯದ ಅವಧಿ ಮುಗಿದ ನಂತರ ಈ ಗುಂಪಿನ ಸದಸ್ಯರುಗಳು ಒಂದೆರಡು ತಾಸು ಹೆಚ್ಚುವರಿಯಾಗಿ ಶಾಲೆಯಲ್ಲೇ ಉಳಿಯಬೇಕಿತ್ತು. ಶಾಲಾ ಆವರಣವನ್ನು ಚೊಕ್ಕ ಮಾಡುವುದು, ಮಾರ್ಚ್‌ಪಾಸ್ಟ್ ಅಭ್ಯಾಸ, ಧ್ವಜವನ್ನು ಕಟ್ಟುವ, ಏರಿಸುವ ಕೆಲಸ ಇತ್ಯಾದಿ ವಿಷಯಗಳನ್ನು ಅಲ್ಲಿ ಹೇಳಿಕೊಡುತ್ತಿದ್ದರು.

'ಬುಲ್‌ಬುಲ್ಸ್'ನವರಿಗೇ ಪ್ರತ್ಯೇಕ ಸಮವಸ್ತ್ರ ಇರುತ್ತಿತ್ತು. ನೀಲಿಬಣ್ಣದ ಸ್ಕರ್ಟು, ಕುತ್ತಿಗೆಗೊಂದು ಸ್ಕಾರ್ಫ್ (ದಟ್ಟ ನೀಲಿ ಬಣ್ಣಕ್ಕೆ ಮರುಳಾಗಿ 'ಬುಲ್‌ಬುಲ್ಸ್' ಸೇರಿದ್ದ ನಾನು ಈ ಕ್ಷಣದವರೆಗೂ ಆ ನೀಲಿಯ ಸೆಳೆತವನ್ನು ತಪ್ಪಿಸಿಕೊಳ್ಳಲಾಗದೆ, ಅದೇ ಸಮವಸ್ತ್ರವನ್ನು ನನ್ನ ಬಳಿ ಜೋಪಾನವಾಗಿ ಇರಿಸಿಕೊಂಡಿದ್ದೇನೆ!). ವರ್ಷದಲ್ಲಿ ಒಮ್ಮೆ ಒಂದಿಡೀ ದಿನ ಊರಿನ ಆಸುಪಾಸಿನ ಯಾವುದಾದರೂ ಸ್ಥಳದಲ್ಲಿ 'ಕ್ಯಾಂಪ್' ನಡೆಸುತ್ತಿದ್ದರು. ಅಂತಹದ್ದೊಂದು ಕ್ಯಾಂಪನ್ನು ಆಲೂರು ರಸ್ತೆಯಲ್ಲಿರುವ 'ಯಗಚಿ ವಿದ್ಯಾಪೀಠ'ದಲ್ಲಿ ಆಯೋಜಿಸಿದ್ದರು.

ಬೆಂಕಿಯ ಸಹಾಯವಿಲ್ಲದೆ ಮಕ್ಕಳು ಏನಾದರೂ ಅಡುಗೆ/ತಿನಿಸು ಮಾಡಬೇಕು ಎಂಬುದು ಆ ಕ್ಯಾಂಪಿನಲ್ಲಿ ನಮಗೆ ಕೊಟ್ಟಿದ್ದ ಸವಾಲಾಗಿತ್ತು. ನಾಲ್ಕನೆಯ ತರಗತಿಯಲ್ಲಿ ಮಕ್ಕಳಿಗೆ ಎಷ್ಟು ಅಡುಗೆಯ ಜ್ಞಾನ, ಆಸಕ್ತಿ ಇರುತ್ತದೆ ಎನ್ನುವುದನ್ನು ಯಾರಾದರೂ ಊಹಿಸಬಹುದು. ಅಂತಹದ್ದರಲ್ಲಿ ಆರೇಳು ಮಕ್ಕಳ ನಾಲ್ಕು 'ಬುಲ್‌ಬುಲ್ಸ್' ಗುಂಪಿನವರೂ ತಮ್ಮೆಲ್ಲ ಜ್ಞಾನ, ಸೃಜನಶೀಲತೆಯನ್ನು ಬಳಸಿ ಚುರುಮುರಿ (ಆಗೆಲ್ಲ ಇನ್ನೂ 'ಭೇಲ್‌ಪುರಿ'ಯ ಭರಾಟೆ ಇರಲಿಲ್ಲ!), ಸೌತೇಕಾಯಿ ಕೋಸಂಬರಿ (ಹೊಸ ತಳಿಯ ಆವಿಷ್ಕಾರದಲ್ಲಿ ಹಾಸನದ ಆ ವಿಶೇಷ ನಾಟಿಸೌತೆ ಈಗ ಈ ಲೋಕದಿಂದಲೇ ಕಣ್ಮರೆಯಾಗಿದೆ!), ಕ್ಯಾರೆಟ್ ಕೋಸಂಬರಿ, ಟೊಮೆಟೊ ತಿನಿಸು (ಒಂದು ಲೋಟಕ್ಕೆ ಸಣ್ಣಗೆ ಹೆಚ್ಚಿದ ಟೊಮೆಟೊ, ಮೂರು ನಾಲ್ಕು ಚಮಚ ಬೆಲ್ಲ ಅಥವಾ ಸಕ್ಕರೆ ಹಾಕಿ ಒಂದು ಚಮಚದಿಂದ ಟೊಮೆಟೊವನ್ನು ಎಷ್ಟು ಸಾಧ್ಯವೋ ಅಷ್ಟು ಜಜ್ಜುವುದು. ಟೊಮೆಟೊದಿಂದ ಹೊರಬರುವ ರಸವು ಸಕ್ಕರೆಯ ಜೊತೆ ಸೇರಿಕೊಂಡು ಆ ಲೋಟದಲ್ಲಿ ಟೊಮೆಟೊ ಪಾನೀಯದ ಜೊತೆಗೆ ಟೊಮೆಟೊ ಚೂರುಗಳೊಂದಿಗೆ ಸವಿಯಲು ಸಿದ್ಧವಾಗುತ್ತದೆ.) ಇವನ್ನೆಲ್ಲ ನಾವು ಮಾಡಿದ ನೆನಪು ಈಗಲೂ ಮನಸ್ಸಿನಲ್ಲಿ ಉಳಿದಿದೆ. ಜೊತೆಗೆ, ಇದನ್ನು ಸಿದ್ಧ ಮಾಡಲು ಒಂದು ಗುಂಪಿನವರ ಬಳಿ ಯಾವುದಾದರೂ ಸಾಮಗ್ರಿ ಇಲ್ಲದೆ ಹೋದಾಗ ಅಥವಾ ಕಡಿಮೆ ಬಿದ್ದಾಗ ಮತ್ತೊಬ್ಬರ ಹತ್ತಿರ ಕೇಳಿ ಪಡೆದು ಮಾಡಿದ್ದೂ ನೆನಪಿದೆ. ಇದು 'ಸ್ಪರ್ಧೆ' ಅಂತಲೇ ಮಾಡಿದ್ದರಾದರೂ, ಪಾಲ್ಗೊಂಡ ಎಲ್ಲರಿಗೂ ಕೇಕು, ಚಾಕಲೇಟು ಸಿಕ್ಕಿದ್ದೂ ಮರೆಯಲಾಗಿಲ್ಲ.

ನಾವಾಗ ಆರು-ಏಳನೇ ತರಗತಿಯ ವಿದ್ಯಾರ್ಥಿಗಳು. ನಮ್ಮನಮ್ಮ ತರಗತಿಯ ಮುಂಭಾಗದ ಸುಮಾರು ನಾಲ್ಕಡಿ ಉದ್ದ, ಎರಡಡಿ ಅಗಲದಷ್ಟು ಜಾಗದಲ್ಲಿ ಹೂವಿನ ಗಿಡಗಳನ್ನು ಹಾಕಿದ್ದರು. ಅಲ್ಲಿಯತನಕ, ಶಾಲೆಯ ಆಯಾಗಳು, ಸಹಾಯಕರುಗಳು ತಮ್ಮ ಬಿಡುವಿನ ವೇಳೆಯಲ್ಲಿ ಕೈತೋಟವನ್ನು ಸ್ವಚ್ಛಗೊಳಿಸುವ ಕೆಲಸ ಮಾಡುತ್ತಿದ್ದರು. ಒಂದು ದಿನ, (ಸಿಸ್ಟರ್ ವಿಲ್ಮ ಎಂಬುವವರು ಹೊಸ ಮುಖ್ಯೋಪಾಧ್ಯಾಯರಾಗಿ ಬಂದಮೇಲೆ ಎಂದು ನೆನಪು) ಶಾಲಾ ಅಸೆಂಬ್ಲಿಯಲ್ಲಿ ಮುಖ್ಯೋಪಾಧ್ಯಾಯರು 'ಮಕ್ಕಳೇ... ಇನ್ನು ಮೇಲಿಂದ ನಿಮ್ಮನಿಮ್ಮ ತರಗತಿ ಮುಂದೆ ಇರುವ ಕೈದೋಟಗಳನ್ನು ನೀವೇ ಜಾಗ್ರತೆ ನೋಡಿಕೊಳ್ಳಬೇಕು. ಯಾರು ಚಂದ ಮಾಡಿ ನೋಡ್ತಾರೋ ಆ ಕ್ಲಾಸಿನವರಿಗೆ ಅಸೆಂಬ್ಲಿಯಲ್ಲಿ ಎಲ್ಲರೆದುರಿಗೆ ಚಪ್ಪಾಳೆ ಸಿಗ್ತದೆ' ಎಂದರು.

> **ರಾಜ್ಯದಲ್ಲಿ ಈಗ ಎಲ್ಲಿಗೆ ಹೋದರೂ ಪಠ್ಯಪುಸ್ತಕದ್ದೇ ಮಾತು. ಆದರೆ, ಬದುಕಿನ ಪಾಠವನ್ನು ಹೇಳಿಕೊಡುತ್ತಿದ್ದ ಶಾಲೆಯ ಹಿಂದಿನ ವಾತಾವರಣ ಈಗ ಸಂಪೂರ್ಣ ಕಾಣೆಯಾಗಿ ಬಿಟ್ಟಿದೆಯಲ್ಲ! ಸೃಜನಶೀಲತೆಗೆ ನೀರೆರೆಯುತ್ತಿದ್ದ ಆ ದಿನಗಳು ಎಲ್ಲಿ ಹೋದವು?**

ಓಹೋ! ಅದೆಂತಹ ಉತ್ಸಾಹ ಮಕ್ಕಳಲ್ಲಿ! ಅಸೆಂಬ್ಲಿಯಲ್ಲಿ ಚಪ್ಪಾಳೆ ಅಂದರೆ ಸುಮ್ಮನೆ ಆಯ್ತಾ! ಶುರುವಾಯಿತಪ್ಪಾ ಅಂದಿನಿಂದ... ಮೊದಲೆಲ್ಲ ಬಿಡುವಿನ ಸಮಯ ಸಿಕ್ಕಿತೆಂದರೆ ಆಟ ಆಡುವುದಕ್ಕೆ ಓಡುತ್ತಿದ್ದ ನಾವೆಲ್ಲ ಕಳೆಗುದ್ದಲಿ, ಕೈಗುದ್ದಲಿ, ನೀರಿನ ಕ್ಯಾನು ಅಂತ ಹಿಡಿದು ನಿಲ್ಲತೊಡಗಿದೆವು. ಕೈದೋಟದ ಅಂಚಿಗೆ ಜೋಡಿಸಿದ್ದ ಇಟ್ಟಿಗೆಗಳನ್ನು ತೆಗೆದು ಅಲಂಕಾರಿಕವಾಗಿ ಇಡೋದೇನು; ಶಾಲಾ ಕೊಠಡಿಗಳಿಂದ ದೂರವಿದ್ದ ತೊಟ್ಟಿಯಿಂದ ಬಗ್ಗಡದ ನೀರನ್ನು ಎತ್ತೆತ್ತಿ ತಂದು ಗಿಡಗಳಿಗೆ ನೀರುಣಿಸುವುದೇನು; ಕಳೆ ಕೀಳೋದೇನು; ಒಬ್ಬೊಬ್ಬರೂ ಅವರವರ ಮನೆಯ ಹೂಸಸಿಗಳನ್ನು ತರೋದೇನು; ಗಿಡ ನೆಡೋದೇನು; ದಿನವೂ ಚಿಗುರು, ಮೊಗ್ಗು, ಹೂವಿಗೆ ಕಾಯೋದೇನು... ಇಷ್ಟೆಲ್ಲ ಪೋಷಣೆ ಪಡೆದು, ತಿಂಗಳೊಂದೆರಡು ಕಳೆಯೋ ಹೊತ್ತಿಗೆ ಎಲ್ಲ ತರಗತಿಗಳ ಕೈದೋಟಗಳೂ ತರಾವರಿ ಹೂಗಳಿಂದ ತೊನೆಯತೊಡಗಿದ್ದವು. ಅಸೆಂಬ್ಲಿಯಲ್ಲಿ ಎಲ್ಲ ಮಕ್ಕಳಿಗೂ ಚಪ್ಪಾಳೆ ಸಿಕ್ಕೇಸಿಕ್ಕಿತು, ಎಲ್ಲ ಶಿಕ್ಷಕರು, ಮುಖ್ಯೋಪಾಧ್ಯಾಯರಿಂದ!

ಗಿಡದ ಎಲೆಗಳನ್ನು ಮಣ್ಣಿಗೇ ಸೇರಿಸಿ ಹೇಗೆ ಗೊಬ್ಬರ ಮಾಡಬೇಕು, ಅಕ್ಕಪಕ್ಕದ ಗಿಡಗಳಿಗೆ ತೊಂದರೆ ಮಾಡದ ಹಾಗೆ ಕಳೆ ಹುಲ್ಲನ್ನು ಹೇಗೆ ಮೀಟಿ ತೆಗೆಯಬೇಕು, ಯಾವ ಕಾಲದಲ್ಲಿ ಬೀಜಗಳನ್ನು ಮಣ್ಣಿಗೆ ಊರಬೇಕು, ಯಾಕೆ ಅನ್ನುವ ಸರಳ ಪಾಠಗಳೆಲ್ಲ ಅಲ್ಲಿಂದಲೇ ನಮ್ಮ ಬದುಕಿನೊಳಕ್ಕೆ ಊರಿಕೊಂಡಿದ್ದವು... ಈ ಕೈದೋಟಕ್ಕೆ ನಮ್ಮ ಮನೆಯ ಹೂದೋಟದಿಂದ ನಾನು ಮೂರು-ನಾಲ್ಕು ಎರೆಹುಳುಗಳನ್ನು ತೆಗೆದುಕೊಂಡು ಹೋಗಿ ಬಿಟ್ಟದ್ದನ್ನು ಮರೆಯುವುದು ಹೇಗೆ!

ಎಂಟು-ಒಂಭತ್ತು ತರಗತಿಯ ದಿನಗಳವು. ಮಧ್ಯಾಹ್ನ ಊಟಕ್ಕೆ ಶಾಲಾ ಮೈದಾನದಲ್ಲಿ ಕೂರಬೇಕಿತ್ತು. ತರಗತಿಯಲ್ಲಿ ಕುಳಿತಿರುವ ಕಡೆಯಲ್ಲೇ ಕುಳಿತು ಊಟ ಮಾಡಬೇಕಾದ ನನ್ನ ಮಕ್ಕಳ ಶಾಲಾ ಅನುಭವಗಳನ್ನು ನೋಡಿದರೆ, ಯಾರು ಯಾರೊಂದಿಗೆ ಬೇಕಾದರೂ ಕುಳಿತು ಊಟ ಮಾಡಬಹುದಾದ, ಊಟವನ್ನು ಹಂಚಿ ತಿನ್ನಬಹುದಾಗಿದ್ದ ನಮ್ಮ ಶಾಲೆಯ ದಿನಗಳು ಕಪೋಲಕಲ್ಪಿತ ಅನ್ನಿಸಬಹುದು.

ಹೀಗೇ ಒಂದು ದಿನ ನಮ್ಮ ಮಾಮೂಲಿ ಎಂಟ್ಹತ್ತು ಹುಡುಗಿಯರ ಗುಂಪಿಗೆ ಒಂದಿಬ್ಬರು ಹೊಸದಾಗಿ ಸೇರಿಕೊಂಡರು. ಎಂದಿನಂತೆ ನಾವೆಲ್ಲ ಒಂದೊಂದು ತುತ್ತು ನಮ್ಮ ಊಟವನ್ನು ಎಲ್ಲರ ಊಟದಡಬ್ಬಿ ಮುಚ್ಚಳಕ್ಕೆ ಹಾಕುತ್ತ ಬಂದೆವು. ಆ ದಿನ ನಮ್ಮ ಗುಂಪಿನ ಯಾರೋ ಮಾಂಸದ ಸಾರು ತಂದಿದ್ದರು. ನಾವೆಲ್ಲ ಹಂಚಿಕೊಂಡು ತಿಂದೆವು. ಹೊಸದಾಗಿ ಬಂದಿದ್ದ ಹುಡುಗಿಯರಿಬ್ಬರೂ ಅವರ ಊಟವನ್ನು ನಮಗೆ ಕೊಡಲೂ ಇಲ್ಲ, ನಮ್ಮದನ್ನು ತೆಗೆದುಕೊಳ್ಳಲೂ ಅಸಹ್ಯ ಮಾಡಿಕೊಂಡರು. ಅದೊಂಥರಾ ಅಸಹನೀಯ ಮುಜುಗರದ ದಿನವಾಗಿತ್ತು. ಆನಂತರ ಆ ಹುಡುಗಿಯರಿಬ್ಬರು ನಮ್ಮ ತರಗತಿಯ ಶಿಕ್ಷಕ 'ಸಿಸ್ಟರ್' ಹತ್ತಿರ ಹೋಗಿ, ನಾವು ಮಾಂಸ ತಂದಿದ್ದಾಗಿ ದೂರು ಹೇಳಿದ್ದರು.

'ಸಿಸ್ಟರ್' ನಮ್ಮನ್ನೆಲ್ಲ ಕರೆಸಿ, ಆ ಹುಡುಗಿಯರನ್ನೂ ಒಟ್ಟಿಗೆ ನಿಲ್ಲಿಸಿ, 'ಮಾಂಸ ತಿನ್ನೋದು ಅವರವರ ಆಹಾರ ಪದ್ಧತಿ. ಅದನ್ನು ಮಾಡಬೇಡಿ ಅಂತ ಹೇಳ್ಳಿಕ್ಕೆ ನಮಗೆ ಅಧಿಕಾರ ಇಲ್ಲಮ್ಮ... ನಿಮಗೆ ಇಷ್ಟ ಇಲ್ಲದೆ ಹೋದ್ರೆ ಬೇರೆ ಕೂತು ಊಟ ಮಾಡಿ, ಈ ಚಿಕ್ಕಪುಟ್ಟ ವಿಷಯಕ್ಕೆಲ್ಲ ಪಿರಿಪಿರಿ ಮಾಡಬೇಡಿ. ಇದನ್ನ ಈಗ ಇಲ್ಲಿಗೆ ಬಿಡಿ' ಎಂದು ಹೇಳಿದ್ದು ಈ ಕ್ಷಣಕ್ಕೂ ಕಿವಿಯಲ್ಲಿ ಅನುರಣಿಸುತ್ತದೆ. ಆ ಹುಡುಗಿಯರೂ ಅದನ್ನು ಅಲ್ಲಿಗೆ ಬಿಟ್ಟು ಒಳ್ಳೆಯ ಸ್ನೇಹಿತೆಯರಾಗಿ ಉಳಿದರು ಅನ್ನುವುದನ್ನೂ ಕೂಡ ನನ್ನ ಮನಸ್ಸು ಮರೆತಿಲ್ಲ.

9ನೇ ಪುಟಕ್ಕೆ...

ನಶಾ ಏರಿದ್ರ ಮಾತ್ರ ಕವಿತಾ ಹುಟ್ಟೋದೇನ್ರಿ?!

ಜಗತ್ತಿನಾದ್ಯಂತ ಎಲ್ಲ ಸಂಸ್ಕೃತಿಗಳಲ್ಲಿ ಸುರೆ–ಗಾಂಜಾ ಮೊದಲಾದ ನಶಾ ದ್ರವ್ಯಗಳನ್ನು ಸೃಜನಶೀಲತೆಯ ಜೊತೆ ಜೊತೆಗೇ ಗುರ್ತಿಸಲಾಗಿದೆ. ನಶೆ ಏರುವುದೆಂದರೆ ಕವಿತೆ ಹೊರಡುವ ಸಮಯ ಬಂದಿತು ಎಂದೂ ನಂಬಲಾಗಿದೆ. ಹಾಗಾದರೆ ಇದೆಲ್ಲ ನಿಜವೇನು? ಹೀಗೊಂದು ನಿಶಾ ಮೀಮಾಂಸೆ...

ಡಾ. ಕೆ.ಎಸ್. ಪವಿತ್ರ

ಕಾರ್ಯಾಗಾರವೊಂದರಲ್ಲಿ, ಬಿ.ಎ. ಓದುತ್ತಿದ್ದ ಹುಡುಗನೊಬ್ಬ ಕೇಳಿದ ಪ್ರಶ್ನೆಯು ಮನಸ್ಸನ್ನು ಮತ್ತೆ ಮತ್ತೆ ಕಾಡುತ್ತಿತ್ತು. ಸೃಜನಶೀಲತೆಯ ಅಭಿವ್ಯಕ್ತಿಗಳಾದ ಕವಿತೆ-ಕಥೆ-ಸಾಹಿತ್ಯ, ನೃತ್ಯ-ಸಂಗೀತ-ಚಿತ್ರಕಲೆ-ನಾಟಕಗಳೆಲ್ಲವನ್ನೂ ಒಟ್ಟುಗೂಡಿಸಿ, ನನ್ನೊಳಗಿನ ಮನೋವೈದ್ಯೆ-ಕಲಾವಿದೆ ಇಬ್ಬರಿಗೂ ಆ ಮುಗ್ಧ ಹುಡುಗನ ಪ್ರಶ್ನೆ ಹಲವು ಚಿಂತನೆಗಳನ್ನು ಮೂಡಿಸಿತ್ತು.

ಕಲಾವಿದರಲ್ಲಿ, ಸಾಹಿತಿಗಳಲ್ಲಿ 'ನಶೆ'ಯ ಬಗೆಗಿನ ಈ ಗ್ರಹಿಕೆ ಹೊಸತೇನಲ್ಲ. ಬಹು ಪುರಾತನವಾದದ್ದು. ಜಗತ್ತಿನಾದ್ಯಂತ ಎಲ್ಲ ಸಂಸ್ಕೃತಿಗಳಲ್ಲಿ ಸುರೆ-ಗಾಂಜಾ ಮೊದಲಾದ ಮಾದಕ ದ್ರವ್ಯಗಳನ್ನು 'ಸೃಜನಶೀಲತೆ'ಯ ಜೊತೆಜೊತೆಗೇ ಗುರುತಿಸಲಾಗಿದೆ.

ಡಾನ್ ಪ್ಯಾನ್ ಎಂಬ ಸಮಾಜಶಾಸ್ತ್ರಜ್ಞ-ಲೇಖಕ ಹೇಳಿರುವಂತೆ ಸಾಂಪ್ರದಾಯಿಕ ಚೀನೀ ಸಂಸ್ಕೃತಿಯಲ್ಲಿ ವೈನ್‌ನ ನಶೆ ಏರುತ್ತಲೇ ಸೃಜನಶೀಲ ಕಲ್ಪನೆಯನ್ನು ಅರಳಿಸುತ್ತದೆ ಎಂದು ಬಲವಾಗಿ ನಂಬಲಾಗುತ್ತದೆ. ಅಂದರೆ ನಶೆ ಏರುವುದೆಂದರೆ, ಕವಿತೆ ಹೊರಡುವ ಸಮಯ ಬಂದಿತು ಎಂದೇ! ಪುರಾತನ ಚೀನೀ ಕವಿಗಳಲ್ಲಿ ಕಾವ್ಯಮಾಲೆಯನ್ನೇ 'ಮತ್ತೇರಿದಾಗ ಬರೆದದ್ದು' ಎಂದು ಉಲ್ಲೇಖಿಸಿದವರಿದ್ದಾರೆ! ಕ್ರಿ.ಪೂ. 667ರಿಂದ 730ರವರೆಗೆ ಕಾವ್ಯರಚನೆ ಮಾಡಿದ್ದ ಚ್ಯಾಂಗ್ ಯೂ ಹೀಗೆ ಬರೆಯುತ್ತಾನೆ:

'ಒಮ್ಮೆ ಪಾನಮತ್ತನಾದರೆ ನನ್ನ ಆನಂದಕ್ಕೆ ಪಾರವೇ ಇಲ್ಲ
ನಾನು ಕುಡಿಯುವ ಮುನ್ನ ಇದ್ದದ್ದಕ್ಕಿಂತ ಹೆಚ್ಚು ಹುರುಪು
ನನ್ನ ಚಲನೆ-ಭಾವನೆ ಎಲ್ಲದರಲ್ಲೂ ಕುಣಿತದ ಒನಪು
ನನ್ನ ಬಾಯಿಂದ ಹೊರಡುವ ಪ್ರತಿ ಪದವೂ ಒಂದು ಕವಿತೆ!'

ಇದನ್ನು ಓದಿದವರಿಗೆ ಗ್ರೀಕ್ ಪುರಾತನ ಹೇಳಿಕೆ ನೆನಪಾಗದೆ ಇರದು. 'ನೀವು ನಿಮ್ಮ ಗಾಜು ಲೋಟಗಳನ್ನು ನೀರಿನಿಂದ ತುಂಬಿದರೆ, ನೀವು ಚಂದದ ಏನನ್ನಾದರೂ ಬರೆದೀರೆಂಬ ನಿರೀಕ್ಷೆ ಸುಳ್ಳೇ! ಅದೇ ನೀರಿನ ಬದಲು ಮದ್ಯವನ್ನು ತುಂಬಿದರೆ, ಅದು ಪರ್ನಾಸಸ್‌ಗೆ ಹೋಗಲು ಕುದುರೆ ಏರಿ ಕುಳಿತಂತೆ, ಅದು ಕವಿಯನ್ನು ಆಗಸಕ್ಕೊಯ್ಯುವ ಅಶ್ವ!' ಎನ್ನುತ್ತದೆ ಈ ಹೇಳಿಕೆ. ಪರ್ನಾಸಸ್ ಎಂದರೆ ಕವಿತಾ ಕೇಂದ್ರ ಅಥವಾ ಸೃಜನಶೀಲತೆಯ ದೇವತೆಯ ಮುಖ್ಯ ಪವಿತ್ರ ಸ್ಥಳ.

'ಕ್ವಾಸಿರ್' ಎಂಬ ಸೃಜನಶೀಲತೆಯ ಆಂಗ್ಲೊ ಸ್ಯಾಕ್ಸನ್ ದೇವತೆಯ ಹೆಸರು ಬಂದಿರುವುದು ಎಲ್ಲಿಂದ? ನಾರ್ಸ್ ಪುರಾಣಗಳ ಪ್ರಕಾರ ಕ್ವಾಸಿರ್‌ನನ್ನು ಕೊಂದು ಆತನ ರಕ್ತವನ್ನು ಮದ್ಯದ ಜೊತೆಗೆ ಮಿಶ್ರಣ ಮಾಡಲಾಯಿತು. ಇದು 'Mead of inspiration' ಸ್ಫೂರ್ತಿಯ ಮದ್ಯ.

10ನೇ ಪುಟಕ್ಕೆ...

ಪ್ರಪಂಚದ ಸುಂದರ ಗ್ರಾಮ...

ಪ್ರಹ್ಲಾದ ಪರ್ವತಿ

ಯುರೋಪ್ ಒಕ್ಕೂಟದ ಚಿಕ್ಕ ರಾಷ್ಟ್ರ ಆಸ್ಟ್ರಿಯಾ. ಈ ದೇಶದ ಒಳನಾಡಿನ ಸೌಂದರ್ಯ ಚಿರಕಾಲ ನೆನಪಿಡುವಂತಹದು. ಕಣ್ಮನ ಸೆಳೆಯುವ ಆಲ್ಪ್ಸ್ ಪರ್ವತಗಳೂ ಈ ದೇಶದಲ್ಲಿ ಇರುವುದರಿಂದ ನಿಸರ್ಗದ ಸಹಜ ಸೊಬಗು ಇಲ್ಲಿ ತುಂಬಿಕೊಂಡಿದೆ. ಈ ಪರ್ವತಸ್ತೋಮದ ಮಂಜಿನ ಹೊದಿಕೆಯ ಇಳಿಜಾರುಗಳಲ್ಲಿ ಮೈಚಾಚಿದ ಹುಲ್ಲುಗಾವಲು, ಅಲ್ಲಿ ಮೇಯುವ ಹಸು, ಕುರಿಗಳು, ನದಿ ಸೇತುವೆಗಳ ದೃಶ್ಯಗಳು ಮನಮೋಹಕ. ನೀಲಿ ಆಕಾಶ, ಅದರಲ್ಲಿ ತೇಲುವ ಬಿಳಿಯ ಮೋಡಗಳು, ಬಾನೆತ್ತರಕ್ಕೆ ಬೆಳೆದು ನಿಂತ ಹಸಿರ ಮಜ್ಜನದ ಗಿಡ ಮರಗಳು. ಸುತ್ತಲೂ ಕಲ್ಲಿನ ಗೋಡೆಯಂತೆ ನಿಂತ ಪರ್ವತ ಶ್ರೇಣಿಯ ಮಧ್ಯದಲ್ಲಿ ಸಂಚರಿಸುವದೇ ಒಂದು ರೋಮಾಂಚನಕಾರಿ ಅನುಭವ.

ಈ ದೇಶದ ಹೃದಯ ಭಾಗದಲ್ಲಿ ಪವಡಿಸಿರುವ 'ಹಾಲ್‌ಸ್ಟಾಟ್' ಎಂಬ ಪುಟ್ಟ ಊರನ್ನು ನೋಡಬೇಕೆಂಬ ನನ್ನ ತವಕ ಈ ಸಲದ ಯುರೋಪ್ ಪ್ರವಾಸದಲ್ಲಿ ತಣಿಯಿತು. ಈ ಕೌತುಕಕ್ಕೆ ಬಲವಾದ ಕಾರಣವಿತ್ತು. ಪ್ರಕೃತಿ ಸೌಂದರ್ಯದ ಮಧ್ಯೆ ಕಂಗೊಳಿಸುವ ಈ ಚಿಕ್ಕ ಊರು ಜಗತ್ತಿನ ಅತ್ಯಂತ ಸುಂದರ ಹಳ್ಳಿಗಳಲ್ಲೊಂದಾಗಿರುವುದು. ಹಾಲ್‌ಸ್ಟಾಟ್ ಎಂಬ ಸರೋವರದ ಅಂಚಿನಲ್ಲಿರುವ ಅದೇ ಹೆಸರಿನ ಈ ಗ್ರಾಮ ಸಾಲ್ಜ್ ಕಮ್ಮರಗುಟ್ ಪರ್ವತ ಪ್ರದೇಶದಲ್ಲಿ ನೆಲೆಗೊಂಡಿದೆ. ಅನಾದಿ ಕಾಲದ ಜನವಸತಿಯ ಇತಿಹಾಸ ಈ ಗ್ರಾಮದ ಸ್ವಚ್ಛ ಶುಭ್ರ ಸರೋವರದಲ್ಲಿಯೇ ನಿಂತಂತೆ ಭಾಸವಾಗುತ್ತದೆ.

ಈ ಪುಟ್ಟ ಊರನ್ನು ಅಲ್ಲಿರುವ ನುಣುಪು ಕಲ್ಲು ಹಾಸಿನ ಬೀದಿಯಲ್ಲಿ ಕಾಲ್ನಡಿಗೆಯಿಂದಲೇ ಸುತ್ತಾಡಬೇಕು. ಬೆಟ್ಟಕ್ಕೆ ಬೆನ್ನು ತಾಗಿಸಿ ಉದ್ದಕ್ಕೂ ಒತ್ತೊತ್ತಾಗಿ ನಿಂತ ಬಣ್ಣ ಬಣ್ಣದ ಚಿತ್ತಾರದ ಮರದ ಹಳೆಯ ಮಹಡಿ ಮನೆಗಳು. ಕಲಾತ್ಮಕ ಕಿಟಕಿ, ಬಾಗಿಲುಗಳ ಮುಂದೆ ಆರೋಗ್ಯ ಮತ್ತು ಸ್ನೇಹದ ಸಂದೇಶ ಸಾರುವ ಇಳಿಬಿಟ್ಟ ಜಿರೇನಿಯಂ ಹೂಗಳು. ಜೊತೆಗೆ ಹಸಿರಿನಿಂದ ಹೊಳೆಯುವ ಎಲೆಗಳ ಬಳ್ಳಿಗಳು ಬೀರುವ ಸೊಬಗು ಚಲನಚಿತ್ರದ ಸೆಟ್ ಹಾಕಿದಂತೆ ತೋರುತ್ತವೆ.

ಕಿರಿದಾದ ಬಳಸು ದಾರಿಯಲ್ಲಿ ಸ್ವಲ್ಪ ದೂರ ಕ್ರಮಿಸುತ್ತಿರುವಂತೆಯೇ ಕ್ಲಾಸಿಕ್ ಮನೆ, ಕಟ್ಟಡಗಳಿರುವ ಮಾರ್ಕ್ಸ್ ಪ್ಲಾಜಾ ಎಂಬ ಕೇಂದ್ರ ಸ್ಥಳದಲ್ಲಿರುತ್ತೇವೆ. ಸಭೆ, ಸಮಾರಂಭ ಹಾಗೂ ಸಂಗೀತ ಕಛೇರಿಗಳು ಜರುಗುವುದು ಇಲ್ಲಿಯೇ. ಈ ಚೌಕದ ಮಧ್ಯದಲ್ಲೊಂದು ಕಾರಂಜಿ, ಹತ್ತಿರದಲ್ಲಿ ಸರೋವರದಂಚಿನಲ್ಲಿ ಎತ್ತರ ಗೋಪುರದ ಸುಂದರ ಇವಾಂಜೆಲಿಕಲ್ ಚರ್ಚ್ ಇದೆ. ಸರೋವರದಂಚಿಗೆ ಸಾಗುವ ವಿಹಾರ ಪಥದ ಮಾರ್ಗ ಸಹ ಇಲ್ಲಿಂದ ತೆರೆದುಕೊಳ್ಳುತ್ತದೆ. ಈ ಗಮ್ಯ ಸ್ಥಳದಲ್ಲಿ ಕರಕುಶಲ ಸಾಮಗ್ರಿ, ಸ್ಮರಣಿಕೆ, ಆಹಾರ ಮಳಿಗೆಗಳು, ಕೆಫೆ, ರೆಸ್ಟೋರೆಂಟ್ ಪ್ರವಾಸಿಗರಿಗೆ ಮುದ ನೀಡುತ್ತವೆ.

ಪ್ರವಾಸ

ಅಲಂಕಾರಿಕ ತಲೆಬುರುಡೆ

ಸ್ವಲ್ಪ ದೂರದ ಪರ್ವತದ ಬದಿಯಲ್ಲಿರುವ 16ನೇ ಶತಮಾನದ ಫಾರ್ಕಿರ್ಚ್ ಮಾರಿಯಾ ಕ್ಯಾಥೊಲಿಕ್ ಚರ್ಚ್ ಬಳಿ ಇರುವ 'ಚಾರ್ನಲ್ ಹೌಸ್' ಬಾಲ್ಕನಿಯ ಭೇಟಿಯು ವಿಲಕ್ಷಣ ತಲೆಬುರಡೆಗಳ ಸಂಗ್ರಹಾಲಯದಿಂದ ಆಸಕ್ತಿದಾಯಕವಾಗಿದೆ. ಇಲ್ಲಿಯ ಸ್ಮಶಾನದಲ್ಲಿ ಮೃತದೇಹಗಳನ್ನು ಹೂಳಲು ಸ್ಥಳಾವಕಾಶದ ಕೊರತೆಯಿಂದಾಗಿ, ಹೂತ ದೇಹಗಳನ್ನು ಹತ್ತು -ಹದಿನೈದು ವರ್ಷಗಳ ಬಳಿಕ ಹೊರತೆಗೆದು, ಸಂಸ್ಕರಿಸಿ, ಬುರುಡೆಗಳ ಮೇಲೆ ವ್ಯಕ್ತಿಯ ಹೆಸರು, ಹುಟ್ಟು-ಸಾವಿನ ದಿನಾಂಕ ನಮೂದಿಸಿ ನೆಲಮಾಳಿಗೆಯಲ್ಲಿ ಸಂಗ್ರಹಿಸಿಡುವ ವ್ಯವಸ್ಥೆ ಜಾರಿಗೆ ಬಂದಿತಂತೆ. ತಲೆ ಬುರಡೆಗಳ ಬಳಿ ಹೂ ಇಡಲು ಜಾಗ ಇರದ ಕಾರಣ, ಅವುಗಳ ಮೇಲೆಯೇ ಕಲಾತ್ಮಕವಾಗಿ ಹೂಗಳನ್ನು ಬಿಡಿಸಿದ್ದನ್ನು ಕಾಣಬಹುದು. ಸಾವಿರಾರು ತಲೆಬುರಡೆಗಳ ಈ ಸಂಗ್ರಹಾಲಯದಲ್ಲಿ 1995ರಲ್ಲಿ ಕೊನೆಯ ನಿವಾಸಿಯ ಬುರುಡೆ ಸೇರಿಸಲಾಗಿದ್ದು ಅದನ್ನು ಚಿನ್ನದ ಹಲ್ಲಿನಿಂದ ಗುರುತಿಸಲಾಗಿದೆ.

ಆಲ್ಪ್ಸ್‌ನ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯ ಸವಿಯಲು ಹಾಲ್‌ಸ್ಟಾಟ್ ಸರೋವರದ ದೋಣಿ ವಿಹಾರ, ಗೊಂಡೊಲಾ ಸವಾರಿ, ನಿಸ್ಸಂದೇಹವಾಗಿ ಆಹ್ಲಾದಕರ ಅನುಭವ ನೀಡುತ್ತದೆ. ಚಿಕ್ಕ ಹಳ್ಳಿಯ ಚೊಕ್ಕ ಸರೋವರವಿದು. ನಿಸರ್ಗದ ಸಹಜ ಚೆಲುವಿನ ಆರಾಧಕರಿಗೆ ಇದೊಂದು ಸ್ವರ್ಗವೇ ಸರಿ. ಇಲ್ಲಿ ಮೋಟಾರ್ ಬೋಟುಗಳಿಗೆ ಪ್ರವೇಶ ನಿಷಿದ್ಧ. ಪೆಡಲ್ ಹಾಗೂ ಎಲೆಕ್ಟ್ರಿಕ್ ದೋಣಿಯಲ್ಲಿಯೇ ಪಯಣಿಸಬೇಕು. ಪರ್ವತದ ಪ್ರಶಾಂತ ಪರಿಸರದಲ್ಲಿ ಸರೋವರದ ಅದ್ಭುತ ದೃಶ್ಯಾವಳಿಯನ್ನು ನಾವು ಕಣ್ತುಂಬಿಕೊಂಡೆವು. ಸ್ಫಟಿಕದಂತೆ ಶುಭ್ರವಾಗಿರುವ ನೀಲಿ ನೀರಿನ ಮೇಲೆ ತೂಗಾಡುತ್ತ ನಡೆಸಿದ ವಿಹಾರದಲ್ಲಿ ಕಂಡ ರಮಣೀಯ ದೃಶ್ಯಗಳು ನಮ್ಮನ್ನು ಬೆರಗುಗೊಳಿಸಿದವು. ಶ್ವೇತ ಹಂಸಗಳು ಸರೋವರದ ಅಂಚಿನಲ್ಲಿ ಸಂಚರಿಸಿ ಅದರ ಅಂದ ಹೆಚ್ಚಿಸಿದವು.

ಆಕಾಶದ ನಡಿಗೆ

ಈ ಅಂದದ ಊರಿನ ಮತ್ತೊಂದು ಸುಂದರ ಸ್ಥಳ ಸ್ಕೈವಾಕ್. ಹೆಸರೇ ಸೂಚಿಸುವಂತೆ ಇದು ಆಕಾಶದ ನಡಿಗೆ. ಕಡಿದಾದ ಬೆಟ್ಟದ ನೆತ್ತಿಗೆ ಒಂದು ಸಾವಿರಕ್ಕೂ ಅಡಿ ಮಿಕ್ಕಿದ ಎತ್ತರದವರೆಗೆ ಫ್ಯೂನಿಕ್ಯುಲರ್ (ತಂತಿ ಆಧಾರದಿಂದ ಎಳೆಯುವ ಕ್ಯಾಬಿನ್) ಮೂಲಕ ಸಾಗಬೇಕು. ಇಲ್ಲಿಂದ ಇಡೀ ಊರು ಹಾಗೂ ಶೃಂಗಗಳ ಮಧ್ಯದ ಸರೋವರದ ಸಂಪೂರ್ಣ ವಿಹಂಗಮ ನೋಟವನ್ನು ವೀಕ್ಷಿಸಬಹುದು. ಇಲ್ಲಿಯ ಅನನ್ಯ ಸೊಬಗು ಮನಸ್ಸನ್ನು ಸೂರೆಗೊಳ್ಳುತ್ತದೆ. ಇಲ್ಲಿಂದ ಕ್ಯಾಮೆರಾ ಎತ್ತ ತಿರುಗಿಸಿದರೂ ಪೈಪೋಟಿಗಿಳಿದಂತಿರುವ ರಮ್ಯ ನಿಸರ್ಗ ಸಿರಿಯ ದೃಶ್ಯ ಸೆರೆಯಾಗುತ್ತದೆ.

ಹಾಲ್‌ಸ್ಟಾಟ್ 1997ರಲ್ಲಿಯೇ ಯುನೆಸ್ಕೊ ಸಾಂಸ್ಕೃತಿಕ ತಾಣಗಳ ಪಟ್ಟಿಯಲ್ಲಿ ಸೇರಿದೆ. ಎಂಟನೂರು ಜನಸಂಖ್ಯೆಯ ಈ ಊರು ಕೇವಲ ಸುಂದರ ಗ್ರಾಮವಲ್ಲ, ಪ್ರಪಂಚದ ಅತ್ಯಂತ ಹಳೆಯ ಉಪ್ಪಿನ ಗಣಿ ಇಲ್ಲಿರುವುದು ಇದರ ವಿಶೇಷ. ನಾಗರಿಕತೆಯ ಪ್ರವರ್ಧಮಾನದಿಂದ ಉಪ್ಪು ಈ ಊರಿನ ಆರ್ಥಿಕ ಚಟುವಟಿಕೆಯಲ್ಲಿ ಬಹು ಮಹತ್ವದ ಪಾತ್ರ ವಹಿಸಿದೆ. ಸ್ಕೈವಾಕ್ ಸ್ಥಳದಿಂದ ಸ್ವಲ್ಪ ದೂರದ ಪರ್ವತದ ಗರ್ಭದಲ್ಲಿರುವ ಪುರಾತನ ಸಾಲ್ಜವೆಲ್ಟೆನ್ ಉಪ್ಪಿನ ಗಣಿಯನ್ನು ಸಂದರ್ಶಿಸಬಹುದು. ಎರಡು ಕಿ.ಮೀ. ಸುರಂಗ ಮಾರ್ಗದಲ್ಲಿ ಸಂಚರಿಸಿ ಸಾಂಪ್ರದಾಯಿಕ ಉಪ್ಪು ಉತ್ಪಾದನೆ ಹಾಗೂ ಸಂಸ್ಕರಣೆಯ ವಿಧಾನಗಳನ್ನು ನೋಡಬಹುದು. ಇಲ್ಲಿರುವ ಮ್ಯೂಸಿಯಂನಲ್ಲಿ ಉಪ್ಪಿನ ಕ್ಯೂಬ್ ಖರೀದಿಸಬಹುದು.

ಈ ಊರು ತಲುಪಲು ಸಾಕಷ್ಟು ಸಾರಿಗೆ ಸೌಲಭ್ಯಗಳಿವೆ. ಬೆಂಗಳೂರು, ದೆಹಲಿಯಿಂದ ಆಸ್ಟ್ರಿಯಾ ದೇಶದ ರಾಜಧಾನಿ ವಿಯನ್ನಾಗೆ ವಿಮಾನ ಸೌಲಭ್ಯವಿದೆ. ಅಲ್ಲಿಂದ ಬಸ್ಸು ಅಥವಾ ಕಾರಿನ ಮೂಲಕ ಮೂರು ಗಂಟೆಗಳ 288 ಕಿ.ಮೀ. ಪ್ರವಾಸದಲ್ಲಿ ಈ ಊರು ತಲುಪಬಹುದು. ಆಸ್ಟ್ರಿಯಾದ ಮತ್ತೊಂದು ಪ್ರೇಕ್ಷಣೀಯ ಸ್ಥಳ ಸಾಲ್ಜ್‌ಬರ್ಗ್ ಅತೀ ಸನಿಹದ ವಿಮಾನ ನಿಲ್ದಾಣವಾಗಿದ್ದು ಅಲ್ಲಿಂದ ರಸ್ತೆ ಮೂಲಕ ಒಂದು ಗಂಟೆಯ ಪ್ರಯಾಣವಿದೆ. ಜೂನ್‌ದಿಂದ ಅಗಸ್ಟ್‌ವರೆಗೆ ಸರಾಸರಿ ತಾಪಮಾನವಿದ್ದು, ದೀರ್ಘ ಹಗಲು ಮತ್ತು ಬೆಚ್ಚಗಿನ ವಾತಾವರಣ ಪ್ರವಾಸಕ್ಕೆ ಸೂಕ್ತ. ಪ್ರವಾಸಿಗರ ವಾಸ್ತವ್ಯಕ್ಕೆ ಹೋಟೆಲ್‌ಗಳಿವೆ.

ಆಸ್ಟ್ರಿಯಾ ಸರ್ಕಾರದ ನಿಸರ್ಗ ಪ್ರೀತಿಯಿಂದಾಗಿ ಇಲ್ಲಿ ಪ್ರವಾಸಿಗರ ಹುಚ್ಚಾಟಕ್ಕೆ ಅವಕಾಶವಿಲ್ಲ. ಇಲ್ಲಿನ ನಿಯಮಗಳು ಸಹ ಕಟ್ಟುನಿಟ್ಟು. ನಿಸರ್ಗ ಕರೆಗೆ ಸಾರ್ವಜನಿಕ ಶೌಚಗೃಹದ ಕೊರತೆ ಮಾತ್ರ ಎದ್ದು ಕಂಡಿತು. ದಾರಿಯುದ್ದಕ್ಕೂ ಕಣ್ತುಂಬುವ ಹಸಿರು ಹೊದ್ದ ಪರ್ವತ, ಸ್ವಚ್ಛ ನೀರು, ಅಲಂಕೃತ ಮನೆಗಳು, ಗಡಿಬಿಡಿಯಿಲ್ಲದ ಪ್ರಶಾಂತ ವಾತಾವರಣ, ಸ್ನೇಹಶೀಲ ನಗುಮೊಗದ ನಿವಾಸಿಗಳಿಂದಾಗಿ ಇದೊಂದು ಪರಿಪೂರ್ಣ ಪ್ರವಾಸಿ ತಾಣವಾಗಿದೆ. ಕ್ರಿ.ಶ. ಎಂಟನೆಯ ಶತಮಾನದಿಂದ ಶ್ರೀಮಂತ ಸಂಸ್ಕೃತಿ ಹಾಗೂ ಪುರಾತನ ನಾಗರಿಕತೆಯನ್ನು ತನ್ನೊಡಲೊಳು ಅವಿತಿಟ್ಟುಕೊಂಡಿರುವ ಹಾಲ್‌ಸ್ಟಾಟ್ ಪ್ರವಾಸದಿಂದ ಜೀವನಪೂರ್ತಿ ನೆನಪಿನಲ್ಲುಳಿಯುವ ಅನುಭವ ದಕ್ಕುತ್ತದೆ - ಲವ್ ಎಟ್ ಫಸ್ಟ್ ಸೈಟ್ ಎಂಬಂತೆ.



ಸ್ಫಟಿಕದಂತೆ ಶುಭ್ರವಾಗಿರುವ ನೀರಿನ ಮೇಲೆ ವಿಹಾರವೇ ಅದ್ಭುತ...

ಮಕ್ಕಳಿಗೆ ಏನು ಕಲಿಸಬೇಕು?

8ನೇ ಪುಟದಿಂದ...

ವಯಸ್ಸಿನ ಯಾವ ಅಂತರ, ಭೇದವಿಲ್ಲದೆ ಆಗೆಲ್ಲ ಆಡಿಸುತ್ತಿದ್ದ ಸಾಮಾನ್ಯ ಆಟವೊಂದಿತ್ತು. 'ನಿಧಿ ಹುಡುಕಾಟ' ಅಂತ ಅದರ ಹೆಸರು. ಗಂಟೆಗಟ್ಟಲೆ ಹಿಡಿಯುತ್ತಿದ್ದ ಈ ಆಟವು ಪಡೆಯುತ್ತಿದ್ದ ಚಿತ್ರವಿಚಿತ್ರ ತಿರುವುಗಳು; ದೇಹ, ಬುದ್ಧಿ, ಮನಸ್ಸುಗಳನ್ನು ಸಮವಾಗಿ ಬಳಸಿ ಆಡಬೇಕಾಗಿದ್ದ ಗುಂಪು ಆಟವು ಅಭಿಪ್ರಾಯಗಳನ್ನು ಹಂಚಿಕೊಂಡು ಒಟ್ಟಾಗಿ ಶ್ರಮಿಸುವ ಸಾಮುದಾಯಿಕತೆಯನ್ನು ಒತ್ತಾಯಿಸುತ್ತಿತ್ತು. ಯಾವುದೋ ಗೊತ್ತಾದ ಬಿಂದುವಿನಲ್ಲಿ ಇಟ್ಟಿರುತ್ತಿದ್ದ ಒಂದು ಚೀಟಿಯೊಳಗೆ ನಮ್ಮ ಮುಂದಿನ ಹುಡುಕಾಟಕ್ಕೆ ಅಗತ್ಯವಾಗಿದ್ದ ಸೂಚನೆ ಅಥವಾ ಕುರುಹುಗಳಿರುತ್ತಿದ್ದವು. ಅದನ್ನು ಸರಿಯಾಗಿ ಓದಿ, ಬಿಡಿಸಿಕೊಳ್ಳದೆ ಮುಂದಿನ ಗೊತ್ತು ತಿಳಿಯುವ ಪ್ರಮೇಯವೇ ಇರುತ್ತಿರಲಿಲ್ಲ ಅಥವಾ ಅದು ನಮ್ಮನ್ನು ತಪ್ಪು ಜಾಗಕ್ಕೆ ಕರೆದೊಯ್ಯುವ ಸಾಧ್ಯತೆಯಿರುತ್ತಿತ್ತು.

ಇಡೀ ಶಾಲೆಯ ಮೂಲೆಮೂಲೆಗಳನ್ನು ಬಳಸಿಕೊಂಡು, ಎಲ್ಲೆಲ್ಲೋ ಇಟ್ಟಿರುತ್ತಿದ್ದ ಸೂಚನಾ ಚೀಟಿಗಳನ್ನು ಬಳಸಿ, ಅಂತಿಮವಾಗಿ ಹುದುಗಿಸಿ ಇರುತ್ತಿದ್ದ 'ನಿಧಿ'ಯ ಜಾಗವನ್ನು ತಲುಪಬೇಕಿತ್ತು. ಆ 'ಅಂತಿಮ' ತಾಣ ಎನ್ನುವುದು ಆಟ ಮುಗಿಯುತ್ತದೆ ಎನ್ನುವ ಸಣ್ಣ ಬೇಸರವನ್ನು ಉಂಟು ಮಾಡುತ್ತಿದ್ದುದರ ಜೊತೆಗೆ, ಆಟ ಎಂದೂ ಮುಗಿತಾಯ ಕಾಣದೆ ಇರಲಿ ಎನ್ನುವ ಭಾವವನ್ನೂ ಮೂಡಿಸುತ್ತಿತ್ತು. 'ದಾರಿಯೇ ಗುರಿ' ಎಂದು ಗಾಂಧೀಜಿ ಹೇಳಿದ್ದು ಬಹುಶಃ ಇದನ್ನೇ ಏನೋ... ನಮ್ಮ ಮೆದುಳಿನ ಒಂದು ಪುಟ್ಟ ನರತಂತುವು ಹೇಗೆ ಹೆಬ್ಬೆರಳಿನ ಮತ್ತಾವುದೋ ನರದೊಂದಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಂಬಂಧ ಹೊಂದಿದೆಯೋ, ಹಾಗೆಯೇ ಈ ಆಟದಲ್ಲೂ ನಮ್ಮ ಪ್ರತಿಯೊಂದು ಹೆಜ್ಜೆ, ನಿರ್ಧಾರ, ಸುತ್ತ ಮುತ್ತ ಕಾಣುವ ಸಣ್ಣಪುಟ್ಟ ಸಂಗತಿಗಳೂ ದೊಡ್ಡ ರಹಸ್ಯದತ್ತ ಕರೆದೊಯ್ಯಬಲ್ಲವಾಗಿರುತ್ತಿದ್ದವು. ಒಂದನ್ನು ಅನುಸರಿಸಿ ಅಥವಾ ಆಧರಿಸಿಯೇ ಮತ್ತೊಂದಕ್ಕೆ, ಮಗದೊಂದಕ್ಕೆ ಹೋಗಬೇಕೆನ್ನುವ ಹೆಣಿಗೆ ಇದು.

ಎಷ್ಟೋ ವರ್ಷಗಳ ಬಳಿಕ ನಾನು ಈ ಕವಿತೆಯನ್ನು ಬರೆದಾಗ ಇವೆಲ್ಲ ಅನುಭವಗಳೂ ಸುಪ್ತಮನಸ್ಸಿನೊಳಗೆ ಅಡಿಕೊಂಡಿದ್ದವೆನಿಸುತ್ತದೆ:

ಈ ದೇಹ
ದೇವರು ಬರೆದ ಮಹಾಕಾವ್ಯ.
ಕೂಡಿಸಿ ಅಂಗಕ್ಕೆ
ಇನ್ನೊಂದು ಅಂಗ
ಸೇರಿಸುತ್ತ
ನರವನ್ನು ನರವು
ಹರಡಿಕೊಂಡ ಬೇರಂತೆ
ರಕ್ತದ ಟಿಸಿಲು
ಕಣ್ಣು ಕಂಡದ್ದು,
ಮೂಗು, ಚರ್ಮ, ಕಿವಿ, ನಾಲಗೆ
ಅನುಭವಿಸಿದ್ದೆಲ್ಲ ಮನಸ್ಸಾಗಿ
ನಿನ್ನ ಮನಸ್ಸು ಎಲ್ಲಿದೆಯೆಂದು ಹುಡುಕಿದರೆ
ಅಲ್ಲಿ ದೇಹವೇ ಕಂಡು,
ದೇಹವೆಂದು ನೋಡಿದ್ದರಲ್ಲಿ ಅಂತರಾಳ
ಮಿನುಗಿ,
ಈ ದೇಹ
ದೇವರ ಮಹಾಕಾವ್ಯ.

ಪ್ರಸ್ತುತ ಗಳಿಗೆಯಲ್ಲಿ ತೀವ್ರವಾಗಿ, ಪ್ರಾಮಾಣಿಕವಾಗಿ ಬದುಕುವಂತಹ ಬದುಕಿನ ಪಾಠಗಳು ತಮ್ಮೊಟ್ಟಿಗೆ ಅಗತ್ಯವಾಗಿ ಸಾಮುದಾಯಿಕತೆಯನ್ನೂ ಇಟ್ಟುಕೊಂಡಿರುತ್ತವೆ. ಮೊಟ್ಟೆಯ ಮೇಲೆ ಕಾವುಕೂತ ತಾಯಿಕೋಳಿಯ ಪ್ರತೀಕವು ಇದನ್ನು ಸಮರ್ಥವಾಗಿ ವಿವರಿಸಬಲ್ಲದು: ಕಾವಿಗೆ ಕೂತ ಕುಕ್ಕೆಯಲ್ಲಿ ಮೇಲ್ನೋಟಕ್ಕೆ ನಮಗೆ ಕಾಣುವುದು ತಾಯಿಕೋಳಿ ಮಾತ್ರ, ಆದರೆ ಅದರ ಬೆಚ್ಚನೆ ತೆಕ್ಕೆಯೊಳಗೆ ಎಷ್ಟೊಂದು ನಾಳೆಯ, ಕನಸಿನ, ಭರವಸೆಯ ಮೊಟ್ಟೆಗಳಿರುತ್ತವೆ!

ಎಲ್ಲ ಕಾಲದೇಶದ ಎಲ್ಲ ಮಕ್ಕಳಿಗೂ ಅಗತ್ಯವಾಗಿ ಬೇಕಾದ್ದು ಬದುಕಿನ ಈ ಸರಳ ಕಲಿಕೆಗಳೇ ಹೊರತು...

ನೆನಪಿನ ಹೊನಲಿನಲ್ಲಿ ಮಿಂದು...

ಸೂಕ್ಷ್ಮ ಸಂವೇದನೆಯ ಬರಹ

ಅಜ್ಜ-ಅಜ್ಜಿ ಕುರಿತ ಈ ದೀರ್ಘ ಲೇಖನ ಎಂಥ ಶ್ರೀಮಂತವಾದ ಜೀವನ ಚಿತ್ರಣಗಳನ್ನು ತುಂಬಿಕೊಂಡಿದೆ. ದಶಕಗಳ ಕಾಲದಿಂದಲೂ ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಸಾಹಿತ್ಯದ ಸಂಬಂಧಗಳನ್ನು ವಿಸ್ತರಿಸುತ್ತಾ ಬಂದಿರುವ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಸುಧಾ ಮತ್ತು ಮಯೂರ ಪತ್ರಿಕೆಗಳ ಹುಟ್ಟು ಹಾಗೂ ಬೆಳವಣಿಗೆಗಳ ಚಿತ್ರಣ ಎಷ್ಟು ಅಪೂರ್ವವಾಗಿದೆ. ಇದಕ್ಕೆ ಕಾರಣಕರ್ತರಾದ ಕೆ.ಎನ್. ಗುರುಸ್ವಾಮಿಯವರ ಅತ್ಯಂತ ಸಂಯಮದ ಹೋರಾಟದ ಬದುಕನ್ನು ಸೂಕ್ಷ್ಮ ಸಂವೇದನೆಯ ಕೆ.ಎನ್.ಹರಿಕುಮಾರ್ ಅವರು ಮಾರ್ಮಿಕವಾಗಿ ಕಟ್ಟಿಕೊಟ್ಟಿದ್ದಾರೆ.

ದಶಕಗಳಿಂದ ಮೇಲೆ ಪ್ರಸ್ತಾಪಿಸಿದ ಪತ್ರಿಕೆಗಳ ಮೂಲಕ ಅವಿನಾಭಾವ ಸಂಬಂಧ ವನ್ನು ಹೊಂದಿರುವ ಲಕ್ಷಾಂತರ ಓದುಗರು 'ಅಜ್ಜ-ಅಜ್ಜಿ ನೆನಪಿನ ಹೊನಲು' ಓದಿದಾಗ ಎಷ್ಟು ಪುಳಕಿತರಾಗಬಹುದು. ಅತ್ಯಂತ ತಾದಾತ್ಮ್ಯದಿಂದ ಬರೆದಿರುವ ಹರಿಕುಮಾರ್ ಅವರಿಗೆ ಮತ್ತು ಅದನ್ನು ಪ್ರಕಟಿಸಿದ ಪುರವಣಿಗೆ ಧನ್ಯವಾದಗಳು. ಚಾರಿತ್ರಿಕವಾಗಿ ಉಳಿಯಬಹುದಾದ ಲೇಖನ ಇದಾಗಿದೆ.

ಶೂದ್ರ ಶ್ರೀನಿವಾಸ್, ಬೆಂಗಳೂರು

ಬೇಕಿತ್ತು ಈ ನೆನಪಿನ ಬುತ್ತಿ

'ಭಾನುವಾರ ಪುರವಣಿ'ಯಲ್ಲಿ ಮೂಡಿನಿಂತ 'ಅಜ್ಜ-ಅಜ್ಜಿ ನೆನಪಿನ ಹೊನಲು' ತುಂಬಾ ನವಿರಾದ ಬರಹ. 75 ವರುಷಗಳ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್‌ನ ಜೀವನದ ಈ ನೆನಪಿನ ಬುತ್ತಿ ನಮ್ಮ ತಲೆಮಾರಿನವರಿಗೂ ಹೊಸತಲೆಮಾರಿನ ತರುಣರಿಗೂ ಬೇಕಿತ್ತು. ಇಲ್ಲಿ ಮಾಲೀಕರೇ ಶ್ರಮಿಕರಾಗಿ ದುಡಿದು ನಿಂತ ಯಶೋಗಾಥೆಯನ್ನು, ಹಲವು ಆತ್ಮಕಥಾನಕಗಳ ನೆನಪ ಹೊತ್ತಿಗೆಯನ್ನು ಸಹೃದಯದವರೆದುರು ಮುಕ್ತವಾಗಿ ಬಿಡಿಸಿಟ್ಟಿದ್ದಾರೆ ಅಜ್ಜ-ಅಜ್ಜಿಯ ಪ್ರೀತಿಯ ಮೊಮ್ಮಗ ಕೆ.ಎನ್.ಹರಿಕುಮಾರ್. ಈ ಬರಹವನ್ನು ಓದುವಾಗ ಸ್ವಾತಂತ್ರ್ಯ ಭಾರತದೊಡಲಿನಿಂದ ಬೆಳಕಿನ ಕಿರಣವೊಂದು ವಿವೇಕದ ಅಕ್ಷರ ಮೂಡಿಸಿ ನಿಂತಂತಾಯಿತು.

ತುಂಬಾ ಸಂಕೀರ್ಣ ಕಾಲಘಟ್ಟದ ನಡುವೆಯೂ ಇಡೀ ಪತ್ರಿಕಾ ಮಾಧ್ಯಮದ ವಿವೇಕವನ್ನು ಇಂದಿಗೂ ಕಾಪಾಡಿಕೊಂಡು, ಕಾಪಿಟ್ಟುಕೊಂಡು ಬಂದಿರುವ ಇಲ್ಲಿನ ಎಲ್ಲ ತಲೆಮಾರುಗಳ ಮಿತ್ರರಿಗೂ ನನ್ನ ಹಾರ್ದಿಕ ಶುಭಾಶಯಗಳು ಮತ್ತು ಹೃದಯಪೂರ್ವಕ ಅಭಿನಂದನೆಗಳು.

ನಿಂಗಪ್ಪ ಮುದೇನೂರು, ಧಾರವಾಡ

ಉದ್ಯಮಿಗಳಿಗೆ ಮಾರ್ಗದರ್ಶಿ

ಕೆ.ಎನ್.ಗುರುಸ್ವಾಮಿ ಮತ್ತು ಅವರ ಧರ್ಮಪತ್ನಿ ಕದಿರಮ್ಮ ಅವರ ಧೀಮಂತ ವ್ಯಕ್ತಿತ್ವ, ಛಲ ಮತ್ತು ಕಾಯಕನಿಷ್ಠೆ ಕುರಿತಂತೆ ಮೊಮ್ಮಗ ಕೆ.ಎನ್.ಹರಿಕುಮಾರ್ ತುಂಬಾ ಆಪ್ತವಾಗಿ ಬರೆದಿದ್ದಾರೆ. ಅಜ್ಜನ ಬಹುಮುಖ ಪ್ರತಿಭೆ, ವಿವಿಧ ರಂಗಗಳಲ್ಲಿ ಅದ್ವಿತೀಯ ಸಾಧನೆ ಮತ್ತು ಸಮಾಜಮುಖಿ ಕೆಲಸಕಾರ್ಯಗಳ ಬಗ್ಗೆ ಲೇಖಕರು ಎಳೆಎಳೆಯಾಗಿ ವಿವರಿಸಿದ್ದಾರೆ. ಗುರುಸ್ವಾಮಿ ಅವರಿಗಿದ್ದ ಹತ್ತು-ಹಲವು ಅಭಿರುಚಿಗಳು ಹಾಗೂ ಜೀವನೋತ್ಸಾಹವನ್ನು ಪರಿಚಯಿಸುವುದರಲ್ಲಿ ಲೇಖನ ಯಶಸ್ವಿಯಾಗಿದೆ. ಗುರುಸ್ವಾಮಿ ಅವರ ವ್ಯಕ್ತಿಚಿತ್ರ ಈ ಹೊತ್ತಿನ ಯುವ ಉದ್ಯಮಿಗಳಿಗೆ ಸೂಕ್ತ ಮಾರ್ಗದರ್ಶಿಯಾಗಿದೆ.

ಬಿ.ಎನ್.ಜ್ವಾಲನಪ್ಪ, ಮೈಸೂರು

ಮನಸ್ಸು ಮೂಕವಾಯ್ತು

'ಅಜ್ಜ-ಅಜ್ಜಿ ನೆನಪಿನ ಹೊನಲು' ಲೇಖನ ಓದಿ ತುಂಬ ಸಂತೋಷವಾಯ್ತು. ನಮ್ಮ ಪ್ರೀತಿಯ ಪ್ರಜಾವಾಣಿ ಪತ್ರಿಕೆಯ ಹುಟ್ಟಿನ ಹಿಂದೆ ಎಷ್ಟೆಲ್ಲ ಕಷ್ಟಗಳು, ಎಡರು ತೊಡರುಗಳೂ ಇದ್ದವಲ್ಲ ಅಂತ ಮನಸ್ಸು ಮೂಕವಾಯ್ತು. ನಮ್ಮ ಹಿರಿಯರನ್ನು ನೆನೆಯುವುದು ಮತ್ತು ನಮ್ಮ ಶ್ರದ್ಧೆಗಳನ್ನು ಅವರಿಗೆ ಅರ್ಪಿಸುವುದು ಬರೀ ಒಂದು ಶುಷ್ಕ ಸಂಪ್ರದಾಯವಲ್ಲ. ಅದೊಂದು ನಮ್ಮ ಬದ್ಧತೆಯ ಸಂಸ್ಕೃತಿಯೂ ಹೌದು. ನಮ್ಮ ಪ್ರಜಾವಾಣಿ ತನ್ನ ಎಪ್ಪತ್ತೈದನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಇನ್ನೂ ವಿಶಾಲವಾಗಿ ಬೆಳೆಯಲೆಂದು ಹಾರೈಸುವೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ನಮ್ಮ ಪತ್ರಿಕೆ ಎಂಬ ಹೆಮ್ಮೆ

ಪತ್ರಿಕೆಯ 75 ವರ್ಷಗಳ ಮೆಲುಕು ತುಂಬಾ ಚೆನ್ನಾಗಿದೆ. ನಾನು ಸರಿಸುಮಾರು 55 ವರ್ಷಗಳಿಂದಲೂ ಪತ್ರಿಕೆ ಓದುತ್ತಿದ್ದೇನೆ. ಯಾವುದೇ ಅಸಹ್ಯ, ಸುಳ್ಳು ಮಾಹಿತಿ ಇಲ್ಲದ ಪತ್ರಿಕೆ ಎಂದು ಹೆಮ್ಮೆಯಿಂದ ಹೇಳುತ್ತೇನೆ. ನಾನು ಪ್ರಥಮವಾಗಿ ಪತ್ರಿಕೆ ಕೊಂಡಾಗ ಆಗ ಎಂಟು ಪೈಸೆ ಇರಬಹುದು. ಇದರ ಅವಳಿಗಳಾದ ಸುಧಾ ಮತ್ತು ಮಯೂರ ಇಂದಿಗೂ ಓದಲು ಇಷ್ಟ. ಜನರ ಅಚ್ಚುಮೆಚ್ಚಿನ ಪತ್ರಿಕಾ ಸಮೂಹಕ್ಕೆ ಅಭಿನಂದನೆಗಳು.

ಪಿ. ಎನ್. ಮುದ್ದುರಾಮ ಗುಪ್ತ

ಮುನ್ನೋಟ 26-06-2022 ರಿಂದ 02-07-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಸಂಕಲ್ಪಿತ ಕೆಲಸಗಳಲ್ಲಿ ನಿಮ್ಮ ಹಠಮಾರಿ ಧೋರಣೆಯಿಂದ ಕೆಲಸಗಳು ನಿಲ್ಲುತ್ತವೆ. ಅತಿಯಾದ ಅಹಂಕಾರದ ಮಾತುಗಳು ನಿಮ್ಮನ್ನು ಜನರಿಂದ ದೂರ ಮಾಡಬಹುದು. ಹಣದ ಹರಿವು ಸಾಮಾನ್ಯ ಗತಿಯಲ್ಲಿ ಇರುತ್ತದೆ. ಆದರೆ ಅದರಷ್ಟೇ ಖರ್ಚು ಇರುತ್ತದೆ. ಮನೆ ಪಾಠವನ್ನು ಮಾಡುವವರಿಗೆ ಆದಾಯ ಹೆಚ್ಚಬಹುದು. ಅಪರಿಚಿತ ವ್ಯಕ್ತಿಗಳಿಂದ ಮೋಸ ಹೋಗುವ ಸಾಧ್ಯತೆ ಹೆಚ್ಚಾಗಿದೆ, ಎಚ್ಚರವಹಿಸಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಒಂದು ರೀತಿ ಆನಂದದಾಯಕ ವಾರವಾಗಿರುತ್ತದೆ. ವೃತ್ತಿಯಲ್ಲಿದ್ದ ಗೊಂದಲ ಗೋಜಲುಗಳು ನಿವಾರಣೆಯಾಗುತ್ತವೆ. ಕೃಷಿಕರಿಗೆ ನಿರೀಕ್ಷಿಸಿದಷ್ಟು ಆದಾಯ ಬರಲಿದೆ. ಇದ್ದ ಬೆಳೆಗೆ ಹೆಚ್ಚು ಆದಾಯ ಬರುತ್ತದೆ. ಹಣದ ಒಳಹರಿವು ತೃಪ್ತಿ ತರುವಷ್ಟು ಇರುತ್ತದೆ. ಸರ್ಕಾರದಿಂದ ಬರಬೇಕಾದ ಎಲ್ಲ ರೀತಿಯ ಧನಸಹಾಯಗಳು ಬರುತ್ತವೆ. ನಿಮ್ಮ ಸ್ಥಿರಾಸ್ತಿಯ ವ್ಯವಹಾರಗಳಲ್ಲಿ ಹೊಸ ಚೇತರಿಕೆಯನ್ನು ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಅತಿಯಾದ ಆತ್ಮಗೌರವ ನಿಮ್ಮನ್ನು ಮುಜುಗರಕ್ಕೆ ಈಡುಮಾಡಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ವಿದೇಶಿ ವ್ಯವಹಾರಗಳನ್ನು ಮಾಡುವವರ ಆದಾಯ ನಿರೀಕ್ಷೆಗಿಂತ ಹೆಚ್ಚಾಗುತ್ತದೆ. ಉದ್ದಿಮೆದಾರರಿಗೆ ಜಾಣ್ಮೆಯಿಂದ ಕಾರ್ಮಿಕರ ಮನಸ್ಸನ್ನು ಗೆದ್ದು ಉತ್ಪಾದನೆ ಹೆಚ್ಚಿಸಿಕೊಳ್ಳುವ ಕಲೆ ಸಿದ್ಧಿಸುತ್ತದೆ. ಸಂಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡಲು ಉತ್ಸಾಹ ತೋರುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಸರ್ಕಾರಿ ಕೆಲಸಗಳಲ್ಲಿ ಹೆಚ್ಚು ಆದಾಯವನ್ನು ನಿರೀಕ್ಷೆ ಮಾಡಬಹುದು. ಹಿರಿಯ ಅಧಿಕಾರಿಗಳಿಂದ ಕೆಲಸದ ಒತ್ತಡ ಹೆಚ್ಚಾಗುವ ಸಾಧ್ಯತೆ ಇದೆ. ನಿರೀಕ್ಷಿತ ಆದಾಯ ಕಡಿಮೆಯಾಗಿ ಖರ್ಚು ಹೆಚ್ಚಾಗುವ ಎಲ್ಲ ಲಕ್ಷಣಗಳಿವೆ. ವ್ಯಾಪಾರ-ವ್ಯವಹಾರಗಳಲ್ಲಿ ನಿಮ್ಮ ಸ್ಥಾನ ಹೆಚ್ಚಾಗುತ್ತದೆ. ಆಸ್ತಿ ಸಂಬಂಧಿತ ಹೊಸ ವ್ಯಾಜ್ಯಗಳು ತಲೆದೋರಬಹುದು. ಮಕ್ಕಳ ಏಳಿಗೆಯ ಬಗ್ಗೆ ನಿರೀಕ್ಷಿತ ಸಮಾಚಾರಗಳು ಇರುವುದಿಲ್ಲ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ನಡವಳಿಕೆಯಲ್ಲಿ ಸ್ವಲ್ಪಮಟ್ಟಿನ ನಿಧಾನಗತಿಯನ್ನು ಕಾಣಬಹುದು. ಸರ್ಕಾರಿ ಮಟ್ಟದ ಕೆಲಸ ಕಾರ್ಯ ಮಾಡುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಹಣದ ಒಳಹರಿವು ನಿರೀಕ್ಷೆಯ ಮಟ್ಟಕ್ಕೆ ಇದ್ದೇ ಇರುತ್ತದೆ. ವಿದ್ಯಾರ್ಥಿಗಳಿಗೆ ತಮ್ಮ ಅಧ್ಯಯನದಲ್ಲಿ ಹೆಚ್ಚಿನ ಶ್ರಮ ಹಾಕಲೇಬೇಕಾದ ಅನಿವಾರ್ಯವಿದೆ. ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಇರುವವರಿಗೆ ಬದಲಿ ರೀತಿಯ ಚಿಕಿತ್ಸೆ ತಿಳಿಯಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಸ್ವಯಂ ಉದ್ಯೋಗ ಮಾಡುವವರಿಗೆ ಹೆಚ್ಚು ವ್ಯವಹಾರ ನಡೆಯುತ್ತದೆ. ಹೊಸ ವಿವಾದಗಳನ್ನು ಸೃಷ್ಟಿಸಿ ವೈರಿಗಳನ್ನು ಹೆಚ್ಚಿಸಿಕೊಳ್ಳುವಿರಿ. ಕೋರ್ಟು ಸಂಬಂಧಿ ವ್ಯಾಜ್ಯಗಳಲ್ಲಿ ಹಿನ್ನಡೆಯನ್ನು ಕಾಣಬಹುದು. ಆರ್ಥಿಕ ಭದ್ರತೆಗಾಗಿ ಹೋರಾಟ ನಡೆಸುವಿರಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ನಿಮ್ಮ ಸ್ವಜನರಿಂದಲೇ ಮೋಸವಾಗುವ ಸಾಧ್ಯತೆಗಳಿವೆ, ಎಚ್ಚರ. ವೃತ್ತಿಯಲ್ಲಿ ಗುರಿಸಾಧನೆಗಾಗಿ ತಾಳ್ಮೆ ವಹಿಸಬೇಕು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸಂಗಾತಿಯೊಂದಿಗೆ ರಂಪಾಟ ಹೆಚ್ಚಾಗುವ ಸಾಧ್ಯತೆ ಇದೆ. ಈ ಅನಿರೀಕ್ಷಿತ ಬೆಳವಣಿಗೆಯಿಂದ ಮಾನಸಿಕ ನೆಮ್ಮದಿಗೆ ಕುತ್ತು ಬರಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಕೆಲವು ಬಂಧುವರ್ಗದವರ ಅನಿರೀಕ್ಷಿತ ಭೇಟಿಯಾಗಬಹುದು. ವಿರೋಧಿಗಳ ಮೇಲೆ ಹೂಡುವ ತಂತ್ರ ನಿಮಗೆ ತಿರುಗುಬಾಣವಾಗಬಹುದು. ಸಾಮಾಜಿಕ ಕೆಲಸಗಳಲ್ಲಿ ಆಸಕ್ತಿ ಹೆಚ್ಚುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವಾಸ್ತು ವಿನ್ಯಾಸಕಾರರಿಗೆ ಹೆಚ್ಚು ಬೇಡಿಕೆ ಬರುತ್ತದೆ. ಗೃಹ ನಿರ್ಮಾಣ ಕಾರ್ಯ ನಿಧಾನವಾದರೂ ನಿಲ್ಲುವುದಿಲ್ಲ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುವ ಸಂದರ್ಭವಿದೆ. ಹಿರಿಯರ ಆರೋಗ್ಯದಲ್ಲಿ ಗಣನೀಯ ಚೇತರಿಕೆಯನ್ನು ಕಾಣಬಹುದು. ಮಕ್ಕಳಿಂದ ಗೌರವ ಮತ್ತು ನಿರೀಕ್ಷಿತ ಧನಸಹಾಯ ದೊರೆಯುವ ಸಂದರ್ಭವಿದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನೀವು ಯೋಜಿಸಿದ ಮಹತ್ತರವಾದ ಯೋಜನೆಗಳ ಬಗ್ಗೆ ಹಿತೈಷಿಗಳ ಜೊತೆ ಚರ್ಚೆಯನ್ನು ಮಾಡಿದಲ್ಲಿ ಸೂಕ್ತ ಸಲಹೆ ಮತ್ತು ಸಹಕಾರಗಳು ದೊರೆಯುತ್ತವೆ. ಅಗ್ನಿಯ ಜೊತೆ ಕೆಲಸ ಮಾಡುವವರು ಹೆಚ್ಚು ಎಚ್ಚರದಿಂದ ಇರುವುದು ಒಳ್ಳೆಯದು. ಶಸ್ತ್ರಚಿಕಿತ್ಸೆಯನ್ನು ಮಾಡುವ ವೈದ್ಯರಿಗೆ ಉತ್ತಮ ಹೆಸರು ಮತ್ತು ಧನಲಾಭವಾಗುತ್ತದೆ. ಕೆಲವರಿಗೆ ವಿದೇಶ ಪ್ರಯಾಣ ಯೋಗವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವಾಹನಾದಿಗಳಿಂದ ಸಂತೋಷಪಡುವ ವಾರ. ಸಮಾಜದಿಂದ ನಿಮಗೆ ಗೌರವ ಪುರಸ್ಕಾರಗಳು ದೊರೆಯುವ ಸಂದರ್ಭವಿದೆ. ಹರಿತವಾದ ವಸ್ತುಗಳನ್ನು ಉಪಯೋಗಿಸುವಾಗ ಎಚ್ಚರಿಕೆ ಇರಲಿ. ಬಹಳ ದಿನಗಳಿಂದ ಇದ್ದ ಕೆಲಸದ ಒತ್ತಡ ನಿವಾರಣೆಯಾಗಿ ಸ್ವಲ್ಪ ಆರಾಮವೆನಿಸುತ್ತದೆ. ಧಾರ್ಮಿಕ ವಿಚಾರಗಳತ್ತ ಹೆಚ್ಚು ಸೆಳೆತ ಬರುತ್ತದೆ. ನೆರೆಹೊರೆಯವರೊಂದಿಗೆ ಸಂಬಂಧ ಉತ್ತಮಗೊಳ್ಳುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರು ಎಲ್ಲರಿಂದ ಪ್ರಶಂಸೆಗೆ ಪಾತ್ರರಾಗುವರು. ಅವರ ಮಾರ್ಗದರ್ಶನವನ್ನು ಸಾಕಷ್ಟು ಮಂದಿ ಬಳಸಿಕೊಳ್ಳುವರು. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿ ಇರುತ್ತದೆ. ಸರ್ಕಾರಿ ಮಟ್ಟದ ಕೆಲಸಕಾರ್ಯಗಳಲ್ಲಿ ಹೆಚ್ಚಿನ ಮುನ್ನಡೆಯನ್ನು ಕಾಣಬಹುದು. ಕೃಷಿ ಕ್ಷೇತ್ರದಲ್ಲಿರುವವರಿಗೆ ಹೆಚ್ಚಿನ ಪ್ರಗತಿ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಉದ್ಯೋಗ ಸ್ಥಳದಲ್ಲಿ ಒತ್ತಡಗಳು ಹೆಚ್ಚಾಗಬಹುದು. ಭೂ ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಚೇತರಿಕೆಯನ್ನು ಕಾಣಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ವಿದೇಶಿ ಹಣದ ವ್ಯವಹಾರವನ್ನು ಮಾಡುವವರಿಗೆ ಹೆಚ್ಚಿನ ಮುನ್ನಡೆ ಇರುತ್ತದೆ. ದಿಢೀರ್ ಆರೋಗ್ಯ ವ್ಯತ್ಯಾಸಗಳನ್ನು ಎದುರಿಸಬೇಕಾಗಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ.

ಪದಬಂಧ 2744



ಮೇಲಿನಿಂದ ಕೆಳಕ್ಕೆ

1. ವೃದ್ಧಿಸುತ್ತಾ ಹೋದ ಜೈನ ಧರ್ಮದ ಸ್ಥಾಪಕ 4
2. ಮಾನವನ್ನು ಕಾಪಾಡುವ ಮನೆ ಹಿರಿಯ 4
3. ಸಣ್ಣ ಮಕ್ಕಳು ಆಟವಾಡುತ್ತಾ ಕಲಿಯುವ ದೇಗುಲ 5
4. ಸಂಸ್ಕೃತ ಅನುಭಾವಿಯ ಒಳ್ಳೆಯ ಮಾತು 4
7. ತಲೆ ಕೆಳಕಾದ ಹತ್ತು ದಿನಗಳ ಹಬ್ಬ 3
8. ಸೀತೆಯ ಸಂಗತಿ ತಿಳಿಸಿ ಪ್ರಾಣ ಬಿಟ್ಟ ಪಕ್ಷಿ 3
10. ದುಂಬಿ ಸ್ಪರ್ಶಿಸುವ ಹೂವೊಳಗಿನ ಎಸಳು 3
11. ವೇದಿಕೆಯ ಮೇಲೆ ಮೈಕಿನ ಮುಂದೆ ಬಿಗಿಯುವ ಮಾತು 3
12. ಉದ್ದವಾಗಿ ಎಳೆದ ಎಳ್ಳಿನ ನಾಮ 3
14. ಹೇಗೆ ಹೇಳಿದರು ಇದು ವೀರನಾರಾಯಣನ ಸ್ಥಳ 3
16. ಪೂರ್ಣವಾಗಿ ರಸ ತುಂಬಿದ ಮಾವು 3
18. ಸೂರ್ಯನಿಂದ ಹುಟ್ಟಿ ಬಂದವ 5
19. ನೀರಿನಂತೆ ಹರಿದು ಬರುವ ಮೋಜಿನ ಸಮಾರಂಭ 3
20. ಅಂಬಿನಂತೆ ಸುಂದರವಾಗಿ ಧುಮಿಕ್ಕುವ ನದಿ 4
21. ಚುನಾವಣೆಯಲ್ಲಿ ಆರಿಸಿ ಬಂದವ 4
22. ಮುರಿದು ಚೂರು ಚೂರಾಗಿದ್ದು 4

ಎಡದಿಂದ ಬಲಕ್ಕೆ

1. ಪ್ರಭಾವಕ್ಕೆ ಒಳಪಡುವ ಸರಹದ್ದು 3
3. ಬಡಿದೆಚ್ಚರಿಸಲು ಕನ್ನಡ ಡಿಂಡಮವನ್ನು ಬಡಿ 3
5. ಈ ಸಮಸ್ಯೆ ಕ್ಲಿಷ್ಟವಾದದ್ದು 3
6. ಕ್ಲಿಷ್ಟವಾದ ಭಾಷೆಯನ್ನು ಬಿಡಿಸಿ ಅರ್ಥೈಸುವವ 4
8. ಬ್ಯಾಂಕ್ ಖಾತೆಗೆ ಬಂದ ಮಂದಿಗೆ ಸೇರಿದ ಹಣ 4
9. ಸಂತರು ಹಾಡಿದ ನೀತಿಯ ಹಾಡು 4
11. ನಮ್ಮೆಲ್ಲರ ಭಾರ ಹೊತ್ತ ನಮ್ಮ ರಾಷ್ಟ್ರ ದೇವಿ 3
13. ಕಾಲ ಪ್ರವೃತ್ತಿಯನ್ನು ಬದಲಾಯಿಸಲು ಹುಟ್ಟಿರುವ ಮಹಾ ಗಂಡು 5
15. ಕ್ಷೀರ ಸಮುದ್ರ ಕನ್ಯೆಯ ಕಡಲು 5
17. ಹಿಂದುಮುಂದಾದ ನೆವ 3
19. ಜಗತ್ತಿಗೆ ಒಡೆಯನಾದ ಈಶ 4
21. ಚುರುಕು ಮುಟ್ಟಿಸಿ ಮುರಿಯುವ ಕಡಲೆ ಪುರಿ 4
23. ಎಲ್ಲರೂ ಸರಾಸರಿ ಒಂದೇ ಎನ್ನುವ ಅಕ್ಕನ ಗಂಡನ 4
24. ಜಾಪತ್ರೆ ಹಿಪ್ಪಲಿ ಲವಂಗದಂತಹ ಸಾಂಬಾರು ಪದಾರ್ಥದ ಜೊತೆ ಬರುವ ಸುವಾಸಿತ ಕಾಯಿ 3
25. ಚಾಕುವಿನಂತಹ ಆಯುಧದಿಂದ ಚುಚ್ಚುವಿಕೆ 3
26. ಜನ ವಾಸಿಸುವ ಬೆಟ್ಟದ ಬುಡ ಭಾಗ 3

ಪದಬಂಧ ಉತ್ತರ -2743

ಮೇಲಿಂದ ಕೆಳಕ್ಕೆ

1.ಅಜಗಜ 2.ಧನಾಗಮ 3.ಮಾನದಂಡ 4.ಬಲವಂತ 7.ನಾಮಫಲಕ 8.ತವರುದಾರಿ 9.ಚಂದನವನ 10.ರುದ್ರನರ್ತನ 16.ಲೋಕಜ್ಞಾನ 17.ಚಾಮರಾಜ 19.ರಕ್ಷಿತರು 20.ವಸಾಹತು

ಎಡದಿಂದ ಬಲಕ್ಕೆ

1. ಅಶ್ವಮೇಧ 3.ಮಾರಿಕಾಂಬ 5.ನಾಗಶಯನ 6.ಜನಾನುಮತ 9.ಚಂಡಮಾರುತ 11.ವರದ 13.ಫಲಿಮಾರು 14.ನಮ್ಮಜನ 15.ದಾನವ 16.ಲೋಕಸಂಚಾರಿ 18.ನರಮಾನವ 21.ರಾಜಪೂಜಿತ 22.ನಟರಾಜ 23.ರುಜುವಾತು

ನೈತಿಕ ಪಥ್ಯದ ಅನನ್ಯ ಕೈಪಿಡಿ

ರಘುನಾಥ ಚ.ಹ.

ಒಳನೋಟ

ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ಚಿಂತನೆಗಳ ಸಂಕಲನ 'ಬಾರುಕೋಲು', ಕನ್ನಡದ ಮಣ್ಣಿನಲ್ಲಿ ರೂಪುಗೊಂಡ ಮೇಧಾವಿಯೊಬ್ಬರ ವೈಚಾರಿಕ ಪ್ರಖರತೆಯ ಮಹತ್ವದ ದಾಖಲೆ. ಸಮಕಾಲೀನ ರಾಜಕಾರಣ ಸಂದರ್ಭದ ಬಹುದೊಡ್ಡ ಸಮಸ್ಯೆಗಳಾದ ಬೌದ್ಧಿಕ ದಿವಾಳಿತನ ಹಾಗೂ ಅನೈತಿಕತೆಗೆ ನೈತಿಕಪಥ್ಯದ ಔಷಧಿಯ ರೂಪದಲ್ಲೂ ನಟರಾಜ್ ಹುಳಿಯಾರ್ ಹಾಗೂ ರವಿಕುಮಾರ್ ಬಾಗಿ ಅವರು ಸಂಪಾದಿಸಿರುವ ಈ ಕೃತಿಯನ್ನು ಗಮನಿಸಬಹುದು.

ವ್ಯವಸ್ಥೆಯ ದರ್ಪದ ವಿರುದ್ಧ ರೈತರು ಬಾರುಕೋಲು ಕೈಗೆತ್ತಿಕೊಳ್ಳಬೇಕು ಎಂದು ಎಂಡಿಎನ್ ಯಾವುದೋ ಸಂದರ್ಭದಲ್ಲಿ ಹೇಳಿದ್ದನ್ನು ವಾಚ್ಯವಾಗಿ ಬಳಸುವುದೇ ಹೆಚ್ಚು. ಪ್ರಸಕ್ತ ಕೃತಿಯ ಪ್ರವೇಶಿಕೆಯಲ್ಲಿ ನಟರಾಜ್ ಹುಳಿಯಾರ್ – 'ಬಾರುಕೋಲು' ವಿಶೇಷಣ ಎಂಡಿಎನ್ ಅವರ ನಿಷ್ಠುರ ವ್ಯಕ್ತಿತ್ವ ಹಾಗೂ ಆ ವ್ಯಕ್ತಿತ್ವಕ್ಕೆ ವ್ಯಂಗ್ಯ ಅಲಂಕಾರಪ್ರಾಯವಾಗಿರುವುದನ್ನು ಗುರ್ತಿಸಿದ್ದಾರೆ. 'ಬಾರ್‌ಕೋಲ್ ನನ್ನ ರೂಲ್ ಆಫ್ ಲಾ' ಎನ್ನುವ ಎಂಡಿಎನ್‌ರ ಮಾತನ್ನು, ಕಾನೂನನ್ನು ಅವರು ತಮ್ಮ ನಡೆನುಡಿಯಾಗಿಸಿಕೊಂಡಿದ್ದರ ಸಂಕೇತದ ರೂಪದಲ್ಲಿ ಗ್ರಹಿಸಬೇಕಾಗಿದೆ. ಬಾರ್ ಕೋಡ್ ಮತ್ತು ಬಾರ್‌ಕೋಲ್ ಎಂಡಿಎನ್ ಅವರ ಪಾಲಿಗೆ ಅಭಿನ್ನವಾದವು ಎನ್ನುವುದಕ್ಕೆ ಈ ಸಂಕಲನದ ಲೇಖನಗಳು ಸಮರ್ಥನೆ ಒದಗಿಸುವಂತಿವೆ.

ಕರ್ನಾಟಕದ-ಕನ್ನಡದ ಒರಿಜಿನಲ್ ಥಿಂಕರ್ ಎಂದು ಕೃತಿಯ ಪ್ರವೇಶಿಕೆಯಲ್ಲಿ ಎಂಡಿಎನ್ ಅವರನ್ನು ನಟರಾಜ್ ಬಣ್ಣಿಸಿದ್ದಾರೆ. ಇದು ಕೇವಲ ಪ್ರಶಂಸೆಯ ಮಾತಾಗಿರದೆ, ಕನ್ನಡದ ಹಿತ್ತಲಲ್ಲಿ ಅರಳಿದ ವಿಶ್ವಪ್ರಜ್ಞೆ-ಚಿಂತನೆ ಅವರದ್ದಾಗಿದೆ ಎನ್ನುವುದಕ್ಕೆ ಕೃತಿಯುದ್ದಕ್ಕೂ ಉದಾಹರಣೆಗಳಿವೆ.

ಕನ್ನಡ ನೆಲದ ತವಕತಲ್ಲಣಗಳಿಗೆ ಎಂಡಿಎನ್ ಅವರ ಸೃಜನಶೀಲ ಸ್ಪಂದನಗಳು ಸಾಂದರ್ಭಿಕ ಪ್ರತಿಕ್ರಿಯೆಗಳಾಗಿರದೆ, ಈ ಕಾಲದ ಬಿಕ್ಕಟ್ಟುಗಳನ್ನು ಎದುರುಗೊಳ್ಳಲು ಒಳನೋಟಗಳನ್ನು ಕಾಣಿಸುವಂತಿವೆ. ಸಮ ಸಮಾಜದ, ರೈತಪ್ರಜ್ಞೆ ಕೇಂದ್ರವಾಗುಳ್ಳ ಸಮಾಜದ ನಿರ್ಮಾಣಕ್ಕೆ ಪ್ರೇರಣೆಯೊದಗಿಸುವ ಎಂಡಿಎನ್ ಚಿಂತನೆಗಳಿಗೆ ರಾಜಕೀಯ-ವೈಚಾರಿಕ ಮಹತ್ವವಷ್ಟೇ ಅಲ್ಲ, ಸಾಂಸ್ಕೃತಿಕ ಅನನ್ಯತೆಯೂ ಇದೆ. ಜಾಗತೀಕರಣದ ಕೆಡಕುಗಳ ಆಳ ವಿಶ್ಲೇಷಣೆಯಂತೆ, ಜಾತಿಯ ಅಪಾಯಗಳಿಗೆ ಸಂಬಂಧಿಸಿದ ಅವರ ಒಳನೋಟಗಳು ಈ ಹೊತ್ತಿನ ನಮ್ಮ ನಡೆ-ನುಡಿಗಳನ್ನು ರೂಪಿಸಿಕೊಳ್ಳಲು ಅಗತ್ಯವಾದ ಸೃಜನಶೀಲದ್ರವ್ಯದಂತಿವೆ.



ಬಾರುಕೋಲು
ಸಂಪಾದಕರು: ನಟರಾಜ್ ಹುಳಿಯಾರ್, ರವಿಕುಮಾರ್ ಬಾಗಿ
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ
ಸಂ: 8880087235
ಪು: 258 ₹200

'ಬಾರುಕೋಲು' ಕೃತಿಯಲ್ಲಿ ಎಂಡಿಎನ್ ಚಿಂತನೆಗಳು, 'ತಾತ್ವಿಕ ಚಿಂತನೆ', 'ಗ್ರಾಮಸಮಾಜ, ರೈತರು, ಹೋರಾಟ' ಹಾಗೂ 'ಸಂಸ್ಕೃತಿ ಚಿಂತನೆ' ಎನ್ನುವ ಮೂರು ಭಾಗಗಳಲ್ಲಿ ವಿಂಗಡಣೆಗೊಂಡಿವೆ. ಗಾಂಧಿ ಮತ್ತು ಲೋಹಿಯಾ ಎಂಡಿಎನ್ ಅವರನ್ನು ಪ್ರಭಾವಿಸಿದ ಎರಡು ಚೇತನಗಳು. ಆ ಪ್ರಭಾವವನ್ನು ಅವರ ವಿಚಾರಗಳಲ್ಲೂ ದಟ್ಟವಾಗಿ ಕಾಣಬಹುದು.

ಸದನದಲ್ಲಿ ನಂಜುಂಡಸ್ವಾಮಿ ಅವರು ಮಾಡಿರುವ ಭಾಷಣಗಳು ತಮ್ಮ ವೈಚಾರಿಕ ಪ್ರಭೆಯಿಂದ ದಂಗುಬಡಿಸುತ್ತವೆ. ಸದನದ ಹೊರಗೆ ಮತ್ತು ಒಳಗೆ ಅರಿವು ಮೂಡಿಸುವ, ಸ್ವಾಭಿಮಾನ ಮೂಡಿಸುವ ಶಕ್ತಿ ಅವರ ಮಾತುಗಳಿಗಿದೆ. ಕರ್ನಾಟಕದ ವಿಧಾನಮಂಡಲದ ಗತವೈಭವದ ನೆನಪುಗಳಂತೆಯೂ ಕಾಣಿಸುವ ಆ ಭಾಷಣಗಳು ಸದನದ ಘನತೆಯ ಬಗ್ಗೆ ಗೌರವ-ಕಾಳಜಿಯುಳ್ಳ ಯಾವುದೇ ಶಾಸಕನಿಗೆ ಪಥ್ಯದ ರೀತಿ ಒದಗಿಬರುವ ಶಕ್ತಿ ಹೊಂದಿವೆ.

'ಹಿಂದೂ ಅಂದರೆ ಏನು?' ಎನ್ನುವ ವಿಧಾನಸಭೆಯಲ್ಲಿ ಎಂಡಿಎನ್ ಮಾಡಿದ ಭಾಷಣದ ಬರಹವನ್ನು ಹಿಂದುತ್ವದ ರಾಜಕಾರಣ ಮಾಡುತ್ತಿರುವ ರಾಜಕಾರಣಿಗಳೆಲ್ಲರೂ ಓದಬೇಕಾದಂತಹುದು. ಚರ್ಚೆಯ ರೂಪದ ಈ ಭಾಷಣ ನಂಜುಂಡಸ್ವಾಮಿ ಅವರ ಬೌದ್ಧಿಕ ಪ್ರಖರತೆಯ ಜೊತೆಗೆ, 90ರ ದಶಕದಲ್ಲಿ ಕನ್ನಡ ವಿಧಾನಸಭೆಯ ಗುಣಮಟ್ಟ ಎಷ್ಟು ಉತ್ಕೃಷ್ಟವಾಗಿತ್ತು ಎನ್ನುವುದನ್ನೂ ಸೂಚಿಸುವಂತಿದೆ. 'ವಿಚಾರವಾದಿ ಬಸವಲಿಂಗಪ್ಪನವರು ಶಿವೈಕ್ಯರಾಗಲಿಲ್ಲ' ಎನ್ನುವ ವಿಧಾನಸಭೆಯ ಮಾತುಗಳ ಟಿಪ್ಪಣಿ ಹಾಗೂ 'ಸಮಕಾಲೀನತೆ ಮತ್ತು ಕುವೆಂಪು: ಕ್ರಿಯೆ, ಪ್ರತಿಕ್ರಿಯೆ' ಬರಹಗಳು ಎಂಡಿಎನ್‌ರ ಸಾಂಸ್ಕೃತಿಕ ಚಿಂತನೆಯ ಕಿಡಿಗಳಂತಿವೆ.

ಬೀಜಕ್ಕೂ ಸ್ವಾತಂತ್ರ್ಯಕ್ಕೂ ಇರುವ ಸಂಬಂಧದ ವಿಶ್ಲೇಷಣೆ, ಬೀಜಗಳ ಮುಕ್ತ ವಿನಿಮಯ ವ್ಯವಸ್ಥೆಯ ಸಾಧ್ಯತೆ, ರೈತರ ಹೊಲಗಳಲ್ಲಿ ಸರ್ಕಾರವೇ ಬೋರ್‌ವೆಲ್ ತೋಡಿಸಬೇಕು ಎನ್ನುವ ಚಿಂತನೆ, ಭಾಷೆಗೂ ಪ್ರಜಾಪ್ರಭುತ್ವಕ್ಕೂ ಇರುವ ಸಂಬಂಧದ ಪರಿಕಲ್ಪನೆ – ಇಂಥ ಹತ್ತಾರು ಹೊಳಹುಗಳು ಎಂಡಿಎನ್ ವೈಚಾರಿಕತೆಯ ಅನನ್ಯತೆಯನ್ನು ಸೂಚಿಸುವಂತಿವೆ.

ರೈತರ ಸ್ವಾಭಿಮಾನವನ್ನು ಎತ್ತಿಹಿಡಿಯುವ ಕೆಲಸವನ್ನು ನಿರಂತರವಾಗಿ ಮಾಡಿದ ನಂಜುಂಡಸ್ವಾಮಿ ಅವರ ಚಳವಳಿಯಲ್ಲಿ ಆತ್ಮವಿಮರ್ಶೆಗೂ ಮಹತ್ವದ ಸ್ಥಾನವಿತ್ತು. ತಮ್ಮ ನಿರ್ಧಾರ ತಪ್ಪಾಗಿದ್ದಾಗ ಅದನ್ನು ಒಪ್ಪಿಕೊಳ್ಳಲು ಅವರು ಹಿಂಜರಿದಿಲ್ಲ ಎನ್ನುವುದನ್ನು 'ಬಾರುಕೋಲು' ಓದುಗರ ಗಮನಕ್ಕೆ ತರುತ್ತದೆ.

ಎಂಡಿಎನ್ ನೆನಪು-ವಿಚಾರಗಳನ್ನು ಸಮಕಾಲೀನಗೊಳಿಸುವ ಉದ್ದೇಶದ ಈ ಕೃತಿಯ ವಿನ್ಯಾಸ ಆಕರ್ಷಕವಾಗಿದೆ. ಕೃತಿಯ ಕೊನೆಯ ಭಾಗದಲ್ಲಿ ನೀಡಲಾಗಿರುವ 'ಕನ್ನಡದೇಶ ಪಕ್ಷ'ದ ಪ್ರಣಾಳಿಕೆ ಹಾಗೂ ಎಂಡಿಎನ್ ಅವರೊಂದಿಗೆ ಬರಗೂರರು ನಡೆಸಿರುವ ಸಂದರ್ಶನ ಬರಹಗಳು ಬಾರುಕೋಲಿನ ಚೆಲುವನ್ನು ಹೆಚ್ಚಿಸಿರುವುದರ ಜೊತೆಗೆ, ಎಂಡಿಎನ್ ಅವರ ಬಹುಮುಖಿ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲು ನೆರವಾಗುವಂತಿವೆ. ಅಧ್ಯಾಯಗಳ ಕೊನೆಯಲ್ಲಿ ನೀಡಲಾಗಿರುವ ಟಿಪ್ಪಣಿಗಳು ಓದುಗಸ್ನೇಹಿ ಆಗಿರುವುದರ ಜೊತೆಗೆ, ಎಂಡಿಎನ್ ಅವರನ್ನು ಸೂತ್ರರೂಪದಲ್ಲಿ ನೆನಪಿರಿಸಿಕೊಳ್ಳಲಿಕ್ಕೂ ಸಹಾಯಕವಾಗುವಂತಿವೆ.

ಯುವ ತಲೆಮಾರು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಾದ ಹಾಗೂ ಮನನ ಮಾಡಿಕೊಳ್ಳಬೇಕಾದ ಪ್ರೇರಣೆ-ಚೇತನಗಳಲ್ಲಿ ಎಂಡಿಎನ್ ಒಬ್ಬರು ಎನ್ನುವುದನ್ನು ಮನದಟ್ಟು ಮಾಡಿಸುವುದರಲ್ಲಿ 'ಬಾರುಕೋಲು' ಕೃತಿಯ ಮಹತ್ವವಿದೆ.

ಪ್ರೊ. ಎಲ್‌ಎಸ್‌ಎಸ್ ಬದುಕು–ಬರಹ ದರ್ಶನ ಮಾಡಿಸುವ ಮೊನೋಗ್ರಾಫ್

ಎಸ್. ಆರ್. ವಿಜಯಶಂಕರ

ಅವಲೋಕನ

ಕನ್ನಡ ವಿದ್ವತ್ ವಲಯದ ಹಿರಿ-ಕಿರಿಯರೆಲ್ಲರಿಂದ ಸಮಾನ ಆದರ ಗೌರವಗಳಿಗೆ ಪಾತ್ರರಾದವರು ವಿಮರ್ಶಕ-ವಿದ್ವಾಂಸ ಪ್ರೊ. ಎಲ್.ಎಸ್. ಶೇಷಗಿರಿರಾವ್ (1925-2019). ಅಧ್ಯಾಪನ, ವಿಮರ್ಶನ, ಸಂಪಾದನಾ ಕಾರ್ಯಗಳಲ್ಲದೆ ಮುಖ್ಯಮಂತ್ರಿಯವರ ಪತ್ರಿಕಾ ಕಾರ್ಯದರ್ಶಿ, ಕನ್ನಡ ಪುಸ್ತಕ ಪ್ರಾಧಿಕಾರದ ಮೊದಲ ಅಧ್ಯಕ್ಷ, ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಮುಂತಾದ ಹುದ್ದೆಗಳಲ್ಲಿ ಯಶಸ್ವಿ ಆಡಳಿತಾಧಿಕಾರಿಯಾಗಿಯೂ ಅವರು ಪರಿಚಿತರಾಗಿದ್ದಾರೆ. ಇಂಗ್ಲಿಷ್ ಸಾಹಿತ್ಯದಲ್ಲಿ ಬಿ.ಎ. ಆನರ್ಸ್ ತರಗತಿಗೆ ಸೇರಿದ್ದ ಎಲ್.ಎಸ್.ಎಸ್ ಅವರಿಗೆ ಕನ್ನಡದಲ್ಲಿ ಬರೆಯುವಂತೆ ಮೊದಲಿಗೆ ಪ್ರೇರೇಪಿಸಿದವರು ಅವರ ವಿದ್ಯಾಗುರುಗಳಾದ ಆಚಾರ್ಯ ಬಿ.ಎಂ.ಶ್ರೀ ಅವರು. ಮುಂದೆ ತೀ.ನಂ.ಶ್ರೀ, ಪ್ರೊ. ಈಗಲ್‌ಟನ್ ಹೀಗೆ ಅನೇಕರಿಂದ ಅವರು ಪ್ರೇರಣೆ ಪಡೆದರು.

ಶೇಷಗಿರಿರಾವ್ ಅವರು ಬರೆದು ಪ್ರಕಟಿಸಿರುವ 108 ಕನ್ನಡ, 44 ಇಂಗ್ಲಿಷ್ ಪುಸ್ತಕಗಳು ಸೇರಿ ಒಟ್ಟು 152 ಕೃತಿಗಳು ಅವರು ಸಾಹಿತ್ಯಕ್ಕೆ ನೀಡಿದ ಕೊಡುಗೆಯ ಕುರಿತಾಗಿ ಸದಾ ತಿಳಿಸಲು ನಮ್ಮೊಡನೆ ಉಳಿದಿವೆ. ಅವುಗಳಲ್ಲಿ ಸಣ್ಣಕತೆಗಳು, ನಾಟಕಗಳು, ವ್ಯಕ್ತಿ ಚಿತ್ರಗಳು, ಅನುವಾದಗಳು, ನಿಘಂಟುಗಳು, ಸಾಹಿತ್ಯ ಚರಿತ್ರೆ, ವಿಮರ್ಶೆ, ರಾಮಾಯಣ, ಮಹಾಭಾರತ (ಇಂಗ್ಲಿಷ್‌ನಲ್ಲಿ), ಇಂಗ್ಲಿಷ್ ಭಾಷೆಯ ಆಧುನಿಕ ಸಾಹಿತ್ಯ ವಿಮರ್ಶೆ, ಪಾಶ್ಚಾತ್ಯ ಸಾಹಿತ್ಯ ವಿಹಾರ, ಗ್ರೀಕ್ ರಂಗಭೂಮಿ, ಶೇಕ್ಸ್‌ಪಿಯರ್ ಮೊದಲಾದವರ ಕುರಿತ ಕೃತಿಗಳು, ಪಾಶ್ಚಾತ್ಯ ಮತ್ತು ಭಾರತೀಯ ಮಹಾಕಾವ್ಯಗಳ ಮನೋಧರ್ಮ, ಪರಂಪರೆಗಳ ಅಧ್ಯಯನ- ಹೀಗೆ ಸಾಹಿತ್ಯದ ದೊಡ್ಡ ವೈವಿಧ್ಯವೇ ಸೇರಿದೆ. ಲೇಖಕನೊಬ್ಬನ ಕೇಂದ್ರ ವಿಚಾರವನ್ನು ಸಂಕ್ಷಿಪ್ತ ರೀತಿಯಲ್ಲಿ ಅವರ ವಿಮರ್ಶೆಯು ಓದುಗನಿಗೆ ಸುಲಭವಾಗಿ ತಿಳಿಯುವಂತೆ ಮಾಡುತ್ತದೆ.

'ಇಂಗ್ಲಿಷ್ ಸಾಹಿತ್ಯ ಚರಿತ್ರೆ' ಕೃತಿಗೆ ಸಂದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಉನ್ನತ ಪ್ರಶಸ್ತಿಗಳು ಅವರಿಗೆ ಸಂದಿವೆ. ಅವರ ಕೃತಿಗಳು ಕನ್ನಡದ ಹೊಸ ತಲೆಮಾರು ಆಯ್ದು ಅಧ್ಯಯನ ಮಾಡಬೇಕಾದ ಆಕರ ಸಾಹಿತ್ಯವೂ ಹೌದು. ಇಂತಹ ಹಿರಿಯ ವಿಮರ್ಶಕರ ಬಗ್ಗೆ, ಭಾರತೀಯ ಸಾಹಿತ್ಯ ನಿರ್ಮಾಪಕರು ಸರಣಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಈಚೆಗೆ ಮೊನೋಗ್ರಾಫ್ ಒಂದನ್ನು ಪ್ರಕಟಿಸಿದೆ. ವಿಮರ್ಶಕ, ಪತ್ರಕರ್ತ ಎನ್.ಎಸ್. ಶ್ರೀಧರಮೂರ್ತಿಯವರು ಕನ್ನಡದಲ್ಲಿ ಬರೆದಿರುವ ಈ ಮೊನೋಗ್ರಾಫ್ ಅನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಇತರ ಭಾರತೀಯ ಭಾಷೆಗಳಿಗೂ ಅನುವಾದಿಸಿ ಪ್ರಕಟಿಸಲಿದೆ. ಒಂದು ಭಾರತೀಯ ಭಾಷೆಯಲ್ಲಿ ಸಾಹಿತ್ಯ ನಿರ್ಮಾಣ ಮಾಡಿದ ಉನ್ನತಮಟ್ಟದ ಪ್ರತಿಭೆಯನ್ನು ಇತರ ಭಾರತೀಯ ಭಾಷೆಗಳಿಗೂ ಪರಿಚಯಿಸುವುದು ಭಾರತೀಯ ಸಾಹಿತ್ಯ ನಿರ್ಮಾಪಕರು ಸರಣಿಯ ಉದ್ದೇಶವಾಗಿದೆ.



ಭಾರತೀಯ ಸಾಹಿತ್ಯ ನಿರ್ಮಾಪಕರು ಎಲ್.ಎಸ್.ಶೇಷಗಿರಿರಾವ್
ಲೇ: ಎನ್.ಎಸ್. ಶ್ರೀಧರ ಮೂರ್ತಿ
ಪ್ರ: ಸಾಹಿತ್ಯ ಅಕಾದೆಮಿ
ಸಂ: 011-2338 6626/27/28
ಪು: 120 ₹50

ಶ್ರೀಧರಮೂರ್ತಿಯವರು ತಮ್ಮ ಕೃತಿಯಲ್ಲಿ ಪ್ರೊ. ಎಲ್.ಎಸ್.ಎಸ್ ಅವರ ಜೀವನವನ್ನು ಮುಖ್ಯ ಘಟನೆಗಳೊಡನೆ ಪರಿಚಯಿಸುವುದರೊಂದಿಗೆ ಅವರ ಇಂಗ್ಲಿಷ್-ಕನ್ನಡ ಸಾಹಿತ್ಯವನ್ನು ಸ್ಥೂಲ ವಿಂಗಡನೆಗೆ ಒಳಪಡಿಸಿ ಮೊನೋಗ್ರಾಫ್‌ನ ಪುಟ ಮಿತಿಯಲ್ಲಿ ವಿವರಿಸಿದ್ದಾರೆ. ಸೃಜನ ಸಾಹಿತ್ಯ, ಸಾಹಿತ್ಯ ಚರಿತ್ರೆ, ವಿಮರ್ಶಾ ಕೃತಿಗಳು, ನಿಘಂಟುಗಳು ಈ ನಾಲ್ಕು ವಿಭಾಗಗಳ ಮೂಲಕ ಶೇಷಗಿರಿರಾಯರ 152 ಕೃತಿಗಳ ಸಂಕ್ಷಿಪ್ತ ಪರಿಚಯ ಮತ್ತು ಮೌಲ್ಯಯುಕ್ತ ವಿಮರ್ಶೆ ಎರಡನ್ನೂ ನೀಡಿದ್ದಾರೆ. ಇಷ್ಟು ಆಗಾಧವಾದ ಸಾಧನೆಯನ್ನು 120 ಪುಟಗಳ ಮಿತಿಯಲ್ಲಿ ನೀಡುವುದು ಸುಲಭದ ಕೆಲಸವಲ್ಲ. ಏಕಾಗ್ರತೆ, ಸಂಯಮ ಮತ್ತು ಅನಿವಾರ್ಯವಾದದ್ದನ್ನು ಮಾತ್ರ ಹೇಳುವ ನಿಯಂತ್ರಣ- ಈ ಮೂರೂ ಶಕ್ತಿಯನ್ನು ಒಟ್ಟಿಗೆ ಸೇರಿಸಿಕೊಂಡು ಶ್ರೀಧರಮೂರ್ತಿಯವರು ಇದನ್ನು ಸಾಧಿಸಿದ್ದಾರೆ. ಈ ಮೂಲಕ ಕೇಂದ್ರ ಸಾಹಿತ್ಯ ಅಕಾಡೆಮಿ, ಆ ಮೂಲಕ ಶ್ರೀಧರಮೂರ್ತಿ ಅವರು ಎಲ್.ಎಸ್.ಎಸ್ ಅವರನ್ನು ಕನ್ನಡದ ಓದುಗರಿಗೆ ಹೊಸದಾಗಿ ಪರಿಚಯಿಸಿದ್ದಾರೆ.

ಇದು 'ಭಾವಲೋಕ'ದ ಪಯಣ

ಮೊದಲ ಓದು



ಭಾವಲೋಕ
ಲೇ: ಪಿ.ಶ್ರೀಧರ್ ನಾಯಕ್
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080-22161900
ಪು: 104 ₹120

'ಭಾವಲೋಕ' ಕೃತಿ ಪತ್ರಕರ್ತ ಪಿ.ಶ್ರೀಧರ್ ನಾಯಕ್ ಅವರ ಪ್ರಬಂಧ ಮತ್ತು ಲೇಖನಗಳ ಸಂಕಲನ. ಪತ್ರಿಕೆಗಳಲ್ಲಿ ಪ್ರಕಟವಾದ ಬರಹಗಳು ಸೇರಿದಂತೆ ವೈಯಕ್ತಿಕ ಅನುಭಾವ ಲೋಕವೇ ಇಲ್ಲಿದೆ. ತಲಾ ಏಳು ಪ್ರಬಂಧ ಹಾಗೂ ಲೇಖನಗಳು ಈ ಕೃತಿಯಲ್ಲಿವೆ.

ಇತ್ತೀಚೆಗೆ ಬಿಡುಗಡೆಯಾದ '777 ಚಾರ್ಲಿ' ಸಿನಿಮಾ ಹಲವರ ಮನಸ್ಸಿನ ಮೇಲೆ ಪ್ರಭಾವ ಬೀರಿತ್ತು. ಇಂಥ ಕಥೆಯೊಂದು ಈ ಕೃತಿಯ ಆರಂಭದಲ್ಲೇ ಇದೆ. 'ತುಂಟಿ ರೂಬಿಯ ದಶಾವತಾರ'ದ ಭಾವಲೋಕದಲ್ಲಿ ಮಿಂದೆದ್ದ ಲೇಖಕರು ಒಂದು ಅದ್ಭುತವಾದ ಚಿತ್ರಣವನ್ನೇ ಓದುಗರ ಮುಂದಿರಿಸಿದ್ದಾರೆ. ಲೇಖಕರಿಗಷ್ಟೇ ಕೇಳಿಸಿರುವ ರೂಬಿಯ ಮನಸ್ಸಿನ ಮಾತುಗಳನ್ನು ಕಟ್ಟಿಕೊಟ್ಟ ರೀತಿ ಮನಸ್ಸನ್ನು ಮುಟ್ಟುತ್ತದೆ. ಬರವಣಿಗೆ, ಭಾಷೆ, ನಿರೂಪಣೆ, ವರ್ಣನೆ ದೃಷ್ಟಿಯಿಂದ ಉತ್ತಮವಾದ ಲಲಿತ ಪ್ರಬಂಧವಿದು. 'ರೆಕ್ಕೆ ಬಾಲಗಳ ಲೋಕ', 'ಗುಬ್ಬಚ್ಚಿಗಳ ಶೋಕ ಪ್ರಸಂಗ'ದಲ್ಲಿ ಪ್ರಾಣಿಗಳ ಹೊಸ ಲೋಕವೊಂದಿದೆ. ಖುಷ್ವಂತ್ ಸಿಂಗ್ ಬದುಕು, ಬರಹ, ಬೇಹುಗಾರಿಕೆಯೊಳಗಿನ ಲೋಕ, ವಂಡಾರು ಕಂಬಳದ ವೈಶಿಷ್ಟ್ಯ ಸೇರಿದಂತೆ ಆಸಕ್ತಿದಾಯಕ ವಿಚಾರಗಳನ್ನು ಇಲ್ಲಿನ ಲೇಖನಗಳಲ್ಲಿ ಕಟ್ಟಿಕೊಡಲಾಗಿದೆ.

ಕಥೆ
ಸೋಮು ಅವರ
ಎಳೆಗರುಂ ಎತ್ತಾಗದೆ...
https://www.prajavani.net/short-story
ಪೂರ್ಣ ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕವನ
ನಂದಿನಿ ಹೆದ್ದುರ್ಗ ಅವರ
ಮತ್ತೆ ಹುಟ್ಟಿ ಬರುತ್ತೇವೆ
https://www.prajavani.net/poetry
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಾಶ್ವತತೆಗೆ ಹಂಬಲಿಸುವ 'ಘಳಿಗೆಯ ಸ್ಮಾರಕ'ಗಳು!

ಎಂ.ಎಸ್. ಆಶಾದೇವಿ

ವಿಮರ್ಶೆ

ಎಚ್.ಎಸ್. ಮುಕ್ತಾಯಕ್ಕನವರ ಸಮಗ್ರ ಗಜಲುಗಳ ಸಂಕಲನ 'ಮೈಂ ಅವ್ರ ಮೇರೆ ಲಮ್ಹೆ' ಪ್ರಕಟವಾಗಿದೆ. ಕನ್ನಡದ ಒಂಟಿ ಕೋಗಿಲೆಯಂತೆ ಭಾಸವಾಗುವ ಮುಕ್ತಾಯಕ್ಕನವರ ಗಜಲುಗಳು ಈಗ ಒಟ್ಟಾಗಿ ಸಿಕ್ಕಿರುವುದು ಕಾವ್ಯದೊಂದಿಗಿನ ಅವರ ನಿಡುಗಾಲದ ಉತ್ಕಟ ಸಂಬಂಧದ ಸಾತತ್ಯವನ್ನು ಓದುಗರೂ ಪರಿಭಾವಿಸಲು ಸಿಕ್ಕ ಅವಕಾಶ ಮತ್ತು ಆವರಣ ಎರಡೂ ಆಗಿದೆ.

ಗಜಲುಗಳ ಮೋಹಕ ಸೌಂದರ್ಯವನ್ನು ಒಪ್ಪಿ ಮೆಚ್ಚಿಯೂ ಕನ್ನಡದಲ್ಲಿ ಗಜಲುಗಳನ್ನೇ ತಮ್ಮ ಮಾಧ್ಯಮವಾಗಿಸಿಕೊಂಡವರು ಇಲ್ಲವೆನ್ನುವಷ್ಟು ಅಪರೂಪ. ರೂಢಿಸಿಕೊಂಡ ಕೆಲವೇ ಕೆಲವು ಮಂದಿಯಾದರೂ ಕಲ್ಯಾಣ ಕರ್ನಾಟಕದವರು. ಸಾಹಿತ್ಯ ಪ್ರಕಾರಗಳಿಗೆ ದೇಶ-ಕಾಲಗಳ ಹಂಗಿಲ್ಲ ಎನ್ನುವುದು ನಿಜವಾದರೂ ಅವುಗಳ ದಟ್ಟ ಪ್ರಭಾವ ಸಾಧ್ಯವಾಗುವುದು, ಅವು ನಮ್ಮೊಂದಿಗೆ ಅಖಂಡ ಸಖ್ಯ ಬೆಳೆಸಲು ಅವುಗಳೊಂದಿಗೆ ನಾನು ಎಳವೆಯಿಂದಲೂ ಕಟ್ಟಿಕೊಳ್ಳುವ ಸಂಬಂಧದ ಪಾತ್ರವೂ ಇದೆ ಎನ್ನುವುದು ನಿರ್ದಿಷ್ಟವಾಗಿ ಕನ್ನಡದ ಈ ವಿಷಯದ ಮಟ್ಟಿಗಂತೂ ನಿಜವೆನ್ನಿಸುತ್ತದೆ.

ಘಳಿಗೆಯ ಸ್ಮಾರಕದಂತೆ ಗಜಲುಗಳ ಸ್ವರೂಪ. ಹೀಗಾಗಿ ಉತ್ಕಟತೆಯೇ ಇವುಗಳ ಜೀವಧಾತು. ಗಂಟಲುಬ್ಬಿ ಬರುವ ಭಾವೋನ್ಮಾದದಲ್ಲಿ ಗಜಲುಗಳು ಅರಳುತ್ತವೆ, ಹಾಗಾಗಿಯೇ ಇವುಗಳು ಬಲು ಕಷ್ಟದವು. ಹುಸಿ ಭಾವುಕತೆಯು ಇವುಗಳ ರಚನೆಯನ್ನೇ ಹುಸಿಗೊಳಿಸಿಬಿಡುತ್ತವೆ. ಎಂದರೆ ಇವು ಎಷ್ಟು ನಾಜೂಕೋ ಅಷ್ಟೇ ಗಟ್ಟಿಯೂ ಆಗಿದ್ದಾಗ ಮಾತ್ರ ಅವುಗಳಿಗೆ ತಾಳಿಕೆಯ ಗುಣ. ಇನ್ನಿತರ ಕಾವ್ಯಗಳಿಗಾಗುವಂತೆ ಕೊನೆಯ ಪಕ್ಷ ವಸ್ತುವಿನ ಕಾರಣಕ್ಕಾದರೂ ಅವುಗಳ ಅಸ್ತಿತ್ವ, ಮಹತ್ವ ಇರಲು ಸಾಧ್ಯ. ಗಜಲುಗಳಲ್ಲಿ ಆ ಅವಕಾಶ ತೀರಾ ಕಡಿಮೆ. ಆತ್ಮದಷ್ಟೇ ದೇಹಕ್ಕೂ ಇಲ್ಲಿ ಸಮಾನ ಬೆಲೆ.

ಮುಕ್ತಾಯಕ್ಕನವರ ಗಜಲುಗಳು ಕನ್ನಡದಲ್ಲಿ ಉಳಿದು ಬಾಳುವುದು ಈ ಧಾರಣ ಶಕ್ತಿಯನ್ನು ಪಡೆದುಕೊಂಡಿರುವ ಕಾರಣಕ್ಕಾಗಿ. ಸಾಮಾನ್ಯವಾಗಿ ಲೇಖಕ ಲೇಖಕಿಯರಲ್ಲಿ ಮೂಲ ಮಾಧ್ಯಮವೊಂದು ಇದ್ದಾಗಲೂ ಇತರ ಪ್ರಕಾರಗಳಲ್ಲಿಯೂ ಅವರು ಸಕ್ರಿಯರಾಗಿರುತ್ತಾರೆ. ಎಲ್ಲೋ ಕೆಲವರಲ್ಲಿ ಮಾತ್ರ ಹಲವು ಪ್ರಕಾರಗಳಲ್ಲಿ ಏಕಪ್ರಕಾರದ ಯಶಸ್ಸೂ ಸಿಗುತ್ತದೆ. ಮುಕ್ತಾಯಕ್ಕನವರು ಏಕೋನಿಷ್ಠೆಯಿಂದ ಗಜಲುಗಳ ಜೊತೆ ಆತ್ಮಸಖ್ಯವನ್ನೇ ಕಟ್ಟಿಕೊಂಡಿದ್ದಾರೆ.

ಗಜಲುಗಳ ಘನತೆ, ಸೌಂದರ್ಯ, ಶಕ್ತಿ ಎಲ್ಲವನ್ನೂ ಮುಕ್ತಾಯಕ್ಕನವರ ಈ ಸಮಗ್ರ ಸಂಕಲನ ಹೆಚ್ಚಿಸಿದೆ. ಒಬ್ಬ ಶಕ್ತ ಕವಿಗೆ ಮಾತ್ರ ಸಾಧ್ಯವಾಗಬಹುದಾದ ಎತ್ತರ ಬಿತ್ತರಗಳು ಈ ಸಂಕಲನದಲ್ಲಿವೆ.

ಮುಕ್ತಾಯಕ್ಕನವರ ಬರವಣಿಗೆ ಅನುಭವವನ್ನು ಬುದ್ಧಿಭಾವಗಳ ಜೊತೆ ಆತ್ಮಸಂವಾದಕ್ಕೂ ಒಡ್ಡಿಯೇ ಹೊರಬಂದಂತಿದೆ. ಅವರ ಗಜಲುಗಳ ವಿಶೇಷ ಸಂಗತಿಯೆಂದರೆ, ಪ್ರೇಮವೋ, ಪ್ರೇಮಭಂಗವೋ, ಏಕಾಂತವೋ, ನಮ್ಮೊಳಗನ್ನೇ ಅಲ್ಲಾಡಿಸಿಬಿಡುವ ದುಃಖವೋ – ಯಾವುದೂ ಇರಲಿ, ಅವುಗಳನ್ನು ಘಳಿಗೆಯ ಸ್ಮಾರಕದ ಅಂಶದ ಜೊತೆಯಲ್ಲಿಯೇ ಅವುಗಳ ಶಾಶ್ವತತೆಗೂ ಕೈಚಾಚುವುದರಲ್ಲಿ. ಹೇಳಿ ಹಗುರಾಗುವುದು ಎನ್ನುವುದು ಇವರಲ್ಲಿಲ್ಲ. ಇವರಿಗೆ ಹೇಳುವುದು ತನ್ನೊಳಗೆ ತನ್ನನ್ನು ಇನ್ನಷ್ಟು ಸ್ಪಷ್ಟಮಾಡಿಕೊಳ್ಳಲು, ಗಟ್ಟಿ ಮಾಡಿಕೊಳ್ಳಲು.

ಮುಕ್ತಾಯಕ್ಕನವರಲ್ಲಿ ದುಃಖವೂ ಎಂದೂ ಸಿನಿಕತನವಾಗಲಿ, ಜೀವದ್ವೇಷಿಯಾಗಲಿ ಆಗುವುದಿಲ್ಲ. ಕಳೆದುಹೋದ, ಫಲಿಸದ ಸಂಬಂಧವೇ ಆಗಲಿ, ಇವರಲ್ಲಿ ವ್ಯಗ್ರತೆಯನ್ನು ಹುಟ್ಟಿಸಿ ಪ್ರೇಮಿಯನ್ನು ಕಣ್ಣೀರಿನಲ್ಲೇ ಸುಟ್ಟುಬಿಡುವ ಭಾವವಂತೂ ಸುಳಿಯುವುದೇ ಇಲ್ಲ. ಇನ್ನೂ ಕುತೂಹಲಕರವಾದ ಸಂಗತಿಯೆಂದರೆ ಹಲವು ಗಜಲುಗಳಲ್ಲಿ, ಈ ಸಂಬಂಧ ಥಟ್ಟೆಂದು ಮುಗಿದು ಹೋಗಿಬಿಡಬಹುದು ಎನ್ನುವ ಸೂಚನೆ ಮೊದಲೇ ಸಿಕ್ಕಿತ್ತಲ್ಲವೇ ಎನ್ನುವ ಭಾವವೂ ಮಿಂಚಿ ಮರೆಯಾಗುತ್ತದೆ. ಸಂಬಂಧವೊಂದರ ಆಯುಸ್ಸು ಎಷ್ಟೋ ಅಷ್ಟು ಮಾತ್ರವೇ ಹೊರತು ಇಲ್ಲದ್ದನ್ನು ಇದೆಯೆಂದು ಭ್ರಮಿಸುವ ಅದಕ್ಕೆ ಎದುರಿನ ವ್ಯಕ್ತಿಯನ್ನು, ಸಂದರ್ಭಗಳನ್ನು ಹೊಣೆಮಾಡುತ್ತಾ ಅದರಲ್ಲೇ ರಾಟೆ ತಿರುಗಿಸುವ ಮನೋಧರ್ಮಕ್ಕೆ ಇಲ್ಲಿನ ಗಜಲುಗಳು ಪಕ್ಕಾಗುವುದಿಲ್ಲ.

ಮೈಂ ಅವ್ರ ಮೇರೆ ಲಮ್ಹೆ
ಲೇ: ಎಚ್.ಎಸ್. ಮುಕ್ತಾಯಕ್ಕ
ಪ್ರ: ಸಂಗಾತ ಪುಸ್ತಕ.
ಸಂ: 8431113501
ಪು: 165 ₹270

ಹೆಣ್ಣುಮಕ್ಕಳಲ್ಲಿ ಸ್ಥಾಯಿಯೆಂದು ಹೇಳಲಾಗುವ ಲೋಕರೂಢಿಯ ನಂಬಿಕೆಗಳು ಇವರಲ್ಲಿ ತಿರುವುಮುರುವುವಾಗುತ್ತವೆ. ಪ್ರೀತಿಯೆನ್ನುವುದು ಬದುಕಿನ ಬಹುದೊಡ್ಡ ಅನುಭವ; ಅದರಲ್ಲಿ ಸಿಕ್ಕಿದ್ದು, ಪಡೆದದ್ದು, ಕೊಟ್ಟದ್ದು ಇವೇ ಬದುಕಿನ ಮುಖ್ಯಸಂಗತಿಗಳಾಗಬೇಕಲ್ಲವೆ ಎನ್ನುವ ನಂಬಿಕೆಯಿಂದ ಇಲ್ಲಿನ ಗಜಲುಗಳು ಬದುಕನ್ನು ಇನ್ನೂ ಉತ್ಕಟವಾಗಿ ಪ್ರೀತಿಸಲು ಹಾತೊರೆಯುತ್ತವೆ. ಕೊನೆಗೂ ಏಕಾಂತವೇ ನನ್ನ ಬದುಕಿನ ವಾಸ್ತವವಾಗುವುದಾದರೆ, ಅದೂ ಘನವಾದ ಸ್ಥಿತಿಯೇ. ಪ್ರಫುಲ್ಲಗೊಳಿಸುವ ನೆನಪುಗಳೋ ಧನ್ಯತೆಯನ್ನುಕ್ಕಿಸುವ ಸಂದರ್ಭಗಳೋ, ನನ್ನ ಪಾಡಿಗೆ ನಾನಿರುವ ಅವಕಾಶವಾದರೂ ಬದುಕು ನೀಡಿದ ಒಂದು ವರವೇ ಎನ್ನುವ ಅತುಲ ವಿಶ್ವಾಸ ಏಕಾಂಗಿತನವನ್ನು ಏಕಾಂತದ ದಿವ್ಯ ಭಿತ್ತಿಗೆ ಒಯ್ಯುತ್ತವೆ.

ಮೊದಲನೆಯ ಗಜಲ್‌ನ ಈ ಸಾಲುಗಳು:

ಇರುಳ ತಂಪಿನಲಿ ನೆನಪಾಯಿತು ಬಿಸಿಯಪ್ಪುಗೆಯ ಒಡನಾಟ ತಪ್ಪಿದ್ದು
ಇನ್ನೊಂದು ಬಟ್ಟಲನು ತುಂಬುವವರಾರೆಂದು ಮಧು ಪಾತ್ರೆಯು ಕೇಳಿತು
ಯಾವುದೋ ನೋವೊಂದು ನಯನ ಹೂಗಳಲಿ ಇಬ್ಬನಿಯ ಸುರಿಸುತಿಹುದು
ಕೊನೆಯಿಲ್ಲವೆ 'ಮುಕ್ತಾ' ಇದಕೆಂದು ಎಲ್ಲೋ ಅಡಗಿದ್ದ ನಗೆಯು ಕೇಳಿತು

ಆ ನಗು ವಿಷಾದದ್ದೂ ಹೌದು, ಆಶಾವಾದದ್ದೂ ಹೌದು. ಇದು ಬಾಳು ನೋಡು, ಇದ ತಿಳಿದೆನೆಂದ ಧೀರರಿದ್ದಾರೋ ಇಲ್ಲವೋ ಆದರೆ ಬದುಕಂತೂ ಅಸಂತತತೆಯ ಸತತ ಮೆರವಣಿಗೆ. ಆದರೂ ಬದುಕಿನ ಸೆಳೆತವನ್ನು ಏನೆಂಥ ದುರಂತವೂ, ನೋವೂ ಕಸಿಯುವುದಿಲ್ಲವಲ್ಲ, ಅದೇನಿದ್ದೀತು ಬದುಕಿನ ಶಕ್ತಿ ಎನ್ನುವ ಬೆಕ್ಕಸ ಮುಕ್ತಾಯಕ್ಕನವರನ್ನು ಇದಿರಾಗಿದೆ, ಅವರ ಕಾವ್ಯವನ್ನು ಕಾದಿದೆ ಎಂದೇ ಹೇಳಬೇಕು. ಅವರ ಕಾವ್ಯಕ್ಕೆ ಸಾಮಾನ್ಯವಾಗಿ ಗಜಲುಗಳಿಗೆ ದಕ್ಕದ ಅಸಾಧಾರಣ ಪ್ರಬುದ್ಧತೆ ಸಿಕ್ಕಿರುವುದು ಬದುಕಿನ ಈ ಜೀವಕ್ಷೇತ್ರವನ್ನು ಹಿಡಿದಿರುವುದರಿಂದ. ಇದೇ ಅವರ ಕಾವ್ಯದ ಮೂಲಕೇಂದ್ರವೆಂದರೂ ತಡೆಯುತ್ತದೆ.

ಯಾರಿಗಾಗಿ ಯಾರು ಕಾಯುತ ಬದುಕಿದ್ದಾರೋ ಕಾಣೆ
ಚಂದ್ರನ ತಂಪ ಹೀರಲು ಚಕೋರವಾಗಿ ಕುಳಿತಿದ್ದೇನೆ
ಏಸೋ ಜನರ ಮುಖಗಳು ನೆನಪಿನಿಂದ ಬೇಗ ಮರೆಯಾಗುತ್ತವೆ
ಆದರೆ ಆ ಮುಖದ ಅಂದ ಆ ಮೆರಗು ಥಳಥಳಿಸುತ್ತಿತ್ತು
ನಾನಿಂದು ಖುಷಿಯಾಗಿರುವೆನೋ, ಉದಾಸವಾಗಿರುವೆನೋ ಅರಿಯೆ
ಏನಿದ್ದರೂ ನಿನ್ನ ಬಳಿ ನೋವುಗಳ ಕಳಿಸುವುದ ಬಿಟ್ಟಿದ್ದೇನೆ
ಯಾರ ನೋವನ್ನು ಯಾರೂ ಕೇಳುವುದಿಲ್ಲ ಈ ಜಗದಲಿ 'ಮುಕ್ತಾ'
ಅಂತೆಯೇ ನಾನು ಎಲ್ಲೆಲ್ಲೂ ಪ್ರೀತಿ ಹುಡುಕುವುದ ಬಿಟ್ಟಿದ್ದೇನೆ

ಮುಟ್ಟದಲ್ಲಿ ಮಿಡಿಯುವ ಈ ಕಾವ್ಯಪಂಕ್ತಿಗಳು ಕನ್ನಡ ಕಾವ್ಯದಲ್ಲಿ ನಿರಂತರವಾಗಿ ಉಳಿಯುತ್ತವೆ ಎನ್ನುವುದರಲ್ಲಿ ಅನುಮಾನವಿರಲು ಸಾಧ್ಯವಿಲ್ಲ.

ಕೊನೆಕೊನೆಯ ಗಜಲುಗಳು ಪ್ರಕೃತಿಯೊಂದಿಗೆ ಅದ್ವೈತವನ್ನು ಸಾಧಿಸಲು ಹವಣಿಸುತ್ತವೆ. ಸ್ವಯವನ್ನೇ ಕಳೆದುಕೊಳ್ಳುವಂತಹ ದುಃಖವೇ ಇರಲಿ, ವಿಫಲ ಪ್ರೇಮವಿರಲಿ, ಜೀವಕಾರುಣ್ಯಕ್ಕಾಗಿ ಅಂಡಲೆದ ಅಸಾಧ್ಯ ದಣಿವಿರಲಿ – ಎಲ್ಲವನ್ನೂ ಆರಿಸಿಬಿಡುವ ಮಾಂತ್ರಿಕ ಪ್ರಕೃತಿಯೊಂದಿಗೆ ಸೇರುವುದಕ್ಕಿಂತ ಭಾಗ್ಯ ಮತ್ತಾವುದು? ಸಕಲ ಸಂದೇಹಗಳು ಬಳಲಿ ಬಳಿಗೈತಂದು ಎನ್ನುತ್ತಾರಲ್ಲ ಪುತಿನ, ಹಾಗೆ ಈತನಕದ ಆಸೆ, ನಿರಾಸೆ, ದುಗುಡ ದುಮ್ಮಾನಗಳು ಈ ಎಲ್ಲವನ್ನೂ ಪ್ರಕೃತಿಯ ಮಡಿಲಲ್ಲಿ ಸುರಿದುಬಿಟ್ಟರೆ ಸಾಕು – ಅದೆಂಥ ಶಾಂತಿ, ನೆಮ್ಮದಿ ಎನ್ನುವ ಅಂತಿಮ ಭರವಸೆಯನ್ನು ಇಲ್ಲಿನ ಕವಿತೆಗಳು ಎತ್ತಿ ಹಿಡಿಯುತ್ತವೆ.

ಮನ ಬಂದತ್ತ ಅಲೆಯುವೆ ನನಗಿಲ್ಲ ದುಃಖ ನೋವು ಸಾವುಗಳು
ಈಸು ದಿನದ ಬಂಧನ ಕಳಚಿ ಆಕಾಶದಲ್ಲಿ ತೇಲಿ ಹೋಗುವೆ
ಯಾವ ಆಕಾಂಕ್ಷೆ ಇಚ್ಚೆ ಇಲ್ಲದೆ ಶೂನ್ಯದಲ್ಲಿ ತೇಲಿ ಹೋಗುವೆ
ಗೊತ್ತು ಗುರಿ ಅಂಕೆಶಂಕೆಯೊಂದೂ ಇಲ್ಲದ 'ಆವಾರಾ' ನಾನು
ನಗುನಗುತ ಕ್ಷಿತಿಜದಾಚೆ ಬಹುದೂರ ಮುಗಿಲಲ್ಲಿ ತೇಲಿಹೋಗುವೆ

ಇಂಥ ನಿಲುವು ಪಲಾಯನವಾದವಲ್ಲ, ಅದು ಧೀರತೆಯ ನಿಲುವು. ಈಸುವ ಸ್ಥೈರ್ಯದ ನಿಲುವು, ಕೊನೆಯ ಕ್ಷಣದವರೆಗೂ ತನ್ನನ್ನೂ ಲೋಕವನ್ನೂ ಪ್ರೀತಿಯಲ್ಲಿ ತೋಯಿಸಿ ಬದುಕು ಮುಗಿಸುವ ಅನಂತ ಪ್ರೀತಿಯ ನಿಲುವು ಇದು.

ಮುಕ್ತಾಯಕ್ಕನವರ ಕಾವ್ಯವನ್ನು ಸದಾ ಪಕ್ಕಕ್ಕಿಟ್ಟ ಕನ್ನಡದ ವಿದ್ವತ್ ಲೋಕ ಈಗಲಾದರೂ ಈ ಅಪ್ಪಟ ಕಾವ್ಯಕ್ಕೆ ಮರಳುವಂತಾಗಲಿ. ಕನ್ನಡ ಕಾವ್ಯ ಪರಂಪರೆಯಲ್ಲಿ ಇವರ ಕಾವ್ಯಕ್ಕೊಂದು ಶಾಶ್ವತ ಸ್ಥಾನವಿದೆ. ಆದರೆ ಅದು ವರ್ತಮಾನವೇ ಆಗಬೇಕಾಗಿರುವುದು ಅವರ ಕಾವ್ಯದ ಹಕ್ಕು.

ನಶಾ ಏರಿದ್ರ ಮಾತ್ರ ಕವಿತಾ ಹುಟ್ಟೋದೇನ್ರಿ?!

8ನೇ ಪುಟದಿಂದ...

ಯಾರೇ ಈ ಮಾಂತ್ರಿಕ ಮದ್ಯವನ್ನು ಕುಡಿದರೆ ಕವಿತೆಯನ್ನು ಬರೆಯಬಹುದಿತ್ತು. ಜಾಣರಾಗಿ ಮಾತನಾಡಬಹುದಿತ್ತು! 'ಕ್ವಾಸಿರ್' ಅರ್ಥವೇ ಪ್ರಬಲವಾದ ಮದ್ಯ! ಸೂಫಿ ಸಂತರ, ಹಲವು ಹಿಂದೂ ಸಂತರ, 'ಬೀಟ್' ಕವಿಗಳ, ಜಾಝ್ ಸಂಗೀತಗಾರರ ಸ್ಫೂರ್ತಿ ಗಾಂಜಾ ಆದ ಬಗೆಗೆ ಹಲವು ಉಲ್ಲೇಖಗಳು ದೊರೆಯುತ್ತವೆ. ಕುಬ್ಲಾ ಖಾನ್ ಎಂಬ ಪ್ರಸಿದ್ಧ ಕವಿತೆಯನ್ನಂತೂ ಸ್ಯಾಮ್ಯುವೆಲ್ ಕೋಲೆರಿಜ್ ಅಫೀಮಿನ ಅಮಲಿನಲ್ಲಿಯೇ ಸೃಷ್ಟಿಸಿದನಂತೆ.

ನಮ್ಮ ಸುತ್ತಮುತ್ತಲಲ್ಲೇ ಸ್ವಲ್ಪ ಕಣ್ಣು ಹಾಯಿಸಿ ನೋಡೋಣ. ತತ್‌ಕ್ಷಣಕ್ಕೆ ಹತ್ತು ಜನ ಸಂಗೀತಗಾರರು/ನಾಟಕ ಕಲಾವಿದರು/ನೃತ್ಯ ಕಲಾವಿದರು/ಬರಹಗಾರರು ವಿವಿಧ ಮಾದಕ ದ್ರವ್ಯಗಳನ್ನು ಉಪಯೋಗಿಸುವವರನ್ನು ನಾವು ನೆನಪಿಸಿಕೊಳ್ಳಬಲ್ಲೆವು. ಗುಂಡು ಒಳಗೆ ಹೋಗದೆ ತಲೆ ಓಡುವುದಿಲ್ಲ/ಸಿಗರೇಟು ಹಚ್ಚದೆ ಕೈ ಮುಂದೆ ಸಾಗುವುದಿಲ್ಲ/ಅವರು ಕುಡಿದು ವೇದಿಕೆ ಮೇಲೆ ಬಂದರೆ ಮಾತ್ರ ನಾಟಕ ಮಾಡುತ್ತಾರೆ/ಹಾಡುತ್ತಾರೆ. ಹೀಗೆ ಹಲವು ಸತ್ಯಗಳು / ಊಹಾಪೋಹಗಳು ಜನರ ಮಧ್ಯೆ ಓಡಾಡುತ್ತವೆ.

ಸೃಜನಶೀಲತೆಗೂ-ಮಾದಕದ್ರವ್ಯಗಳಿಗೂ ಇರುವ ಸಂಬಂಧವನ್ನು ಎಚ್ಚರದಿಂದ ನಾವು ಗಮನಿಸಬೇಕಾಗುತ್ತದೆ. ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಸತ್ಯಗಳನ್ನೂ ಊಹೆಯನ್ನೂ ಮಿಥ್ಯೆಗಳನ್ನೂ ಬೇರ್ಪಡಿಸಬೇಕಾಗುತ್ತದೆ. ಏಕೆಂದರೆ ಸೃಜನಶೀಲತೆ-ಮಾದಕದ್ರವ್ಯಗಳಿಗೆ ಇತಿಹಾಸದ ಕೆಲವು ಘಟನೆಗಳನ್ನಷ್ಟೇ ಗಮನಿಸಿ ನಾವು ನಂಟನ್ನು ಕಲ್ಪಿಸಿಬಿಟ್ಟರೆ ಅದರಿಂದ ಹಲವು ಅಪಾಯಗಳಿವೆ. ಮೊದಲನೆಯದು ಬಿ.ಎ. ವಿದ್ಯಾರ್ಥಿ ನನ್ನನ್ನು ಪ್ರಶ್ನಿಸಿದ ಹಾಗೆ 'ಕವಿತೆ/ಕಥೆ ಹುಟ್ಟಬೇಕೆನಿಸಿದರೆ ನಶೆ ಬೇಕೇ ಬೇಕು' ಎಂಬ ಭಾವನೆ ಜನರ ವಿಶೇಷವಾಗಿ ಯುವಜನರ ಮನಸ್ಸಿನಲ್ಲಿ ಕುಳಿತುಬಿಡಬಹುದು. ಅದರ ಪರಿಣಾಮ ಯುವಜನರು ಕವಿತೆ -ಕತೆ ಬರೆಯುತ್ತಾರೋ ಇಲ್ಲವೋ, ಮಾದಕದ್ರವ್ಯಗಳ ನಶೆಯಲ್ಲಿ ತೇಲುವಂತೆ ಆಗಿಬಿಟ್ಟರೆ?!

ಮತ್ತೊಂದು ಅಪಾಯವೆಂದರೆ, ತಮ್ಮ ಸೃಜನಶೀಲತೆಗೆ ಮಾದಕವಸ್ತು ಬೇಕೇ ಬೇಕು ಎಂದು ನಂಬಿ, ಕವಿಗಳು-ಕಲಾವಿದರು ಮಾದಕದ್ರವ್ಯಗಳಿಗೆ ಬಲಿಯಾಗಿ ಕುಟುಂಬ-ಆರೋಗ್ಯ-ಪ್ರಾಣ ಎಲ್ಲವನ್ನೂ ಕಳೆದುಕೊಳ್ಳುವುದು. ಇದೇ ನಂಬಿಕೆಯ ನೇರ ಪ್ರಭಾವವೇ ತಮ್ಮ ಮಾದಕದ್ರವ್ಯ ಬಳಸುವಿಕೆಯಿಂದ ಸಾಕಷ್ಟು ಸಮಸ್ಯೆಗಳಿದ್ದರೂ, ಅದರಿಂದ ಹೊರಬರಲು ಚಿಕಿತ್ಸೆಯ ಲಭ್ಯವಿದೆಯೆಂದರೂ, ಸಮಾಜದ ಈ ಕೆನೆಪದರ ವೈದ್ಯಕೀಯ ಸಲಹೆ ಪಡೆಯಲು ಹಿಂಜರಿಯುವುದು. ನಾವು ಗಮನಿಸದಿರುವ ಮತ್ತೊಂದು ಸಮಸ್ಯೆಯೆಂದರೆ, ಜನರು ತಮ್ಮ ಮಕ್ಕಳಿಗೆ ಕಾವ್ಯ-ಕಲೆಯ ಪ್ರತಿಭೆಗಳಿದ್ದರೂ, ಕಲೆಯ ಜಾಡಿನ ಜೊತೆ ಕೆಟ್ಟ ಹಾದಿಯನ್ನೂ ಹಿಡಿದರೆ ಎಂಬ ಭಯದಿಂದ ಕಲೆ-ಕಾವ್ಯ-ಸಾಹಿತ್ಯ ರಚನೆಗೇ ತಡೆಯೊಡ್ಡುವುದು. ಇತ್ತೀಚೆಗಿನ ಸಿನಿಮಾರಂಗದ ಮಾದಕವಸ್ತು ಹಗರಣಗಳನ್ನು ನೋಡಿದರೆ ಇದರಲ್ಲಿ ಸತ್ಯಾಂಶವೂ ಇದೆ ಎನಿಸದಿರದು.

ತಮ್ಮ ವ್ಯಸನವನ್ನು ಮುಕ್ತವಾಗಿ ಒಪ್ಪಿಕೊಂಡವರು, ಮುಚ್ಚಿಟ್ಟು-ಆತ್ಮೀಯರೆದುರಿಗೆ ಮಾತ್ರ ತೆರೆದಿಟ್ಟು ಒಳಗೊಳಗೇ ನರಳುವವರು, ತಮ್ಮ ವ್ಯಸನವನ್ನೇ ಗರ್ವವಾಗಿಸಿಕೊಂಡವರು, ವ್ಯಸನದಿಂದ ಅಕಾಲಿಕವಾಗಿ ಮರಣ ಹೊಂದಿದವರು -ಹೀಗೆ ವಿವಿಧ ವರ್ಗದವರನ್ನು ಕಲಾ ಜಗತ್ತಿನ ತುಂಬೆಲ್ಲ ನೋಡಬಹುದು. ಆಗಲೇ ನನಗನ್ನಿಸುವುದು, ಇವರೆಲ್ಲರ ವ್ಯಸನಕ್ಕೆ ಹಲವು ಆಯಾಮಗಳಿವೆ. ಒಮ್ಮೆ ಕಲಾಕ್ಷೇತ್ರಕ್ಕೆ ಕಾಲಿರಿಸಿ, ಪ್ರಸಿದ್ಧಿ ಬರಲಾರಂಭಿಸಿದಂತೆ ಕಲಾವಿದ/ಕವಿ ಜನರಿಂದ ಬೇರೆಯಾಗಿ, ಎದ್ದು ನಿಲ್ಲುತ್ತಾನೆ. ಮೇಲೇರಿದಂತೆ ಒಂಟಿತನವೂ ಹೆಚ್ಚಾಗುತ್ತದೆ. 'ಮೇಲೆ'ಯೇ ಇರಬೇಕಾದ ಒತ್ತಡ ಹೆಚ್ಚುತ್ತದೆ. ಸಂತೋಷದ ದಾರಿ, ಪ್ರಸಿದ್ಧಿಯ ಹಾದಿ ಎರಡೂ ಒಂದೇ ಆಗಿರುವುದು ಕಡಿಮೆಯೇ. ಹಾಗೆಯೇ ಪ್ರಸಿದ್ಧಿಯೇ ಒಂದು ಮಾದಕ ದ್ರವ್ಯದಂತೆಯೇ ಕೆಲಸ ಮಾಡಲೂ ಸಾಧ್ಯವಿದೆ!

ಮಾದಕ ದ್ರವ್ಯಗಳ ಲಭ್ಯತೆ ಸುಲಭವಾಗುತ್ತದೆ; ಸಾಮಾಜಿಕವಾಗಿ ತನ್ನದೇ ರೀತಿಯ ಜನರೊಡನೆ ಬೆರೆತಾಗ, ಮಾದಕ ದ್ರವ್ಯ ಸೇವನೆ ಮಾಮೂಲು ಎನಿಸುತ್ತದೆ. ಬೇರೆ ವೃತ್ತಿಗಳಲ್ಲಿ-ಸಾಮಾನ್ಯ ಜನರಲ್ಲಿಯೂ ಸಾಧ್ಯವಿರಬಹುದಲ್ಲ? ಇರಬಹುದು. ಆದರೆ ಕವಿಗಳು-ಕಲಾವಿದರನ್ನು-ಪ್ರಸಿದ್ಧರನ್ನು ನಾವು ಗಮನಿಸುವುದು, ಕುತೂಹಲದಿಂದ ಅವರ ಬಗ್ಗೆ ಓದುವುದು, ನಾವು ಓದುತ್ತೇವೆಂದು ಮಾಧ್ಯಮಗಳು ಸುದ್ದಿ ಮಾಡುವುದು ಹೆಚ್ಚಷ್ಟೆ. ಹಾಗಾಗಿ ಇರುವ ಪ್ರಮಾಣಕ್ಕಿಂತ ಹೆಚ್ಚು ಸುದ್ದಿಯಾಗುವುದು ಮಾದಕ ದ್ರವ್ಯ ಮತ್ತು ಕಲೆಯ ವಿಷಯದಲ್ಲಿಯೂ ಕಂಡುಬರುತ್ತದೆ. ಹಿಂದಿ ಸಿನಿಮಾ ನಟಿ ಪೂಜಾಭಟ್ ಹೇಳಿರುವ ಮಾತುಗಳು ನೆನಪಾಗುತ್ತವೆ. 'ಬಣ್ಣದ-ಬೆಳಕಿನ ಬದುಕು, ಒತ್ತಡದ ವೃತ್ತಿಗಳ ನಡುವೆ ಮದ್ಯ ಸಂಭ್ರಮಿಸುವ, ವೈಫಲ್ಯದಿಂದ ಚೇತರಿಸಿಕೊಳ್ಳುವ ಸಾಧನವಾಗಿಬಿಡುತ್ತದೆ. ಫಿಲ್ಮ್ ಹಿಟ್ಟಾದರೆ ಶ್ಯಾಂಪೇನ್‌ನಲ್ಲಿ ಸಂಭ್ರಮ, ಫ್ಲಾಪ್ ಆಯಿತೆಂದರೆ ನೋವು ಮರೆಯಲು ಸಿಂಗಲ್ ಮಾಲ್ಟ್‌ನಲ್ಲಿ ಮುಳುಗುವುದು'.

ನಿಜವಾಗಿಯೂ ಮಾದಕ ದ್ರವ್ಯಗಳು ಸೃಜನಶೀಲತೆಯನ್ನು ಅರಳಿಸಬಲ್ಲವೆ ಎಂಬ ಬಗ್ಗೆ ಅಧ್ಯಯನಗಳು ನಡೆದಿವೆ. ಎಲ್‌ಎಸ್‌ಡಿ-ಗಾಂಜಾಗಳ ಸೇವನೆಯಲ್ಲಿ ಅನುಭವವಾಗುವ 'ಸಂಗೀತವನ್ನು ನೋಡುವ', 'ಬಣ್ಣವನ್ನು ಕೇಳುವ' ಪ್ರಕ್ರಿಯೆಗಳು ಸೃಜನಶೀಲ ಯೋಚನೆಗಳನ್ನು ಮತ್ತಷ್ಟು ತೀವ್ರವಾಗಿಸಬಹುದು ಎಂದು ತೋರಿಸಿದೆ. ಆದರೆ ಸೃಜನಶೀಲತೆಗೆ ಅತ್ಯವಶ್ಯಕವಾದ Divergent thinking - 'ಭಿನ್ನವಾದ ಯೋಚನಾರೀತಿ'ಯಲ್ಲಿ ಕೊರತೆಯುಂಟಾಗುತ್ತದೆ ಎಂದೂ ಅಧ್ಯಯನಗಳು ತೋರಿಸಿವೆ.

ಅಷ್ಟೇ ಅಲ್ಲ, ಕವಿತೆ ಹುಟ್ಟಲಾಗಲಿ, ಕೃತಿಯ ಸೃಷ್ಟಿಗಾಗಲಿ ಆ ತಕ್ಷಣದ ಸ್ಫೂರ್ತಿಯೊಂದೇ ಕಾರಣವಾಗದಷ್ಟೆ. ಆಯೋಜನೆ-ವರ್ಗೀಕರಣ-ಭೇದನಗಳ (Organize - categolize-differentiate) ಮೂಲಕ ಜಾಗೃತ ಅನುಭವವನ್ನು ವಿಶ್ಲೇಷಿಸುವ ಸೃಜನಶೀಲತೆಯ ಅಂಶಗಳು ಮಾದಕದ್ರವ್ಯಗಳ ಪರಿಣಾಮದಿಂದ ಬಹುವಾಗಿ ಧಕ್ಕೆಗೆ ಒಳಗಾಗುತ್ತವೆ. ಹಾಗಾಗಿ ಸೃಜನಶೀಲತೆ ಹೆಚ್ಚುವುದರ ಬದಲು ಕುಗ್ಗುತ್ತದೆ. ಸಂಗೀತ-ಸಾಹಿತ್ಯ-ಕಲಾಸೃಷ್ಟಿ ಸಾಕಷ್ಟು ಒತ್ತಡ ತರಲು ಸಾಧ್ಯವಿದೆ. ಅಂತಹ ಒತ್ತಡದಿಂದ ಹೊರಬರಲು, ವಾಸ್ತವದಿಂದ ದೂರವಾಗಲು ಕಲಾವಿದರು ಮಾದಕ ದ್ರವ್ಯಗಳನ್ನು ಉಪಯೋಗಿಸುವ ಸಾಧ್ಯತೆಯೇ ಹೆಚ್ಚು. ತಮ್ಮ ಕಲೆಯ ಸಾಧನವಾಗಲ್ಲ!

ಸುರಾದೇವಿಯ ಬಗೆಗೆ ಮಾತನಾಡುವಾಗ ಕಲೆಯ ತಾಯಿ ಸರಸ್ವತಿಯ ಬಗೆಗೂ ನಾವು ನೆನಪಿಸಿಕೊಳ್ಳಬೇಕು! ಎಸ್.ಎಲ್. ಭೈರಪ್ಪನವರ 'ದೂರ ಸರಿದರು' ಕಾದಂಬರಿಯ ನಾಯಕ ಕಥೆಗಾರ ಸಚ್ಚಿದಾನಂದ ತನ್ನ ಟಿಪ್ಪಣಿಯಲ್ಲಿ ಹೀಗೆ ಬರೆಯುತ್ತಾನೆ, 'ಜೀವನದಲ್ಲಿ ನಿರಾಶರಾದವರು ಸಾಮಾನ್ಯವಾಗಿ ಮದ್ಯಪಾನದಲ್ಲಿ ಮರೆಯುತ್ತಾರಂತೆ. ಅದರ ಬದಲು ಅವರು ನನ್ನಂತೆ ಕುಳಿತು ಯಾಕೆ ಓದಬಾರದು? ಸುರಾದೇವಿ, ಸರಸ್ವತಿ, ಇಬ್ಬರಲ್ಲಿಯೂ ಒಂದೇ ಗುಣವಿದೆ. ನಮಗೆ ಮರೆಯುವ ಶಕ್ತಿ ಕೊಡುವುದು'.

ಸೃಜನಶೀಲತೆಯನ್ನು ಮನೋವೈದ್ಯ ವಿಜ್ಞಾನಿ ಯೂಂಗ್ ಹೆಣ್ಣು ಗುಣವೆನ್ನುತ್ತಾನೆ. ಒಂದು ಗರ್ಭಧಾರಣೆ ನಡೆದು, ದೀರ್ಘಕಾಲ ಗರ್ಭದೊಳಗಿಂದ ಶಿಶು ರೂಪುಗೊಳ್ಳುವ ಹಾಗೆ ಕವಿತೆಯ ಹುಟ್ಟು ಎನ್ನುತ್ತಾನೆ. ಮನೋವೈದ್ಯೆಯಾಗಿ ನನಗೆ ಮದ್ಯ-ಮಾದಕ ದ್ರವ್ಯಗಳು ಗರ್ಭಿಣಿ ಸ್ತ್ರೀಯ -ಗರ್ಭಸ್ಥ ಶಿಶುವಿನ ಮೇಲೆ ಬೀರುವ ದುಷ್ಪರಿಣಾಮದಂತೆಯೇ 'ಕವಿತೆ' ಎಂಬ ಮಗು, 'ಕವಿ' ಎಂಬ ತಾಯಿಯ ಮೇಲೂ ಬೀರಬಹುದು ಎನಿಸುತ್ತದೆ!

ಪಂಡಿತ ಭೀಮಸೇನ ಜೋಶಿಯವರನ್ನು ಕುರಿತು ಡಾ. ನಾಗರಾಜರಾವ್ ಹವಾಲ್ದಾರ್ ಬರೆದಿರುವ ಪುಸ್ತಕದಲ್ಲಿ 'ವಿಲಂಬಿತದಿಂದ 'ಮದ್ಯ' ಲಯದೆಡೆಗೆ' ಎಂಬ ಅಧ್ಯಾಯ ಕಲೆ-ಕಲಾವಿದ-ಮಾದಕ ದ್ರವ್ಯ ವ್ಯಸನಗಳ ಬಗೆಗೆ ಹಲವು ಸಂಗತಿಗಳನ್ನು ತೆರೆದಿಡುತ್ತದೆ. ಭೀಮಸೇನ ಜೋಶಿಯವರ ಮಗಳು ಶುಭದಾ ಮುಳಗುಂದ ಅವರ 'ಹೊರಗಿನವರಿಗೆ ರಂಜಕ-ರೋಚಕ-ಕಾಲಹರಣ ಗಾಸಿಪ್. ಆದರೆ ಮನೆಯವರಿಗೆ ಗಂಭೀರ ಸಮಸ್ಯೆ' ಎಂಬ ಮಾತುಗಳು ಮನ ಮುಟ್ಟುತ್ತವೆ. ನಂತರ ಯಶಸ್ವಿಯಾಗಿ ಚಿಕಿತ್ಸೆ ಪಡೆದು, ಅವರು ವ್ಯಸನಮುಕ್ತರಾಗಿ 'ಸಂಗೀತ-ಕಲಿಕೆ-ಸಾಧನೆಗಳೇ ಅಮಲಾಗಿದ್ದನ್ನೂ' ಹವಾಲ್ದಾರ್ ಅವರು ಬಣ್ಣಿಸಿರುವುದು ವಿಶೇಷವೇ!

ಹಾಸ್ಯಗಾರ ಅರ್ಥರ್ ಕ್ರ್ಯಾಮರ್ Homily for Art students (ಕಲಾ ವಿದ್ಯಾರ್ಥಿಗಳಿಗೊಂದು ಧರ್ಮೋಪದೇಶ) ಎಂದು ಪ್ರಕಟಿಸಿರುವ ಸಾಲುಗಳು ನನಗೆ ಅರ್ಥಪೂರ್ಣ ಎನಿಸುತ್ತವೆ.

ಟರ್ನರ್‌ಸ್ ಡ್ಯೂರರ್‌ಸ್ ಅಥವಾ ಬೆಲ್ಲಿನಿಸ್
'ಡ್ರೈ ಮಾರ್ಟಿನಿ'ಗಳಿಂದ ಬರಲಾರರು
ಗೋಯಾನ ಜೀನಿಯಸ್ ರೂಬೆನ್‌ನ ಬಲ
ಹುಳಿ ವಿಸ್ಕಿಯಿಂದ ಹೊರ ಬರದು.
ಬಿಸಿ ಮಾಡುವ ಬ್ರಾಂಡಿ, ಬಲವಾದ ಸಿಡರ್
ಹಾಲ್ಬೀನ್-ರೈಡರ್‌ಸ್‌ರನ್ನು ತರಲು ಸಾಧ್ಯವಿಲ್ಲ.
ಪೆರುಗಿನೋ, ಇಂಗ್ರೆಸ್, ಗಿಯೋಟ್ಟೋ
ಡಬಲ್ ಸ್ಕಾಚ್‌ಗಳಿಂದ ಹುಟ್ಟಲಿಲ್ಲ
ಕುಡಿಯುವುದು 'ಕ್ರಿಯೇಟಿವಿಟಿ'ಯಲ್ಲ!

ಸುರಾದೇವಿ ಸರಸ್ವತಿಯಾಗಲು ಸಾಧ್ಯವಿಲ್ಲ! 'ನಶೆ'ಯಲ್ಲಿ ಕವಿತೆ ಹುಟ್ಟುವುದೋ, ಇಲ್ಲವೋ, ಅನಾರೋಗ್ಯ-ಅಪಾರ ನೋವು, ನಶೆ ಏರಿದವರಿಗೆ, ಅವರ ಆತ್ಮೀಯರಿಗೆ ಕಾಡುವುದು ಖಂಡಿತ!

ವಿದುಷಿ ಆರತಿ ಅಂಕಲಿಕರ್

‘ನಾವೇ ರಾಗವಾಗಿ ರಾಗವೇ ನಾವಾಗಿ

ಹಾಡೆಂಬುದು ಭಾವನಾತ್ಮಕವಾದುದು. ಹಾಗೆಂದು ಭಾವದುಂಬುವುದು ಅಷ್ಟು ಸರಳವಲ್ಲ... ಒಂದೇ ಸಾಲಿನಲ್ಲಿ, ಶೃಂಗಾರ, ಮುನಿಸು, ಸೆಡವು, ಜಗಳ ಇವುಗಳ ಲಾಲಿತ್ಯ ಎಲ್ಲವೂ ಬರಬೇಕು... ಹೀಗೆ ಸಂಗೀತದ ಆಚೀಚೆಗಿನ ಒಳಹೊರಗನ್ನು ತೆರೆದರು ಆರತಿ ಅಂಕಲೀಕರ್. ಅವರ ಮಾತಿನಲ್ಲಿ ಖುಷಿಯೂ ಇತ್ತು. ಇನ್‌ಸ್ಟಂಟ್ ಯುಗದ ಬಗೆಗೆ ವಿಷಾದವೂ ಇತ್ತು

ರಶ್ಮಿ ಎಸ್.

ಸಂಗೀತ, ಇದು ನಿಮ್ಮನ್ನು ನಿಮ್ಮೊಂದಿಗೆ ಒಗ್ಗೂಡಿಸುವ ಮಾರ್ಗ. ನಿಮ್ಮನ್ನು ಬ್ರಹ್ಮಾಂಡದೊಂದಿಗೆ ಒಂದಾಗಿಸುವ ಮಾಧ್ಯಮ. ಎಲ್ಲದರಲ್ಲಿಯೂ ಸಂಗೀತವಿದೆ. ನಾದವಿದೆ, ರಾಗವಿದೆ. ಹಾಡುವಾಗ ಅವು ನಮ್ಮ ಮೈದುಂಬಿ ಬಂದಾಗ, ನಾವೇ ರಾಗಗಳಾಗುತ್ತೇವೆ...

ಕಡುಗುಲಾಬಿ ಸೀರೆಯುಟ್ಟು, ಉದ್ದನೆಯ ತಿಲಕದ ಮೇಲೊಂದು ಬೊಟ್ಟಿಟ್ಟು, ಇನಿದನಿಯಲ್ಲಿ ಮಾತನಾಡುತ್ತಿದ್ದ ವಿದುಷಿ ಆರತಿ ಅಂಕಲಿಕರ್ ತಮ್ಮ ಸಂಗೀತಯಾನದ ಕುರಿತು ಪದಗಳಾಗುತ್ತಿದ್ದರು. ಅಲ್ಲಲ್ಲಿ ಸಂಗೀತದ ಹದವೂ ಕಾಣುತ್ತಿತ್ತು.

‘ನಮ್ಮನೆಯಲ್ಲಿ ಸಂಗೀತದ ವಾತಾವರಣ ಇತ್ತು. ಅಪ್ಪ ಆ ಕಾಲದಲ್ಲಿಯೇ ಬ್ಯಾರಿಸ್ಟರ್ ಆಗಿದ್ದರು. ಅಮ್ಮ ಗೃಹಿಣಿ. ಅಮ್ಮನಿಗೆ ಧಾರವಾಡ ತವರು ಮನೆ. ಹಂಗಾಗಿ ಸಂಗೀತವೆಂಬುದು, ಮಣ್ಣಿನ ಗುಣ ಇದ್ದಂತೆ ನಮಗೆ ನರನಾಡಿಯಲ್ಲಿ ಹರಿಯುತ್ತಿತ್ತು. ಅಭ್ಯಾಸ ಮಾಡಬೇಕು, ಕಲಿಯಬೇಕು ಅನ್ನುವುದಕ್ಕಿಂತಲೂ ಅದರಲ್ಲಿ ಕಳೆದುಹೋಗಬೇಕು, ಅದನ್ನು ಗ್ರಹಿಸಬೇಕು ಎನ್ನುವತ್ತಲೇ ಪೋಷಕರು ಹೆಚ್ಚು ಗಮನ ಕೊಟ್ಟರು. ಮೂಲ ವಿಜಯಪುರ ಜಿಲ್ಲೆಯವರಾದರೂ ಅಲ್ಲಿ ಇರಲಿಲ್ಲ. ಇಲ್ಲಿ ಬೆಳೆಯಲಿಲ್ಲ. ಆದರೆ ಎಲ್ಲ ಬೇಸಿಗೆಯ ರಜೆಗಳೂ ಧಾರವಾಡದ ಅಜ್ಜನ ಮನೆಯಲ್ಲಿ ಕಳೆದೆ.’ ಎಂದರು ಆರತಿ.

ಧಾರವಾಡದತ್ತ ಮನ, ಗಮನಗಳೆರಡೂ ಬಂದಾಗ ಕಣ್ಣೊಳೆದವು. ತುಟಿನಾವಿಯಾಗಿ ನಗೆ ಅರಳಿತು. ‘ಅದೊಂದು ಸುಂದರವಾದ ಕಾಲ. ಟಿ.ವಿ ಇರಲಿಲ್ಲ. ಧಾರವಾಡದ ತುಂಬೆಲ್ಲ ಮಾವಿನ ತೋಟಗಳು. ಬೇಸಿಗೆಯ ರಜೆ ಸಮಯ ಆಗಿರುವುದರಿಂದ ಆ ನವಿರಾದ ವಾಸನೆ ಎಲ್ಲೆಡೆ ಹರಡಿರುತ್ತಿತ್ತು. ಬಣ್ಣಬಣ್ಣದ ಹೂಗಳು, ಕೆಂಬಣ್ಣದ ಮಣ್ಣು, ಕಡುಬಿಸಿಲೆಂದು ಪರಿತಪಿಸುವಾಗಲೇ ಮಳೆ ಬಂದು ಇಳೆ ತಣ್ಣಗಾಗುವ ಪರಿ... ಎಷ್ಟು ಚಂದದ ದಿನಗಳವು...’ ಎಂದು ಸ್ಮರಿಸಿದರು.

‘ಧಾರವಾಡ ಈಗಲೂ ಹಾಗೇ ಇದೆ. ಒಂದಷ್ಟು ಕಟ್ಟಡ ಸಂಸ್ಕೃತಿ ಬದಲಾಗಿದ್ದು ಬಿಟ್ಟರೆ, ಇನ್ನೆಲ್ಲವೂ ಹಾಗೆ ಇದೆ. ಹಾಗೆಯೇ ಉಳಿಸಿಕೊಳ್ಳಬೇಕು, ಇಲ್ಲಿಯ ಜನ...’ ಎನ್ನುತ್ತಾ ಮಾತನ್ನು ಸಂಗೀತದ ಕಡೆಗೆ ಹೊರಳಿಸಿದರು.

‘ಸಂಗೀತ ನಮ್ಮನ್ನು, ನಮ್ಮಲ್ಲಿಯೇ ಕಳೆದುಹೋಗುವಂತೆ ಮಾಡುತ್ತದೆ. ಕಿಶೋರಿ ತಾಯಿ ಬಳಿ ಸಂಗೀತ ಕಲಿಯುವಾಗ ಒಂದು ತಿಂಗಳು, ಬೆಳಗಿನ ನಾಲ್ಕು ಗಂಟೆ, ಸಂಜೆಗೂ ನಾಲ್ಕು ಗಂಟೆ ರಿಯಾಜ್ ಮಾಡಿಸುತ್ತಿದ್ದರು. ಒಂದಿಡೀ ತಿಂಗಳು ಯಮನ್ ಕಲಿಯಲು ತಿಳಿಸಿದ್ದರು. ಬರಬರುತ್ತ ಬರಬರುತ್ತ.. ಆ ರಾಗದಲ್ಲಿ ಲೀನವಾಗುವುದು ಕಲಿತೆ. ನಂತರ ರಾಗವೇ ನಾನಾಗುವುದು ಕಲಿತೆ. ಅದೊಂದು ಪ್ರಕ್ರಿಯೆ. ನಿಧಾನಕ್ಕೆ ಆಗುವಂಥದ್ದು...’ ಎಂದು ರಿಯಾಜ್‌ನ ಮಹತ್ವ ತಿಳಿಸಿಕೊಟ್ಟರು.

‘ಈಗ ಬಾಗೇಶ್ರಿ, ಯಮನ್, ಭೈರವಿ, ಮಧುರಂಜನಿ ಯಾವುದೇ ರಾಗವಿರಲಿ, ಆ ರಾಗವಿಲಾಸದಲ್ಲಿ ಮಾನಸೋಲ್ಲಾಸ ಹೆಚ್ಚಾಗುತ್ತದೆ. ಗಾಯಕಿಯ ಸುಖವೇ ಇದರಲ್ಲಿದೆ. ಕೇಳ್ವಿಕೆಯ ರಸಾಸ್ವಾದ ಕೇಳುಗರ ಕಂಗಳಲ್ಲಿ ಎದ್ದು ಕಾಣುತ್ತದೆ. ಒಬ್ಬ ಸಂಗೀತಗಾರ, ತಾನ್‌ಪುರಾದ ಜೊತೆಗೆ ಮೊದಲ ಹದಿನೈದು ನಿಮಿಷ ಸಂವಾದಿಯಾಗುವಂತೆ ಕಳೆದು ಹೋಗುವುದಾದರೆ.. ಅದಕ್ಕಿಂತ ಬೇರೆ ತಪವೇ ಬೇಡ. ಹಾಡು ಹಾಡದೇ ತಾನ್‌ಪುರಾದ ಶ್ರುತಿಯೊಂದಿಗೆ ಒಂದಾಗಬೇಕು. ಹಾಗೆ ಒಂದಾದಾಗ ಆ ನಾದದೊಳಗೆ ನಾವಿರಬೇಕು. ನಾವು ನಾದವಾಗುತ್ತ ಆಗುತ್ತ ಹಾಡುಗಾರಿಕೆಗೆ ಇಳಿಯಬೇಕು. ಈ ಸಂಯಮ ಬಂದಾಗಲೇ ಸಂಗೀತವೆನ್ನುವುದು ತಪವಾಗುತ್ತದೆ.’ ಎಂದು ಹೇಳಿದರು.

‘ಹಾಡು, ಹಾಡೆಂಬುದು ಭಾವನಾತ್ಮಕವಾದುದು. ರಿಯಾಜ್ ಮಾಡಿದರೆ ರಾಗಗಳ ಪರಿಚಯ ಆಗುತ್ತದೆ. ಸಾಹಿತ್ಯದ ಅಭ್ಯಾಸ ಮಾಡಿದರೆ ರಸಗ್ರಹಣ ಮಾಡಬಹುದು. ಭಾವದುಂಬುವುದು ಅಷ್ಟು ಸರಳವಲ್ಲ... ಒಂದೇ ಸಾಲಿನಲ್ಲಿ, ಶೃಂಗಾರ, ಮುನಿಸು, ಸೆಡವು, ಜಗಳ ಇವುಗಳ ಲಾಲಿತ್ಯ ಎಲ್ಲವೂ ಬರಬೇಕು... ಸಂಯ್ಯಾ... ಮೋರೆ... ಅಂದಾಗ ಅಲ್ಲಿ ಆರಾಧನೆ, ಅಕ್ಕರೆಯ ಅರಕೆ, ಸಣ್ಣದಾದ ಮುನಿಸು, ಕಾಣದ ರಮಿಸುವಿಕೆ ಎಲ್ಲವೂ ಇರಬೇಕು. ನಮ್ಮ ಆಲಾಪನೆ, ಧ್ವನಿ ಎಲ್ಲವೂ ಇಲ್ಲಿ ಆಟವಾಡುತ್ತಿರಬೇಕು. ಪರ್ವತದಿಂದ ನದಿ ಕಣಿವೆಗೆ ಇಳಿದಂತೆ... ಉಕ್ಕಿಳಿಯುವಂತೆ, ಓಡುವಂತೆ, ಜುಳುಜುಳು ಹರಿಯುವಂತೆ...’ ಹೀಗೆಂದು ಮಾತಿಗೆ ಅಲ್ಪವಿರಾಮವಿಟ್ಟು, ‘ಭಾಳಾಯ್ತಿದು.. ಸಂಗೀತದ ಮಾತು...’ ಎಂದರು.

‘ಒಂದಂತೂ ಖರೆ, ನಮ್ಮಣ್ಣಗ ಡೌನ್ ಸಿಂಡ್ರೋಮ್ ಇತ್ತು. ಸ್ವಲೀನ ಮಗು ಅದು. ಅಪ್ಪ, ಅಮ್ಮ ಆಗ ಆ ಕಾಲದಲ್ಲಿಯೇ ಸಂಗೀತವನ್ನು ವೃತ್ತಿ ಮಾಡಿಕೊಳ್ಳುವಷ್ಟು ಕಲಿಸಿದರು. ಸ್ವಾತಂತ್ರ್ಯ ನೀಡಿದರು. ಹೆಣ್ಣುಮಗುವೆಂದು ಕಡೆಗಣಿಸಲಿಲ್ಲ. ಈ ಸ್ವತಂತ್ರ ಮನೋಭಾವ ನನ್ನನ್ನು ಸ್ವಾವಲಂಬಿಯಾಗಿಸಿತು. ಸ್ವಾವಲಂಬಿ ಅಂದ್ರೆ ಕೇವಲ ಆದಾಯದ ವಿಷಯವಲ್ಲ, ಭಾವನಾತ್ಮಕವಾಗಿಯೂ, ಸ್ವತಂತ್ರವಾಗಿ ಯೋಚಿಸುವ, ನಿರ್ಧರಿಸುವ, ತೀರ್ಮಾನ ಕೈಗೊಳ್ಳುವ ಎಲ್ಲ ಕೌಶಲಗಳನ್ನೂ ಕಲಿಸಿಕೊಟ್ಟರು. ಮಕ್ಕಳು ಮಕ್ಕಳಾಗಿಯೇ ಬೆಳೆಯುವಾಗ ತಮ್ಮ ಪಥವನ್ನು ತಾವು ಆರಿಸಿಕೊಳ್ಳುತ್ತಾರೆ. ಪೋಷಕರಾದವರು ಆ ಮಾರ್ಗವನ್ನು ಸರಾಗವಾಗಿಸಬೇಕು. ದೃಢನಿಶ್ಚಯ, ಗುರಿ ನಿರ್ಧಾರ, ಪರಿಶ್ರಮ ಇವಿಷ್ಟಿದ್ದರೆ ಯಶಸ್ಸೆಂಬುದು ಬೆನ್ನಟ್ಟಿ ಬರುತ್ತದೆ.’ ಎಂದು ಹೇಳಿದರು.

‘ಇಂದಿನ ಸಾಮಾಜಿಕ ಜಾಲತಾಣಗಳು ನಮ್ಮನ್ನು ನಮ್ಮಿಂದ ದೂರ ಕಸಿಯುತ್ತಿವೆ. ನಾವು ಯಾರು, ಹೇಗೆ ಇದ್ದೇವೆ, ಏನು ಮಾಡುತ್ತೇವೆ ಇವೆಲ್ಲ ಪ್ರಶ್ನೆಗಳನ್ನು ನಮ್ಮೊಂದಿಗೆ ಸಂವಾದಿಸುವ ಸಮಯವನ್ನೇ ಇವು ನೀಡುತ್ತಿಲ್ಲ. ನಾವು ಹೇಗಿದ್ದೀವಿ ಅನ್ನುವುದಕ್ಕಿಂತಲೂ ಹೇಗೆ ಇತರರಿಗೆ ಚಂದ ಕಾಣ್ತೇವಿ ಅನ್ನುವತ್ತಲೇ ಹೆಚ್ಚು ಗಮನ ಹೋಗುತ್ತಿದೆ. ಒಂದು ಹಾಡು ಕಲಿತ ತಕ್ಷಣ ರೀಲ್ ಮಾಡಿ ಹರಿಬಿಡ್ತಾರೆ. ಆ ಲೈಕುಗಳು, ಕಮೆಂಟುಗಳು ಇವರ ಸಾಧನೆಯ ಸುತ್ತ ಒಂದು ಕೋಟೆ ನಿರ್ಮಿಸುತ್ತಿವೆ. ಸ್ವಮೋಹದಿಂದಾಚೆ ಬಂದು ನಾದಪ್ರಿಯರಾಗುತ್ತ, ನಾದದ ಮೂಲಕ ಭಕ್ತಿಪ್ರಿಯರಾದರೆ... ಬದುಕೆಂಬುದು ಆನಂದಮಯ...’ ಎಂದರು.

‘ಆರತಿ ತಾಯಿ...’ ಅನ್ನುತ್ತಲೇ ಹಲವಾರು ಅಭಿಮಾನಿಗಳು ಅವರಿಗೆ ಮುಗಿಬಿದ್ದರು. ಎಲ್ಲರ ಕ್ಷೇಮಕುಶಲ ವಿಚಾರಿಸಿಕೊಳ್ಳುತ್ತ, ನಗೆಚಟಾಕಿ ಹಾರಿಸುತ್ತ, ಸೆಲ್ಫಿಗೆ ಒಂದು ನಗು ಚೆಲ್ಲುತ್ತ... ಆರತಿ ಅಂಕಲಿಕರ್ ತಮ್ಮ ಮಾತಿಗೆ ಪೂರ್ಣವಿರಾಮವಿತ್ತರು.

ಅವರ ಹಾಡುಗಾರಿಕೆ ಮನದಲ್ಲಿ ಅನುರಣಿಸುತ್ತಿತ್ತು... ಮಾತುಗಾರಿಕೆ ಕೂಡಾ...

ಬಯೋ ಹ್ಯಾಕಿಂಗ್

8ನೇ ಪುಟದಿಂದ...

ಬಹಳ ಮುಖ್ಯವಾಗಿ ಯುವಜನರು ಹಾಗೂ ಸೆಲೆಬ್ರಿಟಿಗಳು ಈ ಬಯೋ ಹ್ಯಾಕಿಂಗ್ ವಿಧಾನಗಳ ಬಗ್ಗೆ ತೀವ್ರ ಕುತೂಹಲಿಗಳೂ ಅದನ್ನು ಬಳಸುವಲ್ಲಿ ಅತ್ಯಂತ ಕಾತರರರೂ ಆಗಿದ್ದಾರೆ. ಕಳೆದ ಅಕ್ಟೋಬರ್‌ನಲ್ಲಿ ಟ್ರಿಸ್ಟಾನ್ ರಾಬರ್ಟ್ಸ್ ಎಂಬ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬ ಎಚ್‌ಐವಿ ವಿರುದ್ಧ ಸಿದ್ಧಪಡಿಸಿದ್ದೆಂದು ಹೇಳಲಾದ ಇನ್ನೂ ವೈಜ್ಞಾನಿಕವಾಗಿ ಸಾಬೀತಾಗದ ಜೀನ್ ಥೆರಪಿ ಔಷಧ ಪ್ರಯೋಗವನ್ನು ತನ್ನ ದೇಹದ ಮೇಲೆಯೇ ಮಾಡಿಕೊಂಡು ಸುದ್ದಿಯಾದರೆ, ಜೋಸಿಯಾಹ್ ಝೇಯ್ನರ್ ಎಂಬ ನಾಸಾದ ವಿಜ್ಞಾನಿಯೊಬ್ಬ ಮಾಂಸಖಂಡಗಳ ಬೆಳವಣಿಗೆಯನ್ನು ವೃದ್ಧಿಸುತ್ತದೆಂದು ಹೇಳಲಾದ ಕ್ರಿಸ್ಪರ್ ಸಿಎಎಸ್ ತಂತ್ರಜ್ಞಾನವನ್ನು ಉಪಯೋಗಿಸಿ ತನ್ನ ವಂಶವಾಹಿಯಲ್ಲಿ ಬದಲಾವಣೆಯನ್ನು ತರಲು ಹೊರಟ. ಅಲ್ಲದೇ ಈ ಔಷಧವನ್ನು ತನ್ನ ದೇಹಕ್ಕೆ ಚುಚ್ಚಿಕೊಳ್ಳುವುದನ್ನು ಯು ಟ್ಯೂಬಿನಲ್ಲಿ ನೇರಪ್ರಸಾರವನ್ನೂ ಮಾಡಿದ. ಹಿಂದಿ ನಟ ಜಾನ್ ಅಬ್ರಹಾಂ ಕೂಡ ಸಂದರ್ಶನವೊಂದರಲ್ಲಿ ತಾನು ತಿನ್ನುವ ಪ್ರತಿ ಅಗುಳನ್ನೂ ತೂಕಮಾಡಿ ತಿನ್ನುತ್ತೇನೆ ಎಂದು ಹೇಳಿರುವುದನ್ನೂ ನಾವಿಲ್ಲಿ ಸ್ಮರಿಸಬಹುದು. ಇವು ನಿಜವಾಗಿಯೂ ಅವರ ದೇಹಾರೋಗ್ಯವನ್ನು ವೃದ್ಧಿಸುವಲ್ಲಿ ಸಹಕಾರಿಯಾದವೋ ಇಲ್ಲವೋ ಹೇಳುವುದು ಕಷ್ಟವಾದರೂ ಜಗತ್ತಿನಲ್ಲಿ ಸೆಲೆಬ್ರಿಟಿಗಳು ಸೇರಿದಂತೆ ಜನಮಾನಸದಲ್ಲಿ ಬಯೋ ಹ್ಯಾಕಿಂಗ್ ಬಗ್ಗೆ ಇರುವ ಕುತೂಹಲವು ಅಗಾಧವಾದುದೆಂದು ನಾವು ತಿಳಿಯಬಹುದು.

ಡಂಕನ್ ಕೀತ್

ಹೇಗೆ ಕೆಲಸ ಮಾಡುತ್ತದೆ?

ಒಂದು ಸಣ್ಣ ಉದಾಹರಣೆಯನ್ನು ನಾವು ಗಮನಿಸೋಣ. ರಾತ್ರಿ ಕೆಲಸ ಮಾಡುವ ಅನಿವಾರ್ಯತೆಯಿದ್ದರೆ ನಿದ್ದೆಯಿಂದ ತಪ್ಪಿಸಿಕೊಳ್ಳಲು ನಾವು ಕಾಫಿ ಕುಡಿಯುವುದು ಸಹಜವಲ್ಲವೇ? ಕಾಫಿ ಕುಡಿಯುವ ಮೊದಲು ನಿದ್ದೆಯ ಮಂಪರು ನಮ್ಮನ್ನು ಕಾಡುತ್ತಿರುತ್ತದೆ. ಆದರೆ, ಕಾಫಿ ಕುಡಿಯುತ್ತಿದ್ದಂತೆಯೇ ನಿದ್ರೆ ಮಾಯವಾಗಿ ನಾವು ಚುರುಕಾಗುತ್ತೇವೆ. ಹಾಗೆಯೇ ಮಧುರವಾದ ಸಂಗೀತ ಕೇಳುವಾಗ ನಮ್ಮ ದೇಹದಲ್ಲಾಗುವ ಅನುಭೂತಿಯೇ ಬೇರೆ, ಜಾರ್ಖ್ ಸಂಗೀತ ಕೇಳುವಾಗ ಆಗುವ ಅನುಭೂತಿಯೇ ಬೇರೆ. ಇದರ ಅರ್ಥ ನಾವು ದೇಹಕ್ಕೆ ಏನನ್ನು ನೀಡುತ್ತೇವೆ ಎಂಬುದರ ಮೇಲೆ ಅದರ ಭಾವನೆಗಳು, ವರ್ತನೆಗಳು ನಿಂತಿರುತ್ತವೆ ಎಂದಲ್ಲವೇ? ಆದುದರಿಂದ ನಮ್ಮ ದೇಹಕ್ಕೆ ಏನನ್ನು ನೀಡಬೇಕು ಎಂಬುದರ ಬಗ್ಗೆ ನಾವು ಆಲೋಚಿಸಿ ನಮ್ಮ ದೇಹಕ್ಕೆ ಯಾವುದು ಹಿತ ಎಂಬುದನ್ನು ಗ್ರಹಿಸಿ, ಜಾಗ್ರತೆಯಾಗಿ ನಮಗೆ ಒಳಿತಾಗುವ ಅಂಶಗಳನ್ನಷ್ಟೇ ನೀಡಬೇಕು.

ಮಾನವನ ದೇಹ ಅತ್ಯಂತ ಸಂಕೀರ್ಣವಾದ ವ್ಯವಸ್ಥೆಯಾಗಿದ್ದು ಅದನ್ನು ಬಹಳ ಸೂಕ್ಷ್ಮವಾಗಿ ಕಾಪಾಡಬೇಕಾಗುತ್ತದೆ. ನಾವೇನು ತಿನ್ನುತ್ತೇವೆ ಎಂಬುದಷ್ಟೇ ಅಲ್ಲ, ಬದಲಾಗಿ ನಮ್ಮ ದೇಹವು ದೈಹಿಕವಾಗಿ, ಮಾನಸಿಕವಾಗಿ ಹಾಗೂ ರೋಗರಹಿತವಾಗಿ ಪರಿಪೂರ್ಣವಾಗಿರಬೇಕಾದರೆ ಏನು ಬಯಸುತ್ತದೆ ಎಂಬುದನ್ನು ನಾವು ಬಹಳ ನಿಖರವಾಗಿ ಗಮನಿಸಿ ಅದರಂತೆ ಪೋಷಿಸಬೇಕು. ಬಯೋ ಹ್ಯಾಕರ್‌ಗಳು ಹೀಗೆ ದೇಹದ ವರ್ತನೆಯನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ದೇಹವು ತಮ್ಮ ಇಚ್ಛೆಯಂತೆಯೇ ನಡೆದುಕೊಳ್ಳುವಂತೆ ನೋಡಿಕೊಳ್ಳುತ್ತಾರೆ.

ಜೋಯಲ್ ಎರಿಕ್ ಪಿಂಟೊ

ಬಯೋ ಹ್ಯಾಕಿಂಗ್ ಪ್ರಸ್ತುತ ಸಂಘಟಿತವಾಗಿ ನಡೆಯುತ್ತಿರುವ ಪ್ರಕ್ರಿಯೆಯೇನಲ್ಲ. ಅದಕ್ಕೆ ನೆರವಾಗುವ ಯಾವುದೇ ಅಧಿಕೃತ ಕಂಪನಿಗಳಾಗಲೀ, ವೇದಿಕೆಗಳಾಗಲೀ ಇಲ್ಲ. ಅಲ್ಲಲ್ಲಿ ಕೆಲವರು ಸೇರಿಕೊಂಡು ಚರ್ಚಾ ವೇದಿಕೆಗಳನ್ನು ಸೃಜಿಸಿಕೊಂಡಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲವಾದರೂ ಇದೊಂದು ಅಧಿಕೃತ ವ್ಯವಸ್ಥೆಯಾಗಿ ಬೆಳೆದಿಲ್ಲ. ಸದ್ಯ ಬಯೋ ಹ್ಯಾಕಿಂಗ್ ಅನ್ನು ಅಭ್ಯಾಸ ಮಾಡುತ್ತಿರುವವರು ಹೆಚ್ಚಾಗಿ ವ್ಯಕ್ತಿಗತವಾಗಿ ಮಾಡುತ್ತಿರುವವರೇ ಹೊರತು ಸಂಘಟಿತರಾಗಿ ಅಲ್ಲ.

ಕಾನೂನಿನ ಸಮಸ್ಯೆಗಳೇನು?

ಬಯೋ ಹ್ಯಾಕಿಂಗ್ ನಡೆಸಲು ಕಾನೂನಿನ ತೊಡಕುಗಳೇನಾದರೂ ಇವೆಯೇ ಎಂದು ಗಮನಿಸಿದರೆ ಸುಮಾರು 2009ರಷ್ಟು ಹಿಂದೆಯೇ ಅಮೆರಿಕದ ಗುಪ್ತಚರ ಸಂಸ್ಥೆಯಾದ ಎಫ್‌ಬಿಐ ಆಗಾಗ ನಡೆಯುವ ಇಂತಹ ಬಯೋ ಹ್ಯಾಕರ್‌ಗಳ ಸಮ್ಮೇಳನಗಳ ಮೇಲೊಂದು ಕಣ್ಣಿಟ್ಟಿತ್ತು. ಇತ್ತೀಚೆಗಂತೂ ಕ್ರಿಸ್ಪರ್‌ನಂತಹ ವಂಶವಾಹಿಗಳನ್ನು ಕತ್ತರಿಸಿ ಜೋಡಿಸುವ ತಂತ್ರಜ್ಞಾನದ ದುರ್ಬಳಕೆ ಅತಿರೇಕಕ್ಕೆ ಹೋಗುತ್ತಿರುವುದರಿಂದ ಅದನ್ನು ಅಮೆರಿಕದ ಫುಡ್ ಅಂಡ್ ಡ್ರಗ್ ಕಂಟ್ರೋಲ್ ಅಥಾರಿಟಿ (ಎಫ್‌ಡಿಎ) ಗಂಭೀರವಾಗಿ ಪರಿಗಣಿಸಿ, ಹೀಗೆ ಯಾವುದೇ ಸಂಶೋಧನೆ ಇಲ್ಲದೇ ಸೂಕ್ತವಾದ ಪರವಾನಗಿ ಇಲ್ಲದೇ ಸಾರಾಸಗಟಾಗಿ ಬಳಸಲಾಗುವ ಇಂತಹ ಔಷಧಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಸಿದೆ. ಆದರೂ ಅಲ್ಲೊಂದು ಇಲ್ಲೊಂದು ಪ್ರಕರಣ ಇಂದಿಗೂ ವರದಿಯಾಗುತ್ತಲೇ ಇದೆ, ಮುಂದೆಯೂ ವರದಿಯಾಗಬಹುದು. ಏಕೆಂದರೆ, ಒಬ್ಬ ವ್ಯಕ್ತಿಯು ತನ್ನದೇ ದೇಹವನ್ನು ಬಯೋ ಹ್ಯಾಕಿಂಗ್ ಮಾಡದಂತೆ ತಡೆಯುವುದು ಅಸಾಧ್ಯವಾದ ಮಾತೇ ಸರಿ.

ಅಂತಿಮವಾಗಿ ಮನುಕುಲಕ್ಕೆ ಒಳಿತಾಗುವ ಪ್ರತೀ ತಂತ್ರಜ್ಞಾನವನ್ನೂ ನಾವು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕೆಂಬುದೇನೋ ನಿಜ. ಆದರೆ, ಇಂತಹ ಅಭ್ಯಾಸಗಳನ್ನು ಮನಸೋಇಚ್ಛೆ ಮುಂದುವರಿಸಿದರೆ ಲಾಭಕ್ಕಿಂತ ಹಾನಿಯೇ ಹೆಚ್ಚು ಎಂಬುದನ್ನೂ ನಾವು ಸೂಕ್ಷ್ಮವಾಗಿ ಗಮನಿಸಬೇಕು. ವೈದ್ಯರ ಸೂಕ್ತ ಸಲಹೆಯನ್ನು ಪಡೆದ ನಂತರವೇ ಇದನ್ನು ಕಾರ್ಯಗತಗೊಳಿಸುವುದು ಅತ್ಯಂತ ಸೂಕ್ತವಾದ ಮಾರ್ಗ. ತಜ್ಞರ ಸಲಹೆಯೂ ಈ ನಿಟ್ಟಿನಲ್ಲಿ ಅನಿವಾರ್ಯ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಬ್ಬಾ ಚಕ್ಕು ಕೇಳ್ರಪ್ಪ ಕಥೆಯ

ವಿಜಯನಗರದ ಗತ ವೈಭವ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಆನೆ ಬಂತೊಂದಾನೆ, ಯಾವೂರಾನೆ... ಎಂಬ ಹಾಡನ್ನು ಚಿಕ್ಕವರಿದ್ದಾಗ ಅಜ್ಜಿ, ಅಮ್ಮಂದಿರು ಹಾಡುತ್ತಿದ್ದದ್ದು ಕೇಳಿದ್ದೀರಲ್ಲಾ. ಅದು ಮಕ್ಕಳಿಗೆಲ್ಲಾ ಖುಷಿ ಕೊಡುವ ಹಾಡು. ಈಗ ಆ ಆನೆಯ ಹಾಡು ಸೃಷ್ಟಿಯಾದ ಕಥೆ ಇಲ್ಲಿದೆ

ಇವರು ಶ್ರೀಕೃಷ್ಣದೇವರಾಯ. ವಿಜಯನಗರ ಸಾಮ್ರಾಜ್ಯ ಆಳಿದ ದೊರೆ. ಇವರ ಕಾಲದಲ್ಲಿ ಆ ಸಾಮ್ರಾಜ್ಯವು ಸಿರಿ ಸಂಪತ್ತು, ಸಮೃದ್ಧಿಯಿಂದ ಕೂಡಿತ್ತು. ಉತ್ತಮ ಪ್ರಜಾಪರಿಪಾಲಕ ಎಂಬ ಹೆಸರು ಪಡೆದಿದ್ದರು

ವಿಜಯನಗರದಲ್ಲಿ ವಜ್ರ ವೈಢೂರ್ಯಗಳನ್ನು ಸಂತೆಯಲ್ಲಿ ಮಾರುತ್ತಿದ್ದರು. ಕಳ್ಳಕಾಕರ ಭಯ ಇಲ್ಲದೆ ಜನ ನೆಮ್ಮದಿಯಿಂದ ಇದ್ದರು. ಮಹಾನವಮಿಯಂತಹ ಹಬ್ಬಗಳು ವೈಭವದಿಂದ ನಡೆಯುತ್ತಿದ್ದವು

ವಿಜಯನಗರದ ಸಂಪತ್ತಿನ ಮೇಲೆ ಕಣ್ಣಿಟ್ಟಿದ್ದ ಬಿಜಾಪುರದ ಸುಲ್ತಾನರು ಕೃಷ್ಣದೇವರಾಯರ ಕಾಲಾನಂತರದಲ್ಲಿ 1565ರಲ್ಲಿ ನಡೆದ ಯುದ್ಧದಲ್ಲಿ ಗೆದ್ದ ದಖ್ಖನ್ ಪ್ರಾಂತ್ಯದ ಸುಲ್ತಾನರು ಈ ನಗರವನ್ನು ಲೂಟಿ ಹೊಡೆದರು

ದೋಚಿದ ಆಭರಣಗಳನ್ನು ಆನೆಗಳ ಮೇಲೆ ಹೇರಿಕೊಂಡು ಹೋಗುವಾಗ ಮೂಟೆಗಳಿಂದ ಆಭರಣ, ಕಾಸು ಅಲ್ಲೊಂದು ಇಲ್ಲೊಂದು ಉದುರಿದವು. ಹಾಗೆ ಈ ಹಾಡು ಜನಪದರ ಬಾಯಲ್ಲಿ ಹುಟ್ಟಿಕೊಂಡಿತು

ವಿಜಯನಗರ ಸಾಮ್ರಾಜ್ಯದ ಗತ ವೈಭವದ ಕುರುಹಾಗಿ ಹಂಪಿಯ ಕಲ್ಲಿನ ರಥ ಹಾಗೇ ಇದೆ. ವಿರೂಪಾಕ್ಷೇಶ್ವರ ಸಹಿತ ಹಲವಾರು ದೇವಾಲಯಗಳು, ಕಲ್ಲು ಮಂಟಪಗಳು, ಶಿಲ್ಪ ಕೆತ್ತನೆಗಳು ಆ ವೈಭವವನ್ನು ನೆನಪಿಸುತ್ತಿವೆ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣಿಸುವುದಕ್ಕಿಂತ ಕಳೆಯುವುದೇ ಲೇಸು

– ಗುಣ್ಯ ಯಾವುದೇ ಇರಲಿ. ಗುಣಕ 9, 99, 999 ಇಂಥ 9ರಿಂದ ಉಂಟಾದ ಸಂಖ್ಯೆಗಳಿಂದ ಗುಣಿಸುವುದನ್ನು ಕಳೆಯುವ ಲೆಕ್ಕದಿಂದಲೂ ಮಾಡಬಹುದು.

ಅದು ಹೀಗೆ: ಗುಣ್ಯಕ್ಕೆ ಗುಣಕದಲ್ಲಿರುವ ಎಷ್ಟಿವೆ, ಅಷ್ಟು ಸೊನ್ನೆಗಳನ್ನು ಗುಣ್ಯಕ್ಕೆ ಸೇರಿಸುವುದು. ನಂತರ ಆ ಸಂಖ್ಯೆಯಲ್ಲಿ ಮೂಲ ಗುಣ್ಯ ಸಂಖ್ಯೆಯನ್ನು ಕಳೆದರೆ ಉತ್ತರ ಬರುತ್ತದೆ.

ಉದಾ: 68
x 9
= 680
- 68
612

(ಇಲ್ಲಿ ಗುಣಕ ಒಂದೇ 9 ಇದೆ. ಆದ್ದರಿಂದ ಗುಣ್ಯಕ್ಕೆ ಒಂದು ಸೊನ್ನೆ ಸೇರಿಸಲಾಗಿದೆ.) ಹಾಗೂ ಮೂಲ ಸಂಖ್ಯೆ ಕಳೆದಾಗ ತಾಳೆ

68
x9
612

ಪದ ಪ್ರಶ್ನೆ

ಇಲ್ಲಿ ಕೊಟ್ಟಿರುವ ಒಂದೇ ತೆರನಾದ ‘ನ’ ಅಕ್ಷರಗಳ ಹಿಂದೆ ಮುಂದೆ ಕೊಟ್ಟಿರುವ ಕೆಲವು ಅಕ್ಷರ ಸೇರಿಸಿ ಒಂದು ಸಂಯುಕ್ತ ಪದ ರಚಿಸಿ

___ ___ ನ ನ ನ ನ ನ ___

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಪಕ್ಕದಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ಹೊಸ ಪದಗಳನ್ನು ರಚಿಸಿ

	ಸ	ತು	ಸುಳಿವು
1			ಹೆಂಡತಿ
2			ಮಗ
3			ಜಾನಕಿ
4			ಒಂದು ತರಕಾರಿ
5			ಒಂದು ಲೋಹ

ಅದಲು ಬದಲು ಕಂಚಿ ಕದಲು

1. ಕಾವುಮಾಡು = ____
2. ಗಳೆಕಟ್ಟು = ____
3. ನದಿ ಹಿಂಭಾಗ = ____
4. ರವಿ ಹಾಯುವಾ = ____

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಪಡೆನುಡಿಗಳಿಗೆ ಅರ್ಥವನ್ನು ಹೊಂದಿಸಿ

1	ಅರೆದು ಕುಡಿಸು	A	ಆಶ್ರಯ ನೀಡು
2	ಅರಣ್ಯ ರೋದನ	B	ಹಾಳಾಗು
3	ಅರಿಸಿನ ಕಾಮಾಲೆ	C	ಸ್ಪಷ್ಟವಾದ ಮಾರ್ಗದರ್ಶಿ
4	ಕೋತಿ ಚೇಷ್ಟೆ	D	ಗುಪ್ತಧನ
5	ನೆರಳುಕೊಡು	E	ಸಿಗು
6	ಬಾಯಿಗೆ ಬೀಗ ಹಾಕು	F	ಚಪಲತೆ
7	ಬೆರಳು ಕಚ್ಚು	G	ಜವಾಬ್ದಾರಿ ಹೊರುವಂತಾಗು
8	ಬೆನ್ನು ಹಿಡಿ	H	ಆರಂಭ ಮಾಡು
9	ಬೊಗಳೆಬಿಡು	I	ಗೌರವಿಸು
10	ಮಣ್ಣುಗೂಡು	J	ಎಲ್ಲದರಲ್ಲೂ ಸಂದೇಹ

11	ಮಣೆ ಹಾಕು	K	ಚೆನ್ನಾಗಿ ತಿಳಿಯುವಂತೆ ಹೇಳುವುದು
12	ಮೂಗಿಗೆ ತುಪ್ಪ ಹಚ್ಚು	L	ವ್ಯರ್ಥಾಲಾಪ
13	ಸತ್ತು ಸುಣ್ಣವಾಗು	M	ಬಹಳ ಕಷ್ಟಪಡು
14	ಕುತ್ತಿಗೆಗೆ ಬೀಳು	N	ಮಾತು ನಿಲ್ಲಿಸು
15	ಕಲ್ಲುಹಾಕು	O	ಅನುಸರಿಸು
16	ಕೈಗೆ ಬರು	P	ಆಸೆ ತೋರಿಸು
17	ಕೈಗನ್ನಡಿ	Q	ಆಶ್ಚರ್ಯಗೊಳ್ಳು
18	ಕೈ ಗಂಟು	R	ನಾಶಮಾಡು
19	ನಾಯಿಪಾಲಾಗು	S	ಸುಳ್ಳು ಹೇಳು
20	ಬುನಾದಿಹಾಕು	T	ಕೆಡಿಸು

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ
1. ತೋರು 2. ತೀರ 3. ತೆರೆ 4. ತೇರು 5. ತಾರೆ

ಅದಲು ಬದಲು ಕಂಚಿ ಕದಲು
1. ಕಾಡಿಬೇಡಲಿ 2. ಸಸಿಹೊಂದಿರಿ
3. ದಾಸರಪದ 4. ರಣಕಹಳೆ

ಪದವಿನೋದ
1. ಆರ್ಡಿನರಿ 2. ಮೆಮರಿ 3. ನೆಸಸರಿ
4. ಬೇಕರಿ 5. ಕೆಟಗರಿ

ಟ್ವೆಂಟಿ- 20 ಮ್ಯಾಚ್
1-P 2-I 3-H 4-E 5-R
6-B 7-T 8-N 9-J 10-K
11-L 12-M 13-C 14-F 15-A
16-D 17-G 18-S 19-Q 20-O

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಸುಮೇಧ ದೇಶಪಾಂಡೆ
ಬೆಂಗಳೂರು

ಅಯಾನ್ ಎಂ.ಎಸ್.
ಕೊಪ್ಪಳ

ಸಂಸ್ಕೃತಿ ಎಂ.ಎಸ್.
ಮೈಸೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:
majakoora@prajavani.co.in

ಕಾಮನ್‌ವೆಲ್ತ್ ಗೇಮ್ಸ್: ಈಜು ತಂಡದಲ್ಲಿ ಶ್ರೀಹರಿ

ನವದೆಹಲಿ (ಪಿಟಿಐ): ಕರ್ನಾಟಕದ ಶ್ರೀಹರಿ ನಟರಾಜ್ ಮತ್ತು ಕೇರಳದ ಸಜನ್ ಪ್ರಕಾಶ್ ಅವರು ಕಾಮನ್‌ವೆಲ್ತ್ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಭಾರತ ಈಜು ಫೆಡರೇಷನ್ (ಎಸ್‌ಎಫ್‌ಐ) ಕಾಮನ್‌ವೆಲ್ತ್ ಕೂಟಕ್ಕೆ ನಾಲ್ವರು ಸದಸ್ಯರ ಭಾರತ ತಂಡವನ್ನು ಶನಿವಾರ ಪ್ರಕಟಿಸಿತು. ಸಜನ್ ಮತ್ತು ಶ್ರೀಹರಿ ಜತೆ ದೆಹಲಿಯ ಭರವಸೆಯ ಈಜು ಪಟು ಕುಶಾಗ್ರ ರಾವತ್ ಹಾಗೂ ಮಧ್ಯಪ್ರದೇಶದ ಅದ್ವೈತ್ ಪಾಗೆ ಅವರೂ ಸ್ಥಾನ ಪಡೆದುಕೊಂಡಿದ್ದಾರೆ.

ಶ್ರೀಹರಿ

ಕಾಮನ್‌ವೆಲ್ತ್ ಕೂಟಕ್ಕೆ ನಾಲ್ವರು ಈಜು ಸ್ಪರ್ಧಿಗಳನ್ನು ಕಳುಹಿಸುವ ಅವಕಾಶವನ್ನು ಎಸ್‌ಎಫ್‌ಐ ಪಡೆದುಕೊಂಡಿತ್ತು.

ಶ್ರೀಹರಿ 50 ಮೀ., 100 ಮೀ. ಮತ್ತು 200 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗಗಳಲ್ಲಿ ಕಣಕ್ಕಿಳಿಯುವರು. ಟೋಕಿಯೊ ಒಲಿಂಪಿಕ್ಸ್ ಬಳಿಕ ಬೆಂಗಳೂರಿನ ಈಜು ಪಟು ಪಾಲ್ಗೊಳ್ಳುತ್ತಿರುವ ಪ್ರಮುಖ ಕೂಟ ಇದಾಗಿದೆ.

ಸಜನ್ 50 ಮೀ., 100 ಮೀ. ಮತ್ತು 200 ಮೀ. ಬಟರ್‌ಫ್ಲೈ ವಿಭಾಗಗಳಲ್ಲಿ ಸ್ಪರ್ಧಿಸುವರು. ತಮ್ಮ ನೆಚ್ಚಿನ ಸ್ಪರ್ಧೆ 200 ಮೀ.ನಲ್ಲಿ ಅವರು ಭಾರತಕ್ಕೆ ಮೊದಲ ಪದಕ ತಂದುಕೊಡುವ ವಿಶ್ವಾಸದಲ್ಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಬ್‌ಜೂನಿಯರ್ ಈಜು: ಅಲಿಸ್ಸಾಗೆ ಚಿನ್ನ

ಬೆಂಗಳೂರು: ಕರ್ನಾಟಕದ ಅಲಿಸ್ಸಾ ಸ್ವಿಡಲ್ ರೆಗೊ ರಾಷ್ಟ್ರೀಯ ಸಬ್‌ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಗುಜರಾತ್‌ನ ರಾಜ್‌ಕೋಟ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಬಾಲಕಿಯರ 100 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಅಲಿಸ್ಸಾಗೆ ಪದಕ ಒಲಿಯಿತು. ಅವರು 1 ನಿಮಿಷ 7.81 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಅಲಿಸ್ಸಾ

ಇದೇ ವಿಭಾಗದಲ್ಲಿ ತ್ರಿಶಾ ಸಿಂಧು ಎಸ್. ಬೆಳ್ಳಿ ಗೆದ್ದರು.

ಬಾಲಕರ 100 ಮೀ. ಫ್ರೀಸ್ಟೈಲ್ (1 ನಿ. 5.73 ಸೆ.) ಮತ್ತು 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ (33.87ಸೆ.) ಶರಣ್ ಶ್ರೀಧರ್ ಬೆಳ್ಳಿ ಪದಕಗಳಿಗೆ ಮುತ್ತಿಟ್ಟರು. 100 ಮೀ. ಫ್ರೀಸ್ಟೈಲ್‌ನಲ್ಲಿಯೇ (1 ನಿ. 8.17 ಸೆ.) ವಿಹಾನ್ ಚತುರ್ವೇದಿ ಕಂಚು ಜಯಿಸಿದರು. 200 ಮೀ. ಮೆಡ್ಲೆಯಲ್ಲಿ (2 ನಿ. 44.58 ಸೆ.) ಜಸ್ ಸಿಂಗ್ ಕಂಚು, ಬಾಲಕಿಯರ 200 ಮೀ. ಮೆಡ್ಲೆಯಲ್ಲಿ (2 ನಿ. 50.95ಸೆ.) ಬೆಳ್ಳಿ ಗೆದ್ದರು.

ಬಾಲಕರ 4X50 ಮೀ. ಮೆಡ್ಲೆಯಲ್ಲಿ (2 ನಿ. 18.92 ಸೆ.) ಶರಣ್, ಜಸ್, ರೆಯಾನ್ಷ್ ಕಾಂತಿ ಮತ್ತು ಕೃಷ್ಣಾ ನಂದ ಅವರಿದ್ದ ತಂಡ ಬೆಳ್ಳಿ ಜಯಿಸಿತು. ಬಾಲಕಿಯರ 4X50 ಮೀ. ಮೆಡ್ಲೆಯಲ್ಲಿ (2 ನಿ. 24 ಸೆ.) ಆದ್ಯಾ ನಾಯರ್, ಅಲಿಸ್ಸಾ, ಸಾನ್ವಿ ಮತ್ತು ತ್ರಿಶಾ ಅವರಿದ್ದ ತಂಡವು ಕಂಚು ಗೆದ್ದಿತು.

‘ಮೋಟರ್‌ಸೈಕಲ್ ಡೇ’ ಇಂದು

ಬೆಂಗಳೂರು: ‘ಡೆಕ್ಕನ್ ಹೆರಾಲ್ಡ್’ ಮತ್ತು ಅಸೋಸಿಯೇಷನ್ ಆಫ್ ಬೈಕಿಂಗ್ ಕಮ್ಯುನಿಟಿ (ಎಬಿಸಿ) ಇಂಡಿಯಾ ಸಹಯೋಗದಲ್ಲಿ ಭಾನುವಾರ ‘ವಿಶ್ವ ಮೋಟರ್‌ಸೈಕಲ್ ಡೇ’ ಆಯೋಜಿಸಲಾಗಿದೆ.

ಇಲ್ಲಿನ ಜಯಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಬೆಳಿಗ್ಗೆ 8 ರಿಂದ ಸಂಜೆ 6ರ ವರೆಗೆ ನಡೆಯುವ ಕಾರ್ಯಕ್ರಮದಲ್ಲಿ ವಿವಿಧ ಬೈಕಿಂಗ್ ಕ್ಲಬ್‌ಗಳ ನೂರಾರು ಸದಸ್ಯರು ಪಾಲ್ಗೊಳ್ಳಲಿದ್ದಾರೆ. ಬೈಕರ್‌ಗಳಿಗಾಗಿ ವಿವಿಧ ಸ್ಪರ್ಧೆ, ಮನರಂಜನೆ ಕಾರ್ಯಕ್ರಮ ನಡೆಯಲಿದೆ.

ಇಂಡಿಯನ್ ಆಯಿಲ್ ಎಕ್ಸ್‌ಪಿ 95 ಪ್ರಾಯೋಜಕತ್ವದಡಿ ಕಾರ್ಯಕ್ರಮ ನಡೆಯಲಿದ್ದು, ಸಿಯಟ್ ಟೈರ್ಸ್ ಮತ್ತು ಸುಜುಕಿ ಮೋಟರ್‌ಸೈಕಲ್ ಸಹಪ್ರಾಯೋಜಕತ್ವ ವಹಿಸಿಕೊಂಡಿವೆ.

ಕರಾಟೆ: ಜಾಗೃತ್‌ಗೆ ಚಿನ್ನದ ಪದಕ

ಬೆಂಗಳೂರು: ಕರ್ನಾಟಕದ ಜಾಗೃತ್ ಅವರು ಪುಣೆಯಲ್ಲಿ ಇತ್ತೀಚೆಗೆ ನಡೆದ ಅಖಿಲ ಭಾರತ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಜಾಗೃತ್

ಚಾಂಪಿಯನ್‌ಷಿಪ್‌ನ ವರ್ಷದೊಳಗಿನವರ ವಿಭಾಗದಲ್ಲಿ ಬೆಂಗಳೂರಿನ ಜಾಗೃತ್ ಅವರಿಗೆ ಪದಕ ಒಲಿದಿದೆ. ಸೀನಿಯರ್ಸ್ ವಿಭಾಗದಲ್ಲಿ ಬೆಳ್ಳಿ ಪದಕವನ್ನೂ ಅವರು ಜಯಿಸಿದ್ದಾರೆ.

ಜಾಗೃತ್, ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಇದುವರೆಗೆ ಜಾಗೃತ್ ಆರು ಪದಕ ಗೆದ್ದುಕೊಂಡಿದ್ದಾರೆ. ಅದರಲ್ಲಿ ಮೂರು ಚಿನ್ನ, 2 ಬೆಳ್ಳಿ ಮತ್ತು ಒಂದು ಕಂಚು ಸೇರಿವೆ.

ರಣಜಿ ಟ್ರೋಫಿ ಫೈನಲ್: ಚೊಚ್ಚಲ ಪ್ರಶಸ್ತಿಯತ್ತ ಮಧ್ಯಪ್ರದೇಶ ದಾಪುಗಾಲು

ರಜತ್ ಶತಕ; ಮುಂಬೈಗೆ ಆತಂಕ

ರಜತ್ ಪಾಟೀದಾರ್ ಶತಕ ಸಂಭ್ರಮ –ಪ್ರಜಾವಾಣಿ ಚಿತ್ರ ಎಸ್‌.ಕೆ. ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೇರಿದ್ದ ಕ್ರಿಕೆಟ್‌ಪ್ರಿಯರನ್ನು ರಜತ್ ಪಾಟೀದಾರ್ ನಿರಾಶೆಗೊಳಿಸಲಿಲ್ಲ. ಸುಂದರ ಶತಕ ಗಳಿಸಿದ ಅವರು ಮಧ್ಯಪ್ರದೇಶ ತಂಡವನ್ನು ಚೊಚ್ಚಲ ರಣಜಿ ಟ್ರೋಫಿ ಗೆಲುವಿಗೆ ಮತ್ತಷ್ಟು ಸಮೀಪ ತಂದು ನಿಲ್ಲಿಸಿದರು. 42ನೇ ಟ್ರೋಫಿ ಜಯಿಸುವ ಕನಸು ಕಾಣುತ್ತಿರುವ ಮುಂಬೈ ತಂಡದ ಹಾದಿಯನ್ನು ಮತ್ತಷ್ಟು ಕಠಿಣಗೊಳಿಸಿದರು.

ಫೈನಲ್ ಪಂದ್ಯದ ನಾಲ್ಕನೇ ದಿನದಾಟದಲ್ಲಿ ಮಳೆ ಯ ಆಟವೂ ಇತ್ತು. ಇದೆಲ್ಲದರ ನಡುವೆ ಜಿಗುಟುತನ ಮತ್ತು ಶಿಸ್ತುಬದ್ಧ ಆಟವನ್ನು ಮುಂದುವರಿಸಿದ ಮಧ್ಯಪ್ರದೇಶ ತಂಡವು ಮೊದಲ ಇನಿಂಗ್ಸ್‌ನಲ್ಲಿ ಒಟ್ಟು 162 ರನ್‌ಗಳ ಮುನ್ನಡೆ ಗಳಿಸಿತು. ಈ ಮೊತ್ತವನ್ನು ಚುಕ್ತಾ ಮಾಡುವ ಹಾದಿಯಲ್ಲಿ ಎರಡನೇ ಇನಿಂಗ್ಸ್ ಆರಂಭಿಸಿರುವ ಮುಂಬೈ ತಂಡವು ದಿನದಾಟದ ಕೊನೆಗೆ 22 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 113 ರನ್ ಗಳಿಸಿದೆ.

ಕೊನೆಯ ದಿನವಾದ ಭಾನುವಾರ ಬಾಕಿಯಿರುವ 49 ರನ್‌ಗಳನ್ನು ಗಳಿಸಬೇಕು. ನಂತರ ಮಧ್ಯಪ್ರದೇಶಕ್ಕೆ ಕನಿಷ್ಠ 150 ರಿಂದ 200 ರನ್‌ಗಳ ಗುರಿಯೊಡ್ಡಿ, ಹತ್ತು ವಿಕೆಟ್‌ಗಳನ್ನು ಕಬಳಿಸಿದರೆ ಮಾತ್ರ ಟ್ರೋಫಿಗೆ ಮುತ್ತಿಕ್ಕಬಹುದು. ಈ ರೀತಿ ಮಾಡುವ ಸಾಮರ್ಥ್ಯ ಮುಂಬೈಗೆ ಇರುವುದರಿಂದ ತುಸು ಕುತೂಹಲ ಕೆರಳಿದೆ.

ರಜತ್, ಸಾರಾಂಶ್ ಮಿಂಚು: ಐಪಿಎಲ್ ಟೂರ್ನಿಯಲ್ಲಿ ಈಚೆಗೆ ಮಿಂಚಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ರಜತ್ ಪಾಟೀದಾರ್ ಅವರನ್ನು ಹುರಿದುಂಬಿಸಲು ಬಂದಿದ್ದ ಅಭಿಮಾನಿಗಳಿಗೆ ಸಂಭ್ರಮಿಸುವ ಅವಕಾಶ ಸಿಕ್ಕಿತು. ರಜತ್ ಸುಂದರ ಶತಕ (122; 219ಎ, 4X20) ದಾಖಲಿಸಿದರು.

ಪಂದ್ಯ ವೀಕ್ಷಿಸಲು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೇರಿದ್ದ ಕ್ರಿಕೆಟ್‌ಪ್ರಿಯರು

ಮಧ್ಯಪ್ರದೇಶ ಇನಿಂಗ್ಸ್‌ನಲ್ಲಿ ದಾಖಲಾದ ಮೂರನೇ ಶತಕ ಇದು. ಶುಕ್ರವಾರ ಅರ್ಧಶತಕ ಗಳಿಸಿ ಕ್ರೀಸ್‌ನಲ್ಲಿದ್ದ ರಜತ್ ಮುಂಬೈ ಬೌಲರ್‌ಗಳನ್ನು ಕಾಡಿದರು.

ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ರಜತ್ ಮತ್ತು ಆದಿತ್ಯ 60 ರನ್ ಸೇರಿಸಿದರು. ಮೋಹಿತ್ ಅವಸ್ಥಿ ಬೌಲಿಂಗ್‌ನಲ್ಲಿ ಈ ಜೊತೆಯಾಟ ಮುರಿಯಿತು. ರಜತ್ ಮತ್ತು ಸಾರಾಂಶ್ ಜೈನ್ (57; 97ಎ) ಏಳನೇ ವಿಕೆಟ್ ಜೊತೆಯಾಟದಲ್ಲಿ 53 ರನ್ ಸೇರಿಸಿದರು.

ಮುಂಬೈ ಉತ್ತಮ ಆರಂಭ: ಮುಂಬೈ ಎರಡನೇ ಇನಿಂಗ್ಸ್ ನಲ್ಲಿ ಉತ್ತಮ ಆರಂಭ ಮಾಡಿತು.

ಪೃಥ್ವಿ ಶಾ (44) ಮತ್ತು ಹಾರ್ದಿಕ್ ತಮೊರೆ (25) ಮೊದಲ ವಿಕೆಟ್ ಜೊತೆಯಾಟದಲ್ಲಿ 63 ರನ್ ಸೇರಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಮುಂಬೈ: 374 (127.4 ಓವರ್)
ಮಧ್ಯಪ್ರದೇಶ 536 (177.2 ಓವರ್)
ರಜತ್ ಬಿ ತುಷಾರ್ 122 (219ಎ, 4X20), ಆದಿತ್ಯ ಸಿ ಖಾನ್ ಬಿ ಮೋಹಿತ್ 25 (69ಎ, 4X2, 6X1), ಅಕ್ಷತ್ ಬಿ ತುಷಾರ್ 9 (18ಎ, 4X1), ಪಾರ್ಥ್ ಎಲ್‌ಬಿಡಬ್ಲ್ಯು ಶಮ್ಸ್ 11 (18ಎ, 4X2), ಸಾರಾಂಶ್ ಸಿ ಅರ್ಮಾನ್ ಬಿ ಮಲಾನಿ 57 (97ಎ, 4X7), ಅನುಭವ್ ಎಲ್‌ಬಿಡಬ್ಲ್ಯು ಮಲಾನಿ 8 (29ಎ, 4X1), ಕುಮಾರ್ ಸಿ ಖಾನ್ ಬಿ ಮಲಾನಿ 9 (13ಎ, 4X1), ಗೌರವ್ ಔಟಾಗದೆ 1(2ಎ)
ಇತರೆ: 14 (ಬೈ 10, ಲೆಗ್‌ಬೈ 1, ವೈಡ್ 1, ನೋಬಾಲ್ 2)
ವಿಕೆಟ್ ಪತನ: 4–401 (ಆದಿತ್ಯ ಶ್ರೀವಾಸ್ತವ 132.5), 5–411 (ಅಕ್ಷತ್ ರಘುವಂಶಿ; 138.1), 6–430 (ಪಾರ್ಥ್ ಸಹಾನಿ; 143.5), 7–483 (ರಜತ್ ಪಾಟೀದಾರ್; 163.2), 8–505 (ಅನುಭವ್ ಅಗರವಾಲ್; 171.2), 9–515 (ಕುಮಾರ್ ಕಾರ್ತಿಕೇಯ ಸಿಂಗ್; 173.6), 10–536 (ಸಾರಾಂಶ್ ಜೈನ್; 177.2)
ಬೌಲಿಂಗ್: ಧವಳ್ ಕುಲಕರ್ಣಿ 24–4–53–0, ತುಷಾರ್ ದೇಶಪಾಂಡೆ 36–10–116–3, ಶಮ್ಸ್ ಮಲಾನಿ 63.2–11–173–5, ಮೋಹಿತ್ ಅವಸ್ಥಿ 32–7–93–2, ತನುಷ್ ಕೋಟ್ಯಾನ್ 22–1–90–0
ಎರಡನೇ ಇನಿಂಗ್ಸ್: ಮುಂಬೈ 2 ವಿಕೆಟ್‌ಗೆ 113 (22 ಓವರ್))
ಪೃಥ್ವಿ ಸಿ ಯಶ್ ಬಿ ಗೌರವ್ 44 (52ಎ, 4X3, 6X2), ಹಾರ್ದಿಕ್ ಬಿ ಕುಮಾರ್ 25 (32ಎ, 4X2, 6X1), ಅರ್ಮಾನ್ ಔಟಾಗದೆ 30 (34ಎ, 4X3), ಸುವೇದ್ ಔಟಾಗದೆ 9 (14ಎ)
ಇತರೆ: 5 (ಲೆಗ್‌ಬೈ 2, ವೈಡ್ 3)
ವಿಕೆಟ್ ಪತನ: 1–63 (ಹಾರ್ದಿಕ್ ತಮೊರೆ 10.3), 2–83 (ಪೃಥ್ವಿ ಶಾ; 15.6)
ಬೌಲಿಂಗ್: ಕುಮಾರ್ ಕಾರ್ತಿಕೇಯ ಸಿಂಗ್ 10–1–50–1, ಅನುಭವ್ ಅಗರವಾಲ್ 6–0–32–0, ಗೌರವ್ ಯಾದವ್ 5–0–23–1, ಪಾರ್ಥ್ ಸಹಾನಿ 1–0–6–0

ಆರ್ಚರಿ: ಅಭಿಷೇಕ್–ಜ್ಯೋತಿಗೆ ಚಿನ್ನ

ಪ್ಯಾರಿಸ್ (ಪಿಟಿಐ): ಭಾರತದ ಅಭಿಷೇಕ್ ವರ್ಮಾ ಮತ್ತು ಜ್ಯೋತಿ ಸುರೇಖಾ ವೆನ್ನಂ ಅವರು ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಆರ್ಚರಿಯಲ್ಲಿ ಭಾರತಕ್ಕೆ ಮೊದಲ ಚಿನ್ನ ತಂದಿತ್ತರು.

ಶನಿವಾರ ನಡೆದ ಕಾಂಪೌಂಡ್ ಮಿಶ್ರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಭಾರತದ ಜೋಡಿ 152–149 ರಲ್ಲಿ ಫ್ರಾನ್ಸ್‌ನ ಜೀನ್ ಬೌಲ್ಶ್ ಮತ್ತು ಸೋಫಿ ಡಾಡ್ಮಂಟ್ ಅವರನ್ನು ಮಣಿಸಿತು. ವಿಶ್ವಕಪ್‌ನಲ್ಲಿ ಈ ವಿಭಾಗದಲ್ಲಿ ಭಾರತ ಚಿನ್ನ ಜಯಿಸಿದ್ದು ಇದೇ ಮೊದಲು.

ಇಲ್ಲಿ ಮೂರನೇ ಶ್ರೇಯಾಂಕ ಹೊಂದಿದ್ದ ಭಾರತದ ಜೋಡಿ ಆರಂಭದಿಂದಲೇ ನಿಖರವಾಗಿ ಗುರಿ ಹಿಡಿದು ಎದುರಾಳಿಗಳ ಮೇಲೆ ಒತ್ತಡ ಹೇರಿತು.

ಜ್ಯೋತಿ, ಅಭಿಷೇಕ್ – ಟ್ವಿಟರ್ ಚಿತ್ರ

ಮೊದಲ ಸೆಟ್ ಕೊನೆಗೊಂಡಾಗ 40-37 ರಲ್ಲಿ ಮುನ್ನಡೆ ಸಾಧಿಸಿತು. ಎರಡನೇ ಸೆಟ್‌ನ ಕೊನೆಯಲ್ಲಿ ಫ್ರಾನ್ಸ್ ಹಿನ್ನಡೆಯನ್ನು ಒಂದು ಪಾಯಿಂಟ್‌ಗೆ (75–76) ತಗ್ಗಿಸಿತು.

ಮೂರನೇ ಸೆಟ್‌ನಲ್ಲಿ ಎರಡೂ ತಂಡಗಳು ತಲಾ 39 ಪಾಯಿಂಟ್ಸ್ ಸಂಗ್ರಹಿಸಿದವು. ಒಟ್ಟಾರೆಯಾಗಿ ಭಾರತ 115–114 ರಲ್ಲಿ ಮುನ್ನಡೆಯಲ್ಲಿತ್ತು. ನಿರ್ಣಾಯಕ ಸೆಟ್‌ನಲ್ಲಿ ಏಕಾಗ್ರತೆ ಸಾಧಿಸಿದ ಭಾರತದ ಜೋಡಿ 37 ಪಾಯಿಂಟ್ಸ್ ಗಳಿಸಿದರೆ, ಫ್ರಾನ್ಸ್ ತಂಡ 35 ಪಾಯಿಂಟ್ಸ್ ಮಾತ್ರ ಕಲೆಹಾಕಿತು. ಮೂರು ಪಾಯಿಂಟ್‌ಗಳ ಮುನ್ನಡೆಯೊಂದಿಗೆ ಭಾರತ ಚಿನ್ನ ಜಯಿಸಿತು.

ಜ್ಯೋತಿಗೆ ಬೆಳ್ಳಿ: ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ಜ್ಯೋತಿ, ಬೆಳ್ಳಿ ಪದಕ ಗೆದ್ದರು. ಅವರು ಫೈನಲ್‌ನಲ್ಲಿ ಇಂಗ್ಲೆಂಡ್‌ನ ಎಲಾ ಗಿಬ್ಸನ್ ಎದುರು ಸೋತರು.

ಕ್ರಿಕೆಟ್: ನ್ಯೂಜಿಲೆಂಡ್ ತಂಡದ ಮರುಹೋರಾಟ

ಲೀಡ್ಸ್ (ಎಎಫ್‌ಪಿ): ಟಾಮ್ ಲಥಾಮ್ (76) ಮತ್ತು ಕೇನ್ ವಿಲಿಯಮ್ಸನ್ (48) ಅವರ ಉತ್ತಮ ಆಟದ ನೆರವಿನಿಂದ ನ್ಯೂಜಿಲೆಂಡ್ ತಂಡ ಇಂಗ್ಲೆಂಡ್ ವಿರುದ್ಧದ ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಮರುಹೋರಾಟ ನಡೆಸಿದೆ. ಮೊದಲ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್‌ಗೆ ಅಲ್ಪ ಮುನ್ನಡೆ ಬಿಟ್ಟುಕೊಟ್ಟ ನ್ಯೂಜಿಲೆಂಡ್ ತಂಡ ಮೂರನೇ ದಿನದಾಟದಲ್ಲಿ 5 ವಿಕೆಟ್‌ಗೆ 168 ರನ್ ಗಳಿಸಿದೆ. ಒಟ್ಟಾರೆ 137 ರನ್‌ಗಳ ಮುನ್ನಡೆಯಲ್ಲಿದೆ.

ಪಾಂಡ್ಯ ಬಳಗಕ್ಕೆ ಐರ್ಲೆಂಡ್ ಸವಾಲು

ಡಬ್ಲಿನ್ (ಪಿಟಿಐ): ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ನಾಯಕತ್ವದ ಭಾರತ ತಂಡವು ಭಾನುವಾರ ನಡೆಯಲಿರುವ ಐರ್ಲೆಂಡ್ ವಿರುದ್ಧದ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಕಣಕ್ಕಿಳಿಯಲಿದೆ.

ಹಾರ್ದಿಕ್ ಪಾಂಡ್ಯ

ಎರಡು ಪಂದ್ಯಗಳ ಸರಣಿ ಇದು.

ಹಾರ್ದಿಕ್ ಬಳಗದಲ್ಲಿ ಸೂರ್ಯಕುಮಾರ್ ಯಾದವ್, ಸಂಜು ಸ್ಯಾಮ್ಸನ್, ಇಶಾನ್ ಕಿಶನ್, ಋತುರಾಜ್ ಗಾಯಕವಾಡ್, ವೆಂಕಟೇಶ್ ಅಯ್ಯರ್, ದೀಪಕ್ ಹೂಡಾ, ಯಜುವೇಂದ್ರ ಚಾಹಲ್ ಮತ್ತು ಉಮ್ರನ್ ಮಲಿಕ್ ಅವರು ಇದ್ದಾರೆ.

ಈಚೆಗೆ ಭಾರತದಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಆಡಿದ್ದ ಬಹುತೇಕರು ಈ ತಂಡದಲ್ಲಿದ್ದಾರೆ. ಆ್ಯಂಡ್ರ್ಯೂ ಬಲ್ಬಿರ್ನಿ ನಾಯಕತ್ವದ ಐರ್ಲೆಂಡ್ ಬಳಗವು ಹಾರ್ದಿಕ್ ಬಳಗವನ್ನು ಎದುರಿಸಲು ಸಿದ್ಧವಾಗಿದೆ.

ನೇರಪ್ರಸಾರ : ಸೋನಿ ಸಿಕ್ಸ್
ಪಂದ್ಯ ಆರಂಭ: ರಾತ್ರಿ 9ರಿಂದ

ಹಿಂದೆ ಸರಿದ ಕೀಸ್

ಲಂಡನ್ (ರಾಯಿಟರ್ಸ್): ಅಮೆರಿಕದ ಮ್ಯಾಡಿಸನ್ ಕೀಸ್ ಅವರು ಗಾಯದ ಕಾರಣ ವಿಂಬಲ್ಡನ್ ಟೆನಿಸ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

‘ಹೊಟ್ಟೆಯ ಸ್ನಾಯು ಸೆಳೆತದಿಂದಾಗಿ ವಿಂಬಲ್ಡನ್‌ನಿಂದ ಹಿಂದೆ ಸರಿದಿದ್ದೇನೆ. ಎಂದು ಅವರು ‘ಟ್ವೀಟ್’ ಮಾಡಿದ್ದಾರೆ.

ಅಭ್ಯಾಸ ಪಂದ್ಯ: ವಿರಾಟ್, ಶ್ರೇಯಸ್ ಅರ್ಧಶತಕ

ಗ್ರೇಸ್ ರೋಡ್: ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಅಯ್ಯರ್ ಇಲ್ಲಿ ನಡೆಯುತ್ತಿರುವ ಲೆಸ್ಟರ್‌ಷೈರ್ ಎದುರಿನ ಅಭ್ಯಾಸ ಪಂದ್ಯದಲ್ಲಿ ಅರ್ಧಶತಕ ಗಳಿಸಿದರು. ಇದರೊಂದಿಗೆ ಇಬ್ಬರೂ ಲಯಕ್ಕೆ ಮರಳುವ ಭರವಸೆ ಮೂಡಿ ಸಿದರು.

ಶನಿವಾರ ನಡೆದ ಪಂದ್ಯದಲ್ಲಿ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ 364 ರನ್ ಗಳಿಸಿದೆ. ಒಟ್ಟು 366 ರನ್‌ಗಳ ಮುನ್ನಡೆ ಸಾಧಿಸಿದೆ. ರವೀಂದ್ರ ಜಡೇಜ (ಬ್ಯಾಟಿಂಗ್ 56) ಮತ್ತು ಮೊಹಮ್ಮದ್ ಸಿರಾಜ್ (ಬ್ಯಾಟಿಂಗ್ 1) ಕ್ರೀಸ್‌ನಲ್ಲಿದ್ದಾರೆ.

ಇನಿಂಗ್ಸ್ ಆರಂಭಿಸಿದ ಭರತ್ ಮತ್ತು ಶುಭಮನ್ ಗಿಲ್ ಮೊದಲ ವಿಕೆಟ್‌ಗೆ 62 ರನ್ ಸೇರಿಸಿದರು. ಅಯ್ಯರ್ 89 ಎಸೆತಗಳಲ್ಲಿ 62 ರನ್ ಗಳಿಸಿದರು. ಏಳನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ವಿರಾಟ್ 98 ಎಸೆತಗಳಲ್ಲಿ 67 ರನ್ ಗಳಿಸಿದರು. ಐದು ಬೌಂಡರಿ ಮತ್ತು ಎರಡು ಸಿಕ್ಸರ್ ಬಾರಿಸಿದರು. ಅವರು ಜಸ್‌ಪ್ರೀತ್ ಬೂಮ್ರಾ ಬೌಲಿಂಗ್‌ನಲ್ಲಿ ಔಟಾದರು.

ವಿರಾಟ್ ಕೊಹ್ಲಿ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 60.2 ಓವರ್‌ಗಳಲ್ಲಿ 8ಕ್ಕೆ246, ಲೆಸ್ಟರ್‌ಷೈರ್: 57 ಓವರ್‌ಗಳಲ್ಲಿ 244, ಎರಡನೇ ಇನಿಂಗ್ಸ್: ಭಾರತ: 92 ಓವರ್‌ಗಳಲ್ಲಿ 7ಕ್ಕೆ 364 (ಶ್ರೀಕರ್ ಭರತ್ 43, ಶುಭಮನ್ ಗಿಲ್ 38, ಹನುಮವಿಹಾರಿ 20, ಶ್ರೇಯಸ್ ಅಯ್ಯರ್ 62, ರವೀಂದ್ರ ಜಡೇಜ ಬ್ಯಾಟಿಂಗ್ 56, ಶಾರ್ದೂಲ್ ಠಾಕೂರ್ 28, ವಿರಾಟ್ ಕೊಹ್ಲಿ 67, ಚೇತೇಶ್ವರ್ ಪೂಜಾರ 22, ನವದೀಪ್ ಸೈನಿ 55ಕ್ಕೆ3, ಕಮಲೇಶ್ ನಾಗರಕೋಟಿ 48ಕ್ಕೆ2)

ಮಹಿಳಾ ಟಿ20: ಭಾರತಕ್ಕೆ ಸರಣಿ

ದಂಬುಲಾ (ಪಿಟಿಐ): ಕೊನೆಯ ಓವರ್‌ವರೆಗೂ ಕುತೂಹಲ ಕೆರಳಿಸಿದ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿದ ಭಾರತದ ಮಹಿಳೆಯರು ಮೂರು ಪಂದ್ಯಗಳ ಟಿ20 ಕ್ರಿಕೆಟ್ ಸರಣಿಯನ್ನು 2–0ಯಲ್ಲಿ ಗೆದ್ದುಕೊಂಡರು.

ದಂಬುಲಾದಲ್ಲಿ ಶನಿವಾರ ಆತಿಥೇಯ ತಂಡ 7 ವಿಕೆಟ್‌ಗೆ 125 ರನ್ ಗಳಿಸಿದರೆ, ಭಾರತ 19.1 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಜಯ ಸಾಧಿಸಿತು.

ಮಿಥಾಲಿ ಹಿಂದಿಕ್ಕಿದ ಕೌರ್: ಹರ್ಮನ್‌ಪ್ರೀತ್ ಕೌರ್ ಅವರು (2,372) ಟಿ20 ಕ್ರಿಕೆಟ್‌ನಲ್ಲಿ ಭಾರತದ ಪರ ಅತಿಹೆಚ್ಚು ರನ್ ಗಳಿಸಿದ ಆಟಗಾರ್ತಿ ಎಂಬ ಗೌರವ ಪಡೆದುಕೊಂಡರು. ಇತ್ತೀಚೆಗೆ ನಿವೃತ್ತಿ ಹೊಂದಿದ ಮಿಥಾಲಿ ರಾಜ್ (2,364) ಅವರನ್ನು ಕೌರ್ ಹಿಂದಿಕ್ಕಿದರು.

ಸ್ಮೃತಿ ಮಂದಾನ (2,011) ಟಿ20 ಯಲ್ಲಿ ಎರಡು ಸಾವಿರ ರನ್ ಪೂರೈಸಿದರು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ 7ಕ್ಕೆ 125 (20 ಓವರ್) ವಿಷ್ಮಿ ಗುಣರತ್ನೆ 45, ಚಾಮರಿ ಅಟಪಟ್ಟು 43, ದೀಪ್ತಿ ಶರ್ಮಾ 34ಕ್ಕೆ 2, ರೇಣುಕಾ ಸಿಂಗ್ 26ಕ್ಕೆ 1, ರಾಧಾ ಯಾದವ್ 15ಕ್ಕೆ 1, ಪೂಜಾ ವಸ್ತ್ರಕರ್ 18ಕ್ಕೆ 1).

ಭಾರತ 5ಕ್ಕೆ 127 (19.1 ಓವರ್) ಸ್ಮೃತಿ ಮಂದಾನ 39, ಶಫಾಲಿ ವರ್ಮಾ 17, ಎಸ್.ಮೇಘನಾ 17, ಹರ್ಮನ್‌ಪ್ರೀತ್ ಕೌರ್ ಔಟಾಗದೆ 31, ಇನೊಕ ರಣವೀರ 18ಕ್ಕೆ 2).